

ಶ್ರೀಮತೇ ರಾಮಾನುಜಾಯ ನಮಃ

# ಶ್ರೀ ಯಾದವಗಿರಿ ಜೀರ್ಣೋದ್ಧಾರ ಚರಿತಂ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯೇತ್ಯಾದಿ
ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜಮುನಿಗಳ
(ಶ್ರೀ ವಿದ್ವಾನ್ ಆಸೂರಿ ಆನಂದಾಳ್ವಾರ್ ಸ್ವಾಮಿಗಳು)

ಸಂಪಾದಕರು
ವಿದ್ವಾನ್ ಆಸೂರಿ ಶ್ರೀನಿವಾಸಯ್ಯಂಗಾರ್ಯಃ

## ಶ್ರೀಮತೇ ರಾಮಾನುಜಾಯ ನಮಃ

ದೈವಸಂಕಲ್ಪವು ಮನುಷ್ಯ ಬುದ್ಧಿಗೆ ಗೋಚರವಾಗದು. ಆ ಸಂಕಲ್ಪವು ನೆರವೇರುವುದಕ್ಕೆ ಅನುಗುಣವಾಗಿ ಮನುಷ್ಯರಿಗೆ ಬುದ್ಧಿಯುಂಟಾಗಿ ವೃದ್ಧಿಕ್ಷಯಗಳು ಲೋಕದಲ್ಲಿ ನಡೆಯುತ್ತಲಿವೆ. ವಿವೇಕದಿಂದ ಇದನ್ನು ನಿಶ್ಚಯಿಸಿಕೊಂಡು ಸಹಿಸಿಕೊಳ್ಳುವುದು ಮುಖ್ಯವಾದ ಪರಿಹಾರವು. ಆದ್ಯಂತದಲ್ಲಿ ಧರ್ಮವೇ ಇರುವುದಾದರೂ ಧರ್ಮದ ಪಕ್ಷಕ್ಕೆ ಅಪಜಯವೂ, ಅಧರ್ಮದ ಪಕ್ಷಕ್ಕೆ ಜಯವೂ ಉಂಟಾಗುವುದು ಈ ಕಲಿಯುಗದ ಸ್ವಭಾವವಾಗಿದೆ—

ಈ ಗ್ರಂಥವು **ನಾರಾಯಣಸ್ವಾಮಿ, ಚಲುವರಾಯಸ್ವಾಮಿ** ದೇವಸ್ಥಾನದ ಇತಿಹಾಸ ಸಂಗ್ರಹವಾಗಿದೆ. ಅಲ್ಲದೆ ವೇದಾಂತಧರ್ಮಬೋಧಕರಾಗಿ ಆ ದೇವರ ಕೈಂಕರ್ಯ ಮತ್ತು ದೇವಸ್ಥಾನದ ವಿಚಾರಣಾದಿಗಳನ್ನು ನಡೆಸಲು ಶ್ರೀರಾಮಾನುಜಾಚಾರ್ಯರಿಂದ ಏರ್ಪಟ್ಟ ಶ್ರೀಯತಿರಾಜಮಠದ ಗುರುಪರಂಪರಾವಿಚಾರವಾದುದೂ ಆಗಿರುವುದು.

ಈ ಗ್ರಂಥದಲ್ಲಿನ ವಿಷಯಗಳು ಸರಿಯಾಗಿ ಹಿರಿಯರಿಂದ ಕೇಳಿಯೂ, ಕಾಗದ ಪತ್ರಗಳು, ಶಿಲಾಲೇಖನಗಳನ್ನೂ ನೋಡಿ ಬರೆದಿರುವುದು. ಇದರಲ್ಲಿ ಬಹಳ ವಿಷಯಗಳು ಹಿರಿಯರಿಂದ ತಿಳಿಯದೇಹೋದುವು. ಇನ್ನು ಕೆಲವು ಕಾಗದಪತ್ರಗಳು ರಾಜಕೀಯ ಕಾರಣದಿಂದ ನಮಗೆ ನೋಡಲು ಅವಕಾಶವಿಲ್ಲವಾದ್ದರಿಂದ ನಮಗೆ ದೊರಕಿದ ಮಟ್ಟಿಗೆ ವಿಷಯಗಳನ್ನು ಸಂಗ್ರಹಿಸಿ ಬರೆದಿರುವೆವು.

ಮೇಲುಕೋಟೆ ಶ್ರೀ ನಾರಾಯಣಸ್ವಾಮಿಯ ಕೈಂಕರ್ಯ ಮತ್ತು ಇತಿಹಾಸದ ವಿಚಾರವಾದ **"ನಿಯಮನಪ್ಪಡಿ"** ಎಂಬ ಶಾಸನ ವಿಸ್ತರಕ್ರಮವು ಮೊದಲು ಮದರಾಸಿನಲ್ಲಿ **ಶ್ರೀಮಾನ್ ಯೋಗಿಪಾರ್ಥಸಾರಥಿ ಅಯ್ಯಂಗಾರ್ಯರಿಂದ 1895** ನೇ ಇಸವಿಯಲ್ಲಿ ಮುದ್ರಿಸಿ ಪ್ರಕಾಶಪಡಿಸಲ್ಪಟ್ಟಿತು. ಈ ನಾರಾಯಣಸ್ವಾಮಿಯ ದೇವಸ್ಥಾನದ ಮತ್ತು ಶ್ರೀ ಯತಿರಾಜಮಠದ ವಿಷಯವಾದ ಇನ್ನೂ ಕೆಲವು ಕಾಗದ ಪತ್ರಗಳು ಮೇಲಿನ ಪುಸ್ತಕ ಭಂಡಾರದಲ್ಲಿದ್ದುವು. ಅದರಲ್ಲಿ ದೇವಸ್ಥಾನದ ಕಟ್ಟಡ ಮತ್ತು ಅದರ ಜೀರ್ಣೋದ್ಧಾರದ ಖರ್ಚು ಇವುಗಳ ಕೆಲವು ಬಿಡುಓಲೆಗಳು ಮಾತ್ರ ದೊರಕಿದುವು. ಇತರ ಲೆಕ್ಕದ ಮತ್ತು ಇತಿಹಾಸದ ವಿಚಾರವಾದ ಓಲೆಪತ್ರಗಳು ಏನಾದವೋ ತಿಳಿಯದು. ಈ ಲೆಕ್ಕದ ವಿಚಾರವಾಗಿ 1798–99 ಕ್ಕೆ ಸರಿಯಾದ ಕಾಲಯುಕ್ತಿ ಮತ್ತು ಸಿದ್ಧಾರ್ಥಿ ಸಂವತ್ಸರದ "ತಸದೀಲೆಕ್ಕವು" ಎಂಬುದಾಗಿ ಪ್ರಚಾರ ಮಾಡಿರುವ ಪುಸ್ತಕದಲ್ಲಿ ವಿವರವಾಗಿ ಕಾಣಬಹುದು.

ಈ ಗ್ರಂಥದಲ್ಲಿ ಚರಿತ್ರಾರ್ಹವಾಗಿ ಅನೇಕ ವಿಷಯಗಳನ್ನು ಬರೆಯಬೇಕೆಂದು ಆಶೆಯಿದ್ದರೂ ಗ್ರಂಥವಿಸ್ತರ ಭಯದಿಂದ ಬರೆಯಲಾಗಲಿಲ್ಲ. ಈ ಗ್ರಂಥದಲ್ಲಿ

ವಿಷಯಗಳನ್ನು ಬರೆಯದೆ ಬಿಟ್ಟಿದ್ದಲ್ಲಿ ವಾಚಕರು ಅದನ್ನು ತಿಳಿಸಿದರೆ ಮುಂದಿನ ಮುದ್ರಣದಲ್ಲಿ ಸೇರಿಸುತ್ತೇವೆ ಎಂಬುದಾಗಿ ವಿಜ್ಞಾಪಿಸುತ್ತೇವೆ.

ಯಾದವಗಿರಿ ತಿರುನಾರಾಯಣ ಪುರದ ವಿಚಾರವಾಗಿ ಸ್ಥಳಮಹಾತ್ಮ್ಯೆಯು (ಪೂರ್ವಚರಿತ್ರೆ) ಅನೇಕಪುರಾಣಗಳಲ್ಲಿ ಉಕ್ತವಾಗಿರುವುದು.

| | | | |
|---|---|---|---|
| 1 | ನಾರದ ಪುರಾಣ | ೧೨ | ಅಧ್ಯಾಯಗಳು. |
| 2 | ಮತ್ಸ್ಯಪುರಾಣ | ೧೨ | ,, |
| 3 | ಪಾದ್ಮಪುರಾಣ | ೫ | ,, |
| 4 | ಕಾಶೀಮಹಾತ್ಮ್ಯೆಯಲ್ಲಿ ಅಂತರ್ಗತವಾಗಿ | ೩ | ,, |
| 5 | ಈಶ್ವರಸಂಹಿತಾಂತರ್ಗತವಾಗಿ | ೧ | ,, |
| 6 | ಸಾತ್ವತಸಂಹಿತಾಂತರ್ಗತವಾಗಿ | ೧ | ,, |

ಈ ರೀತಿ ಅನೇಕ ಪುರಾಣ ಮತ್ತು ಸಂಹಿತೆಗಳಲ್ಲಿ ವಿವರಿಸಿರುವುದು—

ಈ ಮೇಲ್ಕಂಡ ಪುರಾಣಗಳಲ್ಲಿ ತಿರುನಾರಾಯಣಪುರವು ಅನೇಕ ಸೌಧಗಳಿಂದ ಕೂಡಿ ಜನಭರಿತವಾಗಿದ್ದುದಾಗಿ ವಿವರಿಸಿರುವುದು.

## ಪೂಜಾಕ್ರಮ.

ಈ ಕ್ಷೇತ್ರದ ದೇವರಾದ ಶ್ರೀ ನಾರಾಯಣಸ್ವಾಮಿ ಚೆಲುವರಾಯಸ್ವಾಮಿ ಇವರ ಪೂಜೆಯು ಸಾತ್ವತ, ಪಾದ್ಮ ಈಶ್ವರಸಂಹಿತೆಗಳ ಪ್ರಕಾರವಾಗಿ ನಡೆಯುವುದು.

ಕೃತಯುಗದಲ್ಲಿ ಸನತ್ಕುಮಾರರು ಸತ್ಯಲೋಕದಿಂದ ಆನಂದಮಯ ದಿವ್ಯ ವಿಮಾನದೊಂದಿಗೆ ಬಿಜಯ ಮಾಡಿಸಿಕೊಂಡು ಬಂದು ತಿರುನಾರಾಯಣ ದೇವರನ್ನು ಇಲ್ಲಿ ಪ್ರತಿಷ್ಠಿಸಿದುದರಿಂದ **ನಾರಾಯಣಾದ್ರಿ** ಯೆಂದೂ, ತ್ರೇತಾಯುಗದಲ್ಲಿ ದತ್ತಾತ್ರೇಯರು ನಾಲ್ಕು ವೇದಪುರುಷರನ್ನು ಶಿಷ್ಯರನ್ನಾಗಿ ಮಾಡಿಕೊಂಡು ವೇದಪುಷ್ಕರಣಿ ತೀರದಲ್ಲಿ ಸದಾ ವೇದಾಧ್ಯಯನ ನಿರತರಾಗಿದ್ದುದರಿಂದ **ವೇದಾದ್ರಿ**, ಎಂದೂ, ದ್ವಾಪರ ಯುಗದಲ್ಲಿ ರಾಮ, ಕೃಷ್ಣರಿಂದ ಆರಾಧಿಸಲ್ಪಟ್ಟಿದ್ದರಿಂದ **ಯಾದವಾದ್ರಿ** ಎಂದೂ, ಕಲಿಯುಗದಲ್ಲಿ ಶ್ರೀರಾಮಾನುಜರು ದಯಮಾಡಿಸಿ ಜೀರ್ಣೋದ್ಧಾರಮಾಡಿ ಅಭಿಮಾನಿಸಿದುದರಿಂದ **ಯತಿಶೈಲ**ವೆಂದೂ ಪ್ರಸಿದ್ಧವು.

## ಮೂಲಮೂರ್ತಿ ನಾರಾಯಣ ವಿಗ್ರಹ ವಿಚಾರ.

ಈ ನಾರಾಯಣ ವಿಗ್ರಹವು ಮೊದಲು *ಶ್ರೀ ಮಹಾವಿಷ್ಣುವಿನಿಂದ ಬ್ರಹ್ಮನಿಗೆ ಆರಾಧನವಾಗಿ ಕೊಡಲ್ಪಟ್ಟಿತು. ಅನಂತರ ಬ್ರಹ್ಮನು ಸನತ್ಕುಮಾರನಿಗೆ ಕೊಟ್ಟು

ಲೋಕಕ್ಷೇಮಾರ್ಥವಾಗಿ ಭೂಲೋಕದಲ್ಲಿ ಪ್ರತಿಷ್ಠಿಸಿ ಆರಾಧಿಸುವಂತೆ ಹೇಳಿದನು. ಸನತ್ಕುಮಾರರು ಈ ನಾರಾಯಣ ವಿಗ್ರಹವನ್ನು ತಂದು ಈ ಕ್ಷೇತ್ರದಲ್ಲಿ ಮೀನಮಾಸ ಹಸ್ತ ನಕ್ಷತ್ರದಲ್ಲಿ ಪ್ರತಿಷ್ಠಿಸಿದರು. ಅಂದಿನಿಂದ ಈ ಕ್ಷೇತ್ರಕ್ಕೆ **ನಾರಾಯಣಾದ್ರಿ** ಎಂದು ಪ್ರಸಿದ್ಧಿಯುಂಟಾಯಿತು.

ಶ್ರೀರಾಮನು ಅರಣ್ಯಸಂಚಾರ ಮಾಡುವಾಗ ಮಾರ್ಗವಶಾತ್ ಈ ಕ್ಷೇತ್ರಕ್ಕೆ ಬಂದು, ಲಕ್ಷ್ಮಣ ಸೀತೆಯರೊಡಗೂಡಿ ಈ ಮೂರ್ತಿಯನ್ನು ಸಂದರ್ಶಿಸಿದನು. ಆಗ ಉತ್ಸವ ಮೂರ್ತಿಯು ಇರಲಿಲ್ಲ. ಇದಕ್ಕೆ ಗುರುತಾಗಿ **ಶ್ರೀ ರಾಮದೇವರ** ದೇವಸ್ಥಾನವೂ ಸೀತೆಯ ವಿಹಾರಾರ್ಥವಾಗಿ ಲಕ್ಷ್ಮಣನಿಂದ ಭೇದಿಸಲ್ಪಟ್ಟ **ಧನುಷ್ಕೋಟಿ** ಎಂಬ ಬಂಡೆಯೂ ಇರುವುದು.

## ಉತ್ಸವ ಮೂರ್ತಿ ವಿಚಾರ.

ಶ್ರೀರಾಮನು ರಾವಣಾದಿ ರಾಕ್ಷಸರನ್ನೆಲ್ಲಾ ಜಯಿಸಿ ಸುಗ್ರೀವಾಂಗದ ವಿಭೀಷಣಾದಿ ಭಕ್ತರೊಡನೆ ಅಯೋಧ್ಯಾ ಪಟ್ಟಣಕ್ಕೆ ಬಂದು ಪಟ್ಟಾಭಿಷೇಕವಾದ ನಂತರ ಬಂದಿದ್ದ ರಾಜರಿಗೆಲ್ಲಾ ಬಹುಮಾನವನ್ನು ಕೊಡುವ ಸಮಯದಲ್ಲಿ ಅತ್ಯಂತ ಪ್ರೀತಿಯುಕ್ತನಾದ ವಿಭೀಷಣನಿಗೆ ಇಕ್ಷ್ವಾಕುಕುಲ ಕ್ರಮಾರಾಧಿತವಾದ **ಶ್ರೀರಂಗ ನಾಥ ದಿವ್ಯಮೂರ್ತಿ**ಯನ್ನು ಬಿಜಯಮಾಡಿಸಿ ಕೊಟ್ಟನು. ಇದರಿಂದ ಶ್ರೀರಾಮನಿಗೆ ಪೂಜಿಸಲು ಅರ್ಚಾವಿಗ್ರಹವಿಲ್ಲದೆ ಹೋಯಿತು.

ಶ್ರೀಮನ್ನಾರಾಯಣನ ಹೃದಯಕಮಲದಲ್ಲಿ ಉಭಯನಾಯಚ್ಚಿಮಾರರೊಂದಿಗೆ ಉದ್ಭವಿಸಿದ ಈ ಶಿಲ್ಪಪಿಳ್ಳೆ ವಿಗ್ರಹವನ್ನು ಚತುರ್ಮುಖಬ್ರಹ್ಮನು ಪೂಜಿಸುತ್ತಿದ್ದನು ಶ್ರೀರಾಮನಿಗೆ ಪೂಜಿಸಲು ಅರ್ಚಾವಿಗ್ರಹವಿಲ್ಲದಿರುವುದನ್ನು ಕಂಡು ಈ ವಿಗ್ರಹವನ್ನು ಅನುಗ್ರಹಿಸಿ ಕೊಟ್ಟನು.

ಶ್ರೀರಾಮನು ತಾನು ಇರುವವರೆಗೆ ಈ ವಿಗ್ರಹವನ್ನು ಆರಾಧಿಸುತ್ತಿದ್ದು ತಾನು ಸರಯೂನದಿಮೂಲಕ ಪರಮಪದಕ್ಕೆ ಪ್ರಯಾಣಮಾಡುವಾಗ ಪರಮಭಕ್ತನಾದ ಹನುಮಂತನಿಗೆ ಕೊಟ್ಟನು. ಹನುಮಂತನು ಶ್ರೀರಾಮನ ಮಗನಾದ ಕುಶಮಹಾ ರಾಜನಿಗೆ ಕೊಟ್ಟನು. ಕುಶಮಹಾರಾಜನು ತನ್ನಮಗಳಾದ ಕನಕಮಾಲಿನಿಯನು ಯದುವಂಶೋತ್ಪನ್ನನಾದ ಯದುಶೇಖರನಿಗೆ ವಿವಾಹಮಾಡಿ ಮಗಳಿಗೆ ಸ್ತ್ರೀಧನದ ಬಳುವಳಿಯೊಂದಿಗೆ ಉಭಯನಾಯಚ್ಚಿಮಾರುಸಹಿತವಾದ ಈ ವಿಗ್ರಹವನು ಕೊಟ್ಟನು. ಈ ಪ್ರಕಾರ ಶ್ರೀರಾಮಪ್ರಿಯರಾದ ಈ ವಿಗ್ರಹವು ಯದುವಂಶಕ್ಕೆ ಬಂದು ಕ್ರಮವಾಗಿ ಶ್ರೀಕೃಷ್ಣನಿಂದಲೂ ಸಹ ಆರಾಧಿಸಲ್ಪಟ್ಟಿತು.



సంపత్కుమారుడు, శెల్వపిళ్లై. (మేలుకోట).

## ಮೂಲಮೂರ್ತಿಯೊಂದಿಗೆ ಉತ್ಸವಮೂರ್ತಿಯನ್ನು ಪ್ರತಿಷ್ಠಿಸಿದುದು.

ಭಾರತಯುದ್ಧಕ್ಕೆ ಪೂರ್ವಭಾವಿಯಾಗಿ ರಾಜತಂತ್ರಕಾರಣದಿಂದ ಶ್ರೀಕೃಷ್ಣನು ತನ್ನ ಅಣ್ಣನಾದ ಬಲರಾಮನನ್ನು ತೀರ್ಥಯಾತ್ರೆಮಾಡಿ ಬರಬೇಕೆಂದು ಕಳುಹಿಸಿದನು. ಬಲರಾಮನು ತೀರ್ಥಯಾತ್ರೆ ಮಾಡುತ್ತಾ ಮಾರ್ಗವಶಾತ್ ಈ ನಾರಾಯಣಾದ್ರಿಗೆ ಬಂದು ಶ್ಲಾಘ್ಯವಾದ ಕಲ್ಯಾಣಿತೀರ್ಥದಲ್ಲಿ ಸ್ನಾನಮಾಡಿ ಈ ನಾರಾಯಣಮೂರ್ತಿಯನ್ನು ಆಪಾದಮಸ್ತಕ ಸಂದರ್ಶಿಸಿ ಅನಂತರ ದ್ವಾರಕಾ ಪಟ್ಟಣಕ್ಕೆ ಬಂದನು. ತಮ್ಮ ಮನೆಯಲ್ಲಿ ಆರಾಧನೆಯಲ್ಲಿರುವ ಶ್ರೀರಾಮಪ್ರಿಯ ವಿಗ್ರಹಕ್ಕೂ ತಾನು ಸಂದರ್ಶಿಸಿದ ನಾರಾಯಣವಿಗ್ರಹಕ್ಕೂ ಸೌಂದರ್ಯ, ಸಾದೃಶ್ಯಗಳಲ್ಲಿ ಯಾವಭೇದವೂ ಇಲ್ಲದೆ ಇರುವುದನ್ನು ಶ್ರೀಕೃಷ್ಣನಿಗೆ ತಿಳಿಸಿದನು. ಇದನ್ನುಕೇಳಿ ಶ್ರೀಕೃಷ್ಣನಾದಿಯಾಗಿ ಎಲ್ಲರೂ ಹೊರಟು ಅನಿರುದ್ಧಕಿರೀಟ ಶೋಭಿತನಾದ ಶ್ರೀರಾಮಪ್ರಿಯರನ್ನು ಮಾಘಮ್ಮಾಸ ಚಿತ್ತಾನಕ್ಷತ್ರದಲ್ಲಿ ಮೂಲವಿಗ್ರಹ ನಾರಾಯಣಮೂರ್ತಿಯ ಮುಂದಿಟ್ಟು (ಕ್ರಿ. ಪೂ. 3139) ಸಂದರ್ಶಿಸಲು ಯಾವ ಭೇದವೂ ಇಲ್ಲದೆ ಇದ್ದುದನ್ನು ಕಂಡು ಸಂತೋಷಿಸಿದರು. ಅಂದಿನಿಂದ ಯಾದವವಂಶೋತ್ಪನ್ನರಾದ ರಾಜರು ಈ ಕ್ಷೇತ್ರಕ್ಕೆ ಬಂದು ಭಗವಂತನಿಗೆ ಕೈಂಕರ್ಯಗಳನ್ನು ಮಾಡಿ ಸೇವಿಸಿದರು. ಯಾದವರ ಸಂಬಂಧ ದಿನದಿಂದ ಈ ಕ್ಷೇತ್ರಕ್ಕೆ **ಯಾದವಾದ್ರಿ** ಎಂಬ ಹೆಸರು ಪ್ರಸಿದ್ಧವಾಯಿತು.

## ಯಾದವಗಿರಿ ತಿರುನಾರಾಯಣಪುರವು ಪಾಳಾದುದಾವಾಗ ?

**ಶ್ರೀಮನ್ನಾಥಮುನಿಗಳ ಕಾಲ** ಕ್ರಿ. ಶ. 584 ರಿಂದ 914 ರ ವರೆಗೆ— 330 ವರ್ಷಗಳು ಬದುಕಿದ್ದರು ಎಂದರೆ ಆಶ್ಚರ್ಯವಾಗಬಹುದು. ಇವರು ಯೋಗಿಗಳಾಗಿದ್ದರಿಂದ ಅಷ್ಟುದಿನ ಬದುಕುವುದೇನೂ ಆಶ್ಚರ್ಯವಲ್ಲ. ತಮ್ಮ ಜೀವಿತ ಕಾಲದಲ್ಲಿ ನಡೆಸಬೇಕಾದ ಕಾರ್ಯಗಳನ್ನು ನಡೆಸಿ ಉತ್ತರ ವಯಸ್ಸಿನಲ್ಲಿ ಸುಮಾರು ೧೦೦ ವರ್ಷಗಳಾದಮೇಲೆ ಯೋಗದಲ್ಲಿ (ಸಮಾಧಿ) ನಿರತರಾದುದರಿಂದ ಹೊರಗಿನವರ ಸಂಪರ್ಕವಿಲ್ಲದ ಕಾರಣ ಜೀವಂತವಾಗಿದ್ದರೂ ಕಾರ್ಯವಿಶೇಷವಿರುವುದಿಲ್ಲ.

ಇವರು ದಕ್ಷಿಣದೇಶದ ವೀರನಾರಾಯಣಪುರದಲ್ಲಿ (ಕಾಟ್ಟುಮನ್ನಾರ್) ಅವತರಿಸಿ ಪ್ರಬುದ್ಧರಾಗಿ ಮಹಾ ವಿದ್ವಾಂಸರಾದಮೇಲೆ ಆಸೇತು ಹಿಮಾಚಲ ಪರ್ಯಂತ ಸಂಚಾರಮಾಡಿ ಪುನಃ ತಮ್ಮ ಸ್ವಸ್ಥಾನಕ್ಕೆ ಸೇರಿ ಆ ಕ್ಷೇತ್ರದ ಮನ್ನನಾರ್ ದೇವರ ಕೈಂಕರ್ಯವನ್ನು ಮಾಡಿಕೊಂಡಿದ್ದರು.

ಈ ಕಾಲದಲ್ಲಿ ಯಾದವಗಿರಿ ತಿರುನಾರಾಯಣಪುರದಿಂದ ಕೆಲವು ಶ್ರೀ ವೈಷ್ಣವರು ಯಾತ್ರಾರ್ಥಿಗಳಾಗಿ ವೀರನಾರಾಯಣಪುರಕ್ಕೆ ಬಂದು ದೇವರನ್ನು ಸೇವಿಸುವಾಗ ನಮ್ಮಾಳ್ವಾರ್ರವರ ಪ್ರಬಂಧವಾದ "ಆರಾವಮುದೇ ಅಡಿಯೇನುಡಲಮ್'' (ತಿ. ಯ್ಮೊ ೫-೮) ಎಂಬ ಹತ್ತು ಪದ್ಯಗಳಿಂದ ಸ್ತೋತ್ರಮಾಡಿದರು. ಆ ಹತ್ತು

ಪದ್ಯಗಳ ಕೊನೆಯ ಪದ್ಯದಲ್ಲಿ "ಓರಾಯಿರತ್ತುಳ್ ಇಪ್ಪತ್ತುಂ" ಎಂದರೆ ಸಾವಿರ ಪದ್ಯಗಳಲ್ಲಿ ಈ ಹತ್ತು ಪದ್ಯಗಳು ಎಂದು ಹೇಳಿದುದನ್ನು ನಾಥಮುನಿಗಳು ಕೇಳಿ—

ಈ ಬಾಕಿ ಒಂದುಸಾವಿರ ಪದ್ಯಗಳು ಇರುವುದಾಗಿ ತಿಳಿದು ಬರುವುದರಿಂದ ಆ ಶ್ರೀವೈಷ್ಣವರನ್ನು ನೋಡಿ "ನಿಮಗೆ ಆ ಸಾವಿರಪದ್ಯಗಳೂ ಬರುವುದೇ ? ಅಥವಾ ಅದನ್ನು ಬರೆದ ಗ್ರಂಥಗಳಾದರೂ ಇರುವುದೇ ? ಎಂದು ಕೇಳಲು ಆ ಶ್ರೀವೈಷ್ಣವರು ಈ ಹತ್ತು ಪದ್ಯಗಳು ಹೊರತು ನಮಗೆ ಬೇರೆ ತಿಳಿಯದು ಆ ರೀತಿ ಬರೆದ ಗ್ರಂಥ ಗಳಾವುದೂ ಇಲ್ಲ." ಎಂದು ತಿಳಿಸಿ ದೇವರ ತೀರ್ಥಪ್ರಸಾದವನ್ನು ಸ್ವೀಕರಿಸಿ ಮಾರ್ಗ ಕ್ರಮವನ್ನನುಸರಿಸಿ ಹೊರಟುಹೋದರು.

ಈ ರೀತಿ ಗುರುಪರಂಪರಾ ಇತಿಹಾಸವಿರುವುದನ್ನು ವಿಮರ್ಶಿಸುವಾಗ್ಯೆ ಶ್ರೀವೈಷ್ಣವಮತವು ದೇಶದಾದ್ಯಂತ ವ್ಯಾಪಿಸಿದ್ದರೂ ನಮ್ಮಾಳ್ವಾರ್‌ರವರ ತಿರುವಾಯ್ಮೊಳಿ ಎಂಬ ೪೦೦೦ ಪ್ರಬಂಧವು ಈಗಿನಷ್ಟು ಉಪದೇಶ ಪ್ರಚಾರವು ಇಲ್ಲದೆ ಸ್ವಲ್ಪವಾಗಿ ಪ್ರಚಾರದಲ್ಲಿದ್ದಿತು. ನಾಥಮುನಿಗಳು ಆ ೪೦೦೦ ಪದ್ಯಗಳನ್ನೂ ನಮ್ಮಾಳ್ವಾರ್‌ರವರ ಅನುಗ್ರಹದಿಂದ ಪಡೆದು ಅನಂತರ ಅವುಗಳನ್ನು ಉಪದೇಶಿಸಿ ದೇವಸ್ಥಾನ ಮತ್ತು ಮನೆಗಳಲ್ಲಿ ಆಚರಿಸುವ ಕ್ರಮಗಳನ್ನು ತಿಳಿಸಿ ಪ್ರಚಾರ ಪಡಿಸಿದ ಮೇಲೆ ಅದು ಅಲ್ಲಿಂದ ಲೋಕಕ್ಕೆಲ್ಲಾ ಹರಡಲ್ಪಟ್ಟಿತು. ಖಿಲವಾದ ದ್ರಾವಿಡ ಸಂಪ್ರದಾಯವನ್ನು ಪ್ರಕಾಶ ಪಡಿಸಿದವರಾದುದರಿಂದ ಅವರನ್ನು ಅದರ ಜ್ಞಾಪಕಾರ್ಥವಾಗಿ ಪ್ರತಿದಿನವೂ ಶ್ರೀವೈಷ್ಣವರ ಅನುಸಂಧಾನದ ಗುರುಧ್ಯಾನ ಮಂತ್ರದಲ್ಲಿ ಸೇರಿಸಿರುವರು. (ನಾಥ ಯಾಮುನ ಮಧ್ಯಮಾಂ)

ನಾಥಮುನಿಗಳ ಅವತಾರಕಾಲ ಕ್ರಿ.ಶ. 584 ಇವರು ಪ್ರಬುದ್ಧರಾಗಿ ವಿದ್ವಾಂಸ ರಾಗಿ ಆಸೇತುಹಿಮಾಚಲಪರ್ಯಂತ ಸಂಚಾರಮಾಡಿ ಸ್ವಸ್ಥಾನವನ್ನುಸೇರಿ ದೇವರ ಕೈಂಕರ್ಯವನ್ನು ಮಾಡುತ್ತಿರುವಾಗ ಅವರಿಗೆ ಸುಮಾರು 50–60 ವರ್ಷಗಳಿಗೆ ಕಡಿಮೆ ಇರಲಾರದು. ಆಗ ಮೇಲುಕೋಟೆಯಿಂದ ಶ್ರೀ ವೈಷ್ಣವರು ಬಂದಿರ ಬಹುದಾಗಿದೆ. ಆಗ ಕಾಲ ಸುಮಾರು 584+50–634 ಆಗಬಹುದು. ಈ ಕಾಲದಲ್ಲಿ ತಿರುನಾರಾಯಣಪುರವು ಪ್ರವೃದ್ಧ ಮ್ಲಾನವಾಗಿರಲೇಬೇಕು. ಕ್ರಿ.ಶ.1099 ರಲ್ಲಿ ಶ್ರೀ ರಾಮಾನುಜಾಚಾರ್ಯರು ತೊಂಡನೂರಿಗೆ ಬಂದಾಗ ಅದು ರಾಜಧಾನಿಯಾಗಿ ಮೇಲುಕೋಟೆಯು ಅರಣ್ಯವಾಗಿತ್ತು. ಅದರ ಹೆಸರನ್ನೂ ಹೇಳುವವರಿಲ್ಲವಾಗಿತ್ತು. ಊರು ಸಮೂಲವಾಗಿ ನಾಶವಾಗಲು ಎರಡು ಕಾರಣಗಳು ಕಾಣುತ್ತವೆ. ಒಂದನೆಯದು ರಾಜತಂತ್ರಕಾರಣ· ಎರಡನೆಯದು ಕ್ಷಾಮಡಾಮರ. ಈ ಎರಡು ಕಾರಣಗಳು ಏಕಕಾಲದಲ್ಲಿಯೋ ಅಥವಾ ಒಂದರಮೇಲೊಂದು ಬಂದು ಊರು ಸಂಪೂರ್ಣವಾಗಿ ನಾಶವಾಗಿ ಮಣ್ಣಿನಿಂದ ಮುಚ್ಚಲ್ಪಟ್ಟು ಅರಣ್ಯವಾಗಿರಬಹುದಾಗಿದೆ.

ಕ್ರಿ. ಶ. 634ರಿಂದ 1099ರ ಅಂತರಕಾಲ ಸುಮಾರು 465 ವರ್ಷಗಳು. ಊರು ಸಂಪೂರ್ಣವಾಗಿ ನಾಶವಾಗಿ ನಾಮಾವಿಶೇಷವಿಲ್ಲದಿರುವುದೂ ಮತ್ತು ಅದರ ಜ್ಞಾಪಕಾರ್ಥವಾಗಿ **ಯಾದವಗಿರಿ ನಾರಾಯಣಚತುರ್ವೇದಿ ಮಂಗಲವು** (ತೊಂಡನೂರು) ಉತ್ಪತ್ತಿಯಾಗಿ ಅಭಿವೃದ್ಧಿಯಲ್ಲಿದ್ದುದೂ ವಿಮರ್ಶಿಸಿದಲ್ಲಿ ಸುಮಾರು 250-300 ವರ್ಷಗಳನ್ನು ಗುರುತಿಸಬಹುದು. 1099-300—799 ಎಂದರೆ ಸುಮಾರು ಕ್ರಿ.ಶ. 750-850ರ ಅಂತರದಲ್ಲಿ ಊರು ಸಂಪೂರ್ಣವಾಗಿ ನಾಶವಾಗಿರ ಬಹುದಾಗಿದೆ. ಇದಕ್ಕನುಗುಣವಾಗಿ ಯಾದವಗಿರಿಯಾದ ತಿರುನಾರಾಯಣಪುರವು ದೈವೀಕವಾಗಿ ಹಾಳಾದಮೇಲೆ ಅದರ ಜ್ಞಾಪಕಾರ್ಥವಾಗಿ ಅದಕ್ಕೆ ಸಮೀಪವಾದ ಸ್ಥಳದಲ್ಲೇ ಊರನ್ನುಕಟ್ಟಿ ಅದಕ್ಕೆ ಯಾದವನಾರಾಯಣಪುರವೆಂಡೂ, ವೇದವಿದ್ಯಾ ಶಾಸ್ತ್ರಪಂಡಿತರುಗಳಿಂದ ಕೂಡಿದ್ದುದರಿಂದ ಚತುರ್ವೇದಿ ಮಂಗಲವೆಂದೂ ಹೆಸರು ಬಂದಿರಬಹುದು.

ಇದಕ್ಕೆ ಸಾಕ್ಷಿಯಾಗಿ ಹೊಯ್ಸಳರಾಜರಿಂದ ವಿನಯಾದಿತ್ಯ, ವೀರೇಯಾಂಗರು ತೊಂಡನೂರನ್ನು ಕ್ರಿ. ಶ. 1000 ಕ್ಕೂ ಹಿಂದೆಯೇ ರಾಜಧಾನಿಯನ್ನಾಗಿ ಮಾಡಿ ಕೊಂಡಿದ್ದರು.

## ಶ್ರೀ ರಾಮಾನುಜಾಚಾರ್ಯರಿಗೆ ಯಾದವಗಿರಿ ತಿರುನಾರಾಯಣಪುರವು ಅಳಿದುಹೋಗಿದ್ದ ವಿಷಯವು ತಿಳಿದಿತ್ತೇ?

ಶ್ರೀ ರಾಮಾನುಜಾಚಾರ್ಯರು ಸಕಲ ಶಾಸ್ತ್ರ ವಿದ್ವಾಂಸರಾಗಿದ್ದುದು ಸರಿಯಷ್ಟೆ. ಅವರು ಪುರಾಣ ಪಾಂಚರಾತ್ರಸಂಹಿತೆ ಇವುಗಳನ್ನು ನೋಡಿ ಓದಿದವರಾಗಿದ್ದರು. ತಾವು ರಚಿಸಿದ ಶ್ರೀಭಾಷ್ಯಾದಿ ಗ್ರಂಥಗಳಲ್ಲಿ ನಾರದೀಯಪುರಾಣ, ಪಾಂಚರಾತ್ರಸಂಹಿತೆ ಗಳನ್ನು ಉದಾಹರಿಸಿರುವರು. ಈ ಗ್ರಂಥಗಳಲ್ಲಿ ಯಾದವಗಿರಿ ಮಹಾತ್ಮೆಯು ವರ್ಣಿತವಾಗಿರುವುದು. ಈ ಗ್ರಂಥಗಳನ್ನು ಓದಿದ ಅವರಿಗೆ ಯಾದವಗಿರಿಯ ವಿಚಾರವಾಗಿ ವಿಷಯವು ತಿಳಿದೇ ಇರಬೇಕು.

2. ಅಲ್ಲದೆ ನಮ್ಮಾಳ್ವಾರ್‌ರವರು ಹಾಡಿದ ೧೦೦೦ ಪದ್ಯಗಳಲ್ಲಿ **ಒರುನಾಯಕಂ** ಎನ್ನುವ ಹತ್ತು ಪದ್ಯಗಳು (ತಿ. ವಾ. 3-3) ಸಹ ಓದಿರುವವರಾಗಿರುವರು. ಆ ದಿವ್ಯ ದೇಶ ಯಾವುದು? ದೇವರು ಯಾರು? ಎನ್ನುವ ವಿಷಯವು ಯಾರಿಗೂ ತಿಳಿಯದಿರಲು ಕಾರಣವೇನೆಂದರೆ ಪ್ರಬಂಧವು ಪ್ರಚಾರಕ್ಕೆ ಬರಲು ಆರಂಭವಾದ ಕಾಲ ಸುಮಾರು 650. ಸಂಪೂರ್ಣವಾಗಿ ಪ್ರಚಾರವಾಗುವುದರೊಳಗೆ ತಿರುನಾರಾಯಣಪುರವು ಪಾಳಾಗುವುದರಲ್ಲಿತ್ತು. ಕ್ರಿ. ಶ. 750-850ಕ್ಕೆ ಅನಂತರ ತಿರುನಾರಾಯಣ ಪುರದ ಹೆಸರೇ ಇಲ್ಲದ್ದರಿಂದ ಕ್ರಿ.ಶ. 850ರ ಮೇಲಕ್ಕೆ ಸ್ಥಳ ಮತ್ತು ಹೆಸರು ಹೇಳುವವರು

ಇಲ್ಲವಾದ್ದರಿಂದ ಸ್ತೋತ್ರಮಾಡಿದ ದೇವರೂ ಸಹ ಕಾಣಲಿಲ್ಲ. ಶ್ರೀ ರಾಮಾನುಜರು 1099 ರಲ್ಲಿ ಬಂದಮೇಲೆ ಜನಗಳಿಗಿದ್ದ ಶಂಕೆಯನ್ನು ಪರಿಹರಿಸಿದರು. ಅದಕ್ಕೆ ಗುರುತಾಗಿ ಮೇಲುಕೋಟೆಯಲ್ಲಿ ಪ್ರಬಂಧವನ್ನು ಆರಂಭ ಮಾಡುವಮೊದಲು **ಕಣ್ಣಿನುಣ್ ಶಿರತ್ತಾಂಬು** ಎಂಬ ನಮ್ಮಾಳ್ವಾರ್ರ ವಿಷಯವಾದ ಪ್ರಬಂಧವನ್ನು ಅನುಸಂಧಿಸಿದಮೇಲೆಯೇ ಮುಂದಣ ಪ್ರಂಬಧಗಳನ್ನು ಅನುಸಂಧಿಸಿ ಬರುವಂತೆ ಹೇಳಿದ ಕ್ರಮವು ಅದ್ಯಾವಧಿ ಆಚರಣೆಯಲ್ಲಿರುವುದು ಕಂಡುಬರುವುದು.

3. ಅಲ್ಲದೆ ಶ್ರೀರಾಮಾನುಜಾಚಾರ್ಯರು ತೊಂಡನೂರಿಗೆ ಬಂದಾಗ ಅಲ್ಲಿಯ ಅಧಿಪತಿಯಾದ ವಿಠಲದೇವರಾಯನ ಮಗಳು ಪಿಶಾಚಾವಿಷ್ಟೆಯಾಗಿರುವುದನ್ನು **ತೊಂಡನೂರು ನಂಬಿ** ಎಂಬುವರು ತಿಳಿದುಕೊಂಡು ಬಂದು ಶ್ರೀರಾಮಾನುಜಾಚಾರ್ಯರಿಗೆ ತಿಳಿಸಿ ಅವರು ಅದನ್ನು ಪರಿಹರಿಸತಕ್ಕದೆಂದು ರಾಜಪ್ರಾರ್ಥನೆಯನ್ನು ತಿಳಿಸಿದರು. ಅದಕ್ಕೆ ಶ್ರೀರಾಮಾನುಜಾಚಾರ್ಯರು ತಾವು ರಾಜಾಸ್ಥಾನಕ್ಕೆ ಬರುವುದು ಉಚಿತವಲ್ಲವೆಂದು ತಿಳಿಸಲು ಇದನ್ನು ಕೇಳಿದ ತೊಂಡನೂರುನಂಬಿಯೇ ಮೊದಲಾದ ಶಿಷ್ಯರು ವಿಠಲದೇವ ರಾಜನನ್ನು ವಿಶೇಷ ಕಟಾಕ್ಷ ಮಾಡುವುದರಿಂದ ತಮ್ಮ ದರುಶನಕ್ಕೆ ಬಹು ಉಪಕಾರವಾಗುವುದೆಂದೂ, ತಿರುನಾರಾಯಣಪುರವು ಪಾಳಾದ ಸ್ಥಳವು ವಿಠಲದೇವರಾಯನ ಅಧೀನವಾಗಿರುವುದರಿಂದ ತಿರುನಾರಾಯಣಪುರವನ್ನು ರಾಜನ ಸಹಾಯದಿಂದ ಜೀರ್ಣೋದ್ಧಾರಮಾಡಬಹುದೆಂದೂ, ಭಗವತ್ಕೈಂಕರ್ಯಾರ್ಥವಾಗಿ ರಾಜನರಮನೆಗೆ ದಯಮಾಡಿಸಬೇಕೆಂದು ಕೇಳಿಕೊಂಡುದರ ಫಲವಾಗಿ ಶ್ರೀರಾಮಾನುಜರು ಸಮ್ಮತಿಸಿ ಅರಮನೆಗೆ ಬಂದು ಪಿಶಾಚಾವಿಷ್ಟೆಯಾದ ಆ ರಾಜನ ಮಗಳ ಭ್ರಮೆಯನ್ನು ಹೋಗಲಾಡಿಸಿದರು; ಎಂದಿರುವ ಗುರುಪರಂಪರಾ ಇತಿಹಾಸವನ್ನು ವಿಮರ್ಶಿಸುವಾಗ್ಯೆ ಶ್ರೀರಾಮಾನುಜರು ಅಕಸ್ಮಾತ್ತುಂಟಾದ ಚೋಳನ ಬಾಧೆಯಿಂದ ಹೊರಟು ಈ ದೇಶದ ಮಾರ್ಗವಾಗಿ ಬಂದಾಗ ಮಾರ್ಗಮಧ್ಯದಲ್ಲಿ ತಿರುನಾರಾಯಣಪುರದ ಜ್ಞಾಪಕ ಬಂದು ತಮ್ಮ ಜೊತೆಯವರೊಂದಿಗೆ ಜಿಜ್ಞಾಸೆ ಮಾಡಿರಬೇಕೆಂದು ತಿಳಿದುಬರುತ್ತದೆ. ತಿರುನಾರಾಯಣಪುರದ ಸ್ಥಳವೂ ಆ ರಾಜನ ಅಧೀನವಾಗಿರುವುದು ಎಂದಾಗ ಸ್ಥಳನಿರ್ದೇಶವೂ ಸುಮಾರಾಗಿ ರಾಮಾನುಜರಿಗೆ ತಿಳಿದಿತ್ತು. ಊರು ಗುರುತಿಲ್ಲದೆ ಸಂಪೂರ್ಣವಾಗಿ ಪಾಳಾಗಿ ಅರಣ್ಯವಾದ್ದರಿಂದಲೂ, ತಿಳಿಯ ಹೇಳುವವರ ಕಾಲವೆಲ್ಲಾ ಮುಗಿದು ಹೋಗಿದ್ದುದರಿಂದ ಧನ, ಜನ, ಅಧಿಕಾರ ಸಹಾಯವಿಲ್ಲದೆ ಸ್ಥಳ ನಿರ್ದೇಶನ ಮಾಡಿ ಜೀರ್ಣೋದ್ಧಾರಮಾಡುವುದು ಕಷ್ಟವಾಗಿದ್ದಿತು.

4. ಶ್ರೀರಾಮಾನುಜಾಚಾರ್ಯರು ಚೋಳನ ಬಾಧೆಯಿಂದ ಈ ದೇಶಕ್ಕೆ ಬಂದಾಗ ಅಜ್ಞಾತವಾಸ ಮಾಡಬಹುದಾಗಿತ್ತು. ಸಾಲಿಗ್ರಾಮದ ಊರಿಗೆ ಬಂದು ಅಲ್ಲಿ ಕೆಲವು ಕಾಲವಿದ್ದು ತೊಂಡನೂರಿಗೆ ಬರುವುದಕ್ಕೆ ಕಾರಣವೇನು? ಎಂದರೆ ತೊಂಡನೂರಿಗೆ ಯಾದವನಾರಾಯಣ ಚತುರ್ವೇದ ಮಂಗಲವೆಂದು ಹೆಸರಿದ್ದಿತು. **ತಿರುನಾರಾಯಣ**

ಚತುರ್ವೇದ (ದಿ) ಈ ಶಬ್ದಗಳು ತಿರುನಾರಾಯಣಪುರವು ಅಳಿದಮೇಲೆ ಜ್ಞಾಪಕಾರ್ಥವಾಗಿ ಈ ಊರು ಸ್ಥಾಪಿತವಾಗಿರಬೇಕೆಂದಾಲೋಚಿಸಿ ಇದರ ಪಕ್ಕದಲ್ಲೇ ತಿರುನಾರಾಯಣ ಕ್ಷೇತ್ರವು (ಯದುಗಿರಿ) ಇರಬೇಕೆಂದು ತೀರ್ಮಾನಿಸಿ ತೊಂಡನೂರಿಗೆ ಬಿಜಯ ಮಾಡಿಸಿದರೆಂದು ತಿಳಿದುಬರುತ್ತದೆ. (ಗುರುಪರಂಪರಾ)

ತೊಂಡನೂರಿಗೆ ಬಂದಮೇಲೆ ಶ್ರೀರಾಮಾನುಜರ ಸ್ವಪ್ನದಲ್ಲಿ ತಿರುನಾರಾಯಣ ದೇವರು ಹೇಳಿದುದು, ಬೆಟ್ಟದಲ್ಲಿ ವಲ್ಮೀಕದ ಸ್ಥಳ ನಿರ್ದೇಶನವೇ ಹೊರತು ಬೇರೆಯಲ್ಲ. ಈ ಕಾರಣಗಳಿಂದ ಶ್ರೀರಾಮಾನುಜರಿಗೆ ತಿರುನಾರಾಯಣಪುರವು ಅಳಿದ ಮತ್ತು ಸ್ಥಳ ನಿರ್ದೇಶನ ಎಲ್ಲವೂ ತಿಳಿದಿತ್ತೆಂದು ಹೇಳಬಹುದು.

## ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯ.

ಶ್ರೀ ರಾಮಾನುಜಾಚಾರ್ಯರು ಅರಣ್ಯವಾಗಿದ್ದ ಯಾದವಗಿರಿಯನ್ನು ದೇವಸ್ಥಾನ, ಊರು, ಮನೆ ಕೊಳ ಇತ್ಯಾದಿಗಳಾಗಿ ಜೀರ್ಣೋದ್ಧಾರ ಮಾಡಿದರು. ಆಗ ಊರು ಕಟ್ಟಿದಾಗ, ದೇವಸ್ಥಾನ ಕೈಂಕರ್ಯಪರರು, ರಕ್ಷಣೆ, ಅಧಿಕಾರ, ಆಡಳಿತ ಜನಗಳು ಇತ್ಯಾದಿಯಾಗಿ ೫೩೦ ಮನೆಗಳಿಂದ ಜೀರ್ಣೋದ್ಧಾರಮಾಡಿದುದಾಗಿ ಈ ಕೆಳಗಿನ ಶ್ಲೋಕದಿಂದ ತಿಳಿದುಬರುವುದು.

**ಪಂಚಾಶತಸ್ತ್ರಿಂಶಚ್ಚ ಜನಿಸ್ಥಳ ಕ್ರಮೇಣ**
**ಸಸ್ಯ ಸಂಪನ್ನ ಚತುಃ ಸೀಮಾಸಮನ್ವಿತಂ.** ಇತ್ಯಾದಿ,

ಶ್ರೀರಾಮಾನುಜರು ಶಕ ೧೦೨೦ ಬಹುಧಾನ್ಯಸಂ|| ಕ್ರಿ. ಶ. 1098 ರಲ್ಲಿ ಈ ದೇಶಕ್ಕೆ ಬಂದು ಅವರು ಮಾಡಿದ್ದ ಜೀರ್ಣೋದ್ಧಾರ, ಸಿದ್ಧಾಂತ ಸ್ಥಾಪನೆ ಇವುಗಳ ಜ್ಞಾಪಕಾರ್ಥವಾಗಿ ಅನೂಚಾನವಾದ ಉತ್ಸವಾದಿ ದಿನಾಚರಣೆಗಳು ಅನೇಕ ವಿಧದಲ್ಲಿ ನಡೆದು ಬರುವುದು ಕಂಡುಬರುವುದು.

ಯಾದವಗಿರಿಯ ಜೀರ್ಣೋದ್ಧಾರ ಕಾರ್ಯವು ನಡೆಯುತ್ತಿದ್ದಾಗ ಶ್ರೀರಾಮಾನುಜರು ತೊಂಡನೂರಿನಲ್ಲಿ ನೆಲೆಸಿದ್ದರು. ಆ ಕಾಲದಲ್ಲಿ ಅವರ ರಾಮಾನುಜ ಕೂಟಕ್ಕೆ ತೊಂಡನೂರಿನ ಅಶೇಷ ಮಹಾಜನಗಳೂ ಸೇರಿ ಅವರಿಗೆ ವೃತ್ತಿಮಾನ್ಯ, ಭೂಮಿಗಳನ್ನು ಬಿಟ್ಟಿರುವುದು ತಿಳಿದು ಬರುವುದು (ಶ್ರೀ. ಪ. ಶಾ. ೨೩೧.)

ಶ್ರೀರಾಮಾನುಜರು ಚೋಳನ ಬಾಧೆಯಿಂದ ಈ ದೇಶಕ್ಕೆ ಬಂದರು. ಆಗ ಅಜ್ಞಾತವಾಸ ಮಾಡಬೇಕಾಗಿದ್ದಿತು. ಹಾಗಿಲ್ಲದೆ ಇಲ್ಲಿಯ ದೇಶಾಧಿಪತಿಯಾದ **ವಿಷ್ಣುವರ್ಧನರಾಯನು** ಇವರನ್ನು ಕಾಪಾಡಿದುದಲ್ಲದೆ ಅವರಿಗೆ ಶಿಷ್ಯನಾಗಿ ರಾಮಾನುಜರ ಮೂಲಕ ದರ್ಶನ ಸ್ಥಾಪನವನ್ನೂ ಅವರಿಂದ ದೇಶಕ್ಷೇಮವಾಗಿ ಅನೇಕ ಜೀರ್ಣೋದ್ಧಾರ, ಗುಡಿಗೋಪುರಾದಿ ಮಹತ್ಕಾರ್ಯಗಳನ್ನು ಮಾಡಿಸಿ ಸುಖವಾಗಿ ಶ್ರೀರಂಗಕ್ಷೇತ್ರಕ್ಕೆ ಹಿಂತಿರುಗಿಸಿ ಕಳುಹಿಸಿಕೊಟ್ಟುದುದರಿಂದ ಶ್ರೀರಂಗದ ಜನರಿಗೆ **ಸಂತೋಷವಾದಪ್ರಯುಕ್ತ** ಅದರ ಜ್ಞಾಪಕಾರ್ಥ ಕೃತಜ್ಞತೆಯ ಸಲುವಾಗಿ **ಶ್ರೀರಂಗದ**

**ಅಶೇಷಮಹಾಜನಗಳೂ** ಸೇರಿ ವಿಷ್ಣುವರ್ಧನನು ಹೊಸದಾಗಿ ಪ್ರತಿಷ್ಠಿಸಿದ ಲಕ್ಷ್ಮೀನಾರಾಯಣ ದೇವರಿಗೆ ಅನೇಕ ಧರ್ಮಗಳನ್ನು ಮಾಡಿರುವುದು ಕಂಡುಬರುವುದು. (ಶ್ರೀ. ಪ. ಶಾ. 230) (ವಿಷ್ಣುವರ್ಧನನೆಂಬ ಹೆಸರೇನೂ ಹೊಸದಲ್ಲ. ವಿಷ್ಣುವರ್ಧನನೆಂಬ ರಾಜನು (ಯಶೋಧರ್ಮ) ಕ್ರಿ. ಶ. 532 ರಲ್ಲಿ ಮಾಲ್ವ, ಗ್ವಾಲಿಯರ್ ದೇಶವನ್ನು ಆಳುತ್ತಿದ್ದುದಾಗಿ ಮಂದಸಾರದ ೫೩ ನೇ ಶಾಸನದಿಂದ ತಿಳಿದು ಬರುವುದು.)

ಅಲ್ಲದೆ ರಾಮಾನುಜರ ಶಿಷ್ಯ'ಪ್ರಶಿಷ್ಯರಾದ ರಾಮಾನುಜ, ಕುಲಶೇಖರದಾಸರು, ತಿರುವರಂಗಪ್ಪೆರುಮಾಳರಯರು, ಉತ್ತಮನಂಬಿ, ತಿರುವಿನಂದವಿಳಕ್ಕೈದಾಸರು, ತಿರುನರೆಯೂರ್‌ದಾಸರು, ತಿರುವರಂಗದಾಸರು, ಆಂಡಾಳ್, ಇತ್ಯಾದಿಗಳು ಅಭಿಮಾನಿಸಿ ವೃತ್ತಿ, ಭೂಮಿಗಳನ್ನು ಸಮರ್ಪಿಸಿರುವುದು ಶಾಸನದಲ್ಲಿ ಕಂಡುಬರುವುದು. (ಶ್ರೀ. ಪ. ಶಾ. 161, 228, 229, 230, 231, 236, 246.)

ಹಾಗಿಲ್ಲದೆ ತೊಂಡನೂರಿಗಿಂತ ಪುರಾಣ ಪ್ರಸಿದ್ಧವಾದ **ಪ್ರಾಚೀನ ಪುಣ್ಯ** ಕ್ಷೇತ್ರಗಳು ಅನೇಕವಿರುವಾಗ ತೊಂಡನೂರಿನ ಲಕ್ಷ್ಮೀನಾರಾಯಣ ದೇವರಿಗೆ **ಶ್ರೀರಂಗದ ಅಶೇಷಜನಗಳು** ಧರ್ಮಮಾಡಲು ಕಾರಣವೇನು? ಆದ್ದರಿಂದ ಈ ಕಾರಣಗಳಿಂದ ಶ್ರೀರಾಮಾನುಜರ ಸಾನ್ನಿಧ್ಯವು ಸ್ಥಿರಪಡುವುದು.

ಅಲ್ಲದೆ ನಾರಾಯಣಸ್ವಾಮಿ ದೇವಸ್ಥಾನದ ರಂಗಮಂಟಪದಲ್ಲಿ ವಿಷ್ಣುವರ್ಧನನ ಸೇನಾಪತಿಯೂ, ಮಹಾಪ್ರಧಾನನೂ, ತಂತ್ರಾಧಿಷ್ಠನಾಯಕನೂ, ಛತ್ರಾಧಿಕಾರಿಯೂ ಆದ **ಸುರಗಿಯನಾಗಿದೇವಣ್ಣನು** ಕೆಲವು ಧರ್ಮಮಾಡಿರುವುದು 93 ನೇ ಶಾಸನದಲ್ಲಿ ಕಂಡುಬರುವುದರಿಂದಲೂ (M. A. R. 1908 Para 38) ಎಲ್ಲಕ್ಕಿಂತಲೂ ಮುಖ್ಯವಾಗಿ 64 ನೇ ಶಾಸನದಿಂದ ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯವು ತೊಂಡನೂರಿನಲ್ಲಿ ಕೆಲವು ಕಾಲವಿದ್ದರೆಂದು ಈ ಕೆಳಗಿನ ಶ್ಲೋಕಗಳಿಂದ ಸ್ಪಷ್ಟವಾಗಿ ತಿಳಿದು ಬರುವುದು.

ತೇಷ್ವಾದ್ಯಾ ಯಾದವಪುರೀ ತೊಂಡನೂರಿತಿ ಯಾಜನ್ಯೈಃ ।
ಸ ದೇಶೋ ಯಾದವ ಗಿರೇರ್ದಕ್ಷಿಣೇ ತ್ವರ್ಧಯೋಜನೇ
ಕಾವೇರ್ಯಾಶ್ಚೋತ್ತರೇ ಭಾಗೇ ನೀಲಾದ್ರೇಃ ಪಶ್ಚಿಮೋತ್ತರೇ ॥
ರಾಮಾನುಜಾಂಘ್ರಿ ಶ್ರೀತೀರ್ಥ ತಟಾಕಾದ್ರೇಸ್ತು ಪೂರ್ವತಃ ।
ಉಪತ್ಯಕಾಯಾಂ ಪುಣ್ಯಾಯಾಂ ಲಕ್ಷ್ಮೀನಾರಾಯಣಾಶ್ರಮಃ
ರಮ್ಯೋ ಹೊಯ್ಸಳ ದೇಶಾಖ್ಯ ಸರ್ವಕಾಲ ಸುಖಪ್ರದಃ ।
ತತ್ರಸ್ಥಾ ಯಾದವಪುರೀ ವಿಷ್ಣುವರ್ಧನಪಾಲಿತಾ ।
ಶ್ರೀರಾಮಾನುಜ ಪಾದಾಬ್ಜ ಪರಾಗೈಃ ಪಾವನೀಕೃತಾ ॥ ಇತ್ಯಾದಿ

(ಶ್ರೀ. ಪ. ಶಾ. ೬೪).

ಶ್ರೀರಾಮಾನುಜರು ಡೆಲ್ಲಿಯಿಂದ ಬಂದ ಕಾಲ ವಿಕೃತಿ ಸಂ॥ (A. D. 1110) ಆಶ್ವಯುಜ ಶುದ್ಧ ಸಪ್ತಮಿ. ಈ ದಿನದ ಜ್ಞಾಪಕಾರ್ಥವಾಗಿ ಅನೂಚಾನವಾಗಿ **'ಡೆಲ್ಲಿಉತ್ಸವ"** ಎಂಬುದಾಗಿ ನಡೆಸುತ್ತಾರೆ, ಪ್ರಕೃತ ಈ ಉತ್ಸವವು ಕುಂಭ ಮಾಸ ಜ್ಯೇಷ್ಠಾನಕ್ಷತ್ರದಲ್ಲಿ ನಡೆಯುತ್ತಿದೆ (ವಿಮರ್ಶಿಸಬೇಕು). ಈ ಉತ್ಸವದಂತೆಯೇ ಬಲರಾಮ ಕೃಷ್ಣರು, ಮೂಲಮೂರ್ತಿಯೊಂದಿಗೆ ಉತ್ಸವಮೂರ್ತಿಯನ್ನು ಪ್ರತಿಷ್ಠಿಸಿದ ಕಾಲ ಮಾನಮಾಸ (ಮಾಘ) ಚಿತ್ತಾನಕ್ಷತ್ರವು. ಈ ದಿನದ ಜ್ಞಾಪಕಾರ್ಥವಾಗಿ **ಶೇತಿಸೇವೆ** ಎಂಬ ಉತ್ಸವವನ್ನೂ ಶ್ರೀರಾಮಚಂದ್ರನ ಪಟ್ಟಾಭಿಷೇಕ ದಿನವೆಂದು ಮೊದಲು ಏರ್ಪಟ್ಟ ದಿನವಾದ ಪುಷ್ಯನಕ್ಷತ್ರದಲ್ಲಿ **ವಯಿರಮುಡಿ** ಉತ್ಸವವನ್ನೂ ಏರ್ಪಡಿಸಿದುದು ಅನೂಚಾನವಾಗಿ ನಡೆಸಿಕೊಂಡು ಬರುವುದು ಸಾಕ್ಷಿರೂಪವಾಗಿದೆ.

ಅಲ್ಲದೆ ಬೇಲೂರಿನ ದೇವಸ್ಥಾನದ ಕಟ್ಟಡದಲ್ಲಿ ಮುಂಭಾಗದ ಗೋಡೆಯಲ್ಲಿ ವಿಷ್ಣುವರ್ಧನನ ಮಹಾರಾಜನ ರಾಜಸಭಾ ಸನ್ನಿವೇಶವು ಕೆತ್ತಲ್ಪಟ್ಟು ಅದರಲ್ಲಿ **ಶ್ರೀರಾಮಾನುಜರ ವಿಗ್ರಹವನ್ನೂ** ಕೆತ್ತಿರುವುದು ಕಾಣಬಹುದು.

ಅಲ್ಲದೆ, ಪಿಶಾಚಾವಿಷ್ಟೆಯಾದ ವಿಷ್ಣುವರ್ಧನ ಮಹಾರಾಜನ ಮಗಳನ್ನು ಶ್ರೀರಾಮಾನುಜರು ಮಂತ್ರಪುನಶ್ಚರಣೆಯಿಂದ ಸ್ವಸ್ಥೆಯನ್ನಾಗಿ ಮಾಡಿದರು. ಅಲ್ಲದೆ ತೊಂಡನೂರಿನ ನರಸಿಂಹಸ್ವಾಮಿ ಆವರಣದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪನೆ ಮಾಡಿದುದರ ಫಲವಾಗಿಯೂ ಅವರಿಗೆ ಈ ಕೆಳಗಿನ ವಿಶೇಷ ಬಿರುದುಗಳಿಂದ ಕೂಡಿದ ಶಾಸನಗಳು ಅನೇಕವಾಗಿ ದೊರಕುವುವು.

**ಮಾಯಾವಾದಿ ಕೋಲಾಹಲ, ಮಂತ್ರವಾದಿ ಭಯಂಕರ, ಶರಣಾಗತ ವಜ್ರ ಪಂಜರ, ಉಭಯ ವೇದಾಂತಾಚಾರ್ಯ, ವೇದಮಾರ್ಗ ಪ್ರತಿಷ್ಠಾಪನಾಚಾರ್ಯ, ಅಭಂಗಗರುಡ ಷಡ್ದರ್ಶನ ಸ್ಥಾಪನಾಚಾರ್ಯ, ನಾರಾಯಣಪಾದಪದ್ಮಾರಾಧಕ** ಇತ್ಯಾದಿ,

ಈ ಬಿರುದುಗಳು ದೇಶದ ಇನ್ನು ಯಾವ ಇತರ ಶಾಸನಗಳಲ್ಲೂ ದೊರಕುವುದಿಲ್ಲ. ಆದರೆ ತಿಪಟೂರಿನ ೫೩ ನೇ ಶಾಸನದಲ್ಲಿ (ಕ್ರಿ. ಶ. 1552) ಶ್ರೀರಾಮಾನುಜರ ಎಲ್ಲಾ ಬಿರುದುಗಳೂ ಹೊಗಳಲ್ಪಟ್ಟಿವೆ. ಅಲ್ಲದೆ ಬ್ರಿಟಿಷ್ ಮ್ಯೂಸಿಯಂನಲ್ಲಿರುವ ಸದಾಶಿವ ಮಹರಾಜರು ಬರೆದ ತಾಮ್ರಶಾಸನದಲ್ಲಿ (ಕ್ರಿ. ಶ. 1556) ಶ್ರೀ ಪೆರಂಬೂದೂರಿನ ರಾಮಾನುಜರ ಮೂರ್ತಿಗೆ ಕೆಲವು ಧರ್ಮಗಳನ್ನು ಮಾಡಿರುವುದು ಕಂಡು ಬರುವುದು. ಈ ಶ್ಲೋಕವು ಮೇಲಿನ ಶ್ಲೋಕದೊಂದಿಗೆ ಹೋಲಿಕೆ ಬರುವುದು.

ಪ್ರಪೇದುಷೇ ವೇದಮಾರ್ಗಪ್ರತಿಷ್ಠಾಪನಾಚಾರ್ಯವರ್ಯತಾಂ
ತದ್ದೃಗ್ವೇವ ಶಿಖಾಸಾರ ದ್ರಾಮಿಡಾಗಮವೇದಿನೇ
ಷಡ್ದರ್ಶನಾರ್ಥ ಸಿದ್ಧಾಂತ ಸ್ಥಾಪನಾಚಾರ್ಯ ಮೌಳಯೇ ।
ಮಾಯಾವಾದಿ ಮನೋಗರ್ವಭೇದಿನೇ ಜಿತವಾದಿನೇ

ಮಂತ್ರವಾದಿ ಮುನೀಶೇಂದ್ರ ವೃಂದಾ ಹಂತಾಪಹಾರಿಣೇ
ಅಭಂಗಗರುಡಾಕಾಯ ಶರಣಾಗತ ರಕ್ಷಿಣೇ
ನಾರಾಯಣಪದಧ್ಯಾನ ಪರಾಯಣ ನಿಜಾತ್ಮನೇ ॥ ಇತ್ಯಾದಿ.

## ವಿಷ್ಣುವರ್ಧನನ ಪೂರ್ವೀಕರು.

ಯಾದವಕುಲ ತಿಲಕನಾದ **ಶ್ರೀಕೃಷ್ಣಪರಮಾತ್ಮನ** ವಂಶದವರಾದ ಯಾದವರಲ್ಲಿ ಒಂದು ಪಂಗಡದವರು ಅನೇಕ ಕಾಲಗಳ ಮೊದಲೇ ಈ ದೇಶಕ್ಕೆ ಬಂದು ನೆಲೆಸಿದ್ದರು. ಕಾಲಕ್ರಮದಲ್ಲಿ ಇವರಿಗೆ ಕಾರಣವನ್ನು ಹೊಂದಿ **ಹೊಯ್ಸಳರೆಂಬ** ಅಡ್ಡಹೆಸರು ಪ್ರಸಿದ್ಧವಾಗಿ ಬಂದಿತು. ಈ ವಂಶದಲ್ಲಿ **ವಿನಯಾದಿತ್ಯ**ನೆಂಬ ರಾಜನು ಮತ್ತು ಇವನ ಮಗ **ವೀರೆಯಾಂಗನೂ** ಕೆಲವುಕಾಲ ರಾಜ್ಯವಾಳಿದರು. ಈ ವೀರೆಯಾಂಗನಿಗೆ ಬಲ್ಲಾಳ, ಬಿಟ್ಟಿದೇವ ಮತ್ತು ಉದಯಾದಿತ್ಯರೆಂಬ ಮೂರುಜನ ಮಕ್ಕಳು. ಇವರಲ್ಲಿ ಹಿರಿಯವನಾದ ಬಲ್ಲಾಳನು ಕ್ರಿ. ಶ. 1101 ರಿಂದ 1104ರ ವರೆಗೆ ರಾಜ್ಯವಾಳಿದನು. ಕೊನೆಯವನಾದ ಉದಯಾದಿತ್ಯನು ರಾಜ್ಯಭಾರಕ್ಕೆ ಸಹಾಯಕನಾಗಿದ್ದು ಇವರ ಕಾಲದಲ್ಲೇ ಎಂದರೆ ಕ್ರಿ.ಶ. 1123 ರಲ್ಲಿ ಕಾಲವಾದನು. ಈ ಮೂರುಜನ ಅಣ್ಣತಮ್ಮಂದಿರೂ ಅನ್ಯೋನ್ಯವಾಗಿದ್ದು ಪರಾಕ್ರಮಶಾಲಿಗಳಾಗಿದ್ದರು ವಿಷ್ಣುವರ್ಧನನು ಶಕ್ತನೂ, ಮೇಧಾವಿಯೂ ಆಗಿ ರಾಜಕಾರಣಪಟುವಾಗಿದ್ದನು. ಇವನಿಗೆ ಬಿಟ್ಟಿದೇವ, (ಬೆಟ್ಟಿಲ್ಲದದೇವ) ವಿಠಲದೇವ, ವಿಣ್ಣುನಾದ, ವಿಷ್ಣುವರ್ಧನ ಎಂಬ ಹೆಸರುಗಳಿದ್ದುವು. ಬಲ್ಲಾಳನು ರಾಜ್ಯಭಾರ ಮಾಡುತ್ತಿದ್ದರೂ ಪ್ರತಾಪಶಾಲಿಯಾದ ವಿಷ್ಣುವರ್ಧನನದೇ ಆಡಳಿತವಾಗಿದ್ದಿತ್ತು. ಬಲ್ಲಾಳನು ಮೂರುಜನ ಏಕೋದರರಾದ ಅಕ್ಕತಂಗಿ ರಾಜಪುತ್ರಿಯರನ್ನು ಒಂದೇ ಭವನದಲ್ಲಿ ಇತಿಹಾಸಪ್ರಸಿದ್ಧವಾಗಿ ಏಕಕಾಲದಲ್ಲ ಅತ್ಯಂತ ವಿಜೃಂಭಣೆಯಿಂದ ವಿವಾಹವಾದನು. ಈ ಮೂರುಜನ ರಾಜಪುತ್ರಿಯರೂ ವಿದ್ಯಾವತಿಯರಾಗಿಯೂ, ಸುಂದರಿಯರಾಗಿಯೂ, ಇದ್ದು ಭರತನಾಟ್ಯ ಸಂಗೀತದಲ್ಲೂ ಕಲಾಶಾಸ್ತ್ರದಲ್ಲೂ ಪ್ರವೀಣರಾಗಿದ್ದರು. ಆದರೆ ಬಲ್ಲಾಳನು ಮದುವೆಯಾದ ಮೂರನೇ ವರುಷವೇ ಕಾಲವಾಗಿರಬೇಕೆಂದು ತಿಳಿದು ಬರುತ್ತದೆ.

## ವಿಷ್ಣುವರ್ಧನ

ಬಲ್ಲಾಳನಿಗೆ ಮಕ್ಕಳಿಲ್ಲವಾದ್ದರಿಂದ ವಿಷ್ಣುವರ್ಧನನೇ ಧೊರೆಯಾದನು. ವಿಷ್ಣುವರ್ಧನನು ಕ್ರಿ.ಶ. 1116 ರಲ್ಲಿ ಚೋಳರಾಜನಮೇಲೆ ಯುದ್ಧಮಾಡಿ ತಲಕಾಡು ಕೋಲಾರ ಪಟ್ಟಣಗಳನ್ನು ಜಯಿಸಿ ಬೇಲೂರಿಗೆ ಬಂದನು. ಈ ಜಯದ ಗುರುತಾಗಿಯೂ ತಲಕಾಡಿನಲ್ಲಿ ಕೀರ್ತಿನಾರಾಯಣಸ್ವಾಮಿಯ ದೇವರನ್ನೂ, ಬೇಲೂರಿನಲ್ಲಿ ಕೇಶವನಾರಾಯಣದೇವರನ್ನೂ ಪ್ರತಿಷ್ಠಿಸಿದನು. ಅನೇಕ ದೇಶಕೋಶಗಳನು ಜಯಿಸಿ ಬಿರುದುಗಳನ್ನು ಹೊಂದಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತಿದ್ದ

ಬಂಕಾನಗರದಲ್ಲಿ ಕ್ರಿ.ಶ. 1141 ರಲ್ಲಿ ಕಾಲವಾದನು. ಹೊಯಿಸಳರಾಜರಲ್ಲಿ ಇವನೇ ಪ್ರಖ್ಯಾತನಾದವನು.

ವಿಷ್ಣುವರ್ಧನನಿಗೆ ಅನೇಕ ಪತ್ನಿಯರಿದ್ದರು. ಅವರಲ್ಲಿ 1. ಹಿರಿಯ ಶಾಂತಳಾದೇವಿ, 2. ಕಿರಿಯ ಶಾಂತಳಾದೇವಿ, 3. ಭಾಮಲಾದೇವಿ, 4. ರಾಜಲದೇವಿ, 5. ಲಕ್ಷ್ಮೀದೇವಿ, 6. ದೇವಕೀದೇವಿ ಇವರು ಮುಖ್ಯರಾದವರು. ಹಿರಿಯ ಹೆಂಡತಿಯಾದ ಶಾಂತಳಾದೇವಿಯಲ್ಲಿ ಬಲ್ಲಾಳನೆಂಬ ಮಗನೂ, ಹಿರಿಯಬ್ಬರಸಿ ಎಂಬ ಮಗಳೂ ಹುಟ್ಟಿದರು.

ಹಿರಿಯವಳಾದ ಶಾಂತಳಾದೇವಿಯು ಪಟ್ಟದರಾಣಿಯಾಗಿದ್ದಳು. ಶಾಂತಳಾದೇವಿಯು ವಿದ್ಯಾವತಿಯೂ ಸಂಗೀತ, ಭರತನಾಟ್ಯ, ಕುಶಲವಿದ್ಯೆ ಮತ್ತು ವೀಣಾಗಾನ ಇವುಗಳಲ್ಲಿ ಚತುರೆಯಾಗಿದ್ದಳು. ಅನ್ನದಾನ, ವೈದ್ಯವಿದ್ಯೆ ಹೇಳಿಕೊಡುವುದು ಇವು ಗಳಲ್ಲಿ ಬಹುಪ್ರೀತಿ. ಇವಳು ಕ್ರಿ.ಶ. 1131ರಲ್ಲಿ ಕಾಲವಾದಳು.

ವಿಷ್ಣುವರ್ಧನನಿಗೆ ಹಿರಿಯಬ್ಬರಸಿಯಲ್ಲದೆ ಇನ್ನೂ ಹೆಣ್ಣುಮಕ್ಕಳಿಲ್ಲದ್ದಂತೆ ಕಂಡು ಬರುತ್ತದೆ. ಕುಮಾರ ಬಲ್ಲಾಳನು ಕ್ರಿ.ಶ. 1129 ರಲ್ಲಿ ಯುವರಾಜನಾಗಿಯೂ ರಾಜ್ಯಭಾರ ಮಾಡುತ್ತಿದ್ದುದು ತಿಳಿದು ಬರುತ್ತದೆ. (E.C, VI M.G. 22) ಮಗಳು ಹಿರಿಯಬ್ಬರಸಿಯನ್ನು ಅರಸೀಕೆರೆಯ ಸಾಮಂತರಾಜನಾದ ನೊಳಂಬ ವಂಶೀಕ **ಸಿಂಹ**ನೆಂಬುವನಿಗೆ ಕೊಟ್ಟು ಮದುವೆಯಾಗಿತ್ತು. ಕುಮಾರ ಬಲ್ಲಾಳನು ಕ್ರಿ.ಶ1133 ಕ್ಕೆ ಮುಂಚೆಯೇ ಕಾಲವಾಗಿರಬೇಕೆಂದು ಕಾಣಬರುವುದು.

ಕಿರಿಯ ಶಾಂತಳಾದೇವಿಯು ಬಹಳ ಸೌಂದರ್ಯವತಿಯಾದ್ದರಿಂದ ರಾಜನು ಪ್ರೀತಿಸಿ ಮದುವೆಯಾದನು. ಕ್ರಿ.ಶ. 1135 ರಲ್ಲಿ ಇವಳೂ ಇವಳ ಮಗುವೂ ಕಾಲವಾದರು.

ಇನೇ ಪಲ್ಲವ ಕುಲದವಳಾದ ಭಾಮಲಾದೇವಿಯೇ ಮುಖ್ಯಳಾದವಳು. ಇವಳು ರಾಜ್ಯಭಾರದಲ್ಲಿಯೂ ವಿಷ್ಣುವರ್ಧನನಿಗೆ ಸಹಾಯಕಳಾಗಿದ್ದಳು. ಇವಳೂ ಸಹ ರಾಜ್ಯದ ಒಂದುಭಾಗವನ್ನು ಆಳುತ್ತಿದ್ದಳು. ಇವಳು ಯುದ್ಧಕ್ಕೆ ಸಹಾಯಕವಾಗಿ ಒಂದು ಅಶ್ವಶಾಲೆಯನ್ನಿಟ್ಟಿದ್ದಳು. ಅದರಲ್ಲಿ ಕುದುರೇಸವಾರಿಯೇ ಮೊದಲಾದ ವಿದ್ಯೆಗಳನ್ನು ಹೇಳಿಕೊಡುವುದಾಗಿದ್ದಿತು. ಇವಳೂ ವಿಷ್ಣುವರ್ಧನನೂ ಸೇರಿ ಅನೇಕ ಭೂಮಿಗಳನ್ನೂ ಅಗ್ರಹಾರಗಳನ್ನು ಕಟ್ಟಿ ದಾನಮಾಡಿರುವರು.

ಕ್ರಿ. ಶ. 1141 ರಲ್ಲಿ ರಾಜಲ ದೇವಿಯು ಪಟ್ಟದ ರಾಣಿಯಾದಳು. ಇವಳು ಭಾಮಲಾದೇವಿಯ ತಂಗಿಯು.

ಐನೆಯವಳಾದ ಲಕ್ಷ್ಮೀದೇವಿಯು ಇವಳಿಗೆ ಕ್ರಿ. ಶ. 1133 ರಲ್ಲಿ ಹುಟ್ಟಿದ **ನರಸಿಂಹನೆಂಬ** ಮಗನೇ ಮುಂದೆ ಧೊರೆಯಾದನು.

ಕ್ರಿ. ಶ. 1117 ರಲ್ಲಿ ವಿಷ್ಣುವರ್ಧನನು ಹಿರಣ್ಯಗರ್ಭದಾನ ತುಲಾಪುರುಷದಾನ, ಅಶ್ವಮೇಧಯಾಗ ಮುಂತಾದುವನ್ನು ಮಾಡಿದನು. (E. C. V Bl 124).

## ೧ ನೆಯ ನರಸಿಂಹ. 1141-1173

ವಿಷ್ಣುವರ್ಧನನು ಕಾಲವಾದಾಗ ನರಸಿಂಹನಿಗೆ ಕೇವಲ ಎಂಟುವರ್ಷ ವಯಸ್ಸಾಗಿದ್ದಿತು. ಮಂತ್ರಿಗಳೂ, ಸೇನಾಪತಿಗಳೂ, ರಾಜ್ಯಭಾರವನ್ನು ವಹಿಸಿ ನಡೆಸಿದರು.

ನರಸಿಂಹನ ಕಾಲದಲ್ಲಿ **ಪದ್ಮರಸ**ನೆಂಬ ಮಂತ್ರಿಯು ರಾಜನಿಗೆ ತಿಳಿಯದೇ ರಾಜ ಭಂಡಾರದಿಂದ 12000 ಹೊನ್ನುಗಳನ್ನು ತೆಗೆದು ಬೇಲೂರಿನ ಬಿಟ್ಟಿನ ಸಮುದ್ರವನ್ನು ಕಟ್ಟಿಸಿದನು. ಇದು ರಾಜನಿಗೆ ತಿಳಿದು ಆಕ್ಷೇಪಿಸಲು ಮಂತ್ರಿಯು ತಾನು ಮಾಡಿದ ಧರ್ಮವನ್ನು ತೋರಿಸಲು ಅದನ್ನು ನೋಡಿ ರಾಜನು ಸುಮ್ಮನಾದನು. ನರಸಿಂಹನೂ ತಂದೆಯಂತೆ ಅನೇಕ ಯುದ್ಧಗಳನ್ನು ಮಾಡಿ ದೇಶ ಕೋಶಗಳನ್ನು ಜಯಿಸಿ ತಂದೆಯಂತೆ ಅನೇಕ ಬಿರುದುಗಳನ್ನು ಹೊಂದಿದ್ದನು. ತಂದೆಯೂ, ತಾನೂ ಸಂಪಾದಿಸಿದ ರಾಜ್ಯ, ಐಶ್ವರ್ಯ ಅಧಿಕಾರಗಳು ಅಧಿಕವಾಗಲು ಅದರ ಮಹತ್ತಿನಿಂದ ಮತ್ತನಾಗಿ ನರಸಿಂಹನು ಸ್ತ್ರೀಲೋಲನಾದನು. ಇವನ ಸಂತೋಷಕ್ಕೆ ಕರ್ಣಾಟಕ, ಆಂಧ್ರ, ದ್ರಾವಿಡ, ಗೂರ್ಜರ, ಮಹಾರಾಷ್ಟ್ರ, ಬಂಗಾಳ, ಎಲ್ಲಾ ದೇಶದ ಸುಂದರರೂ ಯೌವನವತಿಯರೂ ಆದ ೩೮೪ ಜನ ಸ್ತ್ರೀಯರು ಅವನ ಅರಮನೆಯಲ್ಲಿದ್ದರು. ಈ ಕಾರಣ ದೆಸೆಯಿಂದ ನರಸಿಂಹನು ತನ್ನ ೪೦ ನೆಯ ವಯಸ್ಸಿನಲ್ಲಿಯೇ ಕಾಲವಾದನು.

## ೨ನೆಯ ಬಲ್ಲಾಳ 1173 ರಿಂದ 1220.

ನರಸಿಂಹನ ಅನಂತರ ಅವನ ಮಗ ಬಲ್ಲಾಳನು ಪಟ್ಟಕ್ಕೆ ಬಂದನು. ಇವನೂ ತಂದೆ ತಾತಂದಿರಂತೆ ದಾನ ಧರ್ಮಗಳನ್ನು ಮಾಡಿ ಕೀರ್ತಿಯನ್ನು ಹೊಂದಿದನು. ಇವನ ಕಾಲದಲ್ಲಿಯೇ ಇನ್ನೊಂದು ಪಂಗಡದವರಾದ ಯಾದವರು ಆಗಿಂದಾಗ್ಯೆ ಯುದ್ಧ ಮಾಡುತ್ತಿದ್ದರು. ಇವನಿಗೆ ೭ ಜನ ಪತ್ನಿಯರಿದ್ದರು. ಅವರಲ್ಲಿ ಕೇತಲದೇವಿ ಎಂಬುವಳು ವಿದ್ಯಾವತಿಯಾಗಿ ರಾಜ್ಯಭಾರವನ್ನೂ ನಡೆಸುತ್ತಿದ್ದಳು. ಮತ್ತೊಬ್ಬಳಾದ ಪದ್ಮಲದೇವಿಯಲ್ಲಿ ಜನಿಸಿದ ನರಸಿಂಹನೆಂಬುವನು ಮುಂದೆ ಧೊರೆಯಾದನು.

## ೨ ನೆಯ ನರಸಿಂಹ 1220-1235

ಇವನು ಧೊರೆಯಾದಮೇಲೆ ಇನ್ನೊಂದು ಪಂಗಡದವರಾದ ಯಾದವರಿಗೂ ಇವನಿಗೂ ಆಗಿಂದಾಗ್ಯೆ ಯುದ್ಧವಾಗುತ್ತಿತ್ತು. ಇವನನಂತರ ಇವನ ಮಗ ಸೋಮೇಶ್ವರನು ಪಟ್ಟಕ್ಕೆ ಬಂದು ಸುಮಾರು ೨೦ ವರ್ಷಗಳು ರಾಜ್ಯವಾಳಿದರು.

ಅನಂತರ ಇವನ ಮಗ ನರಸಿಂಹನು (೩ ನೆಯ ನರಸಿಂಹ) ರಾಜ್ಯವಾಳಿದನು. ಅನಂತರ ೩ ನೆಯ ನರಸಿಂಹನ ಬಲ ತಾಯಿಯ ಮಗ ರಾಮನಾಥನೂ ಅವನ ಮಗ ವಿಶ್ವನಾಥನೂ ಕ್ರಿ. ಶ. 1297 ರವರೆಗೆ ರಾಜ್ಯವಾಳಿದರು.

## ೩ನೆಯ ಬಲ್ಲಾಳ 1291–1342

ವಿಶ್ವನಾಥನು ಕಾಲವಾದಮೇಲೆ ಅವರ ಜ್ಞಾತಿಯಾದ ಬಲ್ಲಾಳನು ಅಧಿಕಾರಕ್ಕೆ ಬಂದನು. ಇವನು ಬಹು ಪ್ರತಾಪಶಾಲಿಯಾಗಿ ಅನೇಕ ಯುದ್ಧಗಳನ್ನು ಮಾಡಿ ಜಯಿಸಿದನು. ಇವನ ಕಾಲದಲ್ಲಿ ತುರುಕರ ದಂಡಯಾತ್ರೆ ನಡದುಬಂದುದನ್ನು ಸಾಮ ದಾನ ಭೇದಗಳಿಂದ ಎದುರಿಸಿದನು. ಇವನಿಗೂ ಇವನ ಚಿಕ್ಕಪ್ಪನ ಮಕ್ಕಳಿಗೂ ಹಿಂದಿನಿಂದಲೂ ಜಗಳವಿದ್ದೇ ಇತ್ತು. ವಿಶ್ವನಾಥನ ಕಾಲಾನಂತರ ರಾಜ್ಯವೆಲ್ಲಾ ಬಲ್ಲಾಳನ ಕೈವಶವಾಯಿತು.

ಬಲ್ಲಾಳನು ಕ್ರಿ.ಶ. 1301 ರಲ್ಲಿ ಮಠಗಳಿಗೂ ದೇವಸ್ಥಾನಗಳಿಗೂ ಸಹ ಆಯಾ ದೇವಸ್ಥಾನ ಮಠಗಳಿಗೆ ಧರ್ಮವಾಗಿ ಕೊಟ್ಟ ಆಸ್ತಿಗಳೆಲ್ಲವೂ ಧರ್ಮವಾಗಿಯೇ ಇರುವುದು, ಅದಕ್ಕಾಗಿ ರಾಜಭಂಡಾರಕ್ಕೆ ಕಂದಾಯವನ್ನು ಕೊಡಬೇಕಾದುದಿಲ್ಲ ಎಂದು ಸಾರಿದನು.

ಮಹಮ್ಮದೀಯರ ಹಾವಳಿಯು ಕ್ರಿ.ಶ. 1295 ರಲ್ಲೇ ಅರಂಭವಾಯಿತು. ಇದನ್ನೆಲ್ಲಾ ನೋಡಿ ಬಲ್ಲಾಳನು ನೆರೆಹೊರೆಯ ಎಲ್ಲಾ ರಾಜರನ್ನು ಒಟ್ಟುಗೂಡಿಸಿ ಬಲಪಡಿಸುತ್ತಿದ್ದನು. ಈ ಕಾಲದಲ್ಲಿ ಎಂದರೆ 1306, 1309, 1310 ರಲ್ಲಿ ಅಲ್ಲಾವುದ್ದೀನನ ಸೈನ್ಯಾಧಿಕಾರಿಯಾದ ಮಲ್ಲಿಕಾಫರನು ಅಪಾರವಾದ ಸೈನ್ಯವನ್ನು ತೆಗೆದು ಕೊಂಡು ಬಂದು ಅನೇಕ ರಾಜ್ಯಗಳನ್ನು ನಾಶಮಾಡಿ ಜನರನ್ನುಕೊಂದು ದೇವಾಲಯ ಗಳನ್ನು ನಾಶಮಾಡಿ ಐಶ್ವರ್ಯವನ್ನೆಲ್ಲಾ ಕೊಳ್ಳೆಹೊಡೆದನು. ತಾನು ಹೋಗುವಾಗ 312 ಆನೆಗಳು 20,000 ಕುದುರೆಗಳು, 96,000 ಮಣ ಭಂಗಾರವನ್ನೂ ಅನೇಕ ಕೊಪ್ಪರಿಗೆಗಳ ನಗಗಳು, ವಜ್ರ ವೈಢೂರ್ಯ ಮತ್ತು ರತ್ನಗಳನ್ನು ತೆಗೆದುಕೊಂಡು ಡೆಲ್ಲಿಯ ಸುಲ್ತಾನನಿಗೆ ಕೊಟ್ಟನು. ಕ್ರಿ. ಶ. 1327 ರಲ್ಲಿ ಪುನಃ ತುರುಕರ ಸೈನ್ಯವು ಮಹಮದ್ ತೊಗಲಕನ ಕೈಕೆಳಗೆ ಬಂದು ಪಟ್ಟಣಗಳು ನಾಶಮಾಡಲ್ಪಟ್ಟವು.

ಬಲ್ಲಾಳನು ಈ ನಾಶಕ್ಕೆಲ್ಲಾ ಕಾರಣರಾದ ತುರುಕರನ್ನು ಅಡಗಿಸಲು ಅನೇಕ ಕಾರ್ಯಗಳನ್ನು ಕೈಕೊಂಡಿದ್ದನು. ವಿಧಿಲಿಖಿತವು ಬೇರೆಯಾದ್ದರಿಂದ ಯಾವುದೂ ನಡೆಯಲಿಲ್ಲ. ಬಲ್ಲಾಳನು ಅನೇಕ ದಾನ ಧರ್ಮಗಳನ್ನು ಮಾಡಿ ದೇವಸ್ಥಾನಗಳನ್ನು ಸರಿಪಡಿಸಿ ಕವಿಗಳಿಗೂ ವಿದ್ವಾಂಸರಿಗೂ ಆಶ್ರಯವಾಗಿದ್ದನು.

ಹೊಯ್ಸಳರು ರಾಜ್ಯವಾಳಿದಮೇಲೆ ಯಾದವರು ಪ್ರಬಲರಾಗಿ ಬಂದರು. ಆದರೆ ಮಹಮ್ಮದೀಯರ ದಂಡೆಯಾತ್ರೆಯ ಫಲದಿಂದ ಯಾದವರೂ ಹೊಯಿಸಳರೂ

ನಾಶವಾದರು. ಈ ಕಾಲದಲ್ಲಿ ಹಿಂದೂ ಧರ್ಮವನ್ನು ಕಾಪಾಡಲು ಪ್ರಬಲವಾದ ಶಕ್ತಿಯುಳ್ಳ ರಾಜನು ಬೇಕಾದುದರಿಂದ ವಿದ್ಯಾರಣ್ಯರೆಂಬ ಆಚಾರ್ಯರು ಹಕ್ಕ ಬುಕ್ಕ ಎಂಬುವರನ್ನಿಟ್ಟುಕೊಂಡು ಕ್ರಿ.ಶ. 1336ರಲ್ಲಿ ವಿಜಯನಗರ ಸ್ಥಾಪನೆಮಾಡಿ ತಾವೇ ಮಂತ್ರಿಯಾಗಿ ನಿಂತರು. ಹೊಯಿಸಳರ ಮತ್ತು ಯಾದವರ ಬಲವು ತಗ್ಗಿದಮೇಲೆ ವಿಜಯನಗರದ ರಾಜರುಗಳೇ ಈ ದೇಶಕ್ಕೆಲ್ಲಾ ರಾಜರಾದರು. ಆ ಕಾಲದಿಂದ ಮೈಸೂರು ರಾಜರಾದ ರಾಜಒಡೆಯರ ಕಾಲದವರೆಗೆ ವಿಜಯನಗರದ ಅರಸರ ಪ್ರಾಬಲ್ಯವು ನಡೆದುಬಂದಿತು. ರಾಜಒಡೆಯರು ಕ್ರಿ. ಶ. 1612ರಲ್ಲಿ ರಾಜರಾಗಿ ಅಧಿಕಾರವನ್ನು ವಹಿಸಿಕೊಂಡರು.

## ವಿಜಯನಗರದ ಅರಸರ ಕಾಲಗಳು—

| | |
|---|---|
| ವಿರೂಪಾಕ್ಷ | 1404–1406 |
| ದೇವರಾಯ II | 1406–1446 |
| ಇಮ್ಮಡಿ ಪ್ರೌಢದೇವರಾಯ ಮಲ್ಲಿಕಾರ್ಜುನರಾಯ | 1446–1486 |
| ಕೃಷ್ಣದೇವರಾಯ | 1509–1530 |
| ಅಚ್ಯುತರಾಯ | 1530–1541 |
| ಸದಾಶಿವರಾಯ | 1542–1572 |

## ನಾರಾಯಣಸ್ವಾಮಿ ದೇವಸ್ಥಾನದ ಕಟ್ಟಡ

ಶ್ರೀನಾರಾಯಣಸ್ವಾಮಿ ದೇವಸ್ಥಾನದ ರಂಗಮಂಟಪದ ಆವರಣದಲ್ಲಿನ ೯೩ ನೇ ಶಾಸನದಲ್ಲಿ ವಿಷ್ಣುವರ್ಧನ ಮಹಾರಾಜರ ಮಹಾಪ್ರಧಾನನಾದ, ತಂತ್ರಾಧಿಷ್ಠನಾಯಕನೂ ಆದ ಸುರಗಿಯನಾಗಿದೇವಣ್ಣನು ಕೆಲವು ಧರ್ಮಗಳನ್ನು ಮಾಡಿರುವುದು ಕಂಡು ಬರುತ್ತದೆ (ತೊಂಡನೂರು ಶಾಸನಂ........)

ಗ್ರಾಮಜೀರ್ಣೋದ್ಧಾರ ಮಾಡಿ ದೇವಸ್ಥಾನವನ್ನು ಒಂದೇ ದಿನದಲ್ಲಿ ಕಟ್ಟಲು ಸಾಧ್ಯವಿಲ್ಲವೆಂಬುವುದು ಸರಿಯಷ್ಟೆ. ಶ್ರೀರಾಮಾನುಜಾಚಾರ್ಯರು ದಿನ ಶುದ್ಧಿಯಿಂದ ದೇವಸ್ಥಾನವನ್ನು ಕಟ್ಟಿರುವ ಕಾಲ ಕ್ರಿ. ಶ. 1099 ರಿಂದ 1103 ರವರೆಗೆ ಎಂದು ಹೇಳುವಾಗ ಆಗಮೋಕ್ತಕ್ರಮಗಳನ್ನೇರ್ಪಡಿಸಿ ಧರ್ಮವನ್ನು ಮಾಡಿದ ವೇಳೆ ಶಿಲಾಶಾಸನವನ್ನು ಬರೆಯುವುದು ಪದ್ಧತಿ. ಆದ್ದರಿಂದ ಶ್ರೀನಾರಾಯಣಸ್ವಾಮಿ ದೇವಸ್ಥಾನ ಕಟ್ಟಡವು 1099 ರಿಂದ 1103 ವರೆಗೆ ಕಟ್ಟಿರುವುದು ಸ್ಪಷ್ಟಪಡುವುದು.

## ದೇವಸ್ಥಾನದ ಇತರಭಾಗಗಳು.

ಗರ್ಭಗೃಹವು ಮೊದಲೇ ಇದ್ದಿತೆಂದು ನಿರ್ಧರವಾಗಿದೆ. ಶ್ರೀರಾಮಾನುಜಾಚಾರ್ಯರು ಕಟ್ಟಿದ ಕಟ್ಟಡ ಅಂಕಣದ ವಿವರ ೪ ನೇ ಪುಟದಲ್ಲಿ ವಿವರಿಸಿರುವುದು. ಶ್ರೀರಾಮಾನುಜಾಚಾರ್ಯರು ಹೊಸದಾಗಿ ಅಸ್ತಿವಾರದಿಂದ ಕಟ್ಟಲಿಲ್ಲ. ಯಾದವರ ಕಾಲದಲ್ಲಿ ಇದ್ದ ರೀತಿಯಲ್ಲೇ ಕಟ್ಟಿರುವುದು ಸ್ಪಷ್ಟಪಡುವುದು. (ಯಾದವಗಿರಿ ಮಾಹಾತ್ಮ್ಯ)

ಶ್ರೀ ರಾಮಾನುಜಾಚಾರ್ಯರ ಅನಂತರ 30–10 ವರ್ಷಗಳಾದ ಮೇಲೆ **ಪರಾಶರಭಟ್ಟರು** ಈ ಊರಿಗೆ ಬಂದಾಗ **ಚತುರಾನನ ಗೋಪುರ**ವನ್ನು ಸೇವಿಸಿದ್ದಾಗಿಯೂ ದೇವಸ್ಥಾನದಲ್ಲಿ ಪ್ರದಕ್ಷಿಣೆಯಿಂದ ಎಲ್ಲಾ ಸನ್ನಿಧಿಗಳಲ್ಲೂ ದೇವರ ದರ್ಶನ ಮಾಡಿರುವುದು ತಿಳಿದು ಬರುವುದು.

ಸುದರ್ಶನಾಳ್ವಾರ್ರ ಸನ್ನಿಧಿಯಿಂದ ಲಕ್ಷ್ಮೀಅಮ್ಮನವರ ಮತ್ತು ಅಲ್ಲಿಂದ ಶ್ರೀರಾಮಾನುಜಾಚಾರ್ಯರ ಸನ್ನಿಧಿವರೆಗಿನ ರಂಗಮಂಟಪಗಳು ಮತ್ತು ಪಾಕಶಾಲೆಯಿಂದ ಚಕ್ರತ್ತಾಳ್ವಾರ್ರ ಸನ್ನಿಧಿವರೆಗೂ, ಅಲ್ಲದೆ ದೇವಸ್ಥಾನದ ಹೊರಗೆ ಸುತ್ತಲೂ ಕೈಸಾಲೆ ಇವುಗಳು ಕ್ರಿ. ಶ. 1457 ರಲ್ಲಿ ಮಹಾಪ್ರಧಾನ **ತಿಮ್ಮಣ್ಣ ದಂಡನಾಯಕ**ರಿಂದ ಕಟ್ಟಲ್ಪಟ್ಟಿದ್ದಾಗಿ ತಿಳಿದುಬರುವುದು. (ಶ್ರೀ. ಪ. ಶಾಸನ ೮೯).

ಶ್ರೀರಾಮನುಜಾಚಾರ್ಯರ ಸನ್ನಿಧಿಯಿಂದ ಪಾಕಶಾಲೆವರೆಗಿರುವ ಪಾತಾಳಂಕಣವೆಂಬ ರಂಗಮಂಟಪವು ರಾಜಕೀಯಕಾರಣಗಳಿಂದ ಶಿಥಿಲವಾದುದನ್ನು ಮಹಾಪ್ರಧಾನ **ಮಾಧವದಂಡನಾಯಕ**ರು ಮತ್ತು **ಕೇತಿಶೆಟ್ಟಿ** ಯವರು ಸಹ ಸೇರಿ ಸುಮಾರು ೧೫೦೦ ವರಹಗಳವರೆಗಿನ ಖರ್ಚಿನಿಂದ ಕ್ರಿ. ಶ. 1312 ರಲ್ಲಿ ಕಟ್ಟಲ್ಪಟ್ಟಿರಬೇಕು. ಅಥವಾ ಜೀರ್ಣೋದ್ಧಾರ ಮಾಡಿರಬಹುದಾಗಿದೆ. (ಶಾಸನ ೨೮೧–೨೮೩).

## ಇತರ ಸ್ಥಳಗಳು.

ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ ಕಟ್ಟಿದ ಶಿವದೇವಾಲಯವು ರಾಜಕೀಯ ಕಾರಣಗಳಿಂದ ಪಾಳಾದಾಗ ಕ್ರಿ. ಶ. 1368 ಕ್ಕೆ ಹಿಂದೆಯೇ **ನಮ್ಮಾಳ್ವರ್ರ ಸನ್ನಿಧಿ**ಯಾಗಿ ಮಾರ್ಪಟ್ಟಿರ ಬಹುದಾಗಿದೆ.

**ಕಲ್ಯಾಣಿಪುಷ್ಕರಣಿಯು** ಕಟ್ಟಲು (1099–1103) ರಲ್ಲಿ ೩೫೪೮ ವರಹಗಳು ಖರ್ಚಾದುವು. ೫೦೦ ವರ್ಷಗಳಾದ ಮೇಲೆ ಶಿಥಿಲವಾದುದು ಕಂಡು ಬಂದುದರಿಂದ ಮೈಸೂರು ರಾಜರಿಂದ ಪುನಃ 1633 ರಲ್ಲಿ ಕಾಶಿಯ ಕೆಲಸದ ಸೋಪಾನವು ಕಟ್ಟಿರುವುದಾಗಿ ತಿಳಿಯಬರುತ್ತದೆ. ಹಿಂದೆ ಇದ್ದ ಇತರ ಕಟ್ಟಡ ಮತ್ತು ಸ್ಥಳಗಳಲ್ಲಾವುದರಲ್ಲಿಯೂ ವ್ಯತ್ಯಾಸ ಕಂಡುಬರುವುದಿಲ್ಲ.



ದರ್ಪಣ ತೀರ್ಥ

## ಜೀಯರ ಗುಡಿ

ಶ್ರೀನಾರಾಯಣಸ್ವಾಮಿ ದೇವಸ್ಥಾನದ ಉತ್ತರ ಭಾಗದಲ್ಲಿರುವ ಈಗ **ಜೀಯರ ಗುಡಿ** ಎಂಬ ಕಟ್ಟಡವಿರುವ ಸ್ಥಳದಲ್ಲಿ ಪೂರ್ವ ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ, ಶಠಕೋಪದಾಸರು, ತಿರುವನಂತಪುರದಾಸರು ಎಂಬ ಕೈಂಕರ್ಯಪರರುಗಳಿಗೆ ವಾಸಕ್ಕೆ ನಿವೇಶನ ಸ್ಥಳವಾಗಿದ್ದಿತು. ಪ್ರಾಯಶಃ ರಾಜಕೀಯ ಕಾರಣಗಳಿಂದ ಊರುಪಾಳಾಗಿ ಆ ಸ್ಥಳವೆಲ್ಲಾ ಅರಣ್ಯವಾಗಿದ್ದಿತೆಂದು ಶ್ರೀ. ಪ. ಶಾ ೯೭ ರಿಂದ ತಿಳಿಯ ಬರುತ್ತದೆ.

ಈ ಸ್ಥಳದಲ್ಲಿ ಕ್ರಿ. ಶ. 1457 ರಲ್ಲಿ ಮಹಾ ಪ್ರಧಾನ ತಿಮ್ಮಣ್ಣದಂಡನಾಯಕರಿಂದ ಅನ್ನಸತ್ರವೆಂಬ ರಾಮಾನುಜಕೂಟ ,ಕಟ್ಟಡವು ಕಟ್ಟಲ್ಪಟ್ಟಿತು. ಈ ಕಟ್ಟಡವು ಸುಮಾರು 1510 ಅಥವಾ 1526ರ ವರೆಗೆ ರಾಮಾನುಜ ಕೂಟವಾಗಿದ್ದಿರ ಬಹುದಾಗಿ ಕಾಣಬರುವುದು. (ಶ್ರೀ. ಪ. ಶಾಸನ ೮೮)

## ಆಂಡಾಳ್ ಮತ್ತು ಮಣವಾಳಮಾಮುನಿಗಳ ವಿಗ್ರಹಗಳು.

ಶ್ರೀ ರಾಮಾನಜಾಚಾರ್ಯರು ವಿಗ್ರಹಗಳನ್ನು ಮಾಡಿಸುವಾಗ **ಶೂಡಿಕ್ಕೊಡುತ್ತ ನಾಚ್ಚಿಯಾರ್** (ಆಂಡಾಳ್) ವಿಗ್ರಹವನ್ನು ಮಾಡಿಸಿದ್ದರು. ಆ ವಿಗ್ರಹವು ಈಗಿದ್ದರೂ ಪೂಜೆಯಿಲ್ಲ. ಯದುಗಿರಿಲಕ್ಷ್ಮೀಅಮ್ಮನವರ ಮತ್ತು ಆಂಡಾಳ್ ಅಮ್ಮನವರ ಜನ್ಮ ದಿನವು ಒಂದೇದಿನವಾದರೂ ಇಬ್ಬರ ಜನ್ಮಶ್ಲೋಕವೂ ಬೇರೆ ಬೇರೆಯಾಗಿರುವುದು. ಈ ಆಂಡಾಳ್ ವಿಗ್ರಹವು ಕ್ರಿ.ಶ. 1564 ರಲ್ಲೂ ಇದ್ದಂತೆ ಕಂಡುಬರುವುದು. ಈಗ ಆಂಡಾಳ್ ವಿಗ್ರಹವಿದ್ದರೂ ಪೂಜೆ ನಡೆಯುತ್ತಿಲ್ಲ. ಯಾವಕಾಲದಲ್ಲಿ ಪೂಜೆಯು ನಿಂತುಹೋಯಿತೆಂಬುದು ತಿಳಿಯಬರುವುದಿಲ್ಲ. (ಶ್ರೀರಂಗಪಟ್ಟಣ ಶಾ. ೨೫೭.)

**ಮಣವಾಳ ಮಾಮುನಿಗಳೆಂಬ** ಗುರುಗಳಕಾಲ ಕ್ರಿ.ಶ. 1370 ರಿಂದ 1444 ವರೆಗೆ—ಶ್ರೀನಾರಾಯಣಸ್ವಾಮಿ ದೇವಸ್ಥಾನದ ಉತ್ತರ ಪಾರ್ಶ್ವದಲ್ಲಿರುವ ಕಟ್ಟಡವು ಕ್ರಿ.ಶ. 1457 ರಲ್ಲಿ ಅನ್ನಸತ್ರ ರಾಮಾನುಜಕೂಟವಾಗಿ ಕಟ್ಟಲ್ಪಟ್ಟಿತು. ಈಗ ಜೀಯರ ಗುಡಿಯಾಗಿದೆ. ಕ್ರಿ.ಶ, 1564ರಲ್ಲಿ ಮಣವಾಳಮಾಮುನಿಗಳಿಗೆ ಧರ್ಮವು ಕಂಡುಬರುವುದರಿಂದ ಇದಕ್ಕೆ ಪೂರ್ವದಲ್ಲಿಯೇ ಈ ವಿಗ್ರಹವು ಪ್ರತಿಷ್ಠಿತವಾಗಿರಬೇಕು. ( ಶ್ರೀ ಪ, ಶಾಸನ ೨೫೭.)

ಇದರಿಂದ ಶ್ರೀನಾರಾಯಣಸ್ವಾಮಿಯ ದೇವಸ್ಥಾನವು ಅನಾದಿ **ತೆಂಕಲೆ ಸಂಪ್ರದಾಯಕ್ಕೆ** ಸೇರಿದ ದೇವಸ್ಥಾನವೆಂದು ಸ್ಪಷ್ಟಪಡುವುದು.

ಶ್ರೀ ರಾಮಾನಜಾಚಾರ್ಯರ ಕಾಲದಲ್ಲಿ ನಮ್ಮಾಳ್ವಾರ್ರ ಮತ್ತು ತಿರುಮಂಗೈ ಆಳ್ವಾರ್ರ ವಿಗ್ರಹಗಳು ಒಂದು ಸ್ಥಳದಲ್ಲಿಯೂ, ಸೇನೈಮೊದಲಿಯಾರ್ರ ವಿಗ್ರಹವು ಬೇರೆ

ಸ್ಥಳದಲ್ಲಿಯೂ, ಇದ್ದುದಾಗಿ ತಿಳಿದುಬರುವುದು. (ಗುರುಪರಂಪರೆ) ಈಗ ಈ ಮೂರು ವಿಗ್ರಹಗಳೂ ಒಂದೇ ಸ್ಥಳದಲ್ಲಿರುವುದು.

## ರಾಜಮುದ್ರೆ, ಮತ್ತು ರಾಮಾನುಜ ಮುದ್ರೆ.

ವಿಷ್ಣುವರ್ಧನ ಮಹಾರಾಜನ ಸಹಾಯದಿಂದ ದೇವಸ್ಥಾನ ಆಲಯಗ್ರಾಮ ಜೀರ್ಣೋದ್ಧಾರವಾದ ಮೇಲೆ ದೇವಸ್ಥಾನದ ಆಯಕಟ್ಟು ಅದನಂತರ **ರಾಜಮುದ್ರೆಯು** ಅಗತ್ಯವಾದ್ದರಿಂದ ರಾಜಮುದ್ರೆಯನ್ನೂ, ದೇವಸ್ಥಾನದ ಒಳಾಡಳಿತವಾಗಿ ಲೌಕಿಕ ವೈದಿಕವಾಗಿ **ರಾಮಾನುಜ ಮುದ್ರೆಯುಂಗುರವನ್ನೂ** ಶ್ರೀ ಭಾಷ್ಯಕಾರರು ಏರ್ಪಡಿಸಿದರು. ರಾಜಮುದ್ರೆಯು **ವಿಷ್ಣುವರ್ಧನ ಬಲ್ಲಾಳ** ಎಂಬುದಾಗಿರಬಹುದೆಂದು ಊಹಿಸಲಾಗಿದೆ. ಈ ರಾಜಮುದ್ರೆಯು ವಿಜಯನಗರದ ಅರಸರ ಕಾಲದವರೆಗೂ ಬಂದಿರಬಹುದು. ವಿಜಯನಗರದ ಅರಸರ ಪ್ರಾಬಲ್ಯವಾದನಂತರ ಮೈಸೂರು ಅರಸರು ಪ್ರಾಬಲ್ಯಕ್ಕೆ ಬಂದಮೇಲೆ **ಶ್ರೀಚಿಕ್ಕದೇವ ಮಹಾರಾಜರು** ರಾಜ್ಯದಲ್ಲಿ ಒಂದೊಂದು ಸ್ಥಳದಲ್ಲಿ ಒಂದೊಂದು ವಿಧವಾದ ಮುದ್ರೆಯಿರುವುದನ್ನು ತಪ್ಪಿಸಿ ಒಂದೇ ವಿಧವಾದ ರಾಜಮುದ್ರೆಯಿರಬೇಕೆಂದು ನಿಬಂಧನೆ ಮಾಡಿದಾಗ ಈ ದೇವಸ್ಥಾನದ ರಾಜಮುದ್ರೆಯೂ ಬದಲಾಯಿಸಿತು. **ಈಗ ಈ** ಮುದ್ರೆಯಲ್ಲಿ ಮಧ್ಯೆ **ದೇ** ಎಂಬ ಅಕ್ಷರವೂ ಸುತ್ತಲೂ **ಚೆಲುವರಾಯಸ್ವಾಮಿ** ಎಂಬುದಾಗಿ ಕೆತ್ತಿದ ಸುವರ್ಣದ **ರಾಜಮುದ್ರೆಯುಂಗುರ**ವಿರುವುದು.

**ರಾಮಾನುಜಮುದ್ರೆಯುಂಗುರವು** ಶ್ರೀ ರಾಮನುಜರ ಕಾಲದಿಂದ ಶ್ರೀ ಯತಿರಾಜ ಮಠಾಧಿಪತಿಗಳ ಆಡಳಿತದಲ್ಲಿದ್ದು ಈ ಕಾಲದವರೆಗೂ ನಡೆದು ಬಂದಿತು. ಕ್ರಿ. ಶ. 1544 ರಲ್ಲೂ ಸಹ ಶಾಸನ ೨೫೮-೨೬೯ ರಲ್ಲಿ ರಾಮಾನುಜ ಮುದ್ರೆಯುಂಗುರ ವಿಚಾರವು ಕಂಡುಬರುವುದು. ಅಲ್ಲಿಂದ ಮುಂದೆ ಕ್ರಿ. ಶ. ಸುಮಾರು 1575 ರಲ್ಲಿ ಶ್ರೀ ಯತಿರಾಜಸ್ವಾಮಿಗಳಿಗೆ ಆತ್ಮಜನಗಳಿಂದ ವಿಘಾತವಾದ ಮೇಲೆ ಈ ರಾಮಾನುಜಮುದ್ರೆಯುಂಗುರವು ಇತರ ಅಧಿಕಾರಿ ಕೈಂಕರ್ಯಪರರ ವಶವಾಗಿದ್ದು 1850 ರ ವರೆಗೂ ಇದ್ದುದು ತಿಳಿದುಬರುವುದು. ಅನಂತರ ಈ ಅಧಿಕಾರಿಕೈಂಕರ್ಯಪರರಿಗೂ ಇದ್ದ ಅಧಿಕಾರವು ಸಂಪೂರ್ಣವಾಗಿ ಸರಕಾರವು ವಹಿಸಿದಾಗ ಈ ರಾಮಾನುಜಮುದ್ರೆಯು ಅಂತರಿತವಾಗಿ ಖಾಸಗಿ ಜನಗಳ ಕೈಯಲ್ಲಿದ್ದು ಈಗ ಕೆಲವು ದಿನಗಳ ಕೆಳಗೆ ಅಂತರಿತವಾದುದಾಗಿ ತಿಳಿದುಬರುತ್ತದೆ. ಅನಂತರ ಬೇರೆ ಮುದ್ರೆಯುಂಟಾಗಿ ಈಗ **ಹಯಗ್ರೀವ** ಎಂಬುದಾಗಿರುವುದು.

**ಸ್ಥಳಮುದ್ರೆ** ಎನ್ನುವುದು ಕ್ರಿ. ಶ. 1585 ರಲ್ಲಿ ಏರ್ಪಟ್ಟಿರಬಹುದೆಂದು ಊಹಿಸಲಾಗಿದೆ.

## ವಿರಕ್ತ ಸನ್ಯಾಸಿಗಳು ಮತ್ತು ಆಚಾರ್ಯಪುರುಷರು

ಶ್ರೀ ಯತಿರಾಜ ಮಠಾಧಿಪತಿಗಳಲ್ಲದೆ ಶ್ರೀ ತಿರುನಾರಾಯಣಸ್ವಾಮಿಯ ಕೈಂಕರ್ಯವನ್ನು ಮಾಡುತ್ತ ಕ್ಷೇತ್ರನಿತ್ಯವಾಸಿಗಳಾಗಿಯೂ, ಅನೇಕರು ಸನ್ಯಾಸಿಗಳೂ, ಆಚಾರ್ಯ ಪುರುಷರೂ ಇಲ್ಲಿ ನೆಲೆಸಿದ್ದುದಾಗಿ ತಿಳಿದು ಬರುತ್ತದೆ. ಅವರಿದ್ದೆಡೆಯಲ್ಲೆಲ್ಲಾ ನಿತ್ಯತದೀಯಾರಾಧನೆಗಳು ನಡೆಯುತ್ತಿದ್ದುದಲ್ಲದೆ ಶಿಷ್ಯಸಂಪತ್ತುಳ್ಳವರಾಗಿ ವೇದಾಂತಧರ್ಮ ಬೋಧಕರಾಗಿದ್ದುದು ತಿಳಿಯುಬರುವುದು. (ಶ್ರೀ ಪ. ಶಾಸನ ೨೬೪–೨೬೫, ಶ್ರವಣಬೆಳಗೊಳ ೩೪೪, ಶ್ರೀ. ಪ ಶಾ. ೯೦, ೯೫, ೨೫೬.)

## ಮೇಲುಕೋಟೆ.

**ಮೇಲಕೋಟೆ** ಎಂಬ ಕನ್ನಡ ಶಬ್ದವು (ಶಾಸನ ೨೮೩, ೯೨) ಕ್ರಿ.ಶ. 1200, 1219 ರಲ್ಲಿ ಕಂಡುಬರುವುದರಿಂದ ಅದಕ್ಕೆ ಪೂರ್ವದಲ್ಲಿಯೇ ಈ ಹೆಸರು ಅಧಿಕ ಪ್ರಚಾರದಿಂದ ಅನುಭವದಲ್ಲಿ ಬಂದಿರಬೇಕು.

ಕ್ರಿ. ಶ. 1189 ರಲ್ಲಿ ಸರ್ವಾಧಿಕಾರಿ ಸೇನಾಪತಿ **ಜ್ಯೋತಿಮಯ್ಯಗಳು** ಮತ್ತು ದಂಡನಾಯಕರು **ಬಲಯ್ಯಗಳು** ತಿರುನಾರಾಯಣಪುರದ ಕೋಟೆಯ ರಕ್ಷಾಪಾಲಕರಾಗಿದ್ದರೆಂದು ಶಾಸನ ೧೫೨ ರಿಂದ ತಿಳಿದುಬರುವುದರಿಂಗ ಇಲ್ಲಿ ಕೊಟೆಯು ಮೊದಲೇ ಕಟ್ಟಿರಬೇಕು. ಶ್ರೀ ರಾಮಾನುಜಾಚಾರ್ಯರು ಮಾಡಿದ ಜೀರ್ಣೋದ್ಧಾರದಲ್ಲಿ ಕೋಟೆ ಬಾಗಿಲುಗಳು ಇತ್ಯಾದಿ ಕಟ್ಟಿರುವುದೂ ಅವುಗಳಿಗೆ ಖರ್ಚು ಬರೆದಿರುವುದೂ ಕಾಣಬರುವುದು. ಇದರಿಂದ ರಾಮಾನುಜಾಚಾರ್ಯರ ಕಾಲದಲ್ಲಿಯೇ (1099–1103) ಕೋಟೆಯನ್ನು ಕಟ್ಟಿರಬೇಕೆಂದು ತಿಳಿದು ಬರುತ್ತದೆ.

## ವಿಷ್ಣುವರ್ಧನ ಮತ್ತು ರಾಮಾನುಜರ ಸಂಬಂಧ ಶಾಸನದಲ್ಲೇಕೆ ಕಾಣಿಸುವುದಿಲ್ಲ ?

**ವಿಷ್ಣುವರ್ಧನನು** ಮಾಡಿದ ಧರ್ಮಗಳಿಗೆಲ್ಲಾ ಶಾಸನ ವಿರುವಾಗ ಪ್ರಸಿದ್ಧವಾದ ತನ್ನ ಗುರುವಾದ **ಶ್ರೀರಾಮನುಜರ** ಹೆಸರನ್ನೇಕೆ ಶಾಸನದಲ್ಲಿ ಸೇರಿಸಲಿಲ್ಲ ? ಮತ್ತು ಒಂದುವೇಳೆ ಮೇಲುಕೋಟೆ ದೇವಸ್ಥಾನವು ವಿಷ್ಣುವರ್ಧನನಿಂದ ಕಟ್ಟಲ್ಪಟ್ಟದ್ದಿ ಅಲ್ಲವೆ ? ಎಂಬುದೇ ಸಂಶಯವಾಗುವುದು. ತನ್ನ ರಾಜಧಾನಿಗೆ ಪಕ್ಕದಲ್ಲಿ ಪ್ರಸಿದ್ಧವಾದ ನಾರಾಯಣಮೂರ್ತಿ ಇರುವಾಗ ಅದಕ್ಕೆ ಎಳ್ಳಷ್ಟೂ ಅವನ ಧರ್ಮ ಕಾಣುವುದಿಲ್ಲ. ಇದಕ್ಕೆ ಕಾರಣವೇನು ?

ವಿಷ್ಣುವರ್ಧನನು ತಾನು ಶಿಷ್ಯನಾಗಿ ಶ್ರೀರಾಮಾನುಜರು ಅಪೇಕ್ಷೆಪಟ್ಟಂತೆ ಅವರಿಗೆ **ಲಕ್ಷ ವರಹಗಳನ್ನು** ಕೊಟ್ಟು ಜೀರ್ಣೋದ್ಧಾರ ಸಹಾಯಕ್ಕಾಗಿ ತನ್ನ

ಕಡೆಯ ಮನುಷ್ಯರನ್ನು ಕೊಟ್ಟು ಕಳುಹಿಸಿದನು. ಇದರಿಂದ ಯಾದವಗಿರಿಯ ಜೀರ್ಣೋದ್ಧಾರ ಕಾರ್ಯವು ಶ್ರೀರಾಮಾನುಜರ ನೇತೃತ್ವದಲ್ಲಿ ನಡೆಯಿತೇ ಹೊರತು ವಿಷ್ಣುವರ್ಧನನ ನೇತೃತ್ವದಲ್ಲಿ ನಡೆಯಲಿಲ್ಲವೆಂದು ಸ್ಪಷ್ಟಪಡುವುದು. ಅಲ್ಲದೆ ಜೀರ್ಣೋದ್ಧಾರವಾದಮೇಲೆ ಪಡಿತರ ದೀಪಾರಾಧನೆಗೆ ವಿಷ್ಣುವರ್ಧನಧರ್ಮವೂ ಕಾಣುವುದಿಲ್ಲ. ಇದಕ್ಕೆ ಕಾರಣ ಜೀರ್ಣೋದ್ಧಾರಕ್ಕೆ ತೆಗೆದ ಲಕ್ಷ ವರಹಾಗಳಲ್ಲಿ ೫೦೦೦೦ ವರಹಗಳು ಜೀರ್ಣೋದ್ಧಾರಕ್ಕೆ ಖರ್ಚಾದುವು. ಮಿಕ್ಕ ೫೦೦೦೦ ವರಹಗಳನ್ನು ಪಡಿತರ ದೀಪಾರಾಧನೆಗೆ ಶ್ರೀರಾಮನುಜರೇ ಏರ್ಪಡಿಸಿ ವಿಷ್ಣುವರ್ಧನನ ಒಪ್ಪವನ್ನು ಹಾಕಿಸಿರುವುದು ಜೀರ್ಣೋದ್ಧಾರ ಲೆಕ್ಕದಿಂದ ಹೊರಪಡುವುದು. ಆದುದರಿಂದ **ಯಾದವಗಿರಿಯ** ಸಂಪೂರ್ಣ ಜೀರ್ಣೋದ್ಧಾರ ಕಾರ್ಯವು ಶ್ರೀರಾಮಾನುಜರ ನೇತೃತ್ವದಲ್ಲಿ ನಡೆದುದರಿಂದಲೂ, ಈ ವಿಚಾರದಲ್ಲಿ ವಿಷ್ಣುವರ್ಧನನು ಯಾವ ಭಾಗವನ್ನೂ ವಹಿಸದಿದ್ದುದರಿಂದಲೂ ಯಾವ ರೀತಿಯಲ್ಲೂ ಶ್ರೀ ರಾಮಾನುಜರ ಮತ್ತು ವಿಷ್ಣುವರ್ಧನನ ಸಂಬಂಧವಾಗಿ ಶಾಸನದಲ್ಲಿ ಬರಲು ಅವಕಾಶವಿಲ್ಲವೆಂದು ತಿಳಿದುಬರುವುದು.

## ಚೆಲುವರಾಯಸ್ವಾಮಿ ದೆಹಲಿಪಟ್ಟಣಕ್ಕೆ ಬಿಜಯಮಾಡಿಸಲು ಕಾರಣ.

ಮಹಾಕ್ಷಾಮ ಮತ್ತು ರೋಗಾದಿ ಉಪದ್ರವದಿಂದಲೋ ಅಥವಾ ರಾಜಕೀಯ ಕಾರಣದಿಂದಲೋ ಊರು ಪಾಳಾಗಿರಬೇಕೆಂದು ತಿಳಿದುಬರುತ್ತದೆ. ಈ ಕಾಲದಲ್ಲಿ ದೇವಸ್ಥಾನದಲ್ಲಿ ಮೂಲವಿಗ್ರಹಕ್ಕೆ ಕಲ್ಲುಚಪ್ಪಡಿಗಳನ್ನು ಮುಚ್ಚಿ ಉಭಯನಾಚ್ಚಿಮಾರುಗಳನ್ನು ದ್ರವ್ಯಾಭರಣಗಳೊಂದಿಗೆ ಭೂಮಿಯಲ್ಲಿ ನಿಕ್ಷೇಪಮಾಡಿ ಉತ್ಸವ ವಿಗ್ರಹವನ್ನು ನಿತ್ಯಪೂಜೆಯಿಂದ ಕಾಪಾಡಿಕೊಂಡುಬರಲು ಹೊರಕ್ಕೆ ತೆಗೆದುಕೊಂಡು ಹೋಗಿರಬಹುದು. ಇದು ಪದ್ಧತಿ.

ದುರದೃಷ್ಟದಿಂದಲೂ, ವಿಗ್ರಹವನ್ನು ಕಾಪಾಡುವ ಪ್ರಬಲ ಉದ್ದೇಶದಿಂದಲೂ ದೇಶದೇಶವನ್ನು ತಿರುಗಿ ಕೊನೆಗೆ **ದೆಹಲಿಪಟ್ಟಣವನ್ನು** ಸೇರಿರಬಹುದು. ಇದರಲ್ಲೇನೂ ಆಶ್ಚರ್ಯವಿಲ್ಲ. ಅಲ್ಲಿಂದ ಪುನಃ ಬರುವುದಕ್ಕಾಗದೆಯೋ ಅಥವಾ ಇಲ್ಲಿ ಊರು ಸಂಪೂರ್ಣವಾಗಿ ನಾಶವಾಗಿ ಪುನಃ ಊರಿನ ಹೆಸರೇ ಇಲ್ಲದಕಾರಣ ವಿಗ್ರಹವು ದೆಹಲಿಯಲ್ಲೇ ನಿಂತಿರಬಹುದು. ಸಮುದಾಯದಿಂದ ಕಾಪಾಡತಕ್ಕ ವಿಗ್ರಹವು ಕಾಲವಶಾತ್ ವ್ಯಕ್ತಿಗತವಾದ ಪರಂಪರೆಯಾಗಿ ಬಂದ **ಅಮ್ಮಾಳು ರಾಯನೆಂಬುವನ** ಅರಮನೆಯಲ್ಲಿ ಬಿಜಯಮಾಡಿಸಿರಬಹುದು.

ತುರುಕರಾಜನೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಶ್ರೀರಾಮಾನುಜರು ಜೀರ್ಣೋದ್ಧಾರ ಮಾಡಿದ ಈ ದೇವಸ್ಥಾನದ ವಿಚಾರವಾಗಿ ನಡೆಯಬೇಕಾದ ಕಟ್ಟುದಿಟ್ಟುಗಳ ವಿಚಾರವಾದ ಗ್ರಂಥದಲ್ಲಾಗಲೀ ಅಥವಾ ಪ್ರಾಚೀನ ಗ್ರಂಥದಲ್ಲಾಗಲೀ ಎಲ್ಲಿಯೂ ತುರುಷ್ಕರನ್ನು ಹೇಳಿರುವುದಿಲ್ಲ. ಅಮ್ಮಾಳುರಾಯನ

ಅರಮನೆಯಿಂದ ಬಿಜಯಮಾಡಿಸಿದರು. ವರನಂದಿಯು ಹಿಂಬಾಲಿಸಿದಳು, ಎನ್ನುವಾಗ ಶ್ರೀ ಚಲ್ವಪಿಳ್ಳೈ ದೇವರು ಯಾವ ಅಪಾಯವೂ ಇಲ್ಲದಸ್ಥಳದಲ್ಲಿದ್ದರೆಂದು ದೃಢವಾಗಿ ಹೇಳಬಹುದು.

ದಿಳ್ಳಿ ಎಂದರೆ ದೂರದೇಶವೆಂದರ್ಥವಾಡಬಹುದು. ಶ್ರೀರಾಮಾನುಜರು ದೆಹಲಿಗೆ ಪ್ರಯಾಣಮಾಡಿ ಬಂದಕಾಲ 1106–1110 ಈ ಕಾಲದಲ್ಲಿ ದೆಹಲಿ ಪಟ್ಟಣದ ಚರಿತ್ರೆಯು ಅಸ್ಪಷ್ಟವಾಗಿರುವುದು.

## ಅಮ್ಮಾಳುರಾಯನಾರು ?

ಅಮ್ಮಾಳುರಾಯನೆಂಬ ಹೆಸರಿರುವುದರಿಂದ ಅರವದೇಶದ ರಾಜನಾಗ ಬೇಕೆಂದು ತೋರುತ್ತದೆ.

ಪಶ್ಚಿಮ ಚಾಳುಕ್ಯರಾಜರಲ್ಲಿ ಆರನೆಯ ವಿಕ್ರಮಾದಿತ್ಯನಿಗೆ ಪೇರ್ಮಾಡಿ ಎಂಬ ಬಿರುದುಂಟು. ಈ ರಾಜನು ಕ್ರಿಮಿಕಂಠಚೋಳನ ಶತ್ರುಗಳಲ್ಲಿ (ಕುಲೋತ್ತುಂಗ ಚೋಳ) ಪ್ರಸಿದ್ಧನಾದ ತ್ರಿಭುವನಮಲ್ಲವಿಕ್ರಮಾಂಕನೆಂದು ಪ್ರಸಿದ್ಧಿ. ಈ ರಾಜನಿ ಗಿದ್ದ ಬಿರುದೇ ಪೇರ್ಮಾಡಿ, ಹೆಮ್ಮಾಳಿ ಅಮ್ಮಾಳಿ ಅಮ್ಮಾಳುರಾಯನಾಗಿರಬಹುದು. ಅಲ್ಲಿಂದ ಶ್ರೀರಾಮಾನುಜರು ಶ್ರೀ ಚೆಲ್ವಪಿಳ್ಳೆಯವರನ್ನು ಬಿಜಯಮಾಡಿಸಿರಬಹುದು.

## ದೆಹಲಿ ವಿಚಾರ

ಕ್ರಿ. ಶ. 993 ರಲ್ಲಿ **ತೋಮಾರವೆಂಬ** ರಜಪೂತವಂಶವು ರಾಜ್ಯವಾಳು ತ್ತಿದ್ದು ಈಗ ಕುತುಬಮಿನಾರ್ ಸ್ಥಂಭವಿರುವ ಸ್ಥಳದಲ್ಲಿ **ಥಿಲು** ಎಂಬ ರಾಜನು ರಾಜ್ಯಕಟ್ಟಿದನು. ಈ ಸ್ಥಳಕ್ಕೆ ಕಾಲಕ್ರಮೇಣ ಥಿಲು, ದಿಳ್ಳಿ ಎಂದು ಹೆಸರಾಯಿತು. ಈ ಸ್ಥಳದಲ್ಲಿ ಕ್ರಿ. ಶ. 1052 ರಲ್ಲಿ ಕೆಂಪುಕೋಟೆಯನ್ನು ಕಟ್ಟಿ 16 ಅಡಿ ವ್ಯಾಸ ಮತ್ತು 23 ಅಡಿ ಎತ್ತರದ **ಜಯಸ್ತಂಭವನ್ನು** ನಿಲ್ಲಿಸಿದನು.

## ತುರುಷ್ಕರ ಅವಾಂತರಕಾಲ

ಹಿಂದೂದೇಶದಮೇಲೆ ಮೊದಲು ದಂಡಯಾತ್ರೆ ಮಾಡಿದವನು ಮಹಮದ್ ಖಾಸಿಂ ಎಂಬುವನು. ಇವನು ಕ್ರಿ. ಶ 712ರಲ್ಲಿ ಸಿಂಧೂದೇಶವನ್ನು ಮಾತ್ರ ಜಯಿಸಿದನು.

ಆಫ್ಘಾನಿಸ್ಥಾನದ ಪರ್ವತಪ್ರದೇಶದಲ್ಲಿ ಘಜನಿ ಎಂಬ ರಾಜಧಾನಿಯು ಹುಟ್ಟಿತು. ಘಜನಿಯ ಅಮೀರ ಸಭಕ್ತಗೀನನು ಪಂಜಾಬಿನಮೇಲೆ ನುಗ್ಗಿ ಈಗಿನ ಪಾಟಿಯಾಲಾ ಇರುವ ಹತ್ತಿರ ಭಾತಿಂಡಾ ಎಂಬಕಡೆ ರಾಜ್ಯವಾಳುತ್ತಿದ್ದ ಜಯ ಪಾಲನನ್ನು ಕ್ರಿ. ಶ. 986ರಲ್ಲಿ ಯುದ್ಧದಲ್ಲಿ ಸೋಲಿಸಿದನು. ಪುನಃ ಕ್ರಿ. ಶ 991 ರಲ್ಲಿ ಇಬ್ಬರಿಗೂ ಯುದ್ಧವಾಗಿ ಸಭಕ್ತಗೀನನೇ ಗೆದ್ದನು. ಇದರಿಂದ ಗಡಿನಾಡಿನ ಮುಖ್ಯನಗರ ಪೆಷಾವರು ಸಭಕ್ತಗೀನನ ಅಧೀನವಾಯಿತು.

## ಮುಹಮುದ್ ಘಜನಿ ಕ್ರಿ. ಶ 997–1030

ಸಬಕ್ತಗೀನನ ಮಗ ಘಜನಿಮುಹಮ್ಮದನು ಅಧಿಕಾರಕ್ಕೆ ಬಂದನು. ಇವನು ತನ್ನ ಅಪಾರವಾದ ಸೈನ್ಯದಿಂದೊಡಗೂಡಿ ಪಂಜಾಬನ್ನು ಗೆದ್ದು ಕೊಲೆ ಮತ್ತು ಕೊಳ್ಳೆಹೊಡೆದನು. ಥಾಳಿಯಕಾಲಮುಗಿದಮೇಲೆ ಕೊಳ್ಳೆಮಾಡಿದುದನ್ನೂ ಘಜನಿಯಲ್ಲಿ ಕಟ್ಟಡಕಟ್ಟಲು ಶಿಲ್ಪಿಗಳನ್ನೂ ಸಾವಿರಾರು ಜನ ಸೆರೆಯಾಳುಗಳನ್ನೂ ಸಾಗಿಸಿಕೊಂಡು ಕಣಿವೆಗಳಮಾರ್ಗವಾಗಿ ಹಿಂತಿರುಗುತ್ತಿದ್ದನು. ಅನೇಕರು ಆ ಕಣಿವೆಗಳಲ್ಲಿ ಸತ್ತುಹೋದರು. ಆದರಿಂದ ಆ ಪರ್ವತಕ್ಕೆ ಹಿಂದೂಕುಷ್ (ಹಿಂದುಗಳನ್ನು ಕೊಲ್ಲುವ) ಪರ್ವತವೆಂದು ಹೆಸರಾಯಿತು. ಕ್ರಿ. ಶ 1001ರಲ್ಲಿ ಜಯಪಾಲನನ್ನೂ ಅವನ ಕುಟುಂಬವನ್ನೂ ಸೆರೆಹಿಡಿದನು. ಮುಹಮ್ಮದನು ಕ್ರಿ. ಶ 1008 ರಲ್ಲಿ ಕಾಂಗ್ರಾವನ್ನು ಹಿಡಿಯಲು ಜಯಪಾಲನ ಮಗ ಆನಂದಪಾಲನು ಯುದ್ಧಮಾಡಿ ಸೋತು ವಿಶೇಷ ಕಷ್ಟನಷ್ಟಗಳಿಗೆ ಗುರಿಯಾದನು.

ಕ್ರಿ. ಶ 1018–19ರಲ್ಲಿ ಮಥುರಾನಗರವನ್ನು ಹಿಡಿದನು. ಆ ನಗರದಲ್ಲಿ ಅವರ್ಣನೀಯ ಸೌಂದರ್ಯ ವೈಭವಗಳಿಂದ ಕೂಡಿದ ಅದ್ಭುತದೇವಾಲಯವಿತ್ತು. ಒಳಗಡೆ ಹತ್ತುಮೊಳದ ಎತ್ತರದ ಕೆಂಪು, ವಜ್ರ, ಭಂಗಾರದ ಐದು ವಿಗ್ರಹಗಳಿದ್ದುವು. ವಿಗ್ರಹಗಳ ಕಣ್ಣಿನಲ್ಲಿ ಅನರ್ಘ್ಯವಾದ ರತ್ನಗಳಿದ್ದುವು. ಈ ಗುಡಿಗಳನ್ನೆಲ್ಲಾ ಮುಹಮ್ಮದನು ನೆಲಸಮಮಾಡಿದನು. ಅನಂತರ ಕ್ರಿ. ಶ 1019ರಲ್ಲಿ ರಾಜ್ಯಪಾಲನನ್ನು ಸೋಲಿಸಿ ಕನೂಜಿಗೆ ನುಗ್ಗಿ ಅದನ್ನು ವಶಪಡಿಸಿಕೊಂಡನು. ಅನಂತರ 1024–25ರಲ್ಲಿ ಸ್ಥಾನೇಶ್ವರ ಮತ್ತು ಕಾಥೇವಾಡದ ಅತುಲೈಶ್ವರ್ಯದಿಂದ ಕೂಡಿದ ಸೋಮನಾಥ ದೇವಾಲಯಕ್ಕೆ ನುಗ್ಗಿ ವಿಗ್ರಹಗಳನ್ನು ಒಡೆದು ದೇವಸ್ಥಾನಗಳನ್ನು ನೆಲಸಮಮಾಡಿ ಜನರನ್ನು ಕೊಂದು ಸುಲಿಗೆಮಾಡಿ ಕೊಳ್ಳೆಯನ್ನು ಸಾಗಿಸಿಕೊಂಡು ಘಜನಿಗೆ ಹೋದನು. ಇವನು ಕ್ರಿ.ಶ. 1030ರಲ್ಲಿ ಕಾಲವಾದನು.

ಹಿಂತಿರುಗಿ ಹೋಗುವಾಗ ತಾನು ಜಯಿಸಿದ ಸ್ಥಳಗಳಲ್ಲಿ ಸೈನ್ಯಗಳನ್ನಿಟ್ಟು ತನ್ನ ಪ್ರತಿನಿಧಿಯಾಗಿ ಅಧಿಕಾರಿಗಳನ್ನು ಏರ್ಪಡಿಸಿದನು. ಈ ರೀತಿ ಏರ್ಪಟ್ಟ ಪ್ರತಿನಿಧಿ ಅಧಿಕಾರಿಗಳಿಗೆ ಈ ದೇಶದ ಜನರನ್ನು ಸುಲಿಗೆ ಮಾಡುವುದು ಅವಮಾನಗೊಳಿಸುವುದು ಕೊಲೆ ಇವುಗಳೇ ಅವರ ನಿತ್ಯಜೀವನವಾಗಿದ್ದುವು.

ಈ ಚರ್ಯೆಯಿಂದ ಜನರು ಉದ್ರಿಕ್ತರಾಗಿ ಬಲವಾದ ಸಂಯುಕ್ತಶಕ್ತಿಯಿಂದ ಶತ್ರುಗಳನ್ನು ಹೊಡೆದಟ್ಟಲು ಮನಸ್ಸು ಮಾಡಿದರು. ಈ ಉದ್ಯಮಕ್ಕೆ ಪ್ರತಾಪಶಾಲಿಯಾದ **ದೆಹಲಿನಗರದ ರಾಜಕುಮಾರನು** ಮುಂದಾಳಾಗಿ ನಿಂತು ಇತರ ರಾಜರುಗಳ ಸೈನ್ಯವನ್ನೂ ಸೇರಿಸಿ ಒಗ್ಗಟ್ಟಾಗಿಮಾಡಿ ವಿಧರ್ಮಿಗಳಾದ ತುರುಕರನ್ನು ಹೊಡೆದಟ್ಟಿದನು. ಆದರೆ ರಾಜಕಾರಣದಲ್ಲಿ ವ್ಯತ್ಯಾಸವಾದ್ದರಿಂದ ಸೋತು ಕ್ರಿ. ಶ.

1046ರಲ್ಲಿ ತಲೆತಪ್ಪಿಸಿಕೊಂಡು ಹೋಗಬೇಕಾಯಿತು. ಇಲ್ಲಿಂದ ಮುಂದೆ 145 ವರ್ಷಗಳಕಾಲ ಎಂದರೆ ಮುಹಮ್ಮದ್‌ಘೋರಿ ಎಂಬುವನು (ಕ್ರಿ. ಶ. 1191) ಬರುವವರೆಗೂ ದೆಹಲಿನಗರದ ಚರಿತ್ರೆಯು ಅಸ್ಪಷ್ಟವಾಗಿರುವುದು.

ಕ್ರಿ. ಶ. 1046 ರಿಂದ 1191ರವರೆಗೆ ಪಶ್ಚಿಮದೇಶವೆಲ್ಲಾ ತುರುಷ್ಕರ ಅಧೀನವಾಗಿತ್ತು. ಈ ಕಾಲದಲ್ಲಿ ಬಂಗಾಳ, ಬಿಹಾರ, ಅಯೋಧ್ಯೆವರೆಗಿರುವ ದೇಶಗಳು **ಪ್ರಾಚೀದೇಶಗಳೆಂದು** ಕರೆಯಲ್ಪಟ್ಟಿದ್ದವು.

## ಮುಹಮ್ಮದಘೋರಿ. 1173–1206

ಇವನು ಕ್ರಿ. ಶ. 1173 ರಲ್ಲಿ ಅಧಿಕಾರಕ್ಕೆ ಬಂದನು. ಇವನು ಘಜನಿ ಪಟ್ಟಣವನ್ನು ಜಯಿಸಿ ಅಲ್ಲಿಂದ ಹೊರಟು ಸಿಂಧು ಪಂಜಾಬು ದೇಶಗಳನ್ನು ವಶಪಡಿಸಿಕೊಂಡನು.

ಈ ಕಾಲದಲ್ಲಿ ಪೃಥ್ವೀರಾಜನು ದೆಹಲಿಗೂ, ಅಜಮೀರಿಗೂ ರಾಜನಾಗಿದ್ದನು. ಕನ್ಯಕುಬ್ಜದ ರಾಜನಾದ ಜಯಚಂದ್ರನ ಮಗಳು ಸಂಯುಕ್ತೆಯನ್ನು ಸ್ವಯಂವರ ಮಂಟಪದಿಂದ ಕರೆದುಕೊಂಡು ಹೊರಟು ಹೋದುದರಿಂದ ಜಯಚಂದ್ರನಿಗೂ ಪೃಥ್ವೀರಾಜನಿಗೂ ದ್ವೇಷವುಂಟಾಯಿತು.

ಜಯಚಂದ್ರನು ಮುಹಮ್ಮದ ಘೋರಿಗೆ ಹೇಳಿ ಕಳುಹಿಸಲು ಅವನು ಕ್ರಿ. ಶ. 1190–91 ರಲ್ಲಿ ಇಂಡಿಯಾ ದೇಶವನ್ನು ಮುತ್ತಿದನು. ರಾಜಪುತ್ರರೆಲ್ಲರೂ ಪೃಥ್ವೀರಾಜನ ಅಧಿನಾಯಕತ್ವದಲ್ಲಿ ಒಟ್ಟುಗೂಡಿದರು. ಜಯಚಂದ್ರನು ತಟಸ್ಥನಾದನು. ಸ್ಥಾನೇಶ್ವರಕ್ಕೆ ಸುಮಾರು ಹದಿನಾಲ್ಕು ಮೈಲಿಗಳ ದೂರದಲ್ಲಿರುವ **ತೆರೈನ್** ರಣಭೂಮಿಯಲ್ಲಿ ಯುದ್ಧವಾಯಿತು. ಘೋರಿಯು ಸೋತುಹೋದನು. ಮಾರನೆಯ ವರ್ಷ ಇನ್ನೂ ಹೆಚ್ಚು ಸೈನ್ಯದೊಡನೆ ಬಂದು ಅದೇ ರಣರಂಗದಲ್ಲಿ ಯುದ್ಧಮಾಡಿ ಜಯಿಸಿ ದೆಹಲಿಯನ್ನೂ, ಅಜಮೀರು ನಗರವನ್ನೂ ಸ್ವಾಧೀನಪಡಿಸಿಕೊಂಡನು. ಅದಕ್ಕೆ ಮಾರನೆಯ ವರ್ಷ ಕಾನ್ಯಕುಬ್ಜವನ್ನು ಸ್ವಾಧೀನಪಡಿಸಿಕೊಂಡನು. ಅನಂತರ ಗ್ವಾಲಿಯರ್ ಕಾಶಿ ಪ್ರಾಂತಗಳೂ ಅವನ ವಶವಾಯಿತು. ಬಂಗಾಳವನ್ನು ದೋಚಿದನು. ಕ್ರಿ. ಶ. 1203 ರ ವೇಳೆಗೆ ಉತ್ತರದೇಶವೆಲ್ಲಾ ಮುಹಮ್ಮದೀಯರ ವಶವಾಯಿತು. 1206 ರಲ್ಲಿ ಮುಹಮ್ಮದ್ ಘೋರಿಯು ಕೊಲೆಮಾಡಲ್ಪಟ್ಟನು. ಇವನು ಹಿಂತಿರುಗಿ ಹೋಗುವಾಗ ಈ ದೇಶದಲ್ಲಿ ಸೈನ್ಯವನ್ನಿಟ್ಟು ಕುತುಬುದೀನ್ ಎಂಬುವನನ್ನು ತನ್ನ ಪ್ರತಿನಿಧಿಯನ್ನಾಗಿಟ್ಟನು

## ಅನಿರುದ್ಧ ಕಿರೀಟವು.

ಶ್ರೀ ಮಹಾವಿಷ್ಣುವಿಗೆ **ಅನಿರುದ್ಧನೆಂದು** ಹೆಸರು. ಕ್ಷೀರಾಬ್ಧಿಯಲ್ಲಿ ಶ್ರೀಮಹಾವಿಷ್ಣುವು ಯೋಗನಿದ್ರೆಯಲ್ಲಿದ್ದಾಗ ಪ್ರಹ್ಲಾದನಮಗ **ವಿರೋಚನನು**

ಅಸುರಭಾವದಿಂದ ವಿಷ್ಣುವಿನ ದಿವ್ಯಕಿರೀಟವನ್ನು ಅಪಹರಿಸಿದನು. ಈ ವಿಚಾರವು ತಿಳಿದು ಗರುಡನು ಹೊರಟು ವಿರೋಚನನನ್ನು ಕಂಡು ಅವನಿಂದ ಕಿರೀಟವನ್ನು ತೆಗೆದುಕೊಂಡು ಆಕಾಶಮಾರ್ಗದಲ್ಲಿ ಬರುವಾಗ ಬೃಂದಾವನದಲ್ಲಿ ಶ್ರೀ ಮಹಾ ವಿಷ್ಣುವಿನ ಅಪರಾವತಾರವಾದ **ಶ್ರೀಕೃಷ್ಣನನ್ನು ನೋಡಿ** ಅವನಿಗೆ ಆ ಕೀರೀಟ ವನ್ನು ಧರಿಸಿದನು. ಆ ಕಿರೀಟವು ಶ್ರೀಕೃಷ್ಣನಿಗೆ ಸರಿಹೋಯಿತು. ಅನಂತರ ಶ್ರೀ ಕೃಷ್ಣನು ಅಪ್ರಾಕೃತವಾದುದೂ (ಮನುಷ್ಯರಿಂದ ಮಾಡಲ್ಪಡದ) ಅಮೂಲ್ಯ ವಾದುದೂ ಆದ **ಅನಿರುದ್ಧಕಿರೀಟವನ್ನು** ತನ್ನ ಅರ್ಚಾಮೂರ್ತಿಯಾದ **ಶ್ರೀರಾಮಪ್ರಿಯರಿಗೆ** ಧರಿಸಿದನು.

ಕೆಲವುಕಾಲದಮೇಲೆ ಬಲರಾಮನೊಂದಿಗೆ ಈ ಕ್ಷೇತ್ರಕ್ಕೆ ಬಂದು ಮೂಲ ಮೂರ್ತಿಯೊಂದಿಗೆ ಉತ್ಸವಮೂರ್ತಿಯನ್ನೂ ಈ ವಿಗ್ರಹವನ್ನೂ ಸೇರಿಸಿದಾಗ ಈ ಕಿರೀಟವು ಸರ್ವಕಾಲದಲ್ಲಿಯೂ ದೇವರ ಮಸ್ತಕದಮೇಲೆ ವಿರಾಜಮಾನ ವಾಗಿದ್ದಿತು.

## ವಯಿರಮುಡಿ.

ಶ್ರೀ ರಾಮಾನುಜಾಚಾರ್ಯರು ಯಾದವಾದ್ರಿ ಊರು ಪಾಳಾಗಿದ್ದ ಸ್ಥಳವನ್ನು ನಿರ್ಣಯಮಾಡಿ ದೇವರನ್ನು ಕಂಡುಹಿಡಿಯುವಾಗ ಗರ್ಭಗೃಹವು ಕಂಡುಬಂದು ದೇವಸ್ಥಾನದ ಆಯಕಟ್ಟು ಆದನಂತರ ಕೈಂಕರ್ಯಪರರಿಗೆ ವಾಸಕ್ಕೆ ನಿವೇಶನ ವನ್ನು ಗೊತ್ತುಮಾಡಿದರು. ಪ್ರಧಾನ ಕೈಂಕರ್ಯಪರರಲ್ಲಿ ಒಬ್ಬರಾದ ತಿರುವ ನಂತಪುರದಾಸರು ತಮಗೆ ಏರ್ಪಟ್ಟ ನಿವೇಶನದಲ್ಲಿ ಮನೆಕಟ್ಟಲು ಹೊರಟು ಪೂರ್ವದಲ್ಲಿ ಅಳಿದುಳಿದು ನಿಂತಿದ್ದ ಪಾಳುಗೋಡೆಗಳನ್ನು ಕೆಡವಿ ನೆಲಸಮನ ಮಾಡುವಾಗ ಗೋಡೆಯಂಚಿನಲ್ಲಿ ದ್ರವ್ಯಾಭರಣದಿಂದೊಡಗೂಡಿ ಉಭಯನಾಯಚ್ಚಿ ಮಾರ್‍ರು **ದೊಡ್ಡಕೊಪ್ಪರಿಗೆಯಲ್ಲಿದ್ದುದು** ದೊರಕಿತು. ಈ ವಿಚಾರವು ಶ್ರೀರಾಮಾ ನುಜಾಚಾರ್ಯರಿಗೆ ತಿಳಿದು ಅವರು ಬಂದು ಉಭಯನಾಯಚ್ಚಿಮಾರರನ್ನು ದ್ರವ್ಯಾ ಭರಣದೊಂದಿಗೆ ದೇವಸ್ಥಾನಕ್ಕೆ ತಂದರು. ಈ ರೀತಿ ಕೊಪ್ಪರಿಗೆಯಲ್ಲಿ ದೊರೆತ ದ್ರವ್ಯಾಭರಣಗಳಲ್ಲಿ **ಈ ಕಿರೀಟವು** ಅತ್ಯಂತ ಪ್ರಕಾಶಮಾನವಾಗಿದ್ದುದರಿಂದ ಶ್ರೀ ರಾಮಾನುಜಾಚಾರ್ಯರು ದ್ರಾವಿಡದೇಶದವರಾದುದರಿಂದಲೂ ಈ ಕಿರೀಟವನ್ನು ದ್ರವಿಡ ಪದದಿಂದಲೇ **ವಯಿರಮುಡಿ** ಎಂಬ ಹೆಸರಿನಿಂದ ಕರೆದರು. ಆ ದಿನ ದಿಂದ ಈ ದ್ರಾವಿಡಪದವಾದ "**ವಯಿರಮುಡಿ**" ಎಂಬ ಹೆಸರಿನಿಂದಲೇ ಅನೂ ಚಾನವಾಗಿ ಕರೆಯಲ್ಪಟ್ಟು ಇಂದಿಗೂ ಆ ದ್ರವಿಡಪದದ ಹೆಸರೇ ಪ್ರಸಿದ್ಧವಾಗಿರು ವುದು. ಇದಕ್ಕೆ ಪೂರ್ವ ಈ ಕೀರೀಟಕ್ಕೆ ಅನಿರುದ್ಧ ಕಿರೀಟವೆಂದು ಹೆಸರಿದ್ದಿತು.

ದ್ರವ್ಯಾಭರಣಗಳು ದೊರಕಿದುದಲ್ಲದೆ ನರಸಿಂಹಸ್ವಾಮಿ ಬೆಟ್ಟಕ್ಕೆ ಪಶ್ಚಿಮದಲ್ಲಿ ಗ್ರಾಮದಂಚಿನಲ್ಲಿ ಸುವರ್ಣನಾಣ್ಯಗಳೂ ಸಹ ದೊರಕಿದುವು. ಇವುಗಳೆಲ್ಲವೂ **ರತ್ನಹಾರೀಚ ಪಾರ್ಥಿವಃ** ಎನ್ನುವಂತೆಯೂ **ಭುವಪ್ರಭವಃ** ಎನ್ನುವ ಸೂತ್ರವನ್ನನುಸರಿಸಿ ರಾಜಧರ್ಮಶಾಸನದಂತೆ ರಾಜನಿಗೆ ಸೇರಬೇಕಾದ್ದರಿಂದ ವಿಷ್ಣುವರ್ಧನ ಬಲ್ಲಾಳನರಮನೆಗೆ ಕಳುಹಿಸಲ್ಪಟ್ಟಿತು. ಆ ದ್ರವ್ಯಾಭರಣಗಳೆಲ್ಲವನ್ನೂ ರಾಜರಾದ ವಿಷ್ಣುವರ್ಧನ ಬಲ್ಲಾಳರು ತಮ್ಮ ಸೇವೆಯೆಂದು ದೇವರಿಗೆ ಸಮರ್ಪಿಸಿದರೇ ಹೊರತು ಬೇರೆಯಲ್ಲ,

ಹಾಗಿಲ್ಲದೆ ಈ **ವಯಿರಮುಡಿ** ಕಿರೀಟವನ್ನು ಯಾವ ರಾಜರೇ ಆಗಲಿ ಸಮರ್ಪಿಸಿದ್ದರೆ **ರಾಜಮುಡಿ** ಮತ್ತು **ಕೃಷ್ಣರಾಜಮುಡಿ**ಯಂತೆ ಇಂಥ ರಾಜರ ಧರ್ಮದ **ಕಿರೀಟ** ಅಥವಾ ಉತ್ಸವ, ಸೇವೆ ಎಂಬ ಹೆಸರಿರಬೇಕಾಗಿತ್ತು. ಅಥವಾ **ವಜ್ರದ ಕಿರೀಟ**ವೆಂಬ ಸಂಸ್ಕೃತದ ಹೆಸರಾದರೂ ಇರಬೇಕಾಗಿತ್ತು. ದ್ರವಿಡದೇಶದವರಾರೂ ಸಮರ್ಪಿಸಿಲ್ಲವೆಂಬುದೂ ಸಿದ್ಧವೇ ಅಪ್ರಾಕೃತವಾದ ಈ ಅನಿರುದ್ಧ ಕಿರೀಟವನ್ನೇ ಶ್ರೀರಾಮನುಜಾಚಾರ್ಯರು **ವಯಿರಮುಡಿ** ಎಂಬ ಹೆಸರಿನಿಂದ ಕರೆದು ಅನೂಚಾನವಾಗಿ ಬಂದಿರುವುದರಿಂದಲೇ ಈ ಕಿರೀಟಕ್ಕೆ ಇಷ್ಟು ಶ್ರೇಷ್ಠವು.

## ಪ್ರತ್ಯೇಕವಾಗಿ ವಯಿರಮುಡಿ ಉತ್ಸವಕ್ಕೆ ಕಾರಣ

ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ನಡೆಸಲು ಚೈತ್ರಮಾಸ ಪುಷ್ಯನಕ್ಷತ್ರದಲ್ಲಿ ಏರ್ಪಡಿಸಿದರು. ಆದರೆ ಪಟ್ಟಾಭಿಷೇಕವು ತಪ್ಪಿ ಅರಣ್ಯ ಸಂಚಾರವು ಏರ್ಪಟ್ಟಿತು. ಈ ವಿಚಾರವು ಪಕ್ಕದಲ್ಲಿದ್ದ ಶ್ರೀಲಕ್ಷ್ಮಣದೇವರಿಗೆ (ರಾಮಾನುಜ) ತಿಳಿದ ವಿಷಯುವೇ ಆಗಿದ್ದಿತು. ಅದೇ ಲಕ್ಷ್ಮಣನು ಬಲರಾಮನಾಗಿ ಅವತರಿಸಿದ್ದರು. ವಿಷಯಗಳನ್ನು ತಿಳಿದ ಶ್ರೀಕೃಷ್ಣ ಬಲರಾಮರು ತಮ್ಮ ವಶದಲ್ಲಿ ಆರಾಧಿತರಾದ ರಾಮಪ್ರಿಯರನ್ನು ಅದೇ ಪುಷ್ಯನಕ್ಷತ್ರದಲ್ಲಿ ಪ್ರತಿಷ್ಠಿಸಿದರು. ಅನಂತರ ಬಲರಾಮರೇ ಶ್ರೀರಾಮಾನುಜಾಚಾರ್ಯರಾಗಿ ಅವತರಿಸಿ ಖಿಲವಾದ ಯಾದವಾದ್ರಿಯನ್ನು ಜೀರ್ಣೋದ್ಧಾರಮಾಡಿ ದೇವಸ್ಥಾನದಲ್ಲಿ ಆರಾಧನೆ, ಮರ್ಯಾದೆ, ಅಧಿಕಾರ, ಕೈಂಕರ್ಯಾದಿ ಕ್ರಮಗಳನ್ನು ಏರ್ಪಡಿಸಿ ದೇವರಿಗೆ ಆಗಮೋಕ್ತವಾಗಿ ನಿತ್ಯೋತ್ಸವ, ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವಗಳನ್ನು ಕ್ರಮವಾಗಿ ಏರ್ಪಡಿಸಿದರು. ತಮ್ಮ ಕೊರತೆಯನ್ನು ನೀಗಿಸಲು ಅದೇ ಪುಷ್ಯನಕ್ಷತ್ರದಲ್ಲಿ ಪ್ರತಿಷ್ಠಿತರಾದ ರಾಮಪ್ರಿಯರಿಗೆ ಆಗಮ ಶಾಸ್ತ್ರದಲ್ಲಿ ತಿಳಿಸಿದಂತೆ ಬ್ರಹ್ಮೋತ್ಸವ ಕಾಲದಲ್ಲಿ ವಿಶೇಷೋತ್ಸವವಾಗಿ ಈ ಅನಿರುದ್ಧ ಕಿರೀಟವಾದ **ವಯಿರಮುಡಿ** ಕಿರೀಟವನ್ನು ಧರಿಸಿ ಉತ್ಸವವನ್ನು ನಡೆಸಲು ಏರ್ಪಡಿಸಿದುದರಿಂದ ಅನೂಚಾನವಾಗಿ ಈ ವಯಿರಮುಡಿ ಉತ್ಸವವು ನಡೆದು

ಬರುತ್ತಿದೆ. ಆಗಮೋಕ್ತವಾದ ಈ ಏರ್ಪಾಡಿಗೆ ಪೂರ್ವದಲ್ಲಿ ಚೆಲ್ವಪ್ಪಿಳ್ಳೆಸ್ವಾಮಿಯವರಿಗೆ ಈ ಕಿರೀಟವು ಸದಾಕಾಲದಲ್ಲಿಯೂ ಧರಿಸಿದ್ದಿತು.

## ವಯಿರಮುಡಿ

## ಶ್ರೀಯತಿರಾಜ ಮಠಾಧಿಪತಿಗಳ ಅಧಿಕಾರದಲ್ಲಿ

ಶ್ರೀರಾಮಾನುಜಾಚಾರ್ಯರು ಶ್ರೀರಂಗಕ್ಕೆ ಬಿಜಯ ಮಾಡಿಸಿದಾಗ ದೇವಸ್ಥಾನದ ಸಕಲಾಧಿಕಾರವನ್ನೂ ತಮ್ಮ ಶಿಷ್ಯರಾದ ದೇಶಾಯಿ ಕೇಳ್ವಿತಿರುನಾರಾಯಣಜೀಯರಿಗೆ ವಹಿಸಿ ಹೊರಟುಹೋದರು. ಅಂದಿನಿಂದ ಈ ಕಿರೀಟವು ದೇವಸ್ಥಾನದಲ್ಲಿಯೇ ಇದ್ದಿತು. ಅಂದಿನಿಂದ ಶ್ರೀಯತಿರಾಜ ಮಠಾಧಿಪತಿಗಳು, ದೇವಸ್ಥಾನದ ಕೈಂಕರ್ಯಪರರು ಐವತ್ತಿಬ್ಬರು, ಊರಿನ ಶ್ರೀವೈಷ್ಣವರು, ನಾಡಿಗೊಡೆಯರಾದ ಬಲ್ಲಾಳರು ಸೇರಿ ಸುಮಾರು 1100 ರಿಂದ 1312 ರ ವರೆಗೆ ನಿರ್ವಿಘ್ನವಾಗಿ ಕಾಪಾಡಿಕೊಂಡು ಬಂದರು. (ಶಾಸನ ಶ್ರ. ಬೆ. ನಂ. ೩೪೪. ಮಾಗಡಿ ೧೪, ನಿಯಮನಪ್ಪಡಿ. ಶ್ರೀ. ಪ. ಶಾ. ೮೭–೨೮೦.)

## ಕ್ರಿ. ಶ. 1312 ರಿಂದ 1450 ರ ವರೆಗೆ

ಅನಂತರ ದೇಶದ ರಾಜರ ರಾಜತಂತ್ರವು ದುರ್ಬಲವಾಗಿ ತುರಷ್ಕರಹಾವಳಿಯಿಂದ ಊರುಗಳು ಆಗಿಂದಾಗ್ಯೆ ಪಾಳಾಗುತ್ತಿದ್ದು ಮಧ್ಯೇಮಧ್ಯೇ ಎಚ್ಚರಗೊಳ್ಳುತ್ತಿತ್ತು. ಈ ಕಾಲದಲ್ಲಿ ಮೂಲಮೂರ್ತಿಗೆ ಕಲ್ಲುಚಪ್ಪಡಿಗಳಿಂದ ಮರೆಮಾಡುವುದೂ ಉತ್ಸವಮೂರ್ತಿಯನ್ನೂ ದ್ರವ್ಯಾಭರಣಗಳನ್ನೂ ತೆಗೆದುಕೊಂಡು ಹೋಗುವುದು ಅಥವಾ ಭೂಮಿಯಲ್ಲಿ ನಿಕ್ಷೇಪಿಸಿ ಶಾಂತವಾತಾವರಣವು ಏರ್ಪಟ್ಟಮೇಲೆ ಉಪಯೋಗಿಸುವುದು ಈ ರೀತಿಯಲ್ಲಿ ಸುಮಾರು 1312 ರಿಂದ 1450 ರವರೆಗೆ ಇರಬಹುದು.

## ಕ್ರಿ. ಶ. 1450—1460 ರ ವರೆಗೆ

ಸಂಪೂರ್ಣವಾಗಿ ಪಾಳಾಗಿದ್ದ ತಿರುನಾರಾಯಣಪುರವು ಕ್ರಿ. ಶ. 1450 ರಿಂದ ಈಚೆಗೆ ಸ್ವಲ್ಪಸ್ವಲ್ಪವಾಗಿ ಅಭಿವೃದ್ಧಿಗೆ ಬರುತ್ತಿದ್ದುದು ಶ್ರೀರಂಗಪಟ್ಟಣ ಶಾಸನ ೮೯–೯೭ ರಿಂದ ತಿಳಿದುಬರುವುದು. ನಾಗಮಂಗಲದ ತಿಮ್ಮಣ್ಣ ದಣ್ಣಾಯಕರ ಅಭಿಮಾನದಿಂದ ಊರೂ ದೇವಸ್ಥಾನವೂ ಜೀರ್ಣೋದ್ಧಾರವಾದಮೇಲೆ ವಿಜಯನಗರದ ಅರಸರ ಪ್ರಾಬಲ್ಯದಿಂದ ತಿರುನಾರಾಯಣಪುರವು ಪುನಃ ಚೇತರಿಸಿಕೊಂಡು ಅತ್ಯಂತಾಭಿವೃದ್ಧಿಯಲ್ಲಿದ್ದಿತು. ಕ್ರಿ. ಶ. 1100 ರಿಂದ 1460ರ ವರೆಗೆ ದೇವಸ್ಥಾನದಲ್ಲಿ ಶ್ರೀ ಯತಿರಾಜ ಮಠಾಧಿಪತಿಗಳ ಸಂಪೂರ್ಣಾಧಿಕಾರವು ಕಂಡುಬರುವುದು. (ನಿಯಮನಪ್ಪಡಿ, ಶ್ರೀ. ಪ. ಶಾಸನ ನಂ, ೨೮೦, ೮೭, ೮೯, ೯೭ ಶ್ರ. ಬೆ. ೩೪೪. ಮಾಗಡಿ ೧೪,)

## ಕ್ರಿ. ಶ. 1460—1544 ರ ವರೆಗೆ.

ಪುನಃ ವಿಜಯನಗರದ ಅರಸರೂ ಮಾಂಡಳಿಕರೂ ಶ್ರೀಯತಿರಾಜ ಮಠಾಧಿಪತಿಗಳಿಗೆ ಕ್ರಿ. ಶ. 1544 ರಲ್ಲಿ ದೇವಸ್ಥಾನದ ಸಕಲವಾದ ಅಧಿಕಾರ ಮರ್ಯಾದೆಯನ್ನು ಕೊಟ್ಟದು ಕಂಡುಬರುವುದರಿಂದ ಈ ಮಧ್ಯೆ 84 ವರ್ಷಗಳು ಅಧಿಕಾರ ಲೋಪವಾಗಿರಬೇಕೆಂದು ತಿಳಿದುಬರುತ್ತದೆ. (ಶ್ರೀ. ಪ. ಶಾಸನ.........)

## 1544—1575 ರ ವರೆಗೆ

ಶ್ರೀಯತಿರಾಜ ಮಠಾಧಿಪತಿಗಳು ಪುನಃ 1544 ರಲ್ಲಿ ದೇವಸ್ಥಾನದ ವಿಶಿಷ್ಟಾಧಿಕಾರವನ್ನೂ ಮರ್ಯಾದೆಯನ್ನೂ ಹೊಂದಿ ಶ್ರೀನಾರಾಯಣಸ್ವಾಮಿಯವರ ಕೈಂಕರ್ಯವನ್ನು ಅತಿ ವಿಜೃಂಭಣೆಯಿಂದ ಸುಮಾರು 30 ವರ್ಷಗಳು ನಡೆಸಿರಬಹುದೆಂದು ತಿಳಿದುಬರುವುದು. ದೇವಸ್ಥಾನಕ್ಕೆ ಆಗ ವರಮಾನವು ಸುಮಾರು 10000 ಕ್ಕೆ ಮೇಲ್ಪಟ್ಟು ವರಹಗಳ ಉತ್ಪತ್ತಿಯಿದ್ದುವು. ಪ್ರತಿದಿನ ದೇವರಿಗೆ 150 ಪಡಿ ಪ್ರಸಾದವು ನಿವೇದನವಾಗುತ್ತಿತ್ತು. (ಶ್ರೀ. ಪ. ಶಾ. ೧೪೯, ೨೫೭, ೨೬೦, ೨೬೨, ೯೫, ೨೫೬).

## 1575 ರಿಂದ 1612 ರ ವರೆಗೆ

ಈ ಕಾಲದಲ್ಲಿ ಎಂದರೆ 1575 ರಿಂದ ಮುಂದಕ್ಕೆ ಶ್ರೀಯತಿರಾಜಮಠಾಧಿಪತಿಗಳಿಗೆ ವಿಶ್ರಾಂತ ಉಂಟಾದುದೂ ಮತ್ತು ರಾಜ್ಯಾಂಗದಲ್ಲಿ ಶ್ರೀರಂಗರಾಜರ ಪ್ರಾಬಲ್ಯವು ಕಡಿಮೆಯಾದುದೇ ಮೊದಲಾದ ಕಾರಣದಿಂದ ದೇವಸ್ಥಾನದ ಅಧಿಕಾರವರ್ಗ ಕೈಂಕರ್ಯಪರರಲ್ಲಿ ಅಸೂಯೆ ಸ್ವಲಾಭಾಪೇಕ್ಷೆಗಳಿಂದ ನಿರಂಕುಶಾಧಿಕಾರದರ್ಪವು ಉಂಟಾಗಿ ಸುಮಾರು 35 ವರ್ಷಗಳಕಾಲ ನಡೆದು ಬಂದಮೇಲೆ ಆಗ ರಾಜ್ಯಭಾರವನ್ನು ನಡೆಸುತ್ತಿದ್ದ **ರಾಜಒಡೆಯರಿಗೆ** ವಿಷಯಗಳು ತಿಳಿಸಲ್ಪಟ್ಟು ಸುಮಾರು ಕ್ರಿ.ಶ. 1612ರಲ್ಲಿ ದೇವಸ್ಥಾನದ ಸರ್ವಾಧಿಕಾರವನ್ನೂ ಅರಮನೆಯವರೇ ವಿಚಾರಣೆ ಮಾಡಿ ದೇವತಾಸೇವೆಯನ್ನು ಚನ್ನಾಗಿ ನಡೆಸುವಂತೆ ಏರ್ಪಟ್ಟಿತು. ದೇವಸ್ಥಾನದ ಸಕಲವಾದ ಅಧಿಕಾರವು ಅರಮನೆಗೆ ಸೇರಿದುದರಿಂದ ಇನ್ನು ದೇವಸ್ಥಾನದ ಸ್ವತ್ತುಗಳಿಗೆ ಲೋಪವಿಲ್ಲವೆಂದು ತಿಳಿದು **ರಾಜಒಡೆಯರವರು** ಅಮೂಲ್ಯ ರತ್ನಗಳಿಂದ ಚಲುವರಾಯಸ್ವಾಮಿಗೆ ತಮ್ಮ ಹೆಸರಿನಲ್ಲಿ **ರಾಜಮುಡಿ** ಎಂಬ ಕಿರೀಟವನ್ನೂ ಇನ್ನೂ ಅನೇಕ ಆಭರಣಗಳನ್ನೂ ಮಾಡಿಸಿ ವಯಿರಮುಡಿ ಉತ್ಸವವಾದಮೇಲೆ ವಯಿರಮುಡಿ ಸಹಿತವಾಗಿ ಆಭರಣಗಳೆಲ್ಲವೂ ಶ್ರೀರಂಗಪಟ್ಟಣದ ಭಂಡಾರಕ್ಕೆ ತೆಗೆದುಕೊಂಡು ಬರುವಂತೆ ಏರ್ಪಡಿಸಿದರು. ತದಾರಭ್ಯ ಮೈಸೂರು ಮಹಾರಾಜರ ಶ್ರೀರಂಗಪಟ್ಟಣದ ಅರಮನೆಯಲ್ಲಿ ವಯಿರಮುಡಿಯು ಸೇರಿತು.

## 1612 - 1792 ರ ವರೆಗೆ

## ಮೈಸೂರು ಮಹಾರಾಜರ ಅರಮನೆಯಲ್ಲಿ

### (ಶ್ರೀರಂಗಪಟ್ಟಣದ ಅರಮನೆ)

**ರಾಜಒಡೆಯರು** ದೇವಸ್ಥಾನದ ಸಕಲವಾದ ಅಧಿಕಾರವನ್ನು ತೆಗೆದುಕೊಂಡ ಮೇಲೆ ತದಾರಭ್ಯ ಕ್ರಿ. ಶ. 1792 ರವರೆಗೂ ಮೈಸೂರು ರಾಜರು ಯಾವ ಆತಂಕವೂ ಇಲ್ಲದೆ **ವಯಿರಮುಡಿಯನ್ನು** ಕಾಪಾಡಿಕೊಂಡು ಬಂದರು.

## 1792—1800 ರ ವರೆಗೆ

ಹೈದರಲ್ಲಿ ಟಿಪ್ಪುಸುಲತಾನ ಇವರುಗಳ ಕೈಯಲ್ಲಿ ರಾಜ್ಯದ ಅಧಿಕಾರವಿದ್ದಾಗ ರಾಜತಂತ್ರಬಲವು ಕಡಿಮೆಯಾಗಿ ಸಮುದ್ರಮಾರ್ಗದಿಂದ ಬಂದ ಇಂಗ್ಲೀಷಿನವರಿಗೂ ಟಿಪ್ಪೂಸುಲ್ತಾನನಿಗೂ ಯುದ್ಧವಾಗಿ ಟಿಪ್ಪುವು ಸೋತು ಇಂಗ್ಲೀಷರ ಅಧಿಕಾರಿಯಾದ ಕಾರ್ನವಾಲೀಸಿಗೆ ಕ್ರಿ. ಶ. 1792 ರಲ್ಲಿ ಆದ ಒಪ್ಪಂದದಂತೆ ಬ್ರಿಟಿಷರಿಗೆ ಅರ್ಧರಾಜ್ಯವನ್ನೂ ಮೂರುಕೋಟಿ ರೂಪಾಯನ್ನೂ ಕೊಡಬೇಕಾಗಿ ಬಂದಿತು. ಅದಕ್ಕಾಗಿ ದೇಶದಲ್ಲಿದ್ದ ಪ್ರತಿಯೊಂದು ಸಂಸ್ಥೆಯಿಂದಲೂ ಪ್ರಜೆಯಿಂದಲೂ ಹಣವನ್ನು ಶೇಖರಿಸಿದನು. ಈ ಕಾಲದಲ್ಲಿ ದೇವಸ್ಥಾನದ ನಗನಾಣ್ಯಗಳೂ ಸಹ ತೆಗೆದುಕೊಂಡಿರಬಹುದಾಗಿದೆ. ಅಂದಿನಿಂದ ಪುನಃ 1800 ರವರೆಗೆ ಶ್ರೀರಂಗಪಟ್ಟಣದ ಟೀಪುಸುಲ್ತಾನರ ಭಂಡಾರದಲ್ಲಿ ವಯಿರಮುಡಿಯು ಸೇರಿದ್ದಿತು.

## 1800—1956 ರವರೆಗೆ

## ಪುನಃ ಮೈಸೂರು ಮಹಾರಾಜರ ಅರಮನೆಯಲ್ಲಿ.

ಶ್ರೀರಂಗಪಟ್ಟಣದಲ್ಲಿ ರಾಜ್ಯಾಧಿಕಾರದಲ್ಲಿದ್ದ ಟೀಪುಸುಲ್ತಾನನು 1799 ರಲ್ಲಿ ಕಾಲವಾದನು. ಇಂಗ್ಲೀಷರು ರಾಜ್ಯವನ್ನು ಹಿಡಿದು ಸಮಸ್ತ ಐಶ್ವರ್ಯವನ್ನೂ ವಶಪಡಿಸಿಕೊಂಡಾಗ ರಾಜಭಂಡಾರದಲ್ಲಿದ್ದ ಅನೇಕ ವಿಗ್ರಹಗಳು, ಮತ್ತು ಐಶ್ವರ್ಯಾಭರಣಗಳಲ್ಲಿ ತಮಗೆ ಬೇಕಾದುವುಗಳನ್ನು ತೆಗೆದುಕೊಂಡು ಅನೇಕ ವಿಗ್ರಹಗಳನ್ನೂ ದೇವಸ್ಥಾನಗಳಿಗೆ ಕೊಡಿಸಿ ಮಿಕ್ಕ ಅನೇಕ ಆಭರಣಗಳನ್ನು ಹರಾಜು ಹಾಕಿದರು. ಅದರಲ್ಲಿ ವಯಿರಮುಡಿಯೂ ಸೇರಿರಬಹುದಾಗಿದೆ. ಈ ವಿಚಾರದಲ್ಲಿ ರಾಜಕೀಯ ಕಾರಣಗಳಿಂದ ಪ್ರತಿಬಂಧಕವು ಏರ್ಪಟ್ಟಿದರಿಂದ ಈ ವಿಚಾರದಲ್ಲಿ ವಿವರವನ್ನು ಇಲ್ಲಿ ತಿಳಿಸಿರುವುದಿಲ್ಲ. ಆ ಕಾಲದಲ್ಲಿ ಮೈಸೂರು ಮಹಾರಾಜರ ಸ್ವಾಧೀನಕ್ಕೆ ಬಂದು ಇಲ್ಲಿಯವರೆಗೂ ಮೈಸೂರು ಅರಮನೆಯಲ್ಲಿರುವುದು ಕಂಡುಬರುವುದು.

## ಶ್ರೀನಾರಾಯಣಸ್ವಾಮಿ ದೇವಸ್ಥಾನದ ಆಡಳಿತ, ಉತ್ಪತ್ತಿ ವರಮಾನ.

ಶ್ರೀರಾಮಾನುಜಾಚಾರ್ಯರು ದೇವರಿಗೆ ನಿತ್ಯಪಡಿ, ಅಧಿಕಪಡಿಯನ್ನು ಏರ್ಪಡಿಸಿದನಂತರ ರಾಜಕೀಯ ಬದಲಾವಣೆ ಮತ್ತು ಏರುಪೇರುಗಳಿಂದ ದೇವಸ್ಥಾನದಲ್ಲೂ ವ್ಯತ್ಯಾಸವಾಗುತ್ತಿತ್ತು. ಸುಮಾರು ಕ್ರಿ. ಶ. 1564 ರಲ್ಲೂ ಸಹ ದೇವಸ್ಥಾನಕ್ಕೆ ೧೦ ಸಹಸ್ರವರಹಗಳಿಗೆ ಮೇಲ್ಪಟ್ಟು ಉತ್ಪತ್ತಿಯೂ, ದಿನ ಒಂದಕ್ಕೆ ೧೫೦ ಅಮೃತಪಡಿನಿವೇದನವೂ ನಡೆಯುತ್ತಿದ್ದುದು ಅನೇಕ ಶಾಸನಗಳಿಂದ ಕಂಡು
೨೫೬, ೧೮೬, ೬೯, ೯೭.)

ರಾಜ್ಯಾಡಳಿತವು ಕೆಲವುಕಾಲ ಹೈದರ, ಟೀಪು ಇವರ ವಶದಲ್ಲಿದ್ದಾಗ ದೇಶದಲ್ಲಿ ಅನೇಕ ದೇವಸ್ಥಾನಗಳು ನೆಲಸಮಮಾಡಲ್ಪಟ್ಟುವು. ಕ್ರಿ. ಶ. 1801 ರ ವೇಳೆಗೆ ದೇಶದಾದ್ಯಂತ ಒಟ್ಟು 1065 ದೇವಸ್ಥಾನಗಳಿದ್ದವು. ಆಗ ದೇವಸ್ಥಾನ ಮತ್ತು ಅಗ್ರಹಾರಗಳಿಗೆ ಸುಮಾರು ಎರಡುಲಕ್ಷವರಹಗಳೂ ಮಠ ಮತ್ತು ಬ್ರಾಹ್ಮಣರಿಗೆ 20000 ವರಹಗಳೂ ಸೇರುತ್ತಿತ್ತು. ಕ್ರಿ. ಶ. 1850 ಕ್ಕೆ ಮೇಲೆ ಈ ದೇವಸ್ಥಾನದ ಡಳಿತವನ್ನೂ, ವಿಶಿಷ್ಟ ಗ್ರಾಮಭೂಮಿಗಳನ್ನು ಸರಕಾರಕ್ಕೆ ತೆಗೆದುಕೊಂಡಾಗ ಪಡಿತರ ದೀಪಾರಾಧನೆಗೆ 25,000 ರೂಪಾಯಿಗಳನ್ನು ನಗದು ರೊಕ್ಕವಾಗಿ ಏರ್ಪಡಿಸಿದರು.

ಶ್ರೀ ಯತಿರಾಜಮಠದ ಈಗಿನ ಆರ್ಥಿಕ ಸ್ಥಿತಿಯನ್ನು ಪ್ರಕಾಶಪಡಿಸುವ ವಿಷಯದಲ್ಲಿ ನಮಗೆ ವಿವರವಾದ ಲೆಕ್ಕವು ತಿಳಿಯುಬರಲಿಲ್ಲವಾದ್ದರಿಂದಲೂ, ಶ್ರೀಮಠಕ್ಕೆ ಸೇರಿದ ಅಧಿಕಾರ ವರ್ಗದವರು ಇಷ್ಟಪಡಲಿಲ್ಲವಾಗಿ ಈ ಚರಿತ್ರೆಯಲ್ಲಿ ಸೇರಿಸಲಾಗಲಿಲ್ಲ. ವಿವರವಾದ ಲೆಕ್ಕವು ಶಿಷ್ಯರ ಅವಗಾಹನೆಬಗ್ಗೆ ಪ್ರಕಾಶಪಡಿಸಿದಲ್ಲಿ ಅತ್ಯುತ್ತಮವಾಗಿದ್ದಿತು.

### ದೇವಸ್ಥಾನದಲ್ಲಿ ದೇವರ ವಿಶೇಷ ಆಭರಣಗಳು.

ಶ್ರೀನಾರಾಯಣಸ್ವಾಮಿ ಚಲುವರಾಯಸ್ವಾಮಿಗಳಿಗೆ ಅಮೂಲ್ಯವಾದ ಅನೇಕ ಆಭರಣಗಳಿದ್ದುವು. ಆದರೆ ರಾಜಕೀಯ ಕಾರಣಗಳಿಂದ ಅನೇಕ ಆಭರಣಗಳು ವ್ಯತ್ಯಾಸವಾದುದು ಕಂಡುಬರುತ್ತವೆ. ಪ್ರಕೃತ ದೇವರಿಗೆ ಅಪ್ರಾಕೃತವಾದ **ವಯಿರಮುಡಿ,** ರಾಜಒಡೆಯರು ಕೃಷ್ಣರಾಜ ಒಡೆಯರು ಮಾಡಿಸಿಕೊಟ್ಟಿರುವ **ರಾಜಮುಡಿ, ಕೃಷ್ಣರಾಜಮುಡಿ** ಎಂಬ ಕಿರೀಟಗಳೂ ಮತ್ತು ಭಂಗಾರದಬಟ್ಟಲು, ಅಭಯಹಸ್ತ, ಪಾದುಕೆ, ಸರ, ಶಂಖಚಕ್ರಗಳು ಕಂಠಾಭರಣ ಯಜ್ಞೋಪವೀತ ಇತ್ಯಾದಿ ಅನೇಕ ಆಭರಣಗಳಿರುವುವು.

ಶಲ್ವಪ್ಪಿಳ್ಳೈ ದೇವರಿಗೆ ಹೃದಯದಲ್ಲಿರುವ **ಲಕ್ಷ್ಮಿಯನ್ನು ಶ್ರೀಯತಿರಾಜ ಸ್ವಾಮಿಗಳು** ಕ್ರಿ. ಶ. 1140 ರಲ್ಲಿ ಸಮರ್ಪಿಸಿದುದು ಆದ್ಯಾವದಿ ಕಂಡುಬರುವುದು.

ಇದಕ್ಕೆ ಪ್ರಮಾಣಶ್ಲೋಕವು—

ಸಂಪತ್ಸುತಸ್ಯ ಯದುಭೂಧರ ಮಂಗಳಸ್ಯ ।
ಯೇನವ್ಯತನ್ಯತ ಹರೇರನಪಾಯಿನಿಶ್ರೀಃ ॥
ತಂ ಯೋಗಿನಂ ಯತಿವರೇಣ್ಯ ನಿಯೋಗಲಬ್ಧ ।
ಸಂಪತ್ಕುಮಾರಪದ ಮನ್ವಹಮಾಶ್ರಯಾಮಃ ॥

ಯಾದವಾದ್ರಿ
ಮೇಲುಕೋಟೆ
16-4-1956.

**ಆಸೂರಿ ಸಂಪತ್ಕುಮಾರಾಚಾರ್ಯಃ.**
**ಆಸೂರಿ ಶ್ರೀನಿವಾಸಯ್ಯಂಗಾರ್ಯಃ.**

**ಶ್ರೀಮಾನ್ ಶ್ರೀನಿವಾಸನ್‌ರವರು, ಮೇಲುಕೋಟೆ, ರಾಮಾನುಜಾಚಾರ್ಯರು ಮತ್ತು ವಯಿರಮುಡಿ ಕಿರೀಟದ ಚರಿತ್ರೆ** ಇವುಗಳ ವಿಚಾರವಾಗಿ ಈ ಪುಟ್ಟ ಪುಸ್ತಕದಲ್ಲಿ ಅನೇಕ ಉಪಯುಕ್ತ ವಿಷಯಗಳನ್ನು ಶೇಖರಿಸಿದ್ದಾರೆ. ಅವರು ಸ್ಥಳಪುರಾಣವೇ ಮೊದಲಾದ ಆಧಾರಗಳಿಂದ ಹೆಚ್ಚು ವಿಷಯಸಂಗ್ರಹ ಮಾಡಿರುವುದಲ್ಲದೆ ನಮ್ಮ ಇಲಾಖೆಯವರು ಪ್ರಕಟಿಸಿರುವ ಅನೇಕ ಶಾಸನಗಳನ್ನೂ ಕೂಡ ತಮ್ಮ ಗ್ರಂಥದಲ್ಲಿ ಉಪಯೋಗಿಸಿಕೊಂಡಿದ್ದಾರೆ. **ವಯಿರಮುಡಿಯ** ಚರಿತ್ರೆಯನ್ನು ಕಟ್ಟಲು ಶ್ರೀಮಾನ್ ಶ್ರೀನಿವಾಸನ್‌ರವರಿಗೆ ಸಿಕ್ಕಬೇಕಾದ ಸರ್ಕಾರಿ ಕಾಗದಪತ್ರಗಳೆಲ್ಲವೂ ಸಿಕ್ಕಿರುವುದಿಲ್ಲ. ಅವುಗಳು ಬೆಳಕಿಗೆ ಬಂದರೆ ಈ ಪುಸ್ತಕದ ಬೆಲೆಯು ಇನ್ನೂ ಹೆಚ್ಚುವುದರಲ್ಲಿ ಸಂದೇಹವಿಲ್ಲ.

Mysore
5—3—56

(Sd) **R. Seshadri**
Asst. Director of Archaeology.

# ಐವತ್ತಿಬ್ಬರಾದ ಶ್ರೀವೈಷ್ಣವರುಗಳು ಮತ್ತು ಅವರ ಊಳಿಗ ಕೈಂಕರ್ಯಗಳೂ

| ಸ್ಥಾನ | ಕೈಂಕರ್ಯಪರರು | ಭಾಗ | ಸ್ವಂತವಾಗಿಮಾಡುವ ಕೈಂಕರ್ಯ | ಇತರರಿಂದ ಮಾಡಿಸತಕ್ಕ ಕೈಂಕರ್ಯ | ಮೊತ್ತ |
|---|---|---|---|---|---|
| ೧೦ | ಔಪಗಾಯನಗೋತ್ರ, ಕಾತ್ಯಾಯನ ಸೂತ್ರ, ಶುಕ್ಲ ಯಜುಶ್ಶಾಖೆ. **ಶ್ರೀರಂಗರಾಜಭಟ್ಟಾಚಾರ್ಯರು** | ೫ | 1. ತಿರುವಾರಾಧನ 2. ಮಾತ್ರಾದಾನ, 3. ಚಾಮರ 4. ತೀರ್ಥ, ಶಠಕೋಪ ಮಾಲೆ, ಪರಿವಟ್ಟ, ತುಳಸಿಯಪ್ರಸಾದ 5. ಬೀಗಮುದ್ರೆ, 6. ಮಧುಪರ್ಕ. | 1. ಸ್ವಯಂಪಾಕ 2. ವ್ಯದ್ಯಾಂಡ 3. ಅಲಂಕಾರ, ಬೊಕ್ಕಸ 4. ನೈವೇದ್ಯವನ್ನು ಕರೆಸುವುದು | ೧೦ |
| ೨ | ವಾಸಿಷ್ಠಗೋತ್ರ, ಜೈಮಿನಿಸೂತ್ರ, ಸಾಮಶಾಖೆ, (ಅನಂತಭಟ್ಟರು) **ತಿರುವನಂತಪುರದಾಸರು** | ೪ | 1. ಒಳಪರಿಚಾರಿಕೆ, 2. ಕರಗ 3. ಅಡಪ, 4. ಪಂಮಳ, 5. ಕನ್ನಡಿ 6. ವೈದ್ಯ, 7. ತೆರೆ. | 1. ಋಗ್ವೇದ ಪಾರಾಯಣ 2. ನೃತ್ತಗೀತ, ತೆರೆ, ಭೇರಿ | ೯ |
| ೩ | ಕೌಂಡಿನ್ಯಗೋತ್ರ, ಬೋಧಾಯನಸೂತ್ರ ಯಜುಶ್ಶಾಖೆ **ಮಾಲಾಕಾರದಾಸರು** | ೪ | 1. ಒಳಬೊಕ್ಕಸ, 2. ಕುಂಚ 3. ಬೀಸಣಿಗೆ, 4. ಯಜ್ಞೋಪವೀತ, 5. ಮಾಲೆ. | 1. ಯಜುರ್ವೇದ 2. ಜ್ಯೋತಿಷ 3. ಚರ್ಮವಾದ್ಯ | ೮ |
| ೪ | ವಾಸಿಷ್ಠಗೋತ್ರ, ಜೈಮಿನಿಸೂತ್ರ, ಸಾಮಶಾಖೆ **ತಿರುಕ್ಕುರಂಗುಡಿದಾಸರು** | ೪ | 1. ಹಾಡುವುದು, ಸ್ತೋತ್ರ, 2. ಪೊಂಬೆಳ್ಳಿ ಕಟ್ಟಿಗೆ, 3. ಪ್ರಸಾದವಿನಿಯೋಗ, 4. ದೇವಸ್ಥಾನದ ಅಲಂಕಾರ. 5. ಗಂಧವನ್ನು ತೇಯುವುದು, 6. ಛತ್ರಿ. | 1. ಸಾಮವೇದ 2. ಶಂಖ, ತಪ್ಪಟೆವಾದ್ಯಗಳು | ೮ |
| ೫ | ಭಾರ್ಗವಗೋತ್ರ, ಜೈಮಿನಿಸೂತ್ರ ಸಾಮಶಾಖೆ **ಯತಿರಾಜದಾಸರು** (ವಿಷ್ವಕ್ಸೇನಭಟ್ಟರು) | ೪ | 1. ದೀವಿಗೆ, ನೀರಾಜನ, 2. ಪಡಿ, 3. ಕಾಳಾಂಜಿ 4. ಗುಡಿಸುವುದು 5. ಚಂದನವಿನಿಯೋಗ 6. ಹೊರ ಪರಿಚಾರಕ. | 1. ಅಥರ್ವಣವೇದ 2. ಮಣಿಯ | ೮ |
| ೬ | ಭಾರದ್ವಾಜಗೋತ್ರ, ಆಶ್ವಲಾಯನ ಸೂತ್ರ, ಋಕ್‌ಶಾಖೆ **ಶಠಕೋಪದಾಸರು** (ಮಾರನಂಬಿ) | ೪ | 1. ತೇರು, 2. ವಾಹನ, 3. ಇಲಾಲಿ, 4. ಶ್ರೀಪಾದಸೇವೆ, 5. ಕಾಮಗಾರಿ. | 1. ಪಾಲಿಗಂಟೆ 2. ದೀವಟಿಗೆ, ಶಿದ್ದಿಗೆ | ೭ |
| | ಶಠಮರ್ಷಣಗೋತ್ರ, ಆಪಸ್ತಂಭಸೂತ್ರ, ಯಜುಶ್ಶಾಖೆ, **ತಿರುವಾಳಿಅಣ್ಣನ್** | ೨ | 1. ದೇಶಾಯಿ ಆಜ್ಞೆನಡೆಸುವುದು, ರತ್ನಭಂಡಾರ, ಸರಸ್ವತೀ ಭಂಡಾರ. | | ೧ |
| | ಮೌದ್ಗಲ್ಯಗೋತ್ರ, ದ್ರಾಹ್ಯಾಯಣ ಸೂತ್ರ, ಸಾಮಶಾಖೆ **ಪೋರೇಟ್ರು ನಾಯನಾರ್ರು** | ೨ | 1. ಶ್ರೀಭಂಡಾರ, ರತ್ನಭಂಡಾರ, ಚಿನ್ನಬೆಳ್ಳಿಯ ಸ್ವರೂಪಗಳು, ದೇವಾಲಯದ ಲೆಕ್ಕ. | | ೧=೫೨ |
| | ವಾಧೂಲಗೋತ್ರ,ಆಪಸ್ತಂಭಸೂತ್ರ, ಯಜುಶ್ಶಾಖೆ, **ತಿರುನಾರಾಯಣಪ್ಪೆರುಮಾಳ್** | ೨ | ದೇವರನಾಮವನ್ನು ಹೇಳುವುದು ಬಿನ್ನಪಂಗ್ಯೆಯ್ವುದು (ಅರಯರು) | | |
| ೧ | **ದೇವಸ್ಥಾನ ವಿಚಾರಣಕರ್ತ ದೇಶಾಯಿ ತಿರುನಾರಾಯಣ ಜೀಯರು** | ೫ | 1. ಮಜ್ಜನ, 2. ರಾಮಾನುಜಮುದ್ರೆ ಯುಂಗುರ, 3. ಸಿರಿವಣ್‌ಕಾಣಿಕೆ ಬಟ್ಟಲು, 4. ಎಂಬೆರುಮಾನಾರ್ರ ಸನ್ನಿಧಿಯಲ್ಲಿ ತಿರುವಾರಾಧನ. | 1. ರಸವ್ಯಂಜನ, ಎಣ್ಣೆ, ತುಪ್ಪಗಳನ್ನು ಇರಿಸುವುದು ಉಗ್ರಾಣಗಳು– | ೫ |
| ೬ | ಅಂಶಕ್ಕೆ ಭಾಗ | ೩೬ | | ಊಳಿಗಕೈಂಕರ್ಯಗಳು ಮೊತ್ತ | ೫೭ |

ಊಳಿಗ ಕೈಂಕರ್ಯದ ವಿವರವನ್ನು ತಿಳಿಯಲು ಇದೇ ಗ್ರಂಥಕಾರರು ಪ್ರಕಾಶಪಡಿಸಿರುವ ಜೀರ್ಣೋದ್ಧಾರ ಮತ್ತು ಶಾಸನಗಳು ಎಂಬ ಪುಸ್ತಕದಲ್ಲಿ ಕಾಣಬಹುದು.

ಶ್ರೀಃ



ಶ್ರೀಮತೇ ರಾಮಾನುಜಾಯ ನಮಃ

ನಾರಾಯಣಾಚಲೋತ್ತುಙ್ಗ ಶೃಙ್ಗ ಶೃಙ್ಗಾರಮೂರ್ತಯೇ ।
ರಾಮಾನುಜಾರ್ಯಪುತ್ರಾಯ ಸಂಪತ್ಪುತ್ರಾಯ ಮಂಗಳಂ ॥

ಶ್ರೀರಂಗಮಂಗಳಮಣಿಂ ಕರುಣಾನಿವಾಸಂ ।
ಶ್ರೀವೇಂಕಟಾದ್ರಿ ಶಿಖರಾಲಯ ಕಾಲಮೇಘಂ ।
ಶ್ರೀಹಸ್ತಿಶೈಲ ಶಿಖರೋಜ್ವಲ ಪಾರಿಜಾತಂ ।
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ ॥

# ತಿರುನಾರಾಯಣಪುರದ (ಮೇಲುಕೋಟೆ) ವೈಭವವು

ಶ್ರಿಯಃಪತಿಯಾದ ಕೃಪಾಪರತಂತ್ರನಾಗಿರುವ ಸರ್ವೇಶ್ವರನು, ಅಚಿತ್ಕಲ್ಪರಾಗಿ ಬಿದ್ದಿದ್ದ ಚೇತನರಿಗೆ ಕರಣಕಳೇಬರಗಳನ್ನು ದಾನಮಾಡಿ. ಅಜ್ಞಾನವೆಂಬ ಕತ್ತಲೆಯನ್ನು ನೀಗಿಸಿ, ಒಳ್ಳೆಯದು, ಕೆಟ್ಟುದು ಎಂಬ ವಿವೇಕವುಂಟಾಗುವುದಕ್ಕೋಸ್ಕರ ಶಾಸ್ತ್ರವೆಂಬ ಬೆಳಕನ್ನು ಕೊಟ್ಟರೂ ಕಾರ್ಯಕರವಾಗದಿರುವುದನ್ನು ಕಂಡು, ರಾಮಕೃಷ್ಣಾದ್ಯವತಾರಗಳನ್ನು ಮಾಡಿ, ತನ್ನ ಉಪದೇಶದಿಂದಲೂ, ನಡೆವಳಿಕೆಯಿಂದಲೂ ಮನಸೋತು, ತನ್ನನ್ನು ಹೊಂದಿ ಬಾಳತಕ್ಕ ರೀತಿಗಳನ್ನು ತೋರಿಸಿ ಅನುಗ್ರಹಿಸಿದನು. ಅದೂ ಕೆಲವರಿಗೆ ಕಾಲದೇಶಾದಿಗಳಿಂದ ಸಿಕ್ಕದೆಯೂ, ಮತ್ತೆ ಕೆಲವರಿಗೆ ಪ್ರಾಕೃತ ಸಂಬಂಧ ವಿಶೇಷದಿಂದುಂಟಾದ ಅನಾದರಣೆಯಿಂದಲೂ, ಇನ್ನು ಕೆಲವರಿಗೆ ಅಜ್ಞಾನದಿಂದಲೂ ಬೇರೆ ವಿಧವಾದ ಭಾವನೆಯುಂಟಾಗಿ ಪ್ರಯೋಜನವಾಗದೆ ಹೋಯಿತು.

ಇದನ್ನು ನೋಡಿ ತಾನು ಎಲ್ಲಾ ಕಡೆಗಳಲ್ಲಿಯೂ ಅಂತರ್ಯಾಮಿಯಾಗಿ ನಿಂತಿರುವ ನೆಲೆಯನ್ನು ಕಣ್ಣಿಗೆ ತೋರಿಸುವುದಕ್ಕಾಗಿ, ಚೇತನರು ಅವರವರ

ಗೊತ್ತಾಗದೆ, ಭವಿಷ್ಯಧಾಚಾರ್ಯಮುಖದಿಂದ ಸ್ಪಷ್ಟಪಡುವುದೆಂಬ ಕಾರಣದಿಂದ ನಾಥಮುನಿಗಳ ಕಾಲದಿಂದ ಹಿಡಿದು ಯಾಮುನಮುನಿಗಳ ಕಾಲದವರೆಗೂ (ಆಳವಂದಾರವರ) ರಹಸ್ಯವಾಗಿಯೇ ಇದ್ದಿತು.

ತರುವಾಯ ಚೇತನರ ಭಾಗ್ಯವಿಶೇಷದಿಂದ ಶ್ರೀರಾಮಾನುಜಾಚಾರ್ಯರವರು ಅವತರಿಸಿದವರಾಗಿ ಯಾಮುನಮುನಿಗಳ (ಆಳವಂದಾರವರ) ಕಟಾಕ್ಷದಿಂದ ರಹಸ್ಯಾರ್ಥಗಳನ್ನು ಅಧಿಕರಿಸಿ, ಶ್ರೀಭಾಷ್ಯವನ್ನು ರಚನೆಮಾಡಿ, ವಿಶಿಷ್ಟಾದ್ವೈತ ದರ್ಶನವನ್ನು ನಿರ್ವಾಹಮಾಡಿಕೊಂಡು ಇರುತ್ತಿದ್ದರು. ಆಗ ಅವರಿಗೆ ಕ್ರಿಮಿಕಂಠ ಚೋಳನಿಂದ ಬಾಧೆ ತಟ್ಟಲು, ಅದನ್ನೇ ನೆಪಮಾಡಿಕೊಂಡು ಶ್ವೇತವಸ್ತ್ರಧರರಾಗಿ ಕಾವೇರಿಯಿಂದ ಅಲಂಕೃತವಾದ ಹೊಯ್ಸಳದೇಶವೆಂಬ ಈ ಮೇಲುನಾಡಿಗೆ ಶಾಲಿ. ಶ. ೧೦೨೦ ಸಂದು ವರ್ತಮಾನ ಬಹುಧಾನ್ಯ ಸಂವತ್ಸರದಲ್ಲಿ ಬಿಜಯಮಾಡಿಸಿದರು

ಅನಂತರ ಪದ್ಮಗಿರಿಯಲ್ಲಿ ಬೌದ್ಧ ಸಮಯವನ್ನು ಜಯಿಸಿ ತಮ್ಮ ಸಿರಿಯಡಿಗಳನ್ನು ಆಶ್ರಯಿಸಿದ **ವಿಷ್ಣುವರ್ಧನ** ಮಹಾರಾಜನಿಗೆ ತಪ್ತ ಚಕ್ರಾಂಕನವನ್ನು ಮಾಡಿ ತಮ್ಮ ಶಿಷ್ಯನನ್ನಾಗಿಮಾಡಿಕೊಂಡರು. ಈ ಕಾಲದಲ್ಲಿ ನಾರಾಯಣಾದ್ರಿ ಯಾದವಾದ್ರಿ ಎಂಬ (ತಿರುನಾರಾಯಣಪುರ) ಈ ದಿವ್ಯಕ್ಷೇತ್ರವು ಜೀರ್ಣವಾಗಿ ದೇವರು ಆನಂದಮಯ ವಿಮಾನದೊಂದಿಗೆ ಹುತ್ತದಲ್ಲಿರುವುದನ್ನು ಸ್ವಪ್ನ ಮುಖೇನ ತಿರುನಾರಾಯಣ ದೇವರಿಂದಲೇ ತಿಳಿದು ಈ ವಿಚಾರವನ್ನು ಅಲ್ಲಿಯ ರಾಜನಾದ ವಿಷ್ಣುವರ್ಧನರಾಯನಿಗೆ ಹೇಳಿಕಳುಹಿಸಿ ಅವನ ಸಹಾಯದಿಂದ ಜೀರ್ಣೋದ್ಧಾರ ಕಾರ್ಯವನ್ನು ಬಹುಧಾನ್ಯಸಂವತ್ಸರ ಮಾಘಶುದ್ಧ ಸ್ಥಿರವಾರ ರೇವತೀನಕ್ಷತ್ರದಲ್ಲಿ ಆರಂಭಿಸಿದರು. ಜೀರ್ಣೋದ್ಧಾರಕಾರ್ಯವು ನಡೆದು ಶಾ. ಶ. ೧೦೨೦ ಬಹುಧಾನ್ಯ ಸಂ|| ಮಾಘ ಶುದ್ಧ ತ್ರಯೋದಶೀ ಆದಿವಾರ (ಗುರುವಾರ) ಪುನರ್ವಸುನಕ್ಷತ್ರದ ದಿನ ಶ್ರೀನಾರಾಯಣಸ್ವಾಮಿಯವರ ಮೇಲೆ ಬೆಳೆದಿದ್ದ ಹುತ್ತವನ್ನು ಕರಗಿಸಿ "ಪಹಲ್‌ಕಂಡೇನ್ ನಾರಣನ್ನೈ ಕಂಡೇನ್" ಎಂದು ದೇವರನ್ನು ಕಂಡು ಆದಿನ ವಿಷ್ಣುವರ್ಧನ ಮಹಾರಾಜನನ್ನು ಕರೆಸಿ ಮಹಾರಾಜನಿಗೆ ದೇವರ ಸೇವೆಯನ್ನು ಪಾಂಚರಾತ್ರವಿಧಾನದಲ್ಲಿ ಮಾಡಿಸಿ ಬಹಳ ಸಂತೋಷಪಟ್ಟು ಪರಾಂಕುಶ ಮುನಿಗಳ (ನಮ್ಮಾಳ್ವಾರ್ರವರ) ಅಭಿಪ್ರಾಯದಂತೆ ಒರುನಾಯಕಂ ಎಂಬ ಹತ್ತು ಪಾಶುರ (ಹಾಡು) ಗಳನ್ನು ಈ ದೇವರ ವಿಷಯವಾಗಿ ಸಮರ್ಪಿಸಿ ಅದರಲ್ಲಿ ವಿವರಿಸಿರುವ ಮೇರೆಗೆ ಆ ದೇವರಿಗೆ ತಿರುನಾರಾಯಣನೆಂದೂ ಆ ದಿವ್ಯದೇಶಕ್ಕೆ ತಿರುನಾರಾಯಣಪುರವೆಂದೂ ಹೆಸರನ್ನಿಟ್ಟರು. ಅನಂತರ ಮಹಾರಾಜನಿಗೆ ಆದಿನಾರಾಯಣ ಸ್ವಾಮಿಯವರ ಮಹಾತ್ಮ್ಯೆಯನ್ನು ವಿಸ್ತಾರವಾಗಿ ಹೇಳಿ ಜೀರ್ಣವಾಗಿದ್ದ ದೇವಸ್ಥಾನದ ಗುಡಿಗೋಪುರ ಪ್ರಾಕಾರ ಅಂಗರಂಗವೈಭವ ಆರೋಗಣೆಕಟ್ಟಳೆ ಈ ಸಕಲಧರ್ಮವೂ

ಮಹಾರಾಜನ ಕೈಂಕರ್ಯವಾಗಿ ಮಾಡಬೇಕೆಂದು ತಿಳಿಸಿದರು. ವಿಷ್ಣುವರ್ಧನ ಮಹಾರಾಜರು ಶ್ರೀರಾಮಾನುಜಾಚಾರ್ಯರು ತಿಳಿಸಿದ ರೀತಿಯಲ್ಲಿ ಸಕಲವಾದ ಗುಡಿ ಗೋಪುರ ಪ್ರಾಕಾರ ಮುಂತಾದುವುಗಳನ್ನು ಕಟ್ಟಿಸುವುದಕ್ಕೆ ಅನುಕೂಲ ದ್ರವ್ಯನಾಣ್ಯ ಗದ್ಯಾಣ ೫೦,೦೦೦ ಐವತ್ತುಸಾವಿರವನ್ನು ಕೊಟ್ಟು ತನ್ನ ಮನುಷ್ಯ **ವೆಂಕಟಾದ್ರಿನಾಯಕ**ರನ್ನು ಇರಿಸಿ ಮಾಘಬಹುಳ ಸಪ್ತಮಿ ಮಂಗಳವಾರ ತೊಂಡನೂರಿಗೆ ಹಿಂತಿರುಗಿದರು.

ಶ್ರೀರಾಮಾನುಜಾಚಾರ್ಯರು ವೆಂಕಟಾದ್ರಿನಾಯಕರನ್ನು ಕರೆದು ಸಕಲ ವಾದಕೆಲಸವನ್ನೂ ಮಾಡಹೇಳಿದಮೇರೆ ವೆಂಕಟಾದ್ರಿನಾಯಕರು ಸಕಲವಾದ ಕೆಲಸದವರನ್ನೂ ಕರೆತರಿಸಿ "ಎಲ್ಲವೂ ಸಿದ್ಧವಾಗಿದೆ" ಎಂದು ತಿಳಿಸಲು ರಾಮಾನುಜಾಚಾರ್ಯರು ತಿಥಿ, ವಾರ, ನಕ್ಷತ್ರ, ಯೋಗ ಕರಣ ಮುಹೂರ್ತವನ್ನು ನಿಧಾನಿಸಿ ಫಾಲ್ಗುಣಶುದ್ಧ ೧೩ ಶುಕ್ರವಾರ ಹಸ್ತ ನಕ್ಷತ್ರ ವೃಷಭಲಗ್ನದಲ್ಲು, ದೇವಸ್ಥಾನವನ್ನು ಕಟ್ಟಿಸುವುದಕ್ಕೆ ಮುಹೂರ್ತಮಾಡಿಸಿದರು—

## ದೇವಸ್ಥಾನ ಕಟ್ಟಡದ ವಿವರ

| | ಅಂಕಣ |
|---|---|
| ಸುಕನಾಸಿ | ೧ |
| ಕತ್ತಲಪ್ರದಕ್ಷಿಣೆ | ೨ |
| ರಂಗಮಂಟಪ | ೫ |
| ರಂಗಮಂಟಪದ ಬಾಗಿಲ ಮುಂದಣಸ್ಥಳ | ೪ |
| ತೆಂಕಲಬಾಗಿಲ ಮುಂದಣಸ್ಥಳ | ೧ |
| ತಿರುಮಡಪ್ಪಳ್ಳಿ | ೨ |
| ಚಕ್ರತ್ತಾಳ್ವಾರ್ ಸನ್ನಿಧಿ | ೭ |
| ಉಗ್ರಾಣ | ೮ |
| ಅಮ್ಮನವರ ಸನ್ನಿಧಿ | ೭ |
| ಅಮ್ಮನವರ ತಿರುಮಡಪಳ್ಳಿ | ೩ |
| ಯಾಗಶಾಲೆ | ೯ |
| ಗುಡಿಬಾಗಿಲು ಗೋಪುರ | ೮ |
| ಗೋಪುರಬಾಗಿಲು ಮುಂದಣ ಕೈಸಾಲೆ | ೧೦ |
| ಚಾವಡಿ | ೫ |
| ಮೊತ್ತ ಅಂಕಣ | ೧೫೯ |

# ದೇವಸ್ಥಾನ ಕಟ್ಟಡದ ವಿವರ

| | | ಗದ್ಯಾಣ |
|---|---|---|
| ೧. | ತಳಗಣ ಗುಂಡಾಂತರ ಪಂಚಾಂಗದ ಜಗತಿ, ಸವಡುಭಿತ್ತಿ ಗೋಡೆ, ಕೋಟೆಬಾಗಿಲುಗಳು, ನೆಲಕ್ಕೆ ಪಾಸಾಲೆಗಾರೆ ಕೆಲಸ, ಟಾಕಿಗೂಡು ಇವುಗಳಿಗೆ— | ೧೬೧೫೨ |
| ೨. | ದೇವಸ್ಥಾನದ ಮುಂದೆ ಸ್ವಾಮಿಯವರು ಬಿಜಯಮಾಡಿಸುವುದಕ್ಕೆ ಮಂಟಪ ೨ ಕ್ಕೆ ಅಂಕಣ ೪ ರ ಗಾರೆಕೆಲಸ ಸಹ— | ೨೦೦ |
| ೩. | ದೀಪಾಲೆ ಕಂಬಕ್ಕೆ— | ೧೨೨–೪ |
| ೪. | ಹನುಮಂತದೇವರ ದೇವಸ್ಥಾನದ ಅಂಕಣ ೮ ಕ್ಕೆ ಗಾರೆಸಹ | ೭೩ |
| ೫. | ಈ ಗುಡಿಮುಂದೆ ಗೋಪುರ ಕಟ್ಟಿಸುವುದಕ್ಕೆ ಬಂಗಾರ ಅಂಕಣ ೮ ಕ್ಕೆ ಗುಂಡಾಂತರ ಸವಡುಭಿತ್ತಿ ಸಹ— | ೯೭೯–೪ |
| ೬. | ಸೀತಾರಣ್ಯದ ರಾಮುಸಾಮ್ವಿ ದೇವಸ್ಥಾನದ ಅಂಕಣ ೭ ಕ್ಕೆ ಗಾರೆ ಕೆಲಸ ಸಹ | ೪೦–೬ |
| ೭. | ಕಲ್ಯಾಣೀ ಕೆಲಸಕ್ಕೆ ಮುಟ್ಟಿದ್ದು— | ೨೫೩೯ |
| ೮. | ಬೆಟ್ಟದ ನರಸಿಂಹಸ್ವಾಮಿಯವರ ದೇವಸ್ಥಾನದ ಅಂಕಣ ೩೮ ಕ್ಕೆ ಗೋಪುರ ೧, ಸವಡುಭಿತ್ತಿಗೋಡೆ, ಕೋಟೆ, ನೆಲಕ್ಕೆ ಪಾಸಾಲೆಗಾರೆ, ದ್ವಾರಪಾಲಕರು ಸಹ— | ೫೪೭೦ |
| | ? .... ? .... | ೩೪೪ |
| | ಮೊತ್ತ ಗದ್ಯಾಣ | ೨೫೯೧೯ |

# ಗ್ರಾಮ ಜೀರ್ಣೋದ್ಧಾರ ಖರ್ಚು

| | | |
|---|---|---|
| ೧. | ಅರಣ್ಯವಾಗಿದ್ದ ಮರಗಳಕಡಿದು ನೆಲಸಮನಮಾಡಿ, ಬೀದಿವಾಡ ಮಾಡಿ ಊರು ಕಟ್ಟಿದ್ದಕ್ಕೆ ಮುಟ್ಟಿದ್ದು— | ೧೭೫೦ |
| ೨. | ಸಂಪ್ರೋಕ್ಷಣೆಗೆ— | ೧೨೧೫ |

| | | |
|---|---|---|
| ೩. | ಉಡುಗೊರೆ, ಉಚಿತಗಳಿಗೆ— | ೩೫೦ |
| ೪. | ಸ್ವಾಮಿಯವರ ಆರೋಗಣೆ ಕಟ್ಲೆ ಕಂದಾಚಾರ ಸಹ.... | ೬೪೨೦ |
| ೫. | ? ? .... | ೨೧ |
| | ಮೊತ್ತ ಖರ್ಚು ಗದ್ಯಾಣ...., | ೩೫೬೭೫ |
| | ನಿಲವು.... | ೧೪೩೪೪ |
| | ಮೊತ್ತ ಗದ್ಯಾಣ.... | ೫೨೦೧೯ |

ಈ ರೀತಿಯಲ್ಲಿ ಗುಡಿಗೋಪುರ ಪ್ರಾಕಾರಾದಿಗಳನ್ನೂ, ಗ್ರಾಮ ಜೀರ್ಣೋದ್ಧಾರವನ್ನೂ ಮಾಡಲು ಸ್ವಭಾನು ಸಂವತ್ಸರದ ವೈಶಾಖ ಬಹುಳ ಪಂಚಮಿ ವರೆಗೆ (ಕ್ರಿ. ಶ. 1103) ವರುಷ ೪, ತಿಂಗಳು ೨, ದಿನ ೧೧ ಗಳಾದುವು.

ಈ ರೀತಿಯಲ್ಲಿ ಜೀರ್ಣೋದ್ಧಾರ ಕೆಲಸಮಾಡಿಸಿ ವೆಂಕಟಾದ್ರಿನಾಯಕರು ರಾಮಾನುಜಾಚಾರ್ಯರ ಅಪ್ಪಣೆಯನ್ನು ತೆಗೆದುಕೊಂಡು ವಿಷ್ಣುವರ್ಧನ ಮಹಾರಾಜರಲ್ಲಿ ಹೋಗಿ "ಗುಡಿಗೋಪುರ ಪ್ರಾಕಾರ ಕಟ್ಟ ಮುಗಿಯಿತು" ಎಂದು ಬಿನ್ನಹ ಮಾಡಿದರು. ವಿಷ್ಣುವರ್ಧನ ಮಹಾರಾಜರು ತಮ್ಮ ಮನುಷ್ಯರನ್ನು ಕಳುಹಿಸಿ ರಾಮಾನುಜಾಚಾರ್ಯರನ್ನು ಕರೆತರಿಸಿಕೊಂಡು "ಸಕಲವಾದ ಸೇವೆಯೂ ಆಯಿತೆ?" ಎಂದು ಕೇಳಲಾಗಿ "ಸಕಲವಾದ ಸೇವೆಯೂ ಆಯಿತು. ಆದಿನಾರಾಯಣಸ್ವಾಮಿಯವರಿಗೆ ನಿತ್ಯ ಕಟ್ಲೆಯಲ್ಲೂ ಆರಾಧನೆಸೇವೆ ನಡೆಯುವ ಹಾಗೆ ಆಗಬೇಕು" ಎಂದು ಹೇಳಲು ವಿಷ್ಣುವರ್ಧನ ಮಹಾರಾಜರು ಆದಿನಾರಾಯಣಸ್ವಾಮಿಯವರಿಗೆ ಪಡಿತರ ದೀಪಾರಾಧನೆ ನಡೆಯುವುದಕ್ಕೆ ಗ್ರಾಮಭೂಮಿಶೀಮೆಗಳನ್ನು ಕೊಟ್ಟು ರಾಮಾನುಜಾಚಾರ್ಯರಿಗೆ ಮಠವನ್ನು ಕಟ್ಟಿಕೊಡುವ ರೀತಿಗೆ ತಮ್ಮ ಮನುಷ್ಯರಿಗೆ ಕಟ್ಲೆಯನ್ನು ಮಾಡಿಸಿ ರಾಮಾನುಜಾಚಾರ್ಯರನ್ನು ತಿರುನಾರಾಯಣಪುರಕ್ಕೆ ಕಳುಹಿಸಿದರು.

---

## ದೆಹಲಿ ಪಟ್ಟಣಕ್ಕೆ ಪ್ರಯಾಣ

ಶ್ರೀ ರಾಮಾನುಜಾಚಾರ್ಯರು ತಿರುನಾರಾಯಣಪುರಕ್ಕೆ ಚಿತ್ತೈಸಿ ನಾರಾಯಣಸ್ವಾಮಿಯವರಿಗೆ ಅಂಗರಂಗವೈಭವ ಆರೋಗಣೆ ಕಟ್ಲೆಯನ್ನು ನಡೆಸಿ ಬರುವಲ್ಲಿ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವ ರಥೋತ್ಸವ ಮುಂತಾದ ಸಕಲ

ಸೇವೆಯೂ ನಡೆಯಬೇಕು. ಉತ್ಸವ ವಿಗ್ರಹವಿಲ್ಲವಲ್ಲಾ ಎಂದು ಯೋಚಿಸಿರುವಲ್ಲಿ ಸ್ವಾಮಿಯು ರಾಮಾನುಜಾಚಾರ್ಯರ ಸ್ವಪ್ನದಲ್ಲಿ " ನಾವು ದೆಹಲಿ ಪಟ್ಟಣದಲ್ಲಿದ್ದೇವೆ ನೀವು ಬಂದು ಬಿಜಯಮಾಡಿಸಿಕೊಂಡು ಬನ್ನಿ " ಎಂದು ಸ್ವಪ್ನವಾಗಲಾಗಿ ರಾಮಾನು ಜಾಚಾರ್ಯರು ಸಕಲವಾದ ಮಂದಿಸಹಿತವಾಗಿ ವ್ಯಯ ಸಂವತ್ಸರದ ಚೈತ್ರಶುದ್ಧ ೩ ರಲ್ಲು ಡೆಲ್ಲಿ ಪಟ್ಟಣಕ್ಕೆ ಪಯಣ ಹೊ ರ ಟು ಡೆಲ್ಲಿ ಅಮ್ಮಾಳುರಾಯನನ್ನು ಕಾಣಿಸಿಕೊಂಡು " ನಮ್ಮ ಸ್ವಾಮಿ ಇಧಾರೆ ಬಿಜಯಮಾಡಿಸಿಕೊಡು " ಎಂದು ಕೇಳಲಾಗಿ ಅದಕ್ಕೆ ಅಮ್ಮಾಳುರಾಯನು " ತಮ್ಮ ಮನೆಯಲ್ಲಿ ಬೇಕಾದಷ್ಟು ವಿಗ್ರಹಗಳಿವೆ. ಅದರಲ್ಲಿ ನಿಮ್ಮ ವಿಗ್ರಹವನ್ನು ನೋಡಬಹುದು " ಎಂದು ತನ್ನ ಮನುಷ್ಯರನ್ನು ಕೂಡಲಿಟ್ಟು ಕಳುಹಿಸಿದನು. ರಾಮಾನುಜಾಚಾರ್ಯರು ಆ ವಿಗ್ರಹಗಳನ್ನು ನೋಡಿ "ಈ ವಿಗ್ರಹಗಳಲ್ಲಿ ನಮ್ಮ ಸ್ವಾಮಿಯು ಇಲ್ಲವಲ್ಲಾ " ಎಂದು ಅಮ್ಮಾಳುರಾಯನಿಗೆ ತಿಳಿಸಲು " ನಿನ್ನ ಶಕ್ತಿಯುಂಟಾದರೆ ನಿಮ್ಮ ದೇವರು ಎಲ್ಲಿದ್ದಾಗ್ಯೂ ಕರೆದುಕೊಂಡುಹೋಗು. " ಎಂದು ಹೇಳಲು ರಾಮಾನುಜಾಚಾರ್ಯರು ನದೀತೀರಕ್ಕೆ ಬಂದು ಸ್ನಾನಮಾಡಿ ಜ್ಞಾನನಿಷ್ಠರಾಗಿ " ರಾಮಪ್ರಿಯಾ " ಎಂದು ನಾಟ್ಯವನ್ನಾಡಿಕೊಂಡು ಅಮ್ಮಾಳುರಾಯನ ಅರಮನೆಯ ಮುಂದಕ್ಕೆ ಹೋಗಲು ಅರಮನೆಯೊಳಗೆ ಮಹಾರಾಜನ ಮಗಳು ವರನಂದಿ ಪೂಜೆಮಾಡಿಕೊಂಡು ಇದ್ದ ಚೆಲುವರಾಯಸ್ವಾಮಿಯು ಎದುರಾಗಿ ನಾಟ್ಯವನ್ನಾಡಿಕೊಂಡು ರಾಮಾನುಜಾ ಚಾರ್ಯರ ಬಳಿಗೆ ಚಿತ್ತೈಸಲಾಗಿ ರಾಮಾನುಜಾಚಾರ್ಯರು ಚೆಲುವರಾಯ ಸ್ವಾಮಿಯನ್ನು ಬಿಜಯಮಾಡಿಸಿಕೊಂಡು ಬರುತ್ತಾ ಇದ್ದರು. ವರನಂದಿಯು ತಂದೆಯ ಬಳಿಗೆ ಹೋಗಿ " ತಾನು ಪೂಜೆಮಾಡುತ್ತಿದ್ದ ಸ್ವಾಮಿಯು ತನ್ನಲ್ಲಿ ತಾನೇ ನಡೆದುಹೋಗಿ ಒಬ್ಬ ಸನ್ಯಾಸಿಯ ಸಂಗಡ ಹೋಗುತ್ತಾ ಇದ್ದಾನೆ ಆ ಸ್ವಾಮಿ ಯನ್ನು ಕೊಡಿಸದಿದ್ದರೆ ತನ್ನ ಪ್ರಾಣವನ್ನು ಹತಮಾಡಿಕೊಳ್ಳುತ್ತಾ ಇದ್ದೇನೆ " ಎಂದು ತನ್ನ ತಂದೆಯ ಮುಂದೆ ಹೇಳಿಕೊಳ್ಳಲು ಆಗ ರಾಮಾನುಜಾಚಾರ್ಯರನ್ನು ಕರೆತರಿಸಿಕೊಂಡು " ತನ್ನ ಮಗಳು ವರನಂದಿಯು ಸ್ವಾಮಿಯ ಸಂಗಡಲೇ ಬರುವೆ ನೆಂದು ಹೇಳುತ್ತಾಳೆ " ಎಂದು ರಾಮಾನುಜಾಚಾರ್ಯರನ್ನು ಕೇಳಲಾಗಿ " ನಿನ್ನ ಮನಸ್ಸಿಗೆ ಸರಿಬಂದು ಇದ್ದರೆ ಕಳುಹಿಸಿಬಿಡು " ಎಂದು ಹೇಳಿದರು. ಮಹಾ ರಾಜನು ತನ್ನ ಮಗಳನ್ನು ಕರೆದು " ಸರ್ವದಾ ಸ್ವಾಮಿಯ ಜೊತೆಯಲ್ಲಿ ಹೋಗು ವಿಯಾ " ಎಂದು ಕೇಳಲಾಗಿ " ಸ್ವಾಮಿಯು ಸಂಗಡ ಕಳುಹಿಸದೆ ಉಳಿದರೆ ತನ್ನ ಪ್ರಾಣವನ್ನು ಹತಮಾಡಿಕೊಳ್ಳುತ್ತೇನೆ " ಎಂದು ಹೇಳಲು " ನೀನು ಏತಕ್ಕೆ ಪ್ರಾಣಹತಮಾಡಿಕೊಳ್ಳುವಿ ಸ್ವಾಮಿಯ ಸಂಗಡಲೇ ಹೋಗು " ಎಂದು ಪ್ರಯಾಣಮಾಡಿಸಿ ತನ್ನ ಮಗಳು ಕೇಳಿದಂಥಾ ಒಡವೆ, ದ್ರವ್ಯ, ಪರಿಜನ ಮತ್ತು ಬಂಕ ನಗರವೆಂಬ ಸೀಮೆಯನ್ನು ಕೊಟ್ಟುಕಳುಹಿಸಿದನು. ರಾಮಾನುಜಾಚಾರ್ಯರು ಚೆಲುವರಾಯಸ್ವಾಮಿಯವರು, ವರನಂದಿಯು ಸ ಕ ಲ ರೂ ಪ್ರಯಾಣಮಾಡಿ

*ಬಂಕಾನಗರಕ್ಕೆ ಬಂದು ಶಿಲಾ ಪ್ರತಿಷ್ಠೆಮಾಡಿಸಿ ತಿರುನಾರಾಯಣಪುರಕ್ಕೆ ವಿಕೃತಿ ಸಂವತ್ಸರದ (ಕ್ರಿ. ಶ. ೧೧೧೦) ಅಶ್ವಯುಜ ಶುದ್ಧ ಸಪ್ತಮಿಯ ದಿನ ಚಿತ್ತೈಸಿದರು. ಇಲ್ಲಿಗೆ ಶ್ರೀ ರಾಮಾನುಜಾಚಾರ್ಯರು ತಿರುನಾರಾಯಣಪುರವನ್ನು ಬಿಟ್ಟು ಪುನಃ ಬಂದು ಸೇರಿದ್ದಕ್ಕೆ ವರ್ಷ ೪, ತಿಂಗಳು ೫, ದಿನ ೪ ಗಳಾದವು—

ಪ್ರಧಾನ ಕೈಂಕರ್ಯಪರರಲ್ಲಿ ಒಬ್ಬರಾದ ಸಿರಿಯನಂತಪುರದಾಸರು ತಮ್ಮ ಮನೆಗೆ ತಳಹದಿಯನ್ನು ಅಗುಳಿಸಿದಾಗ ಗೋಡೆಯಸಾಲಿನಲ್ಲಿ ಇಬ್ಬರು ನಾಯಿಚ್ಚಿ ಮಾರುಗಳು, ದ್ರವ್ಯವಸ್ತು ಆಭರಣಗೊಳಡಗೂಡಿ ದೊಡ್ಡಪಾತ್ರೆಯಲ್ಲಿ ಇದ್ದುದನ್ನು ಕಂಡು ಎಂಬೆರುಮಾನಾರ್ರವರ ಸನ್ನಿಧಾನಕ್ಕೆ ಬಂದು ಆ ವೃತ್ತಾಂತವನ್ನು ಶ್ರುತಪಡಿಸಿದರು. ಶ್ರೀರಾಮಾನುಜಾಚಾರ್ಯರು ಓಡಿಬಂದು ನಾಯಿಚ್ಚಿಮಾರುಗಳನ್ನು ಕಂಡು ಸಂತೋಷಗೊಂಡು **ಚೆಲ್ವನಾಯಕಿ, ಚೆಲ್ವಪ್ಪೆಂಡಾಟ್ಟಿ** ಎಂಬ ನಾಮಗಳನವರಿಗಿತ್ತವರಾದರು. ಸಿರಿಯನಂತಪುರದಾಸರು ಯತಿರಾಜಕುಮಾರರಾದ ಚೆಲ್ವಪ್ಪಿಳ್ಳೈರಾಯರಿಗೆ ಆ ದ್ರವ್ಯ, ವಸ್ತ್ರಾಭರಣ ಸಮೇತವಾಗಿ ನಾಯಿಚ್ಚಿಮಾರುಗಳನ್ನು ಸಮರ್ಪಿಸಿದರು.

ಒಡೆಯರವರು ಸಿರಿಯನಂತಪುರದಾಸರ ಮನೆಯಿಂದ ನಾಯಿಚ್ಚಿಮಾರರನ್ನು ತಮ್ಮ ಮಠಕ್ಕೆ ಬಿಜಯಂಗಯಿಸಿಕೊಂಡು ಬಂದು ತಮ್ಮ ಮಠವೇ ಹೊಕ್ಕಮನೆಯೂ, ಸಿರಿಯನಂತಪುರದಾಸರ ಮನೆಯೇ ಹುಟ್ಟಿದ ಮನೆಯೂ ಆಗಲಾಗಿ ಚೆಲ್ವಪಿಳ್ಳೈರಾಯರಿಗೆ ಬಹು ಸಂತೋಷದಿಂದ ಕಲ್ಯಾಣ ಮಹೋತ್ಸವವನ್ನು ನೆರವೇರಿಸಿದರು.

ಒಡೆಯರವರು ತಿರುವನಂತಪುರದಾಸರನ್ನು ತಮ್ಮೆಡೆಗೆ ಕರೆಸಿ "ನಾವು ನಿಮಗೆ ಒಂದು ಮರ್ಯಾದೆಯನ್ನು ಮಾಡುವೆವು ಸ್ವೀಕರಿಸಿ" ಎನ್ನಲು ಅವರೂ ಮಹಾಪ್ರಸಾದವೆಂದು ಒಪ್ಪಿದರು.

ಚೆಲ್ವನಾಯಕಿ ನಾಯಿಚ್ಚಿಮಾರೊಡನೆ ದೊರೆತ ದ್ರವ್ಯವಸ್ತು ಆಭರಣಂಗಳನ್ನೆಲ್ಲ ನೀವೇ ತೆಗೆದುಕೊಳ್ಳಿ ಎಂದರು. ಅದಕ್ಕೆ ತಿರುವನಂತಪುರದಾಸರು ಈ ದ್ರವ್ಯವಸ್ತು ರತ್ನಾದಿಗಳು ದಾಸನಿಗೆ ಬೇಡವೆಂದು ಬಿನ್ನಹಮಾಡಿಕೊಂಡರು.

ಶ್ರೀರಾಮಾನುಜಾಚಾರ್ಯರು ನಿಧಿನಿಕ್ಷೇಪಜಲತರುಪಾಷಾಣ ಅಕ್ಷಿಣಿ ಆಗಾಮಿ ಸಿದ್ಧಸಾಧ್ಯಂಗಳಲ್ಲಿ ನ್ಯಾಯಧರ್ಮಗಳನ್ನು ನಾವು ಮೀರತಕ್ಕವರಲ್ಲ ಎಂದರು.

*ಈ ಬಂಕಾನಗರವು ಧಾರವಾಡ ತಾಲ್ಲೂಕಿನಲ್ಲಿದೆ. ವಿಷ್ಣುವರ್ಧನಮಹಾರಾಜರಿಗೆ ಉತ್ತರಗಡಿ ರಾಜಧಾನಿಯಾಗಿತ್ತು. ದಕ್ಷಿಣದಲ್ಲಿ ತೊಂಡನೂರು ರಾಜಧಾನಿಯಾಗಿತ್ತು.

ಸಿರಿಯನಂತಪುರದಾಸರೂ “ ಶರೀರಮರ್ಥಂಪ್ರಾಣಂಚ ಸದ್ಗುರುಭ್ಯೋ ನಿವೇದಯೇತ್” ಎಂಬ ನಿಷ್ಠೆಯನ್ನು ನಾನೂ ಮೀರತಕ್ಕವನಲ್ಲವೆಂದು ತಿಳಿಸಿದರು. ಇದನ್ನು ಕೇಳಿ ಶ್ರೀರಾಮಾನುಜಾಚಾರ್ಯರು ಸಂತೋಷಗೊಂಡವರಾಗಿ ಅವರಿಗೂ ದೇವಸ್ಥಾನದಲ್ಲಿ ವಿಶೇಷವಾದ ಊಳಿಗ ಮರ್ಯಾದೆಯನ್ನು ಅನುಗ್ರಹಿಸಿದರು.

ಅನಂತರ ಶ್ರೀಪಾಂಚರಾತ್ರ ಸಾತ್ವತ ಸಂಹಿತೆಯ ಪ್ರಕಾರ ಪ್ರೋಕ್ಷಣಾದಿ ತಿರುವಾರಾಧನ ಕಲ್ಯಾಣೋತ್ಸವಗಳನ್ನು ಭಟ್ಟಾಚಾರ್ಯರಾದ ಆಳ್ವಾರ್ ಶ್ರೀರಂಗರಾಜರ ಕೈಯಿಂದ ಮಾಡಿಸಿ ತಿರುನಾರಾಯಣ ದೇವರ ಸಿರಿಯಡಿಗಳನ್ನು ತಾವೇ ಮೂರು ದಿವಸ ತಿರುವಾರಾಧನೆಯನ್ನು ಮಾಡಿ ಮಾರನೆಯದಿನ ಪ್ರೋಕ್ಷಣವನ್ನು ಮಾಡಿಸಿ ಆಳ್ವಾರ್ರ ಹಸ್ತದಲ್ಲಿ ಒಪ್ಪಿಸಿದರು.

ಊರು ಬೀದಿವಾಡ ಮಾಡಿ ದೇವಸ್ಥಾನ ಗೋಪುರ ಪ್ರಾಕಾರಾದಿಗಳನ್ನು ಕಟ್ಟಿದನಂತರ ಪ್ರಾಕ್ಕು ನಿಲವಾಗಿದ್ದ ದ್ರವ್ಯ ೧೪೩೩ಳ ವರೆ ವರಹದಲ್ಲಿ ಸಂಪ್ರೋಕ್ಷಣೆ ಮಾಡಿಸುವುದಕ್ಕೆ ವಿಗ್ರಹಗಳ ಮಾಡಿದ ವಿವರ—

| | ವರಹಗಳು |
|---|---|
| ಶೂಡಿಕ್ಕೊಡುತ್ತನಾಚ್ಚಿಯಾರ್ ವಿಗ್ರಹ | ೧ |
| ಚಿಕ್ಕಮ್ಮನ ವಿಗ್ರಹ | ೧ |
| ಪನ್ನಿರಂಡಾಳ್ವಾರ್ರ ವಿಗ್ರಹ | ೧೨ |
| ಶಲ್ವ ವಿಗ್ರಹ | ೧ |
| ಸ್ನಪನ ವಿಗ್ರಹ | ೧ |
| ಸೇನಾಧಿಪತಿ ವಿಗ್ರಹ | ೧ |
| ಹನುಮಂತ ದೇವರ ವಿಗ್ರಹ | ೧ |
| ಭಂಡಾರಲಕ್ಷ್ಮೀ | ೧ |
| ? | ೧ |
| ಅಂತೂ ವಿಗ್ರಹ | ೨೦ ಕ್ಕೆ ಮುಟ್ಟಿದ್ದು ೨೨೪೦ |

| | ವರಹಗಳು |
| --- | --- |
| ತೇರುಕಟ್ಟಿಸುವುದಕ್ಕೆ | ೬೫೪ |
| ಸಂಪ್ರೋಕ್ಷಣೆಗೆ | ೨೩೨೫ |
| ಸ್ವಾಮಿಯವರ ಆರೋಗಣೆ ಕಟ್ಲೆಗೆ | ೨೭೫೩ |
| ಸ್ವಾಮಿಯವರಿಗೆ ಚಾತ್ತುವುದಕ್ಕೆ ತಿರುವಾಭರಣ ಕಂಚುತಾಮ್ರ ಸ್ವರೂಪಗಳು ಸಹ | ೬೩೭೨ |
| ಮೊತ್ತ ವರಹಗಳು.... .... | ೧೪೩೪೪ |

(ಗದ್ಯಾಣ ಅಥವಾ ವರಹ ೧ ಕ್ಕೆ ಈಗಿನ ಬೆಲೆ ಸುಮಾರು
೨೫ ರೂಪಾಯಿಗಳಾಗುತ್ತವೆ.)

ಈ ರೀತಿಯಲ್ಲಿ ಜೀರ್ಣೋದ್ಧಾರಮಾಡಿ ಈ ತಿರುನಾರಾಯಣಪುರಣದಲ್ಲಿ ನಿತ್ಯವಾಸವನ್ನು ಮಾಡಿದ ಹಿರಿಯರಿಗೆ ಉಂಟಾದ ಪರಮಪದವನ್ನೂ, ಆಚಾರ್ಯ ಕೈಂಕರ್ಯವನ್ನೂ ತಮ್ಮ ಸಿರಿವಾಯಿಂದ ಕೃಪೆಗೈದು ಹೇಳಿದವರಾಗಿ ಶ್ರೀತಿರುನಾರಾಯಣಸ್ವಾಮಿಯವರ ಸಿರಿಯಡಿಗಳಲ್ಲಿ ಹನ್ನೆರಡು ವರ್ಷಂಗಳು ಬಾಳಿ ಕೃಪೆಗೈದವರಾದರು—

ಏತತ್ ತ್ರಯ್ಯಂತ ಸಿದ್ಧಾಂತ ಪರಿಪಂಥಿ ವಿದಾರಣಂ
ಯಾದವಾದ್ರಿ ನಿವಾಸಸ್ಯ ಯತಿರಾಜಸ್ಯ ಶಾಸನಂ
ಶಾಸನಂ ಯತಿರಾಜಸ್ಯ ಸತಾಂ ಮೂರ್ಧ್ನಿಕೃತಾಸನಂ
ತ್ರಾಸನಂ ದುಷ್ಟ ಸಿದ್ಧಾಂತ ವಾಸನಾಧೂಸರಾತ್ಮನಾಂ ||

# ಕೋಯಿಲ್‌ಕೇಳ್ವಿ ದೇಶಾಯಿ ತಿರುನಾರಾಯಣ ರಾಮಾನುಜ ಜೀಯರ್

ಆಶ್ರಮಸ್ವೀಕಾರಕಾಲ : ಪರಮಪದಕಾಲಃ

ಅಧಿಕಾರ ಸ್ವೀಕಾರಕಾಲಃ ೧೦೬೨ [illegible] ಸಂ||

ಸ್ವಭಾನು ಸಂ|| ಚೈತ್ರ ಬ. ಷಷ್ಠೀ(ಕ್ರಿ, ಶ, 1160)

ಸಂಸೇವಿತ ಸ್ಸಂಯಮಿ ಸಪ್ತಶತ್ಯಾ ಪೀಠೈಚ್ಚತುಸ್ಸಪ್ತತಿ ಭಿಸ್ಸಮೇತೈಃ
ಅನ್ಯೈರನನ್ಯೈರಪಿ ವಿಷ್ಣುಭಕ್ತೈರಾಸ್ತೇಧಿ ರಂಗಂ ಯತಿ ಸಾರ್ವಭೌಮಃ ||

ರಾಮಾನುಜಾಚಾರ್ಯ ಚ್ಛ್ರುತಿಮೌಳಿಭಾಷ್ಯಂ
ಅರ್ಥಂ ರಹಸ್ಯಂ ದ್ರಮಿಡ ಶ್ರುತೀನಾಂ
ಸಂಪ್ರಾಪ್ಯ ತೇನೈವ ಗುರೂಕೃತಾಂಸ್ತಾನ್
ಭಜೇ ಚತುಸ್ಸಪ್ತತಿ ಪೀಠಸಂಸ್ಥಾನ್ ||

ವಿನ್ಯಸ್ಯ ಯಸ್ಮಿನ್ಯದುಶೈಲ ದೀಪಂ ಶ್ರೀಶಂ ಸ್ವಯಂ ರಂಗಪತಿಂ ಪ್ರಯಾಸ್ಯನ್
ರಾಮಾನುಜೋ ವ್ಯಾಕೃತ ಯಂ ಸ್ವನಾಮ್ನಾ ತಮಾದಿಮಂ ಸಂಯಮಿನಂ ಪ್ರಪದ್ಯೇ||

ಶ್ರೀರಾಮಾನುಜಾಚಾರ್ಯರು ಚೆಲುವರಾಯಸ್ವಾಮಿ, ನಾರಾಯಣಸ್ವಾಮಿಯವರಿಗೆ ನಿತ್ಯಕಟ್ಲೆ ಆರಾಧನೆಗೆ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ಮುಂತಾದ ಸೇವೆಗಳನ್ನು ಮಾಡಿಕೊಂಡು ವಾಸವಾಗಿದ್ದು, ಅನಂತರ ಶ್ರೀರಂಗಕ್ಕೆ ಶ್ರೀರಂಗನಾಥರ ಸೇವೆಯನ್ನು ಮಾಡುವುದಕ್ಕೆ ಹೋಗಬೇಕೆಂದು ಯೋಚಿಸಿ ಆದಿನಾರಾಯಣಸ್ವಾಮಿಯವರಿಗೆ ಸಕಲವಾದ ಊಳಿಗದ ಕೈಂಕರ್ಯಗಳನ್ನೂ ನೇಮಕಮಾಡುವ ನಿಮಿತ್ತವಾಗಿ ಅರ್ಚಕರು ಶ್ರೀರಂಗರಾಜಭಟ್ಟರು, ತಿರುವನಂತಪುರ ದಾಸರು, ತಿರುಮಾಲೆಕಾರದಾಸರು, ತಿರುಕ್ಕುರುಂಗುಡಿದಾಸರು, ಯತಿರಾಜದಾಸರು ಈ ಪ್ರಿಯ ಶಿಷ್ಯರುಗಳನ್ನು ಕರೆದು ತಾವು ಶ್ರೀರಂಗಸ್ವಾಮಿಯವರ ಸೇವೆಗೆ ಹೋಗಬೇಕೆಂಬುದಾಗಿ ಕಟ್ಟು ಮಾಡಿಸಿದ್ದರಿಂದ ಇವರುಗಳು ಶ್ರೀರಾಮಾನುಜಾಚಾರ್ಯರ ಅಗಲುವಿಕೆಯನ್ನು ಸಹಿಸಲಾರದವರಾಗಿ ಅವರ ಪಾದವನ್ನು ಹಿಡಿದುಕೊಂಡು "ತಾಯಿಯಿಲ್ಲದ ಮಕ್ಕಳೋಪಾದಿಯಲ್ಲಿ ಸ್ವಾಮಿಯನ್ನು ಬಿಟ್ಟಿರಲಾರೆವು" ಎಂದು ದುಃಖಿತರಾಗಿರುವಲ್ಲಿ ಮೊದಲೇ ಶಿಷ್ಯರಾಗಿರುವ ದೇವಸ್ಥಾನ ವಿಚಾರಣಕರ್ತ ದೇಶಾಯಿತಿರುನಾರಾಯಣ ಜೀಯರನ್ನೂ ಪ್ರಿಯಶಿಷ್ಯರಾದ ಐವತ್ತಿಬ್ಬರನ್ನೂ ಮನ್ನಿಸಿ "ನಿಮಗೆ ಚಿಂತೆಬೇಡ" ಎಂದು ಹೇಳಿ ತಾವೇ ಪ್ರತ್ಯಕ್ಷವಾಗಿ ಇದ್ದು ಶಿಲ್ಪಿಯಿಂದ ತಮ್ಮ ಅರ್ಚಾವಿಗ್ರಹವನ್ನು ಮಾಡಿಸಿ "ಅನಂತಃಪ್ರಥಮಂರೂಪಂ" ಎಂಬಂತಿರುವ

ಆ ಅರ್ಚಾವಿಗ್ರಹದಲ್ಲಿ ತಾವು ನಿತ್ಯವಾಸ ಮಾಡುತ್ತಿರುವುದಾಗಿ ಪ್ರತ್ಯುತ್ತರವನ್ನು ಹೇಳಿ ಅಂಶತಃ ಸ್ವಶಕ್ತಿಯನ್ನು ಆ ವಿಗ್ರಹದಲ್ಲಿ ಆರೋಪಿಸಿ ಇವರುಗಳಿಗೆ ಆರಾಧನ ವಾಗಿ ಕೊಟ್ಟು ತಮ್ಮನ್ನೂ, ಚೆಲ್ವಪಿಳ್ಳೆರಾಯರನ್ನೂ "ಬಾವಿಯಂಚಿನಲ್ಲಿರುವ ಮಕ್ಕಳಂತೆ" ಎಂದು ತೋರಿಸಿ ಮುಂದೆ ತಿರುನಾರಾಯಣಸ್ವಾಮಿಯವರ ಕೈಂಕರ್ಯವು ಕೊರತೆಯಿಲ್ಲದೆ ನಡೆದು ಬರುವುದಕ್ಕಾಗಿ "ನಿಯಮನಪ್ರಕಾರ" ಎಂಬ ಐವತ್ತೆರಡು ಊಳಿಗ ಕೈಂಕರ್ಯಗಳನ್ನು ನೇಮಕಮಾಡಿ ೧. ಶ್ರೀಭಾಷ್ಯಪ್ರವಚನ, ೨. ನಮ್ಮಾಳ್ವಾರ್‌ರವರ ಶ್ರೀಸೂಕ್ತಿಗಳಲ್ಲಿ ಶ್ರದ್ಧೆ, ೩. ದಿವ್ಯಕ್ಷೇತ್ರಗಳಲ್ಲಿ ದೇವರ ಕೈಂಕರ್ಯ, ೪. ಶರಣಾಗತಿ ಮಂತ್ರನಿಷ್ಠೆ, ೫. ಭಾಗವತ ಪ್ರತಿಪತ್ತಿ, ೬. ತಿರುನಾರಾಯಣಪುರದಲ್ಲಿ ನಿತ್ಯವಾಸ ಮಾಡುವುದು. ಎಂಬ ಈ ಆರು ಅರ್ಥಗಳನ್ನೂ ನಿಯಮಿಸಿ "ಸ್ವಾಮಿಯವರ ಸನ್ನಿಧಿ ಸೇವಾಕಾಲವನ್ನು ಸಂಭ್ರಮವಾಗಿ ನಡೆಸಿಕೊಂಡು ಪರಸ್ಪರ ವಿರೋಧವಿಲ್ಲದೆ ಭಯಭಕ್ತಿ ಶ್ರದ್ಧೆಗಳಿಂದ ಸೇವಾಸಕ್ತರಾಗಿ ವಾಚಕ, ಕಾಯಕ, ಮಾನಸ ಕೈಂಕರ್ಯಗಳಿಂದ ನಡೆದುಬನ್ನಿ" ಎಂದು ಅನುಗ್ರಹಿಸಿದರು.

ಅನಂತರ ಅರ್ಚಕರು, ಸ್ಥಾನದವರು ಮುಂತಾದ ಶಿಷ್ಯರನ್ನು ಕೂಡಿಕೊಂಡು ತೊಂಡನೂರಿಗೆ ಹೋಗಿ ಆದಿನಾರಾಯಣಸ್ವಾಮಿಯವರಿಗೆ ಸಕಲವಾದಸೇವೆಯು ನಡೆಯುವರೀತಿಗೆ ನಿರ್ಣಯಮಾಡಿಸಿ ವಿವರಗಳಿಗೆ ಚಪ್ಪೋಡನ್ನು ಬರೆಯಿಸಿ ವಿಷ್ಣುವರ್ಧನರಾಯರ ಕೈಯಿಂದ ಚಪ್ಪೋಡಿಗೆ ಒಪ್ಪವನ್ನು ಹಾಕಿಸಿ ಸ್ಥಾನದವರ ಕೈಯಲ್ಲಿ ಕೊಟ್ಟು ತಮ್ಮ ಪಟ್ಟಕ್ಕೆ ತಮ್ಮ ಶಿಷ್ಯರು ಕೋವಿಲ್‌ಕೇಳ್ವಿದೇಶಾಯಿ ತಿರುನಾರಾಯಣ ರಾಮಾನುಜ ಜೀಯರಿಗೆ ಪಟ್ಟವನ್ನು ಕಟ್ಟಿ ತಿರುನಾರಾಯಣಸ್ವಾಮಿಯವರ ಕೈಂಕರ್ಯ ಸರ್ವಸ್ವ ನಿಯಮನಾಧಿಕಾರವನ್ನೂ ಅವರಿಗೆ ಒಪ್ಪಿಸಿ ಪಟ್ಟದ ರಾಮಾನುಜಮುದ್ರೆ ಉಂಗುರವನ್ನು ಕೊಟ್ಟು ಸ್ಥಾನದವರನ್ನು ಕರೆದು ಕಟ್ಟುಮಾಡಿಸಿದ ವಿವರ—

"ಆದಿನಾರಾಯಣಸ್ವಾಮಿಯವರ ಸನ್ನಿಧಿ ಸೇವಾಕಾಲ, ಪಡಿತರ ದೀಪಾರಾಧನೆ ಮುಂತಾದ ಉತ್ಸವಗಳನ್ನು ಅಭಿವೃದ್ಧಿಮಾಡಿಕೊಂಡು ಬರುವುದಲ್ಲದೆ ತಮ್ಮ ಪಟ್ಟದ ರಾಮಾನುಜಜೀಯರ ಮಠದ ಈ ಪಟ್ಟವನ್ನು ಸಾರೋದ್ಧಾರವಾಗಿ ಶಿಷ್ಯಪ್ರಶಿಷ್ಯ ಕ್ರಮದಿಂದ ನಡೆಸಿಕೊಂಡು ಬರುವುದು." ಎಂದು ತಿಳಿಸಿ ಅನುಗ್ರಹಿಸಿದರು.

## ಅಸಾಧಾರಣ ಸಂಪ್ರದಾಯ ಸಂಭ್ರಮ

"ಒರುನಾಯಕಂ" ಎಂಬ ದಶಕವನ್ನು ತಾವು ಪ್ರಕಟಪಡಿಸುವಂತೆ ನಮ್ಮಾಳ್ವಾರ್‌ರವರು ತಮಗೆ ಉಪಕಾರಮಾಡಿದುದನ್ನು ಕಂಡು, ಅವರಿಗೆ ತಮ್ಮ ಕೃತಜ್ಞತೆ

ಯನ್ನು ಸೂಚಿಸಬೇಕೆಂದು, ಈ ತಿರುನಾರಾಯಣಪುರವೆಂಬ ದಿವ್ಯಕ್ಷೇತ್ರದಲ್ಲಿ ಪ್ರಬಂಧವನ್ನು ತೊಡಗುವಾಗ" ತಿರುಪ್ಪಲ್ಲಾಂಡು ''ಗೆ ಮೊದಲು **ಕಣ್ಣಿನುಣ್ ಶಿರುತ್ತಾಂಬು** ಎಂಬ ನಮ್ಮಾಳ್ವಾರ್ರ ವಿಷಯವಾದ ಪ್ರಬಂಧವನ್ನು ಅನುಸಂಧಿಸಿದ ಮೇಲೆಯೇ, ಮುಂದಣ ಪ್ರಬಂಧಗಳನ್ನು ಅನುಸಂಧಿಸಿಕೊಂಡು ಬರತಕ್ಕುದು ಎಂದು ಕಟ್ಟಳೆಮಾಡಿ ''ತಿರುನಾರಣ್ ತಾಳ್ ಕಾಲಂ ಪೆಱಚ್ಚಿಂದಿತ್ತುಯ್ ಮಿನೋ '' ಎಂಬುದಾಗಿ ನೇಮಿಸಿ ತಾವು ವಿಷ್ಣುವರ್ಧನರಾಯರಿಗೆ ಹೇಳಿಕೊಂಡು ಶ್ರೀರಂಗಕ್ಕೆ (ಶೋಭಕೃತು ?) ಶಕ ೧೦೩೩ ವಿಕೃತಿ ಸಂವತ್ಸರದ ಪುಷ್ಯಶುದ್ಧ ತ್ರಯೋದಶಿಯಲ್ಲಿ ಶ್ರೀರಂಗಕ್ಕೆ ಚಿತ್ತೈಸಿದರು.

## ಈ ದಿವ್ಯಕ್ಷೇತ್ರದ ಹಿರಿಮೆ

ಈ ವೈಭವವಿಶೇಷವು ಮಿಕ್ಕ ಮೂರು ದಿವ್ಯದೇಶಗಳಿಗೂ ಇರುವುದಿಲ್ಲ. ಹೇಗೆಂದರೆ, ಶ್ರೀರಾಮಾನುಜಾಚಾರ್ಯರವರು ತಮ್ಮ ವಿಭವಾವತಾರವು ಪೂರ್ತಿಯಾಗುವವರೆಗೂ ಶ್ರೀರಂಗದಲ್ಲಿ ಇದ್ದರು. ತಿರುಪತಿಯಲ್ಲಿ ಶ್ರೀನಿವಾಸದೇವರಿಗೆ ಶಂಖಚಕ್ರಗಳನ್ನು ಧಾರಣೆಮಾಡಿಸಿದರು. ಶ್ರೀಕಾಂಚಿಯಲ್ಲಿ ತೀರ್ಥಕೈಂಕರ್ಯಗಳನ್ನು ಮಾಡಿ ಶ್ರೀವರದರಾಜಸ್ವಾಮಿಯವರ ಸನ್ನಿಧಿಯಲ್ಲಿ ಅರ್ಥವಿಶೇಷಗಳನ್ನು ಕೇಳಿದರು. ಹೀಗಿರುತ್ತಿದ್ದರೂ ಅವರು ತಾವಾಗಿಯೇ ತಮ್ಮ ಅರ್ಚಾವಿಗ್ರಹವನ್ನು ಮಾಡಿಸಿ ಶಕ್ತ್ಯಾಧಾನಮಾಡಿರುವ ಹೆಮ್ಮೆಯು ತಿರುನಾರಾಯಣಪುರವೆಂಬ ಈ ದಿವ್ಯಕ್ಷೇತ್ರ ಒಂದಕ್ಕೇ ಸಂದಿರುತ್ತದೆ.

ಈ ರೀತಿಯಲ್ಲಿ **ಕೋಯಿಲ್ ಕೇಳ್ವಿ ದೇಶಾಯಿ ತಿರುನಾರಾಯಣ ರಾಮಾನುಜ ಜೀಯರು** ರಾಮಾನುಜ ಮುದ್ರೆಯುಂಗಷವನ್ನು ಸ್ವೀಕರಿಸಿ ಅಧಿಕಾರವನ್ನು ವಹಿಸಿಕೊಂಡು ಶ್ರೀರಾಮಾನುಜಾಚಾರ್ಯರು ನಿಯಮಿಸಿದಂತೆ ಆದಿನಾರಾಯಣಸ್ವಾಮಿಯವರ ಊಳಿಗ ಕೈಂಕರ್ಯಗಳನ್ನು ಲೋಪವಿಲ್ಲದಂತೆ ನಡೆಸಿಕೊಂಡು ಬಂದರು.

## ಊಳಿಗ ಕೈಂಕರ್ಯಗಳ ವಿವರ

ಶ್ರೀಮದನಾದಿಮಹಾಸ್ವಾಮಿಸ್ಥಾನ ಭೂಲೋಕವೈಕುಂಠ ವೈಕುಂಠವರ್ಧನ ಕ್ಷೇತ್ರ ಜ್ಞಾನಮಂಟಪಾಪರಾಭಿಧಾನ ದಕ್ಷಿಣ ಬದರಿಕಾಶ್ರಮ ಶ್ರೀಯಾದವಗಿರ್ಯಾನಂದಮಯವಿಮಾನಮಧ್ಯಸ್ಥ ಸಂಪತ್ಕರ ನಾರಾಯಣಚರಣಾರವಿಂದ ಪ್ರಪನ್ನ ಶ್ರೀಭಗವದ್ರಾಮಾನುಜಾರ್ಯೈಃ ಸಂಪತ್ಕುಮಾರಾಯ ಪರಿಕಲ್ಪಿತ ದ್ವಿಪಂಚಾಶತ್ ಸತ್ಪಂಚ ಕೈಂಕರ್ಯ ವಿನಿಯೋಗಪ್ರಕಾರಾಃ ಕೀರ್ತ್ಯಂತೇ—

ದೇಶಾಯಿ ೧, ಸ್ಥಾನ ೬, ಶ್ರೀಭಂಡಾರ ಕಡೆಕೂಟವಾಗಿ ಕಲ್ಪಿಸಿ ಏಳು ಅಂಶ ಪ್ರಾಪ್ತಿಯಲ್ಲಿ ಅನುಭವಿಸಿಕೊಂಡು ಬರುತ್ತಿರುವ ಮೂವತ್ತಾರು ಭಾಗವೂ, ಐವತ್ತೇಳು ಊಳಿಗ ಕೈಂಕರ್ಯಗಳೂ—

ದೇಶಾಯಿ ಮೊದಲಾದ ಭಾಗ ಸ್ವಾಮ್ಯದಲ್ಲಿ ಒಪ್ಪುದಂಬುಲವೂ, ನಿತ್ಯ ನೈಮಿತ್ತಿಕಂಗಳಲ್ಲಿ ಮೂರು ತೀರ್ಥವೂ ಮುಂತಾದ ಮರ್ಯಾದೆ, ಪರಿವಟ್ಟ, ಮಾಲೆ, ಶ್ರೀಶಠಕೋಪ ಇವುಗಳಿಗುಂಟಾದ ವರಿಸೆ, ಮತ್ತು ವರಿಸೆಯ ಹೆಸರುಗಳು—

ಕೈಂಕರ್ಯ ಊಳಿಗದಲ್ಲಿ ಮಾಲೆ, ವರಿಸೆ, ಹೆಸರುಗಳೂ—

ಮಠ, ಮನೆಗಳು, ಶಿರಪು, ನಂದನವನ ತೋಪುಗಳೂ—

ಶ್ರೀಭಾಷಕಾರರು ತಮ್ಮ

ದೇವಸ್ಥಾನ ವಿಚಾರಣಕರ್ತ ದೇಶಾಯಿ ತಿರುನಾರಾಯಣಜೀಯರಿಗೂ,
ಐವತ್ತಿಬ್ಬರು ಶ್ರೀವೈಷ್ಣವರಿಗೂ,

ಶ್ರೀಭಂಡಾರ ಕಡೆಕೂಟವನ್ನು (1) ತಿರುವಾಳಿಯಣ್ಣನಿಗೂ,
(2) ಪೋರೇಟ್ರು ನಾಯನಾರ್ರಿಗೂ, ಕಟ್ಟಳೆಯಿಟ್ಟು ಅನುಗ್ರಹಿಸಿದರು.

ನಿತ್ಯಸ್ವಾಮ್ಯ ಕೈಂಕರ್ಯ ಊಳಿಗ ವರಿಸೆಗಳ ಹೆಸರುಗಳು—

೧ ಮಠ, ೨ ಮನೆ, ೩ ಚೆರಪು, ೪ ಸಿರಿನಂದಾವನ ತೋಪು. ಇವುಗಳಲ್ಲಿ ಊಳಿಗಕೈಂಕರ್ಯದಲ್ಲಿ, ಸ್ಥಾನಸ್ವಾಮ್ಯ ಸ್ವತಂತ್ರದಲ್ಲಿ, ದರ್ಶನ ಸಮಯದಲ್ಲಿ ಅನುಭೋಗದಪ್ರಕಾರ—

ಶ್ರೀರಾಮಾನುಜಾಚಾರ್ಯರು ಊಳಿಗದ ವೇಳೆಯಲ್ಲಿ "**ಐವತ್ತಿಬ್ಬರಾದ ಶ್ರೀವೈಷ್ಣವರುಗಳು**" ಎಂಬ ಸಮುದಾಯ ನಾಮವನ್ನು ಕರುಣಿಸಿ ಪ್ರತ್ಯೇಕವಾದ ದಾಸ್ಯನಾಮವನ್ನೂ ಕೃಪೆಮಾಡಿದವರಾಗಿ ಅವರಿಗೆ ಕೈಂಕರ್ಯದ ಊಳಿಗಗಳನ್ನು ಅನುಗ್ರಹಿಸಿದರು—

**ಐಂಬತ್ತಿರುವರ್** ಅಥವಾ ಐವತ್ತಿಬ್ಬರು ಎಂದರೆ ಐವತ್ತೆರಡು ಊಳಿಗ ಕೈಂಕರ್ಯವನ್ನು ನಡೆಸುವವರು ಎಂದರ್ಥವು. ಇವರಿಗೇ ಸ್ಥಾನದವರು, ಸ್ಥಾನಿಕಾಧಿಕಾರಿಗಳು ಎಂದು ಹೆಸರು—

# ನಿ ಯ ಮ ಗ ಳು

ಶ್ರೀರಾಮಾನುಜಾಚಾರ್ಯರ ಶ್ರೀಪಾದದಲ್ಲಿರುವ ದೇವಸ್ಥಾನವಿಚಾರಣಕರ್ತ ದೇಶಾಯಿ ತಿರುನಾರಾಯಣಜೀಯರಿಗೆ ಶ್ರೀನಾರಾಯಣಸ್ವಾಮಿಯವರ ಸನ್ನಿಧಿಯಲ್ಲಿ ಮೊದಲಿಂದ ನಡೆದು ಬರುವ ಕೈಂಕರ್ಯವಾದ ಐದು ಊಳಿಗಗಳನ್ನೂ, ಐದು ಭಾಗಗಳನ್ನೂ ಶಿಷ್ಯಪರಂಪರೆಯಾಗಿ ಅನುಭವಿಸಿಕೊಂಡು ಬರುವುದು—

ತಿರುನಾರಾಯಣಜೀಯರು ತಮ್ಮ ಕೈಯಿಂದಲೇ ನಡೆಸಿಕೊಂಡು ಬರತಕ್ಕದು—

ಹೊಂಗೊಡ ಬೆಳ್ಳಿಕೊಡಗಳನ್ನು ಕೊಂಡು ನಿತ್ಯ ತಿರುವಾರಾಧನಕ್ಕೆ ಮಜ್ಜನವನ್ನು ಹೊತ್ತುತರುವುದು.

ಶುಕ್ರವಾರ ದಿನಸಗಳಲ್ಲಿ ಯದುಗಿರಿನಾಯಕಿಯಮ್ಮನವರ ಮಜ್ಜನ ಕಾಲಕ್ಕೂ ಶಿಲ್ಪಪಿಳ್ಳೆರಾಯರ ಅಲಂಕಾರ ಮಜ್ಜನಕಾಲಗಳಿಗೂ ಮಜ್ಜನವನ್ನು ಕೊಂಡು ತರುವುದು.

ಮಜ್ಜನ ತೀರ್ಥವನ್ನು ಇರಿಸುವ ಕೋಣೆಗಳಿಗೆ—ತಮ್ಮ ಆಳುಗಳಿಂದ ಮಜ್ಜನಕಾಲಗಳಲ್ಲಿ ಮಜ್ಜನವನ್ನು ತುಂಬಿಸುವುದು. ರಾಮಾನುಜ ಮುದ್ರೆಯುಂಗುರ ವನ್ನು ಧರಿಸಿಕೊಂಡಿದ್ದು, ಮೊಹರುಮಾಡಿ ತೆಗೆಯುವುದು.

ಸನ್ನಿಧಿಯಲ್ಲಿ ಸಿರಿಮಣ್ಣು ಕಾಣಿಕೆ ಬಟ್ಟಲನ್ನು ಹಿಡಿಯುವುದು.

ಉತ್ಸವ, ಹಿರಿಯ ಕೂಟಗಳಲ್ಲಿ ಕಾಣಿಕೆ ಪಾತ್ರಗಳ ಕರವನ್ನು ಶೋಧಿಸುತ್ತ ಬರುವುದು.

ತಮ್ಮ ಏಕಾಂಗಿ ವೈಷ್ಣವರುಗಳಿಂದಲೂ, ಶಿಖಾಯಜ್ಞೋಪವೀತಧಾರಿಗಳಾದ ಅವುಗಳನ್ನು ಧರಿಸದ ಮೊದಲಿಗಳಿಂದಲೂ, ದೇವಸ್ಥಾನಗಳಲ್ಲಿ ಕಾಣಿಕೆ ಪಟಾಣಕ್ಕೆ ಕೆಲಸ ಮಾಡಿಸುವುದು.

## ಶ್ರೀಭಾಷ್ಯಕಾರರ ಸನ್ನಿಧಿಯಲ್ಲಿ ತಿರುವಾರಾಧನ

**ಶ್ರೀವರಾಹಸ್ವಾಮಿ, ಹಯಗ್ರೀವರು, ಸಾಲಿಗ್ರಾಮಗಳಿಗೆ ಮೊದಲು** ಆರಾಧನೆಮಾಡಿ ಬಳಿಕ ಒಡೆಯರವರ ಸಿರಿಯಡಿಗಳನ್ನು ಬೆಳಗಿ ಸಿರಿವಣ್ಣವನು ಧರಿಸಿ, ಧೂಪದೀಪಗಳನ್ನು ತೋರಿಸಿ, ಶ್ರೀನಾರಾಯಣಸ್ವಾಮಿಯವರ ಪಡಿಗದ ತೀರ್ಥವನ್ನೂ

ಅವರಿಗೆ ನಿವೇದನ ಮಾಡಿದ ಪಾತ್ರೆಯಿಂದ ತಂದ ಪ್ರಸಾದವನ್ನೂ ಮತ್ತೆ ನಿವೇದಿಸಿ ಒಡೆಯರವರ ಮಾಸ ತಿರುನಕ್ಷತ್ರಗಳಲ್ಲಿ ಮಜ್ಜನ ಮುಂತಾದುವನ್ನು ನಡೆಸಿ, ಶ್ರೀವೈಷ್ಣವರುಗಳಿಗೆ ಭೋಜನಮಾಡಿಸಿ, ವರ್ಷ ತಿರುನಕ್ಷತ್ರದಲ್ಲಿ ಒಡೆಯವರೊಡನೆ ಶೆಲ್ವಪಿಳ್ಳೆರಾಯರನ್ನೂ ಯತಿರಾಜಮಂಟಪಕ್ಕೆ ಬಿಜಯಂಗೈಸಿ, ವೈಭವದೊಡನೆ ತಿರುನಕ್ಷತ್ರವನ್ನು ಪರಿಪಾಲನೆ ಮಾಡಿಕೊಂಡು ಬರುವುದು—

ಪ್ರಹ್ಲಾದವರದರಾದ **ನರಸಿಂಹಸ್ವಾಮಿ**ಯವರಿಗೂ ಆರಾಧನೆ ಮಾಡುತ್ತಾ, ಬರುವುದು.

ಶಿವದೇವಾಲಯದ **ಶಿವಮತದ ಸನ್ಯಾಸಿಒಡೆಯರೂ** ನೀವೂ ಕೂಡಿ ಇಬ್ಬರೂ ನಿತ್ಯಪೂಜೆಯಿಂದ ಮೊದಲುಗೊಂಡು ರಥೋತ್ಸವದವರೆಗೂ ಮಾಡಿಸುವುದು ಎಂದು ನಿಯಮಿಸಿದರು.

ತಿರುನಾರಾಯಣಪುರದ ದೊಡ್ಡಬಾಗಿಲಿಗೆ ಒಡಗಲಾಗಿ ಬೀದಿಯಲ್ಲಿ ಪಡುವ ಮೊಗವಾಗಿ "ಮುಕ್ಕಣ್ಣಪ್ಪಂ" ಎನ್ನುವ ಶಿವದೇವಾಲಯವು ಕಲ್ಯಾಣಿಗೂ ಬೆಟ್ಟಕ್ಕೂ ಪಡುವಲಾಗಿ ನೈಋತ್ಯ ದಿಕ್ಕಿನಲ್ಲಿ ಇರುವ ಸಿರಿವಣ್ಣನು ಕಂಡು ತೆಗೆದ ಕಾರಣದಿಂದ ತೆಂಕಲಿಗೆ **ಮುಕ್ಕಣ್ಣಪ್ಪಂ** ಎನ್ನುವ ಶಿವದೇವಾಲಯವು ಇರುವುದು.

ಈ ದೇವಾಲಯಕ್ಕೆ ಗರ್ಭಗೃಹ, ಶುಕನಾಸಿ, ಅರ್ಧಮಂಟಪ, ಮಹಾಮಂಟಪ ಆಸ್ಥಾನಮಂಟಪ, ಒಳಪ್ರದಕ್ಷಿಣ, ಅಂಗಳ, ಪಡುವಣಬಾಗಿಲು, ಬಡಗಬಾಗಿಲು, ಬಡಗಣ ಬಾಗಿಲಿಗಿದಿರಾಗಿ ಪಾಕಶಾಲೆ, ನೀರಹೊಂಡವು ಇರುವುದು.

ಪಡುವ ಬಾಗಿಲಲ್ಲಿ ಇದಿರಾಗಿ ದೀಪಸ್ತಂಭವಿರುವುದು.

ದೀಪಸ್ತಂಭಕ್ಕೆ ಪಶ್ಚಿಮದಲ್ಲಿ ಒಂದು ಬಾಗಿಲು.

ಇವುಗಳೊಡನೆ ವಿಮಾನದೊಡಗೂಡಿ ಈ ದೇವಾಲಯವಿರುವುದು.

ಬೆಟ್ಟಕ್ಕೆ ಪಡುಗಡೆಯ ಗ್ರಾಮದಂಚಿನಲ್ಲಿ ಎತ್ತಿದ ಹೊನ್ನಿಂದ ಮಾಸೋತ್ಸವ, ಪಕ್ಷೋತ್ಸವ, ಮಹೋತ್ಸವ ಮುಂತಾದುವುಗಳನ್ನು ನಡೆಯಿಸುವುದು.

## ಈ ಗ್ರಾಮದ ಲೆಕ್ಕ

**ವಿಷ್ಣುವರ್ಧನರಾಯರು** ಕೊಟ್ಟ ಲಕ್ಷವರಹಗಳಲ್ಲಿ **ಶ್ರೀನಾರಾಯಣಸ್ವಾಮಿ** ಜೀರ್ಣೋದ್ಧಾರಮಾಡಿದುದು.

ಉಳಿದ ಹಣದಲ್ಲಿ ಶಿವದೇವಾಲಯದ ಜೀರ್ಣೋದ್ಧಾರವಿರುವುದು. ಈ ಗ್ರಾಮದ ಲೆಕ್ಕವೂ, ಜೀರ್ಣೋದ್ಧಾರದ ಲೆಕ್ಕವೂ, ಸ್ಥಳದ ಕರಣಿಕನ ಬಳಿಯಲ್ಲಿ ಇರುವುದು.

ಈ ಲೆಕ್ಕದಪ್ರಕಾರ ನಿತ್ಯಪೂಜೆ ಮುಂತಾದುವನ್ನು ನಡೆಯಿಸಿಕೊಂಡು ಬರುವಂತೆ ಈ ದೇಶಾಯಿ ತಿರುನಾರಾಯಣಜೀಯರಿಗೆ ಐವತ್ತಿಬ್ಬರ ಮುಂದೆ ಕಟ್ಟಳೆಮಾಡಿದರು.

ಈ ಶಿವದೇವಾಲಯಕ್ಕೆ ವಾಯುವ್ಯದಿಕ್ಕು ಮೊದಲಾಗಿ ಅನ್ನದಾನ ಒಡೆಯರ ಮಠಕ್ಕೆ ಪಡುವಲಾಗಿ ಅದೇ ಮಠದ ತೆಂಕಲು ಈ ದೇವಾಲಯದ ನೈಋತ್ಯ ದಿಕ್ಕಿನ ವರೆಗೂ ಚತುಶ್ರವಾಗಿ ದೇವಾಲಯದ ಸುತ್ತಲೂ ಈ ದೇವಾಲಯದ ಪರಿಜನಂಗಳು ಮನೆಗಳನ್ನು ಕಟ್ಟಿಕೊಂಡಿರುವಂತೆ ನಿಯಮಿಸಿದರು.

ಮಹೋತ್ಸವಕಾಲಗಳಲ್ಲಿ ಈ ಚತುರಶ್ರವೀಥಿಯ ಸುತ್ತಲೂ ಪ್ರದಕ್ಷಿಣವು ಬರುವುದು.

ಇದನ್ನು ಮೀರದಂತೆ ನಡೆವುದು ಎಂದು ನಿಯಮಿಸಿದರು.

ದೇವಸ್ಥಾನ ವಿಚಾರಣಕರ್ತ ದೇಶಾಯಿತಿರುನಾರಾಯಣ ಜೀಯರನ್ನು ನೋಡಿ "ಈ ಶಿವನ ಕೈಂಕರ್ಯವನ್ನೂ ನೀವೇ ವಿಚಾರಿಸಿಕೊಂಡು ಬರುವುದು" ಎಂದು ನಿಯಮಿಸಿದರು.

---

## ತಮ್ಮ ಆಳುಗಳ ಮೂಲಕ ಮಾಡಿಸುವುದು

ರಸವ್ಯಂಜನ ಮುಂತಾದ ಉಗ್ರಾಣದ ಕೋಣೆಗಳನ್ನು **ಗೋವಿಂದದಾಸ** ಮುದಲಿಗಳಿಂದ ಮಾಡಿಸುವುದು.

ಕೈಂಕರ್ಯದ ಊಳಿಗದಲ್ಲಿ ತಪ್ಪುನೆಪ್ಪುಗಳನ್ನು ನೋಡಿಕೊಂಡು, ದೋಷವನ್ನು ಕಳೆದು ಕೃಷ್ಣಾಜಿನದಿಂದ ಹೊಡೆದು ಶ್ರೀಕಾರ್ಯವನ್ನು ವಿಚಾರಿಸಿಕೊಂಡು ಬರುವುದು.

ಶ್ರೀಕಾರ್ಯಗಳಿಗೆ ಮುಗ್ಗಡೆ ಬಂದಕಾಲದಲ್ಲಿ ಗೋಪುರವನ್ನೇರಿ ಕೆಳಗೆ ದುಮ್ಮಿಕ್ಕಿ ದೇಹವನ್ನು ಬಿಸುಟು, ಭಗವಂತನ ಸಿರಿಯಡಿಗಳನ್ನು ಸೇರುವುದು.

ಮತಸಿದ್ಧಾಂತಕ್ಕೆ ಸೇರಿದವರನ್ನು ಕೂಡಿಸಿಕೊಂಡು ಗೋಷ್ಠಿಯನ್ನು ಸ್ಥಾಪಿಸಿ, ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಮಾಡಿ ಶ್ರೀಕಾರ್ಯವನ್ನು ನೆಲೆನಿಲಿಸುವುದು.

ಹೊಯ್ಸಳ ನಾಡೊಳುಳ್ಳ ಮತಾಚಾರ್ಯರುಗಳಿಗೆ ಕ್ಲುಪ್ತವಾಗಿ ಕೊಡುವ ಕಾಣಿಕೆಯ ಹೊನ್ನುಗಳನ್ನು ದೇವಸ್ಥಾನಗಳ ಶ್ರೀಭಂಡಾರದಲ್ಲಿ ಮಡಗಿಸುವುದು.

ಊರುಗಳಲ್ಲಿ ತಪ್ಪುನೆಪ್ಪುಗಳನ್ನು ವಿಚಾರಿಸಿ ಹೊನ್ನುಗಳನ್ನೆತ್ತಿ ಶ್ರೀಭಂಡಾರ ದಲ್ಲಿ ಮಡಗಿಸುವುದು.

ಈ ರೀತಿಯಲ್ಲಿ ದೇಶಾಯಿ ರಾಮಾನುಜಜೀಯರು ಐದು ಕೈಂಕರ್ಯ ದೂಳಿಗಳನ್ನು ನಡೆಸಿಕೊಂಡು ಬರುವುದು, ಎಂದು ನಿಯಮಿಸಿ ದೇವಸ್ಥಾನದ ಅಧಿಕಾರವನ್ನು ಕೊಟ್ಟು ಮರ್ಯಾದೆಯನ್ನು ಕಲ್ಪಿಸಿದರು.

## ಶ್ರೀ ಭಾಷ್ಯಕಾರರ ಮಠದ ಭೂಮಿನಿವೇಶನದ ಪ್ರಮಾಣ

ದೇವಾಲಯಕ್ಕೆ ದಕ್ಷಿಣಪೂರ್ವದಲ್ಲಿ ನಿವೇಶನ ಒಂದಕ್ಕೆ ೨೨ ಅಡಿಗಳ ಅಳತೆ ಭೂಮಿಯ ಮೇರೆ ೧೫ ನಿವೇಶನಂಗಳ ಭೂಮಿ.

ತೆಂಕಲಲಿ, ಬಡಗಲಲಿ ಇದಕ್ಕೆ ಇಮ್ಮಡಿ.

ಮೂಡಪಡವಲಾಗಿ ಶ್ರೀಭಾಷ್ಯಕಾರರು ತಮ್ಮದಾಗಿ **ಯತಿರಾಜಮಠವನ್ನು** ಕಟ್ಟಿಸಿ ಅದರಲ್ಲಿ ಕೋವಿಲ್‌ಕೇಳ್ವಿ **ಶ್ರೀತಿರುನಾರಾಯಣಜೀಯರನ್ನು** ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿದರು. ಶ್ರೀರಾಮಾನುಜಾಚಾರ್ಯರು ಶ್ರೀನಾರಾಯಣಸ್ವಾಮಿಯವರನ್ನು ಸೇವಿಸಿದ ದಿವಸವು ಮಕರಮಾಸ ಶುಕ್ಲಪಕ್ಷ ಪುನರ್ವಸು ನಕ್ಷತ್ರ. ಆ ದಿನದ ಚೆರುಪನ್ನು ದೇಶಾಯಿ ತಿರುನಾರಾಯಣಜೀಯರವರು ನಡೆಯಿಸಿಕೊಂಡು ಬರುವುದು—ಎಂದು ಅನುಗ್ರಹಿಸಿ ತಾವು ಕಟ್ಟಳೆಯಿಟ್ಟ ಮೇರೆಗೆ ಭಕ್ತಿನಿಯಮದೊಡನೆ ಅನವರತ ಸೇವಾಪರಿಚರ್ಯರಾಗಿ ನಿತ್ಯನೈಮಿತ್ತಿಕಂಗಳಲ್ಲಿ ಕೈಂಕರ್ಯ ನಿಷ್ಠರಾಗಿ ತಂತಮ್ಮ ಊಳಿಗಂಗಳನ್ನೂ ಆಚಾರ್ಯ ನಿಯಮನದಿಂದ ಸರ್ವವಿಧವಾದ ಊಳಿಂಗಳನ್ನೂ ಮಾಡಿಕೊಂಡು ಸುಖದೊಳಿರುಲುಳ್ಳವರು. ಎಂದು ಆಜ್ಞಾಪಿಸಿ ಶ್ರೀಭಾಷ್ಯಕಾರರು ತಮ್ಮ ಪ್ರಥಮ ಶಿಷ್ಯರಾದ ದೇವಸ್ಥಾನದ ವಿಚಾರಣಕರ್ತ ದೇಶಾಯಿ ತಿರುನಾರಾಯಣಜೀಯರು ಮತ್ತು

ಕೈಂಕರ್ಯಪರರಾದ ಐವತ್ತಿಬ್ಬರು ಸಹ, ತಮ್ಮ **ಅರ್ಚಾವತಾರವಿಗ್ರಹದಿದಿರಲ್ಲಿ ದೊಡ್ಡ** ಕಣಜದಲ್ಲಿ ಇರುವ ದ್ರವ್ಯವನ್ನು ತೆಗೆದು ದೇವಾಲಯಕ್ಕೆ ಸಂಕಟವೊದಗಿದಾಗ ವೆಚ್ಚಿಸುವುದು, ಎಂಬುದಾಗಿ ಅಪ್ಪಣೆಯನ್ನು ದಯಪಾಲಿಸಿದರು.

ಈ ರೀತಿಯಲ್ಲಿ ಶ್ರೀಭಾಷ್ಯಕಾರರ ನಿಯಮನದಂತೆ ದೇಶಾಯಿ ತಿರುನಾರಾಯಣಜೀಯರು ದೇವಸ್ಥಾನದ ಸಕಲವಾದ ಅಧಿಕಾರ ಮರ್ಯಾದೆಯನ್ನೂ ಹೊಂದಿ ಶ್ರೀನಾರಾಯಣಸ್ವಾಮಿ ಚಲುವರಾಯಸ್ವಾಮಿಯವರ ಸಕಲವಾದ ಕೈಂಕರ್ಯಗಳನ್ನೂ ನಡೆಸಿ ಲೋಕಕ್ಷೇಮಕ್ಕಾಗಿ ೩೬ ಚಾತುರ್ಮಾಸಗಳನ್ನನುಷ್ಠಿಸಿ ತಮ್ಮ ಅಂತ್ಯಕಾಲದಲ್ಲಿ ಶಿಷ್ಯರಾದ **ನಾರಾಯಣಜೀಯರಿಗೆ** ಪಟ್ಟವನ್ನು ಕೊಟ್ಟು **ರಾಮಾನುಜ ಮುದ್ರೆಯುಂಗುರವನ್ನು** ಅನುಗ್ರಹಿಸಿ ಶಕ ೧೦೬೩ ರೌದ್ರಿ ಸವಂತ್ಸರದ (ಕ್ರಿ. ಶ. 1140) ಚೈತ್ರಬಹುಳ ಷಷ್ಠೀ ದಿನದಲ್ಲಿ ಪರಮಪದಿಸಿದರು.

ಆರ್ದ್ರಾಯಾಮುದಿತೋ ಮಹಾಪುರಿಗತೋ ಹಸ್ತ್ಯದ್ರಿಮತ್ತಾಶ್ರಮಃ
ಶ್ರೀರಂಗಶ್ರಿಯಮೇತ್ಯ ಶಿಷ್ಯಸಹಿತೋ ವೇದಾಂತಭಾಷ್ಯಂ ವರ್ದ |
ದೀಪ್ತೋ ದಿಗ್ವಿಜಯಂ ವಿಧಾಯಸಹಿತ್ಯೈ ರ್ವಿಪ್ರೈರ್ದ್ವಿಪಂಚಾಶತಾ
ಭಾತಿಶ್ರೀಯದುಭೂಧರೇ ಯತಿವರಃ ಸಂಪತ್ಕುಮಾರಂ ಭರ್ಜ ||

# ಶ್ರೀ ತಿರುನಾರಾಯಣ ಜೀಯರು

**ಆಶ್ರಮಸ್ವೀಕಾರಕಾಲಃ**
**ಶಾ. ಶ. ೧೦೬೩ ರೌದ್ರಿ ಸಂ**
**(ಕ್ರಿ.ಶ. 1140)**

ಪರಮಪದಕಾಲಃ
೧೧೧೧ ಪರಾಭವ ಸಂ ಪುಷ್ಯ
ಶುದ್ಧ ಪ್ರಥಮಾ (ಕ್ರಿ.ಶ. 1186)

ಸಂಪತ್ಸುತಸ್ಯ ಯದುಭೂಧರ ಮಂಗಳಸ್ಯ
ಯೇನಪ್ಯತನ್ಯತ ಹರೇರನಪಾಯಿನೀ ಶ್ರೀಃ
ತಂ ಯೋಗಿನಂ ಯತಿವರೇಣ್ಯ ನಿಯೋಗಲಬ್ಧ
ಸಂಪತ್ಕುಮಾರಪದ ಮನ್ವಹಮಾಶ್ರಯಾಮಃ ||

**ಶ್ರೀತಿರುನಾರಾಯಣಜೀಯರು** ಶ್ರೀದೇಶಾಯಿಕೇಳ್ವಿ ರಾಮಾನುಜಜೀಯ**ರಿಂದ ಪಟ್ಟವನ್ನು** ವಹಿಸಿಕೊಂಡು ರಾಮಾನುಜ ಮುದ್ರೆಯುಂಗುರವನ್ನು ಸ್ವೀಕರಿಸಿ **ಶ್ರೀತಿರುನಾರಾಯಣದೇವರಿಗೆ** ಸಕಲವಿಧ ಕೈಂಕರ್ಯಗಳನ್ನೂ ನಡೆಸಿಕೊಂಡು ಬಂದರು.

ಶ್ರೀರಾಮಾನುಜಾಚಾರ್ಯರು ತೊಂಡನೂರಿಗೆ ದಯಮಾಡಿಸಿದಾಗ ಅವರಿಗೆ **೮೦ ವರ್ಷ** ವಯಸ್ಸಾಗಿದ್ದಿತು. ಇಲ್ಲಿ ೧೨ ವರ್ಷಗಳಿದ್ದು ಶ್ರೀರಂಗಕ್ಕೆ ಬಿಜಯ **ಮಾಡಿಸಿದಮೇಲೆ ಅಲ್ಲಿ** ೨೮ ವರ್ಷಗಳಕಾಲ ಸಿದ್ಧಾಂತಸ್ಥಾಪನೆ ಮಾಡುತ್ತಿದ್ದರು. **ಈ** ಮಧ್ಯೆ ಕಾವೇರಿ ತೀರದಲ್ಲಿ **ನಂಜೀಯರು** (ಮಾಧವಸ್ವಾಮಿ) ಎಂಬುವರು **ವೇದಾಂತವಿದ್ವತ್ಪ್ರಸಿದ್ಧರಾಗಿ** ಬರುತ್ತಿರುವರೆಂದು ಕೇಳಿ ಅವರನ್ನು ಜಯಿಸಿ ಬರುವಂತೆ **ಕೂರತ್ತಾಳ್ವಾರ್‌ಕುಮಾರರು** ಶ್ರೀ ಪರಾಶರಭಟ್ಟರಿಗೆ ತಿಳಿಸಿ ಗತಶಕ ೧೦೫೯ **ಪಿಂಗಳ ಸಂವತ್ಸರದ** (ಕ್ರಿ.ಶ. 1138) ಮಾಘಶುದ್ಧ ದಶಮಿಯಲ್ಲಿ ಪರಮಪದಿಸಿದರು.

**ಶ್ರೀಪರಾಶರಭಟ್ಟರು** ಆಚಾರ್ಯರ ಆಜ್ಞೆಯಂತೆ ವೇದಾಂತವಿದ್ವತ್ಪ್ರಸಿದ್ಧರಾದ **ನಂಜೀಯರನ್ನು** ಜಯಿಸಲು ಹೊರಟು **ಈ** ಮೇಲ್ನಾಡಿಗೆ ಬಂದರು. ಆಗ **ಭಟ್ಟರಿಗೆ ಸುಮಾರು** ೭೦ ವರ್ಷಕ್ಕೆ ಮೇಲ್ಪಟ್ಟೂ ನಂಜೀಯರಿಗೆ ಸುಮಾರು ೨೫–೩೦ **ವರ್ಷವೂ ಆಗಿರಬಹುದು.** ಭಟ್ಟರು ಬಂದಿರುವುದನ್ನು ಕಾವೇರಿ ತೀರದಲ್ಲಿದ್ದ ವಿದ್ವದ**ಗ್ರೇಸರರಾದ ಶ್ರೀಅನಂದಾಳ್ವಾರ್ರವರು** (ಆಗ ಅವರಿಗೆ ಸುಮಾರು ೮೫ ವರ್ಷವಿರ**ಬಹುದು.** (ಕಾಲ ಕ್ರಿ.ಶ. ೧೦೫೪–೧೧೫೪) ಭಟ್ಟರನ್ನು ಕಂಡು **ವಿಶಿಷ್ಟಾದ್ವೈತ ಸಿದ್ಧಾಂತ ಸಾರ್ವಭೌಮರಿಗೆ** ಸ್ವಾಗತವೆಂದು ಕರೆದುಕೊಂಡು ತಿರುನಾರಾಯಣ**ಪುರಕ್ಕೆ** ಬಂದರು. ಭಟ್ಟರು ಕಲ್ಯಾಣಿ ಪುಷ್ಕರಣಿಯಲ್ಲಿ ಸ್ನಾನಮಾಡಿ ದಿವ್ಯತೇಜಸ್ಸಿ**ನೊಂದಿಗೆ** ಬರಲು ದೇಶಾಯಿ ತಿರುನಾರಾಯಣಜೀಯರೂ, ಐವತ್ತಿಬ್ಬರೂ ಸಹ

ದೇವಸ್ಥಾನದ ಶ್ರೀಶಠಕೋಪವೇ ಮೊದಲಾದ ಸಮಸ್ತ ಮರ್ಯಾದೆಗಳೊಂದಿಗೆ ಎದುರುಗೊಂಡು ಬಂದರು. ಭಟ್ಟರು. ಸಾಷ್ಟಾಂಗ ನಮಸ್ಕಾರಮಾಡಿ ಗ್ರಾಮ ಪ್ರದಕ್ಷಿಣೆಯಾಗಿ ಬಂದು **ಚತುರಾನನಗೋಪುರ**ವನ್ನು ಸೇವಿಸಿ ದೇವಸ್ಥಾನದ ಒಳಹೊಕ್ಕು ಮೊದಲು ರಾಮಾನುಜರ ಸನ್ನಿಧಿಯಲ್ಲಿ ಸೇವಿಸಿ ಪ್ರದಕ್ಷಿಣೆಯಾಗಿ ಬಂದು ಸುದರ್ಶನಾಳ್ವಾರು, ಯದುಗಿರಿ ಅಮ್ಮನವರನ್ನು ಸೇವಿಸಿ ಆಳ್ವಾರುಗಳನ್ನೂ ಶ್ರೀತಿರುನಾರಾಯಣ, ಚೆಲ್ವಪಿಳ್ಳೆಯವರನ್ನೂ ಸೇವಿಸಿ ಮಂಗಲಾಶಾಸನ ಮಾಡಿದರು.

ಅಜ್ಞಾನಜನ್ಮಗೃಹಮಾತ್ಮಗುಣೈರ್ವಿಮುಕ್ತ
ಮಾಜ್ಞಾತಿಲಂಘನ ಪರಂ ಯದುಶೈಲನಾಥ
ಮಿಥ್ಯಾಪ್ರಪನ್ನಮಪಿ ಮಾಮವಲೋಕಯ ತ್ವಂ
ಲಕ್ಷ್ಮೀಂ ಕ್ಷಮಾಮಪಿ ಗುರೂನವಲೋಕ್ಯಪೂರ್ವಾ‌ಃ॥

ಈರೀತಿ ಅನುಸಂಧಿಸಿದಮೇಲೆ ತಿರುನಾರಾಯಣಜೀಯರು ಭಟ್ಟರಿಗೆ ತಿರುಮಾಲೆ ತೀರ್ಥಪ್ರಸಾದಾದಿ ಸಕಲ ಮರ್ಯಾದೆಯನ್ನೂ ನಡೆಸಿದರು. ಭಟ್ಟರು ಅನಂದಾಳ್ವಾರ್‍ರವರ ಜೊತೆಯಲ್ಲಿ ಹೊರಟು ಕಾವೇರಿ ತೀರದಲ್ಲಿದ್ದ ವೇದಾಂತಿ ನಂಜೀಯರ ಬಳಿಗೆ ಹೋಗಿ ವಾದದಲ್ಲಿ ಜಯಿಸಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಭಟ್ಟರ ಅನಂತರ ಈ ನಂಜೀಯರೇ ಆಚಾರ್ಯರಾದರು. ಭಟ್ಟರು ಪುನಃ ತಿರುನಾರಾಯಣಪುರಕ್ಕೆ ಬಂದು ದೇವರುಗಳನ್ನೆಲ್ಲಾ ಸೇವಿಸಿ ಶ್ರೀರಾಮಾನುಜಾಚಾರ್ಯರ ಸನ್ನಿಧಿಯಮುಂದೆ ಹಿರಿದಾದ ವಿದ್ವತ್ಸಭೆಯಲ್ಲಿ ಶ್ರೀಭಾಷ್ಯ ವಿಚಾರವಾಗಿ ಉಪನ್ಯಾಸಮಾಡಿದರು.

ಇದೇಕಾಲದಲ್ಲಿ **ನಡುವಿಲಾಳ್ವಾರ**ವರು ಶ್ರೀಭಾಷ್ಯವನ್ನು ನಂಗಿಪುರದಾಚ್ಚಿ ಶೊಟ್ಟೈಯಮ್ಮಾಳುಳಿಟ್ಟೋರ್ ಮುಂತಾದವರಿಗೆ ಕಾಲಕ್ಷೇಪವನ್ನು ಹೇಳುತ್ತಿದ್ದರು.
ಈ ಭಟ್ಟರ ವಂಶದವರಿಗೆ ಈ ದೇಶದಲ್ಲಿ ಕೆಲವು ಗ್ರಾಮಭೂಮಿಗಳನ್ನು ಧರ್ಮಮಾಡಿರುವುದು ಶಾಸನವೊಂದರಿಂದ ತಿಳಿದುಬರುವುದು.

ಈ ಜೀಯರ ಕಾಲದಲ್ಲಿ ಕ್ರಿ. ಶ. 1155 ರಲ್ಲಿ **ಯಾದವನಾರಾಯಣ ಚತುರ್ವೇದಮಂಗಲದ** (ಯಾದವಪುರ ಅಥವ ತೊಂಡನೂರು) ಮಹಾಜನಂಗಳು ತಿರುನಾರಾಯಣದೇವರಿಗೆ **ನರಸಿಂಹ ಹೊಯಿಸಳದೇವರಾಯನ** ಆಳ್ವಿಕೆಯಲ್ಲಿ ಕೆಲವು ಗ್ರಾಮಭೂಮಿಗಳನ್ನು ಸಮರ್ಪಿಸಿ ಶಿಲಾಶಾಸನವನ್ನು ಸ್ಥಾಪಿಸಿದರು. (ಶ್ರೀರಂಗಪಟ್ಟಣ ಶಾಸನ ನಂ ೭೬).

ವೀರಬಲ್ಲಾಳದೇವರಸರು ತಮ್ಮ ಧರ್ಮವಾಗಿ ಚೆಲ್ವಪಿಳ್ಳೆದೇವರಿಗೆ ನಂದಾದೀಪ ಕೈಂಕರ್ಯವಾಗಿ ಕೆಲವು ಧರ್ಮಮಾಡಿರುವರು. (ಶಾಸನ ನಂ. ೧೦೬)

ವಿಕಾರಿ ಸಂ॥ ಜ್ಯೇಷ್ಠ ಶು.೧೫ ರಲ್ಲು (ಕ್ರಿ.ಶ. 1179) ಆದಪ್ಪನಾಯಕನ ಕೆಲವು ಧರ್ಮಗಳು ನಡೆದಿವೆ. (ಶ್ರೀ. ಪ. ಶಾಸನ ನಂ.೧೧೧)

ಈ ಜೀಯರು ತಮ್ಮ ಅಧಿಕಾರವನ್ನು ೪೭ ವರ್ಷಗಳು, ೧೦ ತಿಂಗಳು, ದಿನ ೧ ರವರೆಗೆ ನಡೆಸಿ ತಮ್ಮ ಶಿಷ್ಯರಾದ **ಶ್ರೀಯತಿರಾಜಜೀಯರಿಗೆ ಪಟ್ಟವನ್ನು ಕಟ್ಟಿ ರಾಮಾನುಜಮುದ್ರೆಯುಂಗುರವನ್ನು** ಕೊಟ್ಟು ಶಾ.ಶ ೧೧೦೮ನೇ ಪರಾಭವ ಸಂ॥ ಪುಷ್ಯ ಶುದ್ಧ ಪಾಡ್ಯಮಿ ದಿನ (ಕ್ರಿ.ಶ. 1186) ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ೪೭ ಚಾತುರ್ಮಾಸ ವ್ರತಗಳನ್ನು ಅನುಷ್ಠಿಸಿದವರಾದರು.

---

# ಶ್ರೀಯತಿರಾಜಜೀಯರು

| ಆಶ್ರಮಸ್ವೀಕಾರಕಾಲಃ | ಪರಮಪದಕಾಲಃ |
|---|---|
| ಶಾ.ಶ. ೧೧೦೮ ಪರಾಭವಸಂ॥ | ಶಾ ಶ. ೧೧೪೪ ವೃಷ ಸಂ॥ |
| (ಕ್ರಿ. ಶ. 1186) | (ಕ್ರಿ. ಶ. 1221) |

ಯದ್ವದ್ರಿಸಂಪತ್ಸ್ವತ ಪಾದಸೇವಾ ಕೈಂಕರ್ಯಸಾಮ್ರಾಜ್ಯ ಪದಾಭಿಷಿಕ್ತಂ
ಶ್ರುತ್ಯಂತಯುಗ್ಮಾರ್ಥಸುಧಾನಿಧಾನಂ ನಮಾಮಿನಾರಾಯಣ ಯೋಗಿವರ್ಯಂ ॥

**ಶ್ರೀಯತಿರಾಜಜೀಯರು** ಶ್ರೀತಿರುನಾರಾಯಣ ಜೀಯರಿಂದ ಆಶ್ರಮವನ್ನೂ ಅಧಿಕಾರವನ್ನೂ ವಹಿಸಿ ಶಾ.ಶ. ೧೧೦೮ನೇ ಪರಾಭವ ಸಂ॥ (ಕ್ರಿ.ಶ.1186)ದಲ್ಲಿ ಪೀಠಸ್ಥರಾಗಿ ಬಂದಮೇಲೆ ಶ್ರೀತಿರುನಾರಾಯಣಸ್ವಾಮಿಯ ಅಂಗರಂಗವೈಭವಗಳನ್ನು ನಡೆಸಿಕೊಂಡು ಬಂದರು.

ಈ ಜೀಯರ ಕಾಲದಲ್ಲಿ ಶಕ ೧೧೧೨ನೇ ಸೌಮ್ಯ ಸಂ॥ ಶ್ರಾವಣ ಶು.ಸೋ (ಕ್ರಿ.ಶ. 1189) ಸರ್ವಾಧಿಕಾರಿ, ಸೇನಾಪತಿ ಜ್ಯೋತಿಮಯ್ಯಗಳು ಮತ್ತು ಬಲಯ್ಯಗಳು ತಿರುನಾರಾಯಣಪುರದ ಕೋಟೆಯನ್ನು ರಕ್ಷಿಸುತ್ತಿರುವಾಗ ಅವರ ಮಕ್ಕಳು ಸೀಲಯ್ಯಗಳು, ಚಾಮಯ್ಯಗಳು ಶ್ರೀತಿರುನಾರಾಯಣದೇವರಿಗೆ ನಂದಾದೀವಿಗೆ ಮೊದಲಾದ ಕೆಲವು ಧರ್ಮಗಳನ್ನು ಮಾಡಿದರು. ಈ ಶಾಸನದಿಂದ ತಿರುನಾರಾಯಣ

ಪುರಕ್ಕೆ ಕೋಟೆಯು ಶ್ರೀರಾಮಾನುಜಾಚಾರ್ಯರ ಕಾಲದಲ್ಲಿಯೇ ಕಟ್ಟಿರಬೇಕೆಂದು ತಿಳಿದುಬರುತ್ತದೆ. (ಶ್ರೀರಂಗಪಟ್ಟಣ ಶಾಸನ ನಂ. ೧೫೨)

ಶಕ ೧೧೨೧ ನೇ ಸಿದ್ಧಾರ್ಥಿ (ಕ್ರಿ.ಶ.1199) ಸಂ|| ದಲ್ಲು ತೀರ್ಥಪ್ಪೊಡೆ ನಾಯಕರು ತಿರುನಾರಾಯಣಸನ್ನಿಧಿಗೆ ಕೆಲವು ಗ್ರಾಮ, ಭೂಮಿಗಳನ್ನೂ, ದೇಶಾಯಿ ವರಮಾನವನ್ನೂ ಕಲ್ಪಿಸಿ ಮಾದಪ್ಪ ದಣ್ಣಾನಾಯಕರ ಆಜ್ಞೆಯಂತೆ ಧರ್ಮಶಾಸನವನ್ನು ಬರೆದರು. ಈ ಶಾಸನವು ಮಹಾರಾಜಾಧಿರಾಜರಾದ ವೀರಬಲ್ಲಾಳದೇವನಿಂದ ಸ್ಥಿರಪಡಿಸಲ್ಪಟ್ಟಿತು. (ಶ್ರೀ. ಪ. ಶಾಸನ ನಂ. ೧೦೪)

ವೀಬಲ್ಲಾಳರಕಾಲದಲ್ಲಿ ಶ್ರೀತಿರುನಾರಾಯಣದೇವರಿಗೆ ನೆಲುಕೋಟೆಯ ಅಶೇಷ ಮಹಾಜನಂಗಳು ಹಿಂದೆ ಮಾಡಿರುವ ಧರ್ಮವಲ್ಲದೆ ಈಗಲೂ ಕೆಲವು ಧರ್ಮಮಾಡಿರುವರು. ಕಾಲ ಸುಮಾರು ಕ್ರಿ.ಶ. 1215 (ಶ್ರೀ. ಪ. ಶಾ. ೨೮೩)

ಶಕ ೧೧೩೮ನೇ ಯುವಸಂವತ್ಸರದ ಪುಷ್ಯಶುದ್ಧ . . . [ಕ್ರಿ.ಶ. 1215 ರಲ್ಲಿ ಶ್ರೀತಿರುನಾರಾಯಣದೇವರಿಗೆ, ತಿರುವಡಿಯಾಟಕ್ಕೂ ತಿರುಲತವಲಟ್ಟಿಗೂ ಕೈಂಕರ್ಯವಾಗಿ ಕೆಲವು ಧರ್ಮಗಳು ನಡೆಸಲ್ಪಟ್ಟವು. (ಶ್ರೀರಂಗಪಟ್ಟಣ ಶಾಸನ ೭೬)

ಈ ರೀತಿ ಆಯಾ ರಾಜ, ಅಧಿಕಾರಿ, ಭಕ್ತರುಗಳು ಸಮರ್ಪಿಸಿದ ಧರ್ಮಗಳನ್ನು ಶ್ರೀತಿರುನಾರಾಯಣ ಕೈಂಕರ್ಯವಾಗಿ ೩೪ ವರುಷ, ೧೦ ತಿಂಗಳು, ೨೦ ದಿನಗಳವರೆಗೆ ನಡೆಯಿಸಿ ತಮ್ಮ ಅಂತ್ಯಕಾಲದಲ್ಲಿ ಶಿಷ್ಯರಾದ ಯದುಗಿರಿ ನಾರಾಯಣಜೀಯರಿಗೆ ಪಟ್ಟವನ್ನು ಕಟ್ಟಿ ರಾಮಾನುಜಮುದ್ರೆ ಉಂಗುರವನ್ನು ಕೊಟ್ಟು ಶಕ ೧೧೪೪ ನೇ ವೃಷ ಸಂ||. . . . . [ಕ್ರಿ.ಶ. 1221] ದಲ್ಲಿ ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ೩೪ ಚಾತುರ್ಮಾಸವ್ರತಗಳನ್ನು ಅನುಷ್ಠಿಸಿ ಬಂದವರಾದರು.

# ಶ್ರೀ ಯದುಗಿರಿ ನಾರಾಯಣಜೀಯರು

ಆಶ್ರಮಸ್ವೀಕಾರಕಾಲಃ
ಶಾ.ಶ. ೧೧೪೪ ವೃಷ ಸಂ||
(ಕ್ರಿ. ಶ. 1221)

ಪರಮಪದಕಾಲಃ
———

ಅರ್ಚಾಂ ಗತೋಪಿ ನಮತಾಮವನಾಯ ಸಾಕ್ಷಾ
ತ್ಸೇವಾಂ ಸಮೃದ್ಧಯತಿ ಯೋ ಯದುಶೈಲಭರ್ತುಃ
ರಾಮಾನುಜಂ ತಮನಿಶಂ ಸ್ವಯ ಮರ್ಚಯಂತಂ
ಸಂಪತ್ಸುತಾಖ್ಯಯಮಿನಂ ಶರಣಂ ಪ್ರಪದ್ಯೇ ||

ಈ ಮಹಾತ್ಮರು ಶ್ರೀಯತಿರಾಜ ಜೀಯರಿಂದ ಶಕ ೧೧೪೪ ನೇ ವೃಷ ಸಂ|| (ಕ್ರಿ.ಶ. 1221) ರಲ್ಲಿ ಸನ್ಯಾಸಾಶ್ರಮವನ್ನೂ, ಅಧಿಕಾರವನ್ನೂ ಹೊಂದಿ **ರಾಮಾನುಜಮುದ್ರೆಯುಂಗುರವನ್ನು** ಸ್ವೀಕರಿಸಿ ಈ ದೇವಸ್ಥಾನದ ಸಕಲ ಮರ್ಯಾದೆಯಿಂದ ಶ್ರೀತಿರುನಾರಾಯಣದೇವರ ಅಂಗರಂಗವೈಭವ ಕೈಂಕರ್ಯ ಗಳನ್ನು ನಡೆಸಿಕೊಂಡುಬಂದರು. ಇವರಿಗೆ ನಾರಾಯಣಪಟ್ಟವು. ಇವರ ಕಾಲದಲ್ಲಿ ಸುಮಾರು ಕ್ರಿ. ಶ. 1225 - ಪೆರುಮಾಳ್ ದಣ್ಣನಾಯಕರ ಮಕ್ಕಳು ಮಹಾಪ್ರಧಾನ ಇಮ್ಮಡಿ ರಾಹುತರಾಯರೂ ಮಾದಪ್ಪ ದಣ್ಣನಾಯಕರೂ ಮತ್ತು ಕೇತಪ್ಪದಣ್ಣ ನಾಯಕರೂ ಸಹ ಕೆಲವು ಭೂಮಿಗಳನ್ನು ನಾರಾಯಣಸ್ವಾಮಿಗೆ ಸಮರ್ಪಿಸಿದರು. (ಶ್ರೀ. ಪ. ಶಾ ೯೨)

ಅಲ್ಲದೆ ಪುನಃ ಶಕ ೧೧೮೨ ಸಿದ್ಧಾರ್ಥೀ ಸಂ|| ಆಷಾಢ ಶು. ೧ ಸೋ ದಲ್ಲೂ (ಕ್ರಿ.ಶ. 1259) ಮಾದಪ್ಪದಣ್ಣನಾಯಕರೂ, ಇಮ್ಮಡಿ ರಾಹುತರಾಯರುಗಳು **ತಿರುಮಣ್ಣಪೆರುಮಾಳಿಗೆ** (ನಾಮದಗರುಡದೇವರಿಗೆ) ಕೆಲವು ಧರ್ಮಗಳನ್ನು ಮಾಡಿರುವರು. ಶ್ರೀರಾಮಾನುಜಾಚಾರ್ಯರ ಹೆಸರು ಉಲ್ಲೇಖಿಸಿರುವ ಶಾಸನಗಳಲ್ಲಿ ಇದೇ ಮೊದಲನೆಯದಾಗಿರುವುದು. (ಶ್ರೀರಂಗಪಟ್ಟಣ ಶಾಸನ ನಂ ೮೦)

ಕ್ರಿ.ಶ. 1205 ರಿಂದ 1311 ರವರೆಗೆ ದೇಶದಾದ್ಯಂತ ತುರುಷ್ಕರ ಹಾವಳಿಯ ಅವಾಂತರದಿಂದ ದೇಶಕೋಶಗಳು ನಾಶಮಾಡಲ್ಪಟ್ಟವು. ಈ ಕಾರಣ ದೆಸೆಯಿಂದ ದೇವಸ್ಥಾನದ ಕೆಲವು ಭಾಗಗಳು ವ್ಯತ್ಯಾಸವಾಗಿ ಶಕ ೧೨೩೪ ನೇ ಪರೀಧಾವಿ ಸಂ॥ ಶ್ರಾವಣ ಬ. ೧೩ ಮಂ. ದಲ್ಲೂ [ಕ್ರಿ. ಶ. ೧೩೧೨] ಮಹಾಪ್ರಧಾನ ಮಾಧವ ದಣ್ಣನಾಯಕರು ೧೧೧೫ ವರಹಗಳಿಂದಲೂ, ಸ್ಥಳದ ಅಲ್ಲಾಳ ಸೆಟ್ಟಿಯ ಮಗ ಕೇತಿಸೆಟ್ಟಿಯು ಕೊಟ್ಟ ಸುಮಾರು ೨೫೦ ವರಹಗಳಿಂದಲೂ ಶ್ರೀರಾಮಾನುಜಾಚಾರ್ಯರ ಸನ್ನಿಧಿಯಿಂದ ಪಾಕಶಾಲೆವರೆಗಿರುವ ಪಾತಾಳಂಕಣವು ಹೊಸದಾಗಿ ಕಟ್ಟಲ್ಪಟ್ಟಿರಬೇಕು, ಅಥವಾ ಜೀರ್ಣೋದ್ಧಾರವಾಗಿರಬೇಕೆಂದು ತಿಳಿದು ಬರುವುದು. [ಶ್ರೀರಂಗಪಟ್ಟಣ ಶಾಸನ ನಂ. ೨೮೧–೨೮೨]

ಸುಮಾರು ಕ್ರಿ.ಶ. 1320–25 ರಲ್ಲಿ ವೇದಾಂತ ವಿದ್ವತ್ಪ್ರಸಿದ್ಧರಾದ ವೇದಾಂತ ದೇಶಿಕರು [1270—1370] ಈ ತಿರುನಾರಾಯಣಪುರಕ್ಕೆ ದಯಮಾಡಿಸಿ ಶ್ರೀತಿರುನಾರಾಯಣಸ್ವಾಮಿ ಚಲುವರಾಯಸ್ವಾಮಿಯವರನ್ನು ಮಂಗಲಾಶಾಸನ ಮಾಡಿದರು.

ರಾಜಕೀಯ ಕಾರಣಗಳನ್ನೊಳಗೊಂಡು ತುರುಷ್ಕರ ಹಾವಳಿಗಳಿಂದ ಕೂಡಿದ ಈ ಕಾಲದಲ್ಲಿ ಶ್ರೀರಂಗಕ್ಷೇತ್ರವೂ ನಾಶವಾಗಿ ಅಲ್ಲಿನ ರಂಗನಾಥದೇವರು ತಿರಕಣಾಂಬಿಗೆ (ಕ್ರಿ.ಶ. ) ಬಿಜಯ ಮಾಡಿಸಿದ್ದರು. ಅಲ್ಲಿಂದ ಹಿಂತಿರುಗುವಾಗ ಸುಮಾರು ಈ ಕಾಲದಲ್ಲಿ ಶ್ರೀರಂಗನಾಥದೇವರು ಮೇಲುಕೋಟೆಯಲ್ಲಿ ಕೆಲವು ಕಾಲ ಬಿಜಯಮಾಡಿಸಿದ್ದರು.

---

## ಶ್ರೀ ರಾಮಾನುಜಜೀಯರು

ಈ ಮಹಾತ್ಮರು ಆಶ್ರಮ ವಹಿಸಿ ಶ್ರೀಯತಿರಾಜ ಮಠದಲ್ಲಿ ಪೀಠಸ್ಥರಾಗಿ ದೇವಸ್ಥಾನದ ಸಕಲ ಮರ್ಯಾದೆಗಳನ್ನು ಹೊಂದಿ ಶ್ರೀನಾರಾಯಣಸ್ವಾಮಿಯ ಅಂಗರಂಗ ವೈಭವಗಳನ್ನೂ ನಡೆಸಿಬಂದರು.

ಈ ಮಧ್ಯಕಾಲದಲ್ಲಿ ದೇಶದಲ್ಲಿ ಭಕ್ತರಿಗೂ ಜೈನರಿಗೂ ಕಲಹವುಂಟಾಗಿ ಭಕ್ತರು ಸುಮಾರು ೭೦೦ ಜಿನದೇವಾಲಯಗಳವರೆಗೆ ನಾಶಮಾಡಿದರು. ಜೈನರ ಸಹಾಯಕ್ಕಾಗಿ ಶ್ರೀವೈಷ್ಣವರು ಪ್ರಯತ್ನಿಸಲು ಇದರಿಂದ ಶ್ರೀವೈಷ್ಣವ ದೇವಸ್ಥಾನಗಳೂ ನಾಶಮಾಡಲ್ಪಟ್ಟು ಭಕ್ತರು ರಾಜಶಾಸನವನ್ನು ಮೀರಿದರು. ಈ ವಿಚಾರವೆಲ್ಲ

ಮಹಾರಾಜ ಬುಕ್ಕಣ್ಣರಾಯರಿಗೆ ತಿಳಿದು, ಶ್ರೀವೈಷ್ಣವರಿಂದ ಜೈನ ಸಮುದಾಯದವರಿಗೆ ಸಹಾಯಮಾಡಿಸಿ ಭಕ್ತರನ್ನು ಅಡಗಿಸಿದರು.

ಈ ಕಾಲದಲ್ಲಿ ಶ್ರೀವೈಷ್ಣವರು ಪ್ರಬಲರಾಗಿದ್ದುದನ್ನು ಕಂಡು ಶ್ರೀಬುಕ್ಕಣ್ಣ ಮಹಾರಾಜರು, ಶ್ರೀರಂಗ, ತಿರುಪತಿ, ಕಾಂಚೀಪುರ, ತಿರುನಾರಾಯಣಪುರದ ಈ ನಾಲ್ಕು ಸ್ಥಳಗಳ ಮುಖ್ಯರಾದ ಶ್ರೀವೈಷ್ಣವ ಸಕಲಾಚಾರ್ಯರುಗಳನ್ನೂ ಮತ್ತು ಇತರ ಸಮಯಿಗಳನ್ನೂ ಕರೆದು ಮಹಾಸಭೆಯನ್ನು ಸೇರಿಸಿ ಶ್ರೀವೈಷ್ಣವರು ತಮ್ಮ ಮತದೊಂದಿಗೆ ಜೈನಮತವನ್ನು ಭೇದಮಾಡದೆ ಜೈನಧರ್ಮವನ್ನು ಕಾಪಾಡಿ ಕೊಂಡು ಬರಬೇಕೆಂದೂ, ಇದಕ್ಕಾಗಿ ಜೈನರು ತಮ್ಮ ಶುಭಶೋಭನಗಳಲ್ಲಿ ಶ್ರೀವೈಷ್ಣವರಿಗೆ, ಪಂಚಮಹಾವಾದ್ಯಗಳು, ಕಳಶ, ಕನ್ನಡಿ, ಶ್ವೇತಛತ್ರಿ, ಚಾಮರ ಮೊದಲಾದ ಬಿರುದುಮರ್ಯಾದೆಗಳಿಂದ ಅಗ್ರತಾಂಬೂಲವನ್ನು ಕೊಟ್ಟು ಬರುವುದಲ್ಲದೆ ಮನೆಮನೆಗೆ ಒಂದು ಹಣದಂತೆ ಕೊಟ್ಟು ಬರುವುದೆಂದೂ, ಆ ಹಣದಿಂದ ಶ್ರೀವೈಷ್ಣವ ದೇವಾಲಯಗಳನ್ನೂ ಜಿನಾಲಯಗಳನ್ನೂ ಶ್ರೀವೈಷ್ಣವರು ಕಾಪಾಡಿ ಬರಬೇಕೆಂದೂ ತೀರ್ಮಾನಿಸಿ ಶಕ ೧೨೯೧ ನೇ ಕೀಲಕ ಸಂ|| ಭಾದ್ರಪದ ಶು. ೧೦ ಬೃ. [ಕ್ರಿ.ಶ. 1368] ಧರ್ಮಶಾಸನವನ್ನು ಬರೆದರು.

[ಶ್ರವಣಬೆಳಗೊಳ ಶಾಸನ ನಂ ೩೪೪, ಮಾಗಡಿ ೧೮]

ಈ ಶಾಸನದಲ್ಲಿ ಶ್ರೀರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತ ಸಾರ್ವಭೌಮರೆಂಬ ವಿಚಾರವಾದ ಈ ಕೆಳಗಿನ ಶ್ಲೋಕವು ಬರೆದಿರುವುದು.

ಪಾಷಂಡಸಾಗರ–ಮಹಾ–ಬಡಬಾ–ಮುಖಾಗ್ನಿ (ಶ್)
ಶ್ರೀರಂಗರಾಜ ಚರಣಾಂಬುಜ-ಮೂಲ–ದಾಸಃ
ಶ್ರೀವಿಷ್ಣುಲೋಕ ಮಣಿಮಂಟಪ ಮಾರ್ಗದಾಯೀ
ರಾಮಾನುಜೋವಿಜಯತೇ ಯತಿರಾಜ ರಾಜಃ ||

ಮೇಲಿನ ಮತ್ತು ಇನ್ನೂ ಇತರ ಕಾರಣಗಳನ್ನೊಳಗೊಂಡ ಸುಮಾರು ಈಕಾಲದಲ್ಲೇ ಮೇಲುಕೋಟೆಯಲ್ಲಿ ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ ಕಟ್ಟಲ್ಪಟ್ಟಿದ್ದ ಶಿವದೇವಾಲಯವು ಅಳಿದು ಆ ಕಟ್ಟಡದಲ್ಲಿ ನಮ್ಮಾಳ್ವಾರ್‌ರವರ ವಿಗ್ರಹ ಪ್ರತಿಷ್ಠೆಯಾಗಿರಬಹುದೆಂದು ತೋರುತ್ತದೆ. ಇದಕ್ಕೆ ಅನುಗುಣವಾಗಿ ಶಕ ೧೨೯೨ ನೇ ಸೌಮ್ಯ ಸಂ|| ಅಶ್ವಯುಜ, ೧೦ ಸೋ. ದಲ್ಲೂ (ವಿಜಯದಶಮಿ) [ಕ್ರಿ. ಶ. 1369] ತಿರುನಾರಾಯಣಪುರದ ಶ್ರೀವೈಷ್ಣವರು ನಮ್ಮಾಳ್ವಾರ್‌ರವರ ಜನ್ಮದಿನವಾದ ವಿಶಾಖನಕ್ಷತ್ರ ಮತ್ತು ಶ್ರೀತಿರುನಾರಾಯಣ ಸ್ವಾಮಿಯ ತಿರುವಡಿಯಾಟಕ್ಕೂ, ದೇವರ ಅಮೃತಪಡಿ,ದೀವಿಗೆ, ಎಣ್ಣೆ, ತಿರುನಾಳು,

ಮತ್ತು ನಿತ್ಯನೈಮಿತ್ತಿಕದಲ್ಲೂ ಸಮಾರಾಧನೆ ಇತ್ಯಾದಿ ಧರ್ಮಗಳನ್ನು ಮಾಡಿ ಧರ್ಮಸಾಧನವನ್ನು ಬರೆದರು. ಈ ಧರ್ಮಗಳ ಮೇಲ್ವಿಚಾರಣೆಯೆಲ್ಲವನ್ನೂ ಶ್ರೀಯತಿರಾಜಮಠದ ಶ್ರೀರಾಮಾನುಜಜೀಯರು ನೋಡುವುದಾಗಿದ್ದಿತು.

[ಶ್ರೀರಂಗಪಟ್ಣ ಶಾಸನ ನಂ. ೮೭]

ಇದಾದ ಕೆಲವು ವರ್ಷಗಳಲ್ಲಿಯೇ ಈಗಿನ ಮೈಸೂರು ದೊರೆಗಳ ಮೂಲ ಪುರುಷರಾದ ಯದುರಾಯ, ಕೃಷ್ಣರಾಯರು ಯಾದವಗಿರಿಗೆ ಬಂದು ಕಲ್ಯಾಣೀತೀರ್ಥದಲ್ಲಿ ಸ್ನಾನಮಾಡಿ ತಮ್ಮ ಕುಲದೈವವಾದ ಶ್ರೀತಿರುನಾರಾಯಣಸ್ವಾಮಿ ಚಲುವರಾಯಸ್ವಾಮಿಯವರನ್ನೂ ಸೇವಿಸಿ ಅವರ ಅನುಗ್ರಹದಿಂದ ಮೈಸೂರು ರಾಜ್ಯವನ್ನು ಪಡೆದರು. [ಪಟ್ಟಾಭಿಷೇಕ ಕಾಲ ಕ್ರಿ. ಶ.1399]

---

ಈ ಮಧ್ಯಕಾಲದಲ್ಲಿ ಶ್ರೀವೈಷ್ಣವ ಆಚಾರ್ಯರಾದ ಮಣವಾಳಮಾಮುನಿಗಳು (ಕಾಲ ಕ್ರಿ. ಶ. 1270–1444) ದಿವ್ಯದೇಶ ಯಾತ್ರೆಯನ್ನು ಮಾಡಿಬರುವಾಗ ತಿರುನಾರಾಯಣಪುರದಲ್ಲಿ ಜನನ್ಯಾಚಾರ್ಯರೆಂಬುವರು ಆಚಾರ್ಯ ಹೃದಯವೆಂಬ ಗ್ರಂಥಕ್ಕೆ ಅರ್ಥವನ್ನು ಬಹು ಅರ್ಥಗರ್ಭಿತವಾದ ರಸದಿಂದ ಹೇಳುವರೆಂದು ಕೇಳಿ ತಾವು ಅವರಲ್ಲಿ ಕಾಲಕ್ಷೇಪಮಾಡಬೇಕೆಂದು ತಿರುನಾರಾಯಣಪುರಕ್ಕೆ ಬಂದರು. ಇಲ್ಲಿ ತಿರುನಾರಾಯಣದೇವರನ್ನು ಶೆಲ್ವಪಿಳ್ಳೆಯವರನ್ನು ಮಂಗಲಾಶಾಸನಮಾಡಿ ಜನನ್ಯಾಚಾರ್ಯರಲ್ಲಿ ಕೆಲವು ದಿನ ಆಚಾರ್ಯ ಹೃದಯವೇ ಮುಂತಾದ ಸಂಪ್ರದಾಯ ಗ್ರಂಥಗಳಿಗೆ ವಿಶೇಷಾರ್ಥಗಳನ್ನು ಕೇಳಿದರು.

ಶಾ. ಶ. ೧೩೩೮ ಸಂದು ವರ್ತಮಾನವಾದ ದುರ್ಮುಖಿ ಸಂವತ್ಸರದ ಕಾರ್ತೀಕ ಶು. ೧೦ ಸೋಮವಾರದಲ್ಲು (ಕ್ರಿ. ಶ. 1416) ಅರವಣೆಯ ತಿಮ್ಮರಸರೂ, ತಿಪ್ಪರಸರೂ ಸಹ ಶ್ರೀ ತಿರುನಾರಾಯಣದೇವರಿಗೆ ನಂದಾದೀಪ ಮತ್ತು ನೈವೇದ್ಯಕ್ಕಾಗಿ ಬಳಿಘಟ್ಟದ ಕಾಲುವಳಿ, ಮದೇನಹಳ್ಳಿ ಗ್ರಾಮವನ್ನೂ, ದೇಶಾಯಿ ವರಮಾನ ಅಧಿಕಾರವನ್ನೂ ಸಹ ಸರ್ವಮಾನ್ಯವಾಗಿ ಕೊಟ್ಟು ದಾನಶಾಸನವನ್ನು ಬರೆದರು. (ಶ್ರೀರಂಗಪಟ್ಣ ಶಾಸನ ನಂ. ೧೦೫)

ವೀರಪ್ರತಾಪದೇವರಾಯರು ಪೃಥ್ವೀರಾಜ್ಯವಾಳುತ್ತಿರುವಾಗ ಶಕ ೧೩೫೪ ನೇ ವಿರೋಧಿಕೃತು ಸಂ|| [ಕ್ರಿ. ಶ. 1432] ಪುಷ್ಯ ಬ. ೭ ಶುಕ್ರವಾರದಲ್ಲು ದೇವರಾಯಮಹಾರಾಯರು ಸಂಪತ್ಕುಮಾರ ತಿರುನಾರಾಯಣದೇವರಿಗೆ ತಮ್ಮ ಧರ್ಮವಾಗಿ ವಸಂತೋತ್ಸವ ತಿರುನಾಳನ್ನು ನಡೆಸುವುದಕ್ಕಾಗಿ ಹೊಸಹಳ್ಳಿ ಗ್ರಾಮವನ್ನು ದಾನವಾಗಿಕೊಟ್ಟು ಶಿಲಾಶಾಸನವನ್ನು ಪ್ರತಿಷ್ಠಿಸಿದರು. [ನಂ ೯೧]

# ಶ್ರೀ ಯತಿರಾಜ ರಾಮಾನುಜಜೀಯರು

ಆಶ್ರಮಸ್ವೀಕಾರಕಾಲ :

ಈ ಮಹಾಪುರಷರು ತುರ್ಯಾಶ್ರಮವನ್ನು ಸ್ವೀಕರಿಸಿ ಶ್ರೀಯತಿರಾಜಮಠದಲ್ಲಿ ಪೀಠಸ್ಥರಾಗಿದ್ದು, ಶ್ರೀತಿರುನಾರಾಯಣ ಚೆಲ್ವಪಿಳ್ಳೆ ಇವರುಗಳ ಅಂಗರಂಗ ವೈಭವಗಳನ್ನೂ ದೇವಸ್ಥಾನದ ಮೇಲ್ವಿಚಾರಣೆಯನ್ನೂ ಮಾಡಿ ವೇದಾಂತ ಧರ್ಮಬೋಧಕರಾಗಿದ್ದರು.

ರಾಜಕೀಯ ಕಾರಣಗಳಿಂದಲೂ, ತುರುಷ್ಕರ ಹಾವಳಿಯಿಂದಲೂ ಊರು ಸಂಪೂರ್ಣವಾಗಿ ನಾಶಮಾಡಲ್ಪಟ್ಟು, ಶ್ರೀನಾರಾಯಣಸ್ವಾಮಿ, ಚಲುವರಾಯಸ್ವಾಮಿ ಇವರ ಕೈಂಕರ್ಯಗಳು ಲೋಪವಾಗಿದ್ದವು. (ಶ್ರೀ. ಪ. ಶಾಸನ ೮೯)

ಮಲ್ಲಿಕಾರ್ಜುನ ಮಹಾರಾಜರ ಮಂತ್ರಿಗಳಾದ ನಾಗಮಂಗಲದ ಮಹಾಪ್ರಭು ಪರಮಭಾಗವತ ಲೋಹಿತಕುಲಶೇಖರ ಶಿಂಗಣಾಚಾರ್ಯರ ಮಕ್ಕಳು ಸೀತಾಂಬಿಕಾ ತಪಃಫಲದಿಂದ ಜನಿಸಿದ ವೇದಮಾರ್ಗಪ್ರತಿಷ್ಠಾಪನಾಚಾರ್ಯ, ಯಾದವಗಿರಿ ಜೀರ್ಣೋದ್ಧಾರಕ ತುಲಾ ಪುರುಷಾದಿ ಮಹಾದಾನವ್ರತ ದೀಕ್ಷಿತ ಮಹಾಪ್ರಧಾನ ತಿಮ್ಮಣ್ಣದಣ್ಣನಾಯಕರು ತಮ್ಮ ಧರ್ಮಪತ್ನಿ ರಂಗನಾಯಕಮ್ಮನು ರಾಮಾನುಜಕೂಟವನ್ನು (ಅನ್ನಛತ್ರ) ಕಟ್ಟಿಸಿ ನಿತ್ಯ ತದೀಯಾರಾಧನೆ ನಡೆಸಬೇಕೆಂದು ಕೇಳಿಕೊಂಡಪ್ರಕಾರ ಶಕ. ೧೩೮೧ ನೇ ಬಹುಧಾನ್ಯ ಸಂ|| ಮಾರ್ಗಶಿರ ಬ. ಶನಿವಾರದಲ್ಲು (ಕ್ರಿ.ಶ. 1457) ಧರ್ಮಸಾಧನವನ್ನು ಬರೆದು ಶ್ರೀಮದನಾದಿ ಮಹಾಸ್ಥಾನ ವೈಕುಂಠವರ್ಧನಕೃತಾ, ಭೂಲೋಕ ವೈಕುಂಠ, ಜ್ಞಾನಮಂಟಪ, ಯಾದವಗಿರಿ ತಿರುನಾರಾಯಣದೇವರಿಗೆ. ರತ್ನಾಭರಣ ರಚಿತ ಪರ್ಯಂಕವನ್ನೂ, ಸುದರ್ಶನಾಳ್ವಾರ್ ಸನ್ನಿಧಿಯಿಂದ ಲಕ್ಷ್ಮೀ ಅಮ್ಮನವರ ಸನ್ನಿಧಿವರೆಗೂ, ಅಲ್ಲಿಂದ ಶ್ರೀರಾಮಾನುಜಾಚಾರ್ಯರ ಸನ್ನಿಧಿವರೆಗೂ, ಇರುವ ರಂಗಮಂಟಪವನ್ನೂ, ಪಾಕಶಾಲೆಯಿಂದ ಸುದರ್ಶನಾಳ್ವಾರ್ ಸನ್ನಿಧಿಯುವರೆಗೂ ಮತ್ತು ದೇವಸ್ಥಾನದ ಸುತ್ತಲೂ ಕೈಸಾಲೆಯನ್ನೂ ಕಟ್ಟಿಸಿ, ಮಹಾತಟಾಕಾದಿ ಸಕಲವಿಧ ಕೈಂಕರ್ಯಗಳನ್ನೂ ಮಾಡಿದರು. (ಶ್ರೀ. ಪ. ಶಾ ನಂ. ೮೯—೯೭)

ಶ್ರೀನಾರಾಯಣಸ್ವಾಮಿ ದೇವಸ್ಥಾನದ ಉತ್ತರ ಪಾರ್ಶ್ವದಲ್ಲಿ ಅರಣ್ಯವಾಗಿ ಬೆಳೆದು ಅರೂಪವಾಗಿದ್ದ ನಿವೇಶನವನ್ನು ಕ್ರಯಕ್ಕೆ ತೆಗೆದುಕೊಂಡು ದೇಶಾಂತ್ರಿಮಠವಾಗಿ ಕಲ್ಪಿಸಿ ಅದರಲ್ಲಿ ಚತುರ್ವಿಂಶತಿ (೨೪ ಜನ) ಶ್ರೀವೈಷ್ಣವಬ್ರಾಹ್ಮಣರುಗಳಿಗೆ ತದೀಯಾರಾಧನವು ಸಾರೋದ್ಧಾರವಾಗಿ ನಡೆದುಬರುವುದಕ್ಕಾಗಿ

ಮೋಕ್ಕೋಟೆಗೆ ಸೇರಿದ ಬಸೇನಹಳ್ಳಿ, ಯಬನವನಹಳ್ಳಿ ಮತ್ತು ರಂಗಸಮುದ್ರದ ಏರಿಕೆಳಗಿನ ಕೆಲವು ಭೂಮಿಗಳನ್ನೂ ದಾನವಾಗಿ ಬಿಟ್ಟು ಮಹಾರಾಜಾಧಿರಾಜರಾದ ವೀರಪ್ರತಾಪ ಇಮ್ಮಡಿ ಪ್ರೌಢಮಹಾರಾಜರ (ಮಲ್ಲಿಕಾರ್ಜುನಮಹಾರಾಜರು) ಅನುಮತಿಯನ್ನು ಹೊಂದಿ ಧರ್ಮಸಾಧನವನ್ನು ಬರೆದರು. ಆ ರಾಮಾನುಜಕೂಟದ (ಅನ್ನಛತ್ರ) ಮೇಲ್ವಿಚಾರಣೆ ಅಧಿಕಾರವನ್ನೆಲ್ಲಾ ಶ್ರೀ ಸಂಪತ್ಕುಮಾರ ಸಕಲವಿಧ ಕೈಂಕರ್ಯ, ಮತ್ತುವೇದಾಂತ ಧರ್ಮಬೋಧಕರಾದ ಶ್ರೀ ಯ ತಿ ರಾ ಜ ಮ ಠ ದ ಶ್ರೀ ರಾಮಾನುಜಜೀಯರ ಸನ್ನಿಧಿಯಲ್ಲಿ ಒಪ್ಪಿಸಿದರು.

ಈ ಧರ್ಮಗಳಲ್ಲದೆ ಶಕ ೧೩೮೩ ನೇ ವಿಕ್ರಮಸಂ|| ದಲ್ಲಿ (ಕ್ರಿ. ಶ. 1460) ತಮ್ಮ ತಾಯಿ ಸೀತಮ್ಮನವರ ಹೆಸರಿನಲ್ಲಿ ಕೆಲವು ಭೂಮಿಗಳನ್ನು ಬಿಟ್ಟು ೨೦ ವೃತ್ತಿಗಳನ್ನಾಗಿಮಾಡಿ ಧರ್ಮ ಅಗ್ರಹಾರವಾಗಿಕಟ್ಟಿ ದಾನಮಾಡಿದರು. (ಶ್ರೀರಂಗಪಟ್ಟಣ ಶಾಸನ ನಂ. ೨೮೦)

ಅಲ್ಲದೆ ನಮ್ಮಾಳ್ವಾರ್ರವರ ಕೈಂಕರ್ಯಕ್ಕಾಗಿ ಶಕ೧೩೯೨ ನೇ ವಿರೋಧಿಸಂ (ಕ್ರಿ.ಶ.1469) ಆಶ್ವಯುಜ ಬ..... ಪುಣ್ಯಕಾಲದಲ್ಲಿ ಕೆಲವು ಗ್ರಾಮಭೂಮಿಗಳನ್ನೂ ಅಗ್ರಹಾರಾದಿಗಳನ್ನೂ ದಾನಮಾಡಿದರು. ಇವರ ಜೊತೆಯಲ್ಲಿ ಸೇರಿ ತಿರುನಾರಯಣ ಪುರದ ನಾಚ್ಚಿಯಾರಮ್ಮನೂಸಹ ನಮ್ಮಾಳ್ವಾರ್ರವರ ಮತ್ತು ನಾರಾಯಣಸ್ವಾಮಿಯ ಕೈಂಕರ್ಯ ಮಾಡಲು ೧೩ ಗೃಹಗಳನ್ನು ಕಟ್ಟಿಸಿ, ೧೩ ಗೃಹಗಳಲ್ಲಿ ೧೨ ಶ್ರೋತ್ರಿಯ ಬ್ರಾಹ್ಮಣರಿಗೂ, ೧ ಗೃಹವು ದೇವಸ್ಥಾನದ ಕೈಂಕರ್ಯಪರರಾದ ಐವತ್ತಿಬ್ಬರಿಗೂಕೊಟ್ಟು ಮೇಲಿನ ಪುಣ್ಯಕಾಲದಲ್ಲಿ ಧರ್ಮಸಾಧನವನ್ನು ಬರೆದರು. (ಶ್ರೀರಂಗಪಟ್ಟಣ ಶಾಸನ ನಂ. ೮೬)

ಶಕ ೧೪೩೩ ನೇ ಪ್ರಮೋದೂತ ಸಂ|| (ಕ್ರಿ.ಶ. ೧೫೧೦) ಚೈತ್ರಶುದ್ಧ ೨ ರಲ್ಲು ಈ ರಾಮಾನುಜಕೂಟಕ್ಕೆ ಕೆಲವು ದೇಶಾಯಿವರಮಾನ ಧರ್ಮವು ಬರದಂತೆ ಶಿಲಾಶಾಸನವು ಕಂಡುಬರುವುದು —

# ಶ್ರೀ ವೇದಾನ್ತಿ ರಾಮಾನುಜ ಮುನಿಗಳು

ಆಶ್ರಮಸ್ವೀಕಾರಕಾಲಃ

ಶ್ರೀಮಲ್ಲಕ್ಷ್ಮಣಯೋಗೀಂದ್ರ ವಾಧೂಲವರದಾರ್ಯಯೋಃ
ಕೃಪಾಸುಪಾತ್ರಂ ವೇದಾಂತರಾಮಾನುಜಮುನಿಂ ಭಜೇ||
ಶ್ರೀಸಂಪತ್ಸುತ ಯಾದವಾದ್ರಿ ಯತಿರಾಟ್ಪಾದಾರವಿಂದಾಶ್ರಯಂ
ವೇದಾಂತದ್ವಯದೇಶಿಕಂ ಗುಣನಿಧಿಂ ಶ್ರೀಯಾದವಾದ್ರೀಶಿತುಃ
ಕೈಂಕರ್ಯೈಕವಿಚಾರಣಾದಿನಿರತಂ ರಾಮಾನುಜಾಚಾರ್ಯಾಜ್ಞಯಾ
ಸತ್ಸೇವಾಭಿರುಚಿಂ ಯತೀಂದ್ರಮನಘಂ ನಾರಾಯಣಂ ಸಂಶ್ರಯೇ ||

ಈ ಮಹಾಪುರುಷರು ವೃಷಭಮಾಸ ಪುಷ್ಯನಕ್ಷತ್ರದಲ್ಲಿ ಲೋಹಿತ ಗೋತ್ರೋತ್ಪನ್ನರಾಗಿಜನಿಸಿದರು. ಇವರು ರಾಮಾನುಜಪುರ ಅಗ್ರಹಾರಕ್ಕೆ ಸೇರಿದ **ಆಚಿ ಮನೆತನ**ದ ಮೂಲಪುರುಷರೆಂದು ತಿಳಿದುಬರುತ್ತದೆ.

ಇವರು ಶ್ರೀರಂಗದ ಕಂದಾಡೈಅಣ್ಣರವರ ಶಿಷ್ಯರು. ಇವರಿಗೆ ಇಬ್ಬರು ಕುಮಾರರು. ಇವರ ಸಂತತಿಯವರು ಅದ್ಯಾಪಿ ಇರುತ್ತಾರೆ. ಈ ಮಹಾತ್ಮರು ವೈರಾಗ್ಯಾತಿರೇಕದಿಂದ ತುರ್ಯಾಶ್ರಮವನ್ನು ವಹಿಸಿ ಶ್ರೀಯತಿರಾಜಮಠದಲ್ಲಿ ಪೀಠಸ್ಥರಾಗಿದ್ದರು. ಇವರು ಶ್ರೀರಾಮಾನುಜಾಚಾರ್ಯರಿಂದ ಏರ್ಪಟ್ಟು ಬಂದ ಪೀಠಸ್ಥಪರಂಪರೆಯಲ್ಲಿ ೧೭ ನೆಯ ಪೀಠಸ್ಥರು.

ತುರುಷ್ಕರ ಹಾವಳಿಯಿಂದಲೂ, ಇತರ ಅನೇಕ ಕಾರಣಗಳಿಂದಲೂ, ಮೇಲುಕೋಟೆಗೆ ಆಗಿಂದಾಗ್ಗೆ ರಾಜಕೀಯವಾಗಿ ಕ್ಷೋಭೆಯುಂಟಾದ್ದರಿಂದ ಊರೂ, ದೇವಸ್ಥಾನವೂ, ಮಠಾಧಿಪತಿಗಳೂ ಇತ್ಯಾದಿಯಾಗಿ ಯಾವುದೂ ಸ್ಥಿರವಾಗಿ ನಿಲ್ಲಲಾರದೆ ಇದ್ದು ಅನೇಕ ಸಂವತ್ಸರಗಳಾದನಂತರ ಹಿಂದೆ ತಿಳಿಸಿದಂತೆ ಮಹಾರಾಜ ಶ್ರೀಬುಕ್ಕಣ್ಣರಾಯರಕಾಲದಿಂದ ಸ್ವಲ್ಪಸ್ವಲ್ಪವಾಗಿ ಮೇಲುಕೋಟೆ ಗ್ರಾಮವು ಅಭಿವೃದ್ಧಿಗೆ ಬಂದು ಮಹಾಪ್ರಧಾನ ತಿಮ್ಮಣ್ಣ ದಣ್ಣನಾಯಕರ ಅಭಿಮಾನದಿಂದ ಅವರಕಾಲದಲ್ಲಿ ಗ್ರಾಮವು ಸಂಪೂರ್ಣಾಭಿವೃದ್ಧಿಗೆ ಬಂದು ಶ್ರೀಮಠದ ಗೌರವ ಮತ್ತು ಅಧಿಕಾರವೂ ಕ್ರಮಪಟ್ಟು ಶ್ರೀಯತಿರಾಜ ಮಠಾಧಿಪತಿಗಳ ಅಧಿಕಾರದಮೇಲೆ ಶ್ರೀತಿರುನಾರಾಯಣದೇವರ ಕೈಂಕರ್ಯಾದಿಗಳು ಕ್ರಮಪಟ್ಟು ನೆಡೆಯುತ್ತಾ ಬಂದಿತು.

ಈ ವೇದಾಂತಿಜೀಯರು ಪಟ್ಟಕ್ಕೆ ಬಂದಮೇಲೆ ಶ್ರೀತಿರುನಾರಾಯಣ ದೇವರಿಗೆ ಶಕ ೧೪೪೧ ನೇ ಪ್ರಮಾಥಿ ಸಂ|| ನಿಜ ಜ್ಯೇಷ್ಠ ಬ. ೩ ಬುಧವಾರದಲ್ಲು

(ಕ್ರಿ. ಶ. 1519) ತಿಬಕ್ಕಶ್ರೇಷ್ಠಿಯವರ ಮಕ್ಕಳು ಲಕ್ಷ್ಮೀಪತಿ ಶ್ರೇಷ್ಠಿಯವರು ದೇವರ ಆರೋಗಣೆ ಮತ್ತು ತದೀಯಾರಾಧನೆಗಾಗಿ ಕೆಲವು ಧರ್ಮಗಳನ್ನು ನಡೆಸಿರುವರು. (ಶ್ರೀರಂಗಪಟ್ಟಣ ಶಾಸನ ನಂ. ೨೬೪)

ಶಕ ೧೪೪೪ ನೇ ವಿಷು ಸಂ|| ವೈಶಾಖ ೫ ಯಲ್ಲಿ (ಕ್ರಿ.ಶ.1521) ವಾಬಜನ್ಮಗಾರು, ತಿರುನಾರಾಯಣದೇವರಿಗೆ ತಿರುನಂದನವನ ಸೇವೆಯನ್ನು ಮಾಡಿರುವರು. (ಶ್ರೀರಂಗಪಟ್ಟಣ ಶಾಸನ ನಂ. ೧೫೭)

ಶಕ ೧೪೪೮ ನೇ ವ್ಯಯ ಸಂ|| ದಲ್ಲಿ (ಕ್ರಿ.ಶ. 1526) ಅಚಿರಾಜ ಉಭಳ ರಾಜರ ಮಕ್ಕಳು ವೆಂಕಟಾದ್ರಿ ಮಹಾಅರಸುಗಳು ಈ ರಾಮಾನುಜಕೂಟಕ್ಕೆ ಕೆಲವು ಗ್ರಾಮಭೂಮಿಗಳನ್ನು ಧರ್ಮಮಾಡಿರುವರು. (ಶ್ರೀ.ಪ.ಶಾಸನ. ನಂ. ೭೭)

ಅನಂತರ ವಿಜಯನಗರದಲ್ಲಿ ಶ್ರೀಕೃಷ್ಣದೇವರಾಯರಿರುವಾಗ ಶಕ ೧೪೫೦ನೇ ಸರ್ವಜಿತು ಸಂ|| ಮಾಘ ಶು. ಸಪ್ತಮಿಯಲ್ಲಿ (ಕ್ರಿ. ಶ. 1528) ಶ್ರೀಚೆಲ್ವಪಿಳ್ಳೆಯವರ ಕೈಂಕರ್ಯಕ್ಕಾಗಿ ಸೈನ್ಯಾಧಿಕಾರಿಗಳಾದ ಅವುಭಳದೇವರ ಮಕ್ಕಳಾದ ಕೃಷ್ಣರಾಯನಾಯಕರು —

| | | |
|---|---|---|
| ತೆಪ್ಪ, ತಿರುನಾಳು ೧೦ ದಿನಗಳಿಗೆ— | ೭೦ | ವರಹಗಳು |
| ಪುಣಗುಕಾಪಿಗೆ— | ೧೫೦ | ,, |
| ಆರೋಗಣೆ, ಮತ್ತು ತಿರುಪ್ಪಣ್ಯಾರಕ್ಕೆ— | ೧೨ | ,, |

ಈರೀತಿ ಕೈಂಕರ್ಯಗಳಿಗಾಗಿ ೨೫೪ ವರಹಗಳು ಉತ್ಪತ್ತಿಯಾಗುವ—

1. ಕಾಮನಾಯಕನಹಳ್ಳಿ, 2. ಗೊಲ್ಲಚಟ್ಟನಹಳ್ಳಿ ಇವೇ ಮೊದಲಾದ ಗ್ರಾಮಗಳನ್ನು ಸಮರ್ಪಿಸಿ ಕೃಷ್ಣದೇವ ಮಹಾರಾಜರ ಆಜ್ಞೆಯಂತೆ ಧರ್ಮಸಾಧನವನ್ನು ಬರೆದರು. (ಶ್ರೀ.ಪ. ಶಾಸನ. ನಂ. ೨೬೩) ಇವರು ಶ್ರೀರಂಗಪಟ್ಟಣದ ಶ್ರೀರಂನಾಥದೇವರಿಗೂ ಅನೇಕ ಧರ್ಮಗಳನ್ನು ಮಾಡಿರುವರು. ಶ್ರೀ. ಪ. ೧·

ಶಕ ೧೪೫೬ ನೇ ವಿಜಯ ಸಂ|| ಮಾಘ ಬ. ೧೦ ರಲ್ಲು (ಕ್ರಿ.ಶ. 1534) ಹರಿಗಿಲ ಅಬ್ಬರಾಜಗಳ ಮಕ್ಕಳು ಪೆರಿರಾಜರುಗಳ ಕೆಲವು ಧರ್ಮಗಳಾಗಿವೆ. (ಶ್ರಿ. ಪ. ಶಾಸನ ನಂ· ೨೬೨).

ಶಕ ೧೪೫೭ ನೇ ಮನ್ಮಥ ಸಂ|| ಆಷಾಢ ಶುದ್ಧ ೧೧ ರಲ್ಲು (ಕ್ರಿ.ಶ. 1535) ಅಚ್ಯುತ ದೇವಮಹಾರಾಜರ ಕಾಲದಲ್ಲಿ ಶ್ರೀತಿರುನಾರಾಯಣ ಚೆಲ್ವಪ್ಪಿಳ್ಳೆ ಇವರ ಶ್ರೀಭಂಡಾರಕ್ಕೆ ಸಿಂಧುಗೋವಿಂದ, ಭೀಮಮಣಿ, ನಾಗಪುರವರಾಧಿಶ್ವರ

ಉದಯಗಿರಿ ನೀಲಅಬ್ಬರಾಜರ ಕುಮಾರರು ತಿರುಮಲರಾಜರು ಕೆಲವು ಧರ್ಮಗಳನ್ನು ಮಾಡಿದರು. ಇವುಗಳಲ್ಲದೆ ದೇವಸ್ಥಾನಕ್ಕೆ ಸೇರಿದ ಕದಲಗೆರೆಗ್ರಾಮದ ಬಳಿಯಲ್ಲಿರುವ ಹೊಸಕೆರೆ, ಕೃಷ್ಣದೇವಒಡೆಯರ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದುದರ ಫಲವಾಗಿ ಇವರ ತಮ್ಮಂದಿರು ಪೆರಿಯರಾಜರು ತಮ್ಮ ಧರ್ಮವಾಗಿ ೨೦ ಪಡಿ ಅಕ್ಕಿ ಪ್ರಸಾದವು ಪ್ರತಿದಿನವೂ ದೇವರಿಗೆ ನಿವೇದನವಾಗುವಂತೆ ಧರ್ಮಮಾಡಿದರು.

ಅಲ್ಲದೆ ತಾವು ಹೊಸದಾಗಿಕಟ್ಟಿಸಿದ ತೆಪ್ಪಕೊಳದ ಮಂಟಪದಲ್ಲಿ ಚಲುವರಾಯ ಸ್ವಾಮಿಯು ಬಿಜಯಮಾಡಿಸುವಂತೆಯೂ ಅಲ್ಲಿ ತೆಪ್ಪ, ತಿರುನಾಳು, ಚೆರಪು, ನಂದಾವನ ಮತ್ತು ದೇವರಿಗೆ ಪ್ರತಿದಿನವೂ ಹೊಸವಸ್ತ್ರಗಳೇ ಮೊದಲಾದ ಕೈಂಕರ್ಯ ಗಳಿಗಾಗಿ ೧೩೦ ವರಹಗಳು ಉತ್ಪತ್ತಿಯಾಗುವ 1· ಸೆಟ್ಟಿಪುರ, 2. ಮಾಲನಹಳ್ಳಿ, 3. ನಿಲೆಮಂಗಲ, 4. ಹೊಳವಳ್ಳಿ, 5. ಕಾರನಾರನಹಳ್ಳಿ ಈ ಐದುಗ್ರಾಮಗಳನ್ನೂ ಧರ್ಮಮಾಡಿ ಧರ್ಮಸಾಧನವನ್ನು ಬರೆದರು. (ಶ್ರೀ. ಪ. ಶಾ. ನಂ. ೯೫—೨೫೬)

ವಿಜಯನಗರದ ಸದಾಶಿವ ಮಹಾರಾಜರ ಆಜ್ಞೆಯಂತೆ ಅಚ್ಯುತ ಮಹಾ ರಾಜರೂ, ನಂದ್ಯಾಲದ ನರಸಿಂಗ ಯಾದವ ಮಹಾಅರಸುಗಳೂ, ಅವರ ಮಕ್ಕಳು ನಾರಯದೇವ ಮಹಾಅರಸರೂ ಸಹ ದೇವಸ್ಥಾನದ ಸಕಲವಿಧ ಮರ್ಯಾದೆಗಳನ್ನು ದೇಶಾಯಿಮುದ್ರೆ, ತಿರುವಾಭರಣ, ವಸ್ತ್ರ, ಭಂಡಾರ, ಹನುಮಂತಮುದ್ರೆ, ದೇವಸ್ಥಾನಕ್ಕೆ ಸೇರಿದ ಸಕಲಗ್ರಾಮ ಭೂಮಿಗಳನ್ನೂ, ಅಧಿಕಾರವನ್ನೂ, ಶ್ರೀಯತಿರಾಜಸ್ವಾಮಿಗಳವರ ವಶಮಾಡಿ **ರಾಮಾನುಜಮುದ್ರೆಯುಂಗುರವನ್ನೂ** ಕೊಟ್ಟು, ಅರುಳಪ್ಪಾಡು, ಶ್ರೀಶಠಕೋಪ. ತೀರ್ಥಮರ್ಯಾದೆ ಇವುಗಳನ್ನು ಶಿಷ್ಯ ಪರಂಪರೆಯಾಗಿ ಅನುಭವಿಸಿಕೊಂಡು ಬರುವುದೆಂದೂ, ಶ್ರೀಯತಿರಾಜಸ್ವಾಮಿ ಗಳವರು ಲೋಕಕ್ಷೇಮಕ್ಕಾಗಿ ನಡೆಸುವ ಚಾತುರ್ಮಾಸವ್ರತಮುಗಿಯುವ ಉತ್ಥಾನ ದ್ವಾದಶಿಯಲ್ಲಿ ಹಿರಿದಾದ ಉತ್ಸವವನ್ನು ನಡೆಸಬೇಕೆಂದೂ, ಪ್ರಾರ್ಥಿಸಿ ದೇವರಿಗೆ ಧೂಪದೀಪ ನೈವೇದ್ಯಾದಿಗಳಿಗೆ ೨೦೦೦ ವರಹಗಳು ಉತ್ಪತ್ತಿಯಾಗುವ ಕಾವೇರೀ ತೀರದ 1. ಬಲ್ಲಾಳಪುರ ಮತ್ತು 2. ಹೇಮಾವತೀತೀರದ ವರಾಹನಕಲ್ಲಹಳ್ಳಿ ಇವೆ ರಡು, ಸ್ಥಳಕ್ಕೆ ಸೇರಿದ ಗದ್ದೆ ಬೆದ್ದಲು, ತೋಟ ತುಡಿಕೆ, ತಳಮನೆ,ಒಕ್ಕಲುಮಕ್ಕಳು ಸುಂಕ, ಸುವರ್ಣಾದಾಯ, ಕಾಡಾರಂಬ, ನೀರಾರಂಬ, ಮಗ್ಗಮನೆ, ವಣ, ಇನ್ನೂ ಉಂಟಾದ ಸಕಲಸ್ವಾಮ್ಯವನ್ನೂ ಸಮರ್ಪಿಸಿ ರಾಮಾನುಜಕೂಟದಲ್ಲಿ ನಿತ್ಯತದೀ ಯಾರಾಧನೆಗೆ ಕ್ರಮಗಳನ್ನೇರ್ಪಡಿಸಿ ತತ್ಸಂಬಂಧವಾಗಿ ಶಕ ೧೪೬೭ ನೇ ಕ್ರೋಧಿ ಸಂ ಕ್ರಿ.ಶ. 1544 ಕಾರ್ತೀಕ ಶುದ್ಧ ದ್ವಾದಶೀ ದಿನ ದಾನವನ್ನುಮಾಡಿ ಧರ್ಮಶಾಸನ ವನ್ನು ಬರೆದರು. (ಶ್ರೀರಂಗಪಟ್ಟಣ ಶಾಸನ ನಂ. ೨೫೮—೨೫೯)

| | |
|---|---|
| ಶ್ರೀನಾರಾಯಣಸ್ವಾಮಿ ಚೆಲುವರಾಯ ಸ್ವಾಮಿಯವರಿಗೆ ಅಮೃತಪಡಿ, ತಿರುಪ್ಪಣ್ಯಾರ ದೊಂದಿಗೆ ಆರೋಗಣೆ, ಮತ್ತು ಶ್ರೀ ಯತಿರಾಜಮಠದಲ್ಲಿನಿತ್ಯತದೀಯಾರಾಧನೆಗೆ | ೪೧೨ |
| ನಂದಾದೀಪ ಅಲಂಕಾರ ದೀಪಕ್ಕೆ | ೭೨ |
| ದೇವರಿಗೆ ವಸ್ತ್ರ — — .... | ೧೫ |
| ಶ್ರೀನಾರಾಯಣದೇವರಿಗೆ ಪುಣಗುಕಾಪು, ಪಚ್ಚಕರ್ಪೂರ ಪನ್ನೀರು | ೩೬೦ |
| ಶ್ರೀರಾಮಾನುಜಾಚಾರ್ಯರ ನಿತ್ಯ ತಿರುಮಂಜನಕ್ಕೆ | ೩೬ |
| ,, ಮಾಸತಿರುನಕ್ಷತ್ರ ೧೨ ಕ್ಕೆ | ೬೦ |
| ,, ವರ್ಷತಿರುನಾಳಿಗೆ | ೬೦ |
| ಶ್ರೀಚೆಲ್ವಪ್ಪಿಳ್ಳೆರಾಯರ ರಥೋತ್ಸವಕ್ಕೆ .... .... | ೪೦ |
| ಬೃಂದಾವನ ೪ ಕ್ಕೆ ಚೆರಪು ಸಹ .... .... | ೪೦ |
| ಧನುರ್ಮಾಸದಪೂಜೆಗೆ .... .... .... | ೧೫೦ |
| ಕ್ಷಾಮ, ಕ್ಷೋಭೆಗಳಿಗೆ | ೮೦೦ |
| ಮೊತ್ತ ವರಹಗಳು .... | ೨೦೦೦ |

(ಈ ಶಾಸನವು ಶ್ರೀನಾರಾಯಣಸ್ವಾಮಿ ದೇವಸ್ಥಾನ ರಂಗಮಂಟಪದ ದಕ್ಷಿಣ ಹೊರಭಿತ್ತಿಯಲ್ಲಿ ಪಶ್ಚಿಮಭಾಗದಿಂದ ಆರಂಭಿಸಿರುವುದು. ಜಗತಿಕಟ್ಟೆಗೆ ಮೇಲ್ಪಟ್ಟ ೩ ನೇ ಪಂಕ್ತಿ ೧-೨ ಕಲ್ಲುಗಳು. ೨ ನೇ ಪಂಕ್ತಿ ೧-೨ ಕಲ್ಲುಗಳು. ಈ ಶಾಸನದಲ್ಲಿ ಉಪ್ಪು, ಮೆಣಸು, ಪಲ್ಲಯ, ಪಚ್ಚಡಿ ಎಂಬುದಾಗಿ ವಿಷಯಗಳು ವಿವರವಾಗಿ ಬರೆದಿರುವುದು. )

ಶಕ ೧೪೭೩ ನೇ ಸಾಧಾರಣ ಸಂ|| (ಕ್ರಿ.ಶ. 1550) ಕಾರ್ತೀಕ ದಶಮಿ ಯಲ್ಲಿ ಶ್ರೀಚೆಲ್ವಪ್ಪಿಳ್ಳೆಯವರ ನೈವೇದ್ಯಕ್ಕೆ ಮಹಾಮಂಡಲೇಶ್ವರ ಅಪ್ರತಿಕಮಲ್ಲ ಮನುಬ್ರೋಲು ಚನ್ನದೇವ ಚೋಡಮಹಾ ಅರಸುಗಳು ೪೬ ವರಹಗಳು ಉತ್ಪತ್ತಿ ಯಾಗುವ ಕೆಲವು ಧರ್ಮಗಳನ್ನು ಮಾಡಿದರು. (ಶ್ರೀ, ಪ. ಶಾಸನ. ೨೬೨.)

ಶಕ ೧೪೭೪ ನೇ ವಿರೋಧಿಕ್ರುತು ಸಂ|| (ಕ್ರಿ.ಶ. 1551) ಆಶ್ವಯುಜ ಬ. ದಶಮಿಯಲ್ಲಿ ಶತಭಾಷಾ ಶತಪತ್ರ ಸಹಸ್ರಕಿರಣ ಚತುಶಾಲಾ ಚತುರ್ಮುಖ ಪದವಾಕ್ಯ ಪ್ರಮಾಣಜ್ಞರಾದ ಎಂಬಾರಯ್ಯ ಕುಮಾರರಾದ ಅಪ್ಪಯ್ಯಂಗಾರ್ಯರೂ ನಂದ್ಯಾಲದ ನರಸಿಂಗದೇವ ಅರಸುಗಳ ಕುಮಾರರು ತಿಮ್ಮಯ್ಯದೇವ ಮಹಾಅರಸು ಗಳೂ ಸೇರಿ ೫೦ ವರಹಗಳು ಉತ್ಪತ್ತಿಯಾಗುವ ನಗುಲನಹಳ್ಳಿ ಗ್ರಾಮವನ್ನು

ಶ್ರೀತಿರುನಾರಾಯಣದೇವರಿಗೆ ಕೈಂಕರ್ಯವಾಗಿ ಸಮರ್ಪಿಸಿದರು. ಈ ಧರ್ಮವಲ್ಲದೆ ದೇವರಿಗೆ ಸುವರ್ಣದ ಗರುಡವಾಹನವನ್ನು ಮಾಡಿಸಿ ಚಿಕ್ಕ ತಿರುನಾಳಿನಲ್ಲಿ ೫ ನೇ ಉತ್ಸವದಲ್ಲಿ ರಾಮಾನುಜಕೂಟದಲ್ಲಿ ತದೀಯಾರಾಧನೆಗೆ ಧರ್ಮಮಾಡಿದರು.

[ಶ್ರೀರಂಗಪಟ್ಟಣ ಶಾಸನ ೨೬೦]

ಶಕ ೧೪೭೮ ನೇ ನಳ ಸಂವತ್ಸರ (ಕ್ರಿ. ಶ. 1556) ಮಾರ್ಗಶಿರ ಶು. ದ್ವಾದಶಿಯಲ್ಲಿ ಅಳಗಿಯಮಣವಾಳದಾಸರಾದ ಕೇತಿಯಪ್ಪಶ್ರೇಷ್ಠಿಯವರು ರಾಮಾನುಜಕೂಟದಲ್ಲೂ, ಮತ್ತು ಶ್ರೀಭಾಷ್ಯಕಾರರ ಸನ್ನಿಧಿಯಲ್ಲೂ ಕೆಲವು ಕೈಂಕರ್ಯಗಳಿಗಾಗಿ 1.——ವನಹಳ್ಳಿ, 2. ಕಾಮರಸಪುರ, 3. ಕೇತನಹಳ್ಳಿಯು ಗದ್ದೆ ಮುಂತಾದ ಭೂಮಿಗಳನ್ನು ಶ್ರೀನಾರಾಯಣಸ್ವಾಮಿ ದೇವರ ಕೈಂಕರ್ಯವಾಗಿ ದಾನಮಾಡಿದರು. (ಶ್ರೀ.ಪ. ಶಾಸನ ೯೯....೧೦೧.)

ಶಕ ೧೪೮೬ ನೇ (ಕ್ರಿ.ಶ. 1564) ರಕ್ತಾಕ್ಷಿ ಸಂ|| ಮಾರ್ಗಶಿರ ಬ. ದಶಮಿಯಲ್ಲಿ ಸದಾಶಿವ ಮಹಾರಾಜರ ಕಾಲದಲ್ಲಿ ಶ್ರೀತಿರುನಾರಾಯಣದೇವರ ಸನ್ನಿಧಿಗೆ ಮಹಾಮಂಡಲೇಶ್ವರರಾದ ಹಿರೀಕೊಂಡ ಮಹಾಅರಸುಗಳೂ, ಕೋನೇಟಿ ರಾಜು ಮಹಾಅರಸುಗಳೂ, ಕೊಂಡರಾಜುದೇವ ಅರಸುಗಳೂ ಸೇರಿ ಸುಮಾರು ೨೦೦೦ ವರಹಗಳ ಉತ್ಪತ್ತಿಯಾಗುವ ಚನ್ನಪಟ್ಟಣಕ್ಕೆ ಸೇರಿದ 1. ಹೊಂಗನೂರು, 2. ಕುಡಿಪುರ. 3. ನೀಲಸಮುದ್ರ, 4. ಓರಲಾಪುರ, 5. ಹೊನ್ನುಡಿಗೆ, 6. ಅಣಪನಹಳ್ಳಿ, 7. ಅರೇಹಳ್ಳಿ ಇವೇ ಮೊದಲಾದ ಗ್ರಾಮಗಳಿಗೆ ಸೇರಿದ ತೋಟ, ತುಡಿಕೆ, ಗದ್ದೆಬೆದ್ದಲು, ಕಳಮನೆ ಒಕ್ಕಲುಮಕ್ಕಳು, ಸುಂಕ, ಸುವರ್ಣಾದಾಯ ಇವೇ ಮೊದಲಾದ ಸಕಲಸ್ವಾಮ್ಯಗಳೊಂದಿಗೆ ಭೂಮಿಗಳನ್ನು ಸಮರ್ಪಿಸಿ ಬಂದರು.

| | |
|---|---|
| ಈ ವರಮಾನದಿಂದ — | ವರಹಗಳು |
| ಆಳ್ವಾರ್ರುಗಳ ಆಟು ತಿರುನಕ್ಷತ್ರಕ್ಕೆ ೩೦ | ೩೬೬ |
| ಶ್ರೀಭಾಷ್ಯಕಾರರ ರಥೋತ್ಸವ ತಿರುನಾಳಿಗೆ | ೮೦ |
| ತಿರುನಂದಾವನ, ಚೆರಪ್ಪು, ಸಂಬಳ ಇತ್ಯಾದಿಗಳಿಗೆ | ೫೬ |
| ಶ್ರೀಭಾಷ್ಯಕಾರರ ಮಾಸ ತಿರುನಕ್ಷತ್ರ ೧೨ ಕ್ಕೆ | ೧೪೪ |
| ಚೂಡಿಕ್ಕೊಡುತ್ತನಾಚ್ಚಿಯಾರ್ (ಆಂಡಾಳ್) ತಿರುನಕ್ಷತ್ರ ಮತ್ತು ಪೆರಿಯಜೀಯರ್ ಮಣವಾಳಮಹಾಮುನಿ ತಿರುನಕ್ಷತ್ರ | |
| ಅಂತೂ ತಿರುನಕ್ಷತ್ರ ೧೪ ಕ್ಕೆ ೬೦ .... | ೮೪೦ |
| ಏಕಾದಶೀ ಪುಣಗಕಾಪು | ೧೨೬ |
| ಹೊತ್ತ ವರಹಗಳು.... | ೧೪೪೮ |

ಈ ರೀತಿ ೧೪೦೭ ವರಹಗಳ ಧರ್ಮವನ್ನು ಮಾಡಿ ಉಳಿದ ರೊಕ್ಕದಲ್ಲಿ ಶ್ರೀಭಾಷ್ಯಕಾರರ ರಾಮಾನುಜಕೂಟದಲ್ಲಿ (ಶ್ರೀಯತಿರಾಜಮಠದಲ್ಲಿ) ಐವತ್ತಿಬ್ಬರಿಗೆ ನಿತ್ಯಕೃತ್ಯವಾಗಿಯೂ, ತದೀಯಾರಾಧನೆಗಾಗಿಯೂ ಧರ್ಮಮಾಡಿದರು.
(ಶ್ರೀರಂಗಪಟ್ಟಣ ಶಾಸನ. ೨೫೭)

ಬೆಳಗೊಳದ ಅಕ್ಕಚ್ಚಿ ಮತ್ತು ಪೆರುಂದೇವಿಯರಾದ ಅಕ್ಕತಂಗಿಯರೂ ಸಕ ತಿರುನಾರಾಯಣದೇವರಿಗೆ ನಿವೇದನ; ಮತ್ತು ತಿರುವಾಲಿ ಕೈಂಕರ್ಯಕ್ಕೆ ಕೆಲವು ಭೂಮಿ ಮತ್ತು ರೊಕ್ಕಗಳನ್ನು ಸಮರ್ಪಿಸಿದರು. (ಶ್ರೀ.ಪ. ಶಾಸನ. ನಂ. ೯೦)

ವಿಜಯನಗರದ ರಾಜರುಗಳು ಹಿಂದೆ ಅನೇಕ ಧರ್ಮಗಳನ್ನು ಮಾಡಿರುವುದಲ್ಲದೆ ಪುನಃ ೧೪೮೮ ನೇ ಕ್ರೋಧನ ಸಂ|| [ಕ್ರಿ.ಶ. 1565] ಜ್ಯೇಷ್ಠ ಶು. ೧೦ ರಲ್ಲಿ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ಸದಾಶಿವದೇವ ಸುಧಾಜಾತ ಸೈನ್ಯಾಧಿಕಾರಿಗಳಾದ ಧನಂಜಯ ತಿಮ್ಮಣ್ಣರುಗಳು ಶ್ರೀದೇವಾಧಿದೇವ ತಿರುಮಲೆ ಶ್ರೀತಿರವೇಂಗಡನಾಥ ದೇವರ ಶ್ರೀಭಂಡಾರಕ್ಕೆ, ಆಬೂರುಗ್ರಾಮಕ್ಕೆ ಸೇರಿದ 1. ಮೇಳಾಪುರಗ್ರಾಮ. 2. ಹೆಬ್ಬಾಡಿಗ್ರಾಮ. 3. ದಂಡಗನಹಳ್ಳಿ ಗ್ರಾಮ. 4. ಬೇಡರಹಳ್ಳಿಗ್ರಾಮ. ವೊತ್ತ ಈ ನಾಲ್ಕು ಗ್ರಾಮಗಳನ್ನು ಧಾರಾಪೂರ್ವಕವಾಗಿ ಧರ್ಮಮಾಡಿ ಶ್ರೀ ಯತಿರಾಜಮಠಾಧಿಪತಿಗಳಾದ ವೇದಾಂತಿ ರಾಮಾನುಜಜೀಯರು ಅದರ ಮೇಲ್ವಿಚಾರಣೆಯಿಂದ ವರಮಾನವನ್ನು ತೆಗೆದು ಧರ್ಮಕಾರ್ಯಗಳನ್ನು ನಡೆಸಿ ಅಗ್ರ ಮರ್ಯಾದೆಯನ್ನು ಹೊಂದಲು ಸಕಲ ವಿಧ ವಾದ್ಯ ಏರ್ಪಾಡಿನಿಂದ ಧರ್ಮಸಾಧನವನ್ನು ಬರೆದರು — ಈ ಶಾಸನ ಪ್ರಕಾರ ಶ್ರೀಯತಿರಾಜ ಸ್ವಾಮಿಗಳವರಿಗೆ ತಿರುಪತಿ ದೇವಸ್ಥಾನದಲ್ಲೂ ದೇವರ ಕೈಂಕರ್ಯವೂ ಅಗ್ರಮರ್ಯಾದೆಯೂ ತತ್ಸಂಬಂಧವಾಗಿ ದೇವಸ್ಥಾನದ ಅಧಿಕಾರವೂ ಇದ್ದಿತ್ತೆಂದು ತಿಳಿದುಬರುವುದು— (ಶ್ರೀ. ಪ. ಶಾಸನ ನಂ. ೧೪೯)

ಶ್ರೀಮಣವಾಳಮಾಮುನಿಗಳಿಗೆ ಶಿಷ್ಯರಾಗಿ ಅಷ್ಟದಿಗ್ಗಜಗಳೆಂದು ಪ್ರಸಿದ್ಧರಾಗಿದ್ದವರಲ್ಲೊಬ್ಬರಾದ ಕಂದಾಡೈ ಅಣ್ಣರವರಿಗೆ ವರದನಾರಾಯಣರೆಂದು ಹೆಸರು. ಇವರ ಮಕ್ಕಳು ಶ್ರೀನಿವಾಸಾಚಾರ್ಯರು. ಇವರ ಮಕ್ಕಳು ವಾಧೂಲ ವರದಾಚಾರ್ಯರು. ಇವರ ಕುಮಾರರು ಲಕ್ಷ್ಮಣಯೋಗೀಂದ್ರರು. ಈ ಲಕ್ಷ್ಮಣ ಯೋಗೀಂದ್ರರ ಶಿಷ್ಯರೇ ವೇದಾಂತಿ ರಾಮಾನುಜಮುನಿಗಳು— ಈ ವೇದಾಂತಿ ರಾಮಾನುಜಮುನಿಗಳು, ಲಕ್ಷ್ಮಣಯೋಗೀಂದ್ರರ ಶಿಷ್ಯರಾಗಿಯೂ, ವರದಗುರುವಿನಲ್ಲಿ ರಹಸ್ಯಾದಿ ಶಾಸ್ತ್ರಗಳನ್ನು ಅಧ್ಯಯನಮಾಡಿದರಾಗಿಯೂ ಇರುತ್ತಾರೆ.

ಈ ವರದಗುರುಗಳು ಶಾ.ಶ. ೧೪೪೮ ನೇ ಪಾರ್ಥಿವ ಸಂ|| ದಲ್ಲಿ ಕ್ರಿ.ಶ.1526 ಪರಮಪದಿಸಿದರು. ಆದ್ದರಿಂದ ಈ ಲೆಕ್ಕದಪ್ರಕಾರ ಶಕ ೧೪೪೮—೧೪೮೮ (ಶಾಸನ

# ಶ್ರೀ ಸಂಪತ್ಕುಮಾರ ರಾಮಾನುಜ ಜೀಯರು

ನಾರಾಯಣಾರ್ಯಯತಿವರ್ಯ ಕೃಪೈಕಪಾತ್ರಂ
ಸಂಸಾರಸಾಗರವಿಶೋಷಣಕುಂಭಜಾತಂ
ಯದ್ವದ್ರಿನಾಥಕರುಣಾಸಮುಪಲಬ್ಧಬೋಧಂ
ಸಂಪತ್ಕುಮಾರಮುನಿವರ್ಯಮಹಂ ಭಜಾಮಿ ||

ಈ ಮಹಾತ್ಮರು ವೇದಾಂತಿ ರಾಮಾನುಜಜೀಯರಿಂದ ಆಶ್ರಮವನ್ನೂ, ದೇವಸ್ಥಾನದ ಸರ್ವಾಧಿಕಾರವನ್ನೂ ವಹಿಸಿಕೊಂಡು ಶ್ರೀನಾರಾಯಣಸ್ವಾಮಿ, ಚೆಲ್ವಪ್ಪಿಳ್ಳೆಯವರ ಅಗಂರಂಗ ವೈಭವಕೈಂಕರ್ಯಗಳನ್ನು ನಡೆಸುತ್ತಾ ಬರತ್ತಿದ್ದರು.

ಇವರ ಅಧಿಕಾರದಲ್ಲಿ ಶಕ ೧೪೯೨ ನೇ ಪ್ರಮೋದೂತ ಸಂ|| ಚೈತ್ರ ಶು. ೨ರಲ್ಲು (ಕ್ರಿ.ಶ. 1570) ಮೈಲನಹಳ್ಳಿ ಪುರದ ಗ್ರಾಮ ಭೂಮಿಗಳಿಂದ ಬಂದ ವರಮಾನದಲ್ಲಿ ದೇವರಿಗೆ ನಿತ್ಯದಲ್ಲೂ ಆರೋಗಣೆಗೆ ಅರ್ಧವನ್ನೂ ಮಿಕ್ಕ ಅರ್ಧದಲ್ಲಿ ರಾಮಾನುಜ ಕೂಟದಲ್ಲಿ ತದೀಯಾರಾಧನೆ ನಡೆಯುವಂತೆ ಧರ್ಮನಡೆದಿರುವುದು. (ಶಾ. ೨೩೧)

ಸಮುದಾಯದ ಸ್ವಯೂಥದಲ್ಲಿ ಯತಿರಾಜಸಪ್ತತಿಸ್ತೋತ್ರ ಅನುಸಂಧಾನ ವಿಷಯದಲ್ಲಿ ವಾದ, ವಿವಾದವುಂಟಾಗಿ ರಾಜಪ್ರತಿನಿಧಿ ಶ್ರೀರಂಗರಾಯರಿಗೆ ತಿಳಿದು ಶಕ ೧೪೯೬ ನೇ ಭಾವ ಸಂ|| ಕ್ರಿ. ಶ. 1574 ವೈಶಾಖ ಶು. ೧೦ ರಲ್ಲು ತಿರುನಾರಾಯಣಪುರದಲ್ಲಿ ಶ್ರೀಯತಿರಾಜ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀರಂಗರಾಯರ ಕುಮಾರರು ರಾಮರಾಜ ಅರಸುಗಳು, ಶ್ರೀಪರಾಂಕುಶಜೀಯರು, ತಾತಾಚಾರ್ಯರು, ವೆಂಕಟೇಶಭಟ್ಟರು, ಐವತ್ತಿಬ್ಬರು, ಚೊಕ್ಕಣ್ಣನವರ ಕುಮಾರರ ರಾಮರಾಜಯ್ಯನವರು, ಸಕಲಾಚಾರ್ಯಪುರುಷರು, ಅಧಿಕಾರಿಗಳು ಎಲ್ಲರೂ ಸಭೆಸೇರಿ ತಿರುನಾರಾಯಣ ಚಲ್ವಪ್ಪಿಳ್ಳೆಯವರ ಸನ್ನಿಧಿಯಲ್ಲಿ ಅಕ್ಷರಾವೃತ್ತಿ (ಮಂತ್ರಪುಷ್ಪ) ಆದನಂತರ ಶ್ರೀಭಾಷ್ಯಕಾರರ ಸನ್ನಿಧಿಯಲ್ಲಿ ಅರುಳಪ್ಪಾಡಿನಿಂದ ಯತಿರಾಜ ಸಪ್ತತಿಯನ್ನು ಅನುಸಂಧಾನ ಮಾಡಿಬರುವುದು.'' ಎಂದು ತೀರ್ಮಾನಿಸಿ ಧರ್ಮಶಾಸನವನ್ನು ಬರೆದರು. (ಶ್ರೀ.ಪ. ಶಾಸನ. ನಂ. ೨೩೫)

ಈ ಸಂಪತ್ಕುಮಾರಜೀಯರು ದೇವಸ್ಥಾನದಲ್ಲಿ ಮರ್ಯಾದೆಯನ್ನು ಹೊಂದಿ ಅಧಿಕಾರವನ್ನುನಡೆಸುತ್ತಿರುವಾಗ ರಾಜಾಂಗದಲ್ಲಿ, ಭೂಮಿಯು ನಗದು ಕಂದಾಯ ಪದ್ಧತಿಯಿಲ್ಲದೆ **ಬಟಾಯಿ** ಎಂಬ ಹೆಸರಿನ ಧಾನ್ಯದಪಾಲಿನಿಂದ ಸಾಗುವಳಿಯಾಗುತ ಬರುತ್ತಿತ್ತು. ಶ್ರೀಯತಿರಾಜಮಠವೂ, ನಾರಾಯಣಸ್ವಾಮಿ ದೇವಸ್ಥಾನವೂ

ಒಂದೇ ಆದುದರಿಂದ ರಾಜರುಗಳಿಂದ ಕೊಡಲ್ಪಟ್ಟ ಗ್ರಾಮಭೂಮಿಗಳೆಲ್ಲವೂ ಶ್ರೀಯತಿರಾಜಮಠದ ಸನ್ಯಾಸಿಯ ಅಧಿಕಾರಕ್ಕೆ ಒಳಪಟ್ಟು ರೈತರಿಂದ ಧಾನ್ಯರೂಪವಾದ ಪ್ರತಿಫಲವು ಬರುತ್ತಿತ್ತು. ಇದನ್ನು ರೈತರಿಂದ ಬರಮಾಡಿಕೊಳ್ಳುವುದಕ್ಕೂ ಗ್ರಾಮ, ಭೂಮಿಗಳಿರುವ ಸ್ಥಳಗಳಲ್ಲಿ ಸಂಚಾರಮಾಡಿ ಸಾಗುವಳಿ ಮೊದಲಾದುವುಗಳನ್ನು ಮಾಡಿಸುವುದಕ್ಕೆ ಅನಾದಿಪದ್ಧತಿಯಂತೆ ಶ್ರೀಜೀಯರುಸ್ವಾಮಿಗಳಿಗೆ ಸಹಾಯ ಭೂತರಾಗಿಯೂ, ದೇವಸ್ಥಾನದಲ್ಲಿ ನೌಕರರಾಗಿಯೂ ನಾಲ್ಕು ಜನಗಳು ಏರ್ಪಟ್ಟಿದ್ದರು. ಇವರುಗಳಿಗೆ ಸ್ಥಾನದಯ್ಯನವರೆಂದು ಹೆಸರು.

ಬಂದ ಧಾನ್ಯದಲ್ಲಿ ನೌಕರರಿಗೆ ಧಾನ್ಯರೂಪವಾಗಿಯೂ, ದೇವರ ನಿವೇದ್ಯದಲ್ಲಿ ಅನ್ನ ರೂಪವಾಗಿಯೂ, ಜೀವನಕ್ಕೆ ಆಧಾರವು ಸಲ್ಲುತ್ತಿತ್ತು. ಸಂಪತ್ಕುಮಾರ ಜೀಯರು ಇವರ ಸಹಾಯದಿಂದ ಶ್ರೀನಾರಾಯಣಸ್ವಾಮಿಯವರ 'ಕೈಂಕರ್ಯ ವೈಭವಗಳನ್ನು ಸಾಂಗವಾಗಿ ನಡೆಸುತ ದಿವ್ಯಕ್ಷೇತ್ರದಲ್ಲಿ ಶ್ರೀವೈಷ್ಣವ ಸಮೃದ್ಧಿಯನ್ನು ಕಾಪಾಡುತ ಬಂದರು.

ದೈವಸಂಕಲ್ಪವು ಮನುಷ್ಯಬುದ್ಧಿಗೆ ಗೋಚರವಾಗತಕ್ಕದ್ದಲ್ಲ. ಆ ಸಂಕಲ್ಪವು ನೆರವೇರುವುದಕ್ಕೆ ಅನುಗುಣವಾಗಿ ಮನುಷ್ಯರಿಗೆ ಬುದ್ಧಿಯುಂಟಾಗಿ ವೃದ್ಧಿಕ್ಷಯಗಳು ಲೋಕದಲ್ಲಿ ನಡೆಯುತ್ತವೆ. ವಿವೇಕದಿಂದ ಇವನ್ನು ನಿಶ್ಚಯಿಸಿಕೊಂಡು ಸಹಿಸಿ ಕೊಳ್ಳುವುದು ಮುಖ್ಯವಾದಪರಿಹಾರವು. ಅಂತ್ಯದಲ್ಲಿ ಧರ್ಮವೇ ಜಯಿಸುವುದಾದರೂ ಧರ್ಮದಪಕ್ಷಕ್ಕೆ ಅಪಜಯವೂ, ಅಧರ್ಮದ ಪಕ್ಷಕ್ಕೆ ಜಯವೂ ಉಂಟಾಗುವುದು ಈ ಕಲಿಯುಗದ ಸ್ವಭಾವವು.

ಇದರಂತೆ ಕಲಿಯು ಪ್ರವೇಶಿಸಿ ಮಠಾಧಿಪತಿಗಳಿಗೆ ಸಹಾಯಕರಾಗಿದ್ದವರ ಮನಸ್ಸನ್ನು ತನ್ನ ವಶಮಾಡಿಕೊಂಡು ಯಜಮಾನನಾದ ಮಠಾಧಿಪತಿಯನ್ನೇ ನಿವೃತ್ತಿಮಾಡಿ ನಿರಂಕುಶಾಧಿಪತ್ಯವನ್ನು ಹೊಂದಬೇಕೆಂಬ ಅಭಿಪ್ರಾಯವು ಆ ನಾಲ್ವರಲ್ಲಿ ಉಂಟುಮಾಡಿತು. ಆದರಂತೆ ಒಂದಾನೊಂದು ದಿವಸ ಮೇಲುಕೋಟೆ ಬೆಟ್ಟದ ಪಶ್ಚಿಮಬುಡದಲ್ಲಿರುವ ಪಲಾಶತೀರ್ಥದಬಳಿ ಒಂದು ಪರ್ಣಶಾಲೆಯು ಏರ್ಪಟ್ಟು ಅದರೊಳಗೆ ಗುಪ್ತವಾಗಿ ಹಳ್ಳವೊಂದು ತೆಗೆಯಲ್ಪಟ್ಟಿತು. ಆಗ್ಗೆ ಆ ಪರ್ಣಶಾಲೆಯಲ್ಲಿ ಸನ್ಯಾಸಿಗೆ ಭಿಕ್ಷೆಯೆಂಬ ನೆಪದಿಂದ ಸನ್ಯಾಸಿಯನ್ನು ಏಕಾಂಗಿಯಾಗಿ ಕರೆಯಲು, ಆಪ್ತರಾಗಿ ಕರೆದವರ ಮಾತನ್ನು ಅನುಮೋದಿಸಿ ಈ ಮಹಾತ್ಮರು ಭಿಕ್ಷೆಗಾಗಿ ಆ ಪರ್ಣಶಾಲೆಯೊಳಗೆ ಹೋದರು. ಭಿಕ್ಷೆಗೆ ಕರೆದ ಆ ನಾಲ್ಕು ಮಹಾ ಪುರುಷರು ಆ ಸನ್ಯಾಸಿಯನ್ನು ಹಳ್ಳಕ್ಕೆ ತಳ್ಳಲು ಆ ಮಹಾತ್ಮರು ಪ್ರಾಣಾಪತ್ತನ್ನು ನಿಶ್ಚಯಿಸಿ ಕೆಲವು ನಿಮಿಷಗಳ ಕಾಲ ಅವಕಾಶವನ್ನು ಬೇಡಿಕೊಂಡು ತಾನು ಯೋಗಾಭ್ಯಾಸಿಯಾದುದರಿಂದ ಶ್ವಾಸಧಾರಣೆಮಾಡಿ ದೇಹವನ್ನು ಬಿಟ್ಟರು. ಕೂಡಲೆ

ಮಣ್ಣಿನಿಂದ ಮುಚ್ಚಲ್ಪಟ್ಟು ಹಠಾತ್ತಾಗಿ ಸನ್ಯಾಸಿಗೆ ಪ್ರಾಣೋತ್ಕ್ರಮಣವಾಯಿತೆಂದು ಪ್ರಸಿದ್ಧಿ ಹರಡಲ್ಪಟ್ಟಿತು. ಅಂದಿನಿಂದ ಸನ್ಯಾಸಿಗೆ ಸಹಾಯಕರಾಗಿದ್ದ ಆ ನಾಲ್ಕು ಜನಗಳಿಗೆ ಸರ್ವಸ್ವಾತಂತ್ರ್ಯವುಂಟಾಗಿ ರಾಜ ಮಹಾರಾಜರುಗಳಿಂದ ಕೊಡಲ್ಪಟ್ಟಿದ್ದ ಶ್ರೀಯತಿರಾಜಮಠ ಮತ್ತು ದೇವಸ್ಥಾನದ ವಿಶಿಷ್ಟಗ್ರಾಮ, ಭೂಮಿಗಳೆಲ್ಲವೂ ಸ್ವಾಧೀನವಾಗಿ ತಡೆಯಿಲ್ಲದ ಸ್ವತಂತ್ರದಿಂದ ಆ ನಾಲ್ವರೇ ಹಂಚಿಕೊಂಡು ಉಪಯೋಗಿಸುತ ಬಂದರು. ಇಷ್ಟಕ್ಕೆ ತೃಪ್ತಿಪಡದೆ ಅಧಿಕಾರ ಪ್ರಾಪ್ತವಾದ ಮಠಕ್ಕೆ ಪುನಃ ಸನ್ಯಾಸಿಯು ಏರ್ಪಡಬಹುದೆಂದಾಲೋಚಿಸಿದವರಾಗಿ ಮಠದ ಕಲ್ಲುಕಟ್ಟಡದ ಭಾಗವನ್ನುಳಿದು ಮಿಕ್ಕ ಭಾಗವನ್ನೆಲ್ಲಾ ಆ ನಾಲ್ವರೂ ಹಂಚಿಕೊಂಡರು. ಕಾಲಕ್ರಮದಲ್ಲಿ ಆ ನಾಲ್ವರಲ್ಲಿ ಸಮರ್ಥನಾದ ಮುಖಂಡನು ಸದರಿ ಮಠವಾಗಿದ್ದ ಕಲ್ಲುಕಟ್ಟಡವನ್ನು ನೋಡಿದವರು ಮಠವೆಂದು ಗುರುತಿಸುವುದು ಉತ್ತರೋತ್ತರ ಬಾಧಕವೆಂದಾಲೋಚಿಸಿ ಆ ಕಲ್ಲುಕಟ್ಟಡದಲ್ಲಿ ತನ್ನ ಪಶುಗಳನ್ನು ಇರಿಸಿ ಗೋಶಾಲೆಯನ್ನಾಗಿ ಮಾಡಿಕೊಂಡನು.

ಕಾಲಕ್ರಮದಲ್ಲಿ ನಿರಂಕುಶಾಧಿಕಾರವು ಪ್ರಬಲವಾಗಿ ಊರಿನಜನರು ಸಂಚರಿಸುವ ಮಾರ್ಗವನ್ನೂ ತಪ್ಪಿಸಿ ಆ ನಾಲ್ವರೂ ನದಿಯನ್ನೇರಿ ಹೇಳಿದ ಮಾರ್ಗದಲ್ಲಿಯೇ ಸಂಚರಿಸಬೇಕೆಂದೂ ನಿಬಂಧನೆ ಮಾಡಿದರು.

ಈ ಸಮಯದಲ್ಲಿ **ರಾಜಒಡೆಯರವರು** ರಾಜ್ಯಭಾರ ನಡೆಸುತ್ತಿದ್ದರಾಗಿ ಈ ವರ್ತಮಾನಗಳೆಲ್ಲವೂ ಅವರಿಗೆ ತಿಳಿಸಲ್ಪಟ್ಟವು. ರಾಜಒಡೆಯರವರು ಆ ನಾಲ್ವರು ಸ್ಥಾನದಯ್ಯನವರನ್ನೂ ನಿವೃತ್ತಿಮಾಡಿ ಅವರ ಸ್ವಾಧೀನದಲ್ಲಿದ್ದ ಗ್ರಾಮಭೂಮಿಗಳ ವಿಚಾರಣೆಯನ್ನು ತಪ್ಪಿಸಿ ಅರಮನೆಯವರೇ ವಿಚಾರಣೆ ಮಾಡಿ ದೇವತಾಸೇವೆಯನ್ನು ಚನ್ನಾಗಿ ನಡೆಸುವಂತೆಯೂ, ಸ್ಥಾನದವರಿಗೆ ಸ್ಥಾನದಕೆಲಸವನ್ನು ಮಾತ್ರ (ದೇವರ ಕೈಂಕರ್ಯ) ನೋಡಿಕೊಳ್ಳುವಂತೆಯೂ ಅಪ್ಪಣೆಕೊಡಿಸಿದರು.

ಇದೇ ಸಮಯದಲ್ಲಿ ಮೇಲುಕೋಟೆಗೆ **ರಾಯಗೋಪುರವನ್ನು** ಕಟ್ಟಿಸಬೇಕೆಂದು ಅಧಿಷ್ಠಾನಶುದ್ಧಿ ಪೂರ್ವಕ ಕೆಲವು ಭಿತ್ತಿಗಳನ್ನು ರಚಿಸಿ ನಾಲ್ಕು ದ್ವಾರಶಾಖೆಯ ಕಂಭಗಳನ್ನು ಮಾತ್ರ ನಿಲ್ಲಿಸಿದರು.

## ವಯಿರಮುಡಿ ರಾಜಮುಡಿ

ದೇವಸ್ಥಾನದ ಸಕಲವಾದ ಅಧಿಕಾರವೂ ಅರಮನೆಗೆ ಸೇರಿದ್ದರಿಂದ ಇನ್ನು ದೇವಸ್ಥಾನದ ಸ್ವತ್ತುಗಳಿಗೆ **ಲೋಪವಿಲ್ಲವೆಂದು** ತಿಳಿದು ಚಲುವರಾಯಸ್ವಾಮಿಯವರಿಗೆ ಅಮೂಲ್ಯ ರತ್ನಗಳಿಂದ ನೂತನವಾಗಿ ಮಾಡಿಸಿದ ವಯಿರಮುಡಿಯಂತಿರುವ

**ರಾಜಮುಡಿ** ಎಂಬ ಕಿರೀಟವನ್ನು ತಮ್ಮ ಹೆಸರಿನಿಂದ ಸಮರ್ಪಿಸಿದರು. ಈ ಬ್ರಹ್ಮೋತ್ಸವಕಾಲದಲ್ಲಿ ವಯಿರಮುಡಿಯನ್ನು ಧರಿಸಿ ತೆಗೆದನಂತರ ತಾವು ಸಮರ್ಪಿಸಿದ ಈ ರಾಜಮುಡಿಯನ್ನು ಧರಿಸಿ ಬ್ರಹ್ಮೋತ್ಸವವು ಬೆಳೆದನಂತರ ಶ್ರೀರಂಗಪಟ್ಟಣಕ್ಕೆ ತೆಗೆದಕೊಂಡು ಬರುವಂತೆಯೂ, ವಯಿರಮುಡಿಯನ್ನು ಮಾತ್ರ ಉತ್ಸವವಾದೊಡನೆ ಅದೇ ದಿವಸ ರಾತ್ರಿಯೇ ಮೊಹರಮಾಡಿಸಿ ಶ್ರೀರಂಗಪಟ್ಟಣದ ಭಂಡಾರಕ್ಕೆ ತರುವಂತೆಯೂ, ಅಷ್ಟತೀರ್ಥ ಮುಂತಾದ ವಿಶೇಷೋತ್ಸವಗಳಲ್ಲಿ ರಾಜಮುಡಿಮಾತ್ರ ಹೋಗಿಬರುವಂತೆಯೂ ನಿಬಂಧನೆ ಮಾಡಿ ಶ್ರೀನಾರಾಯಣ ಸ್ವಾಮಿಯವರಿಗೆ ಅಮೂಲ್ಯ ರತ್ನಕವಚವನ್ನು ಒಪ್ಪಿಸಿದರು.

**ವಯಿರಮುಡಿಯು** ಇದುವರೆಗೂ ಎಂದರೆ ಭೂಶೋಧನೆಯಿಂದ ದೊರೆತ ಮೇಲೆ ಕ್ರಿ.ಶ. 1103 ರಿಂದ 1612 ರ ವರೆಗೆ 509 ವರ್ಷಗಳ ಕಾಲ ದೇವಸ್ಥಾನ ದಲ್ಲೇ ಇದ್ದಿತು. ರಾಜಿಕ, ದೈವಿಕ ಕಾಲದಲ್ಲಿ ಅರಣ್ಯಸಂಚಾರ ಅಥವ ಭೂ ಸ್ಥಾಪನೆಯಾಗಿರುವುದು ಸಹಜವು. ವಯಿರಮುಡಿ ವಿಚಾರವನ್ನು ವಿವರವಾಗಿ ಉಪೋದ್ಘಾತದಲ್ಲಿ ವಿವರಿಸಿರುವುದು.

ಈ ಧರ್ಮವಲ್ಲದೆ ರಾಜಒಡೆಯರವರು ಶಕ ೧೫೩೭ ನೇ ಆನಂದ ಸಂ॥ ದಲ್ಲಿ (ಕ್ರಿ.ಶ. 1614) ಶ್ರೀರಂಗಪಟ್ಟಣಕ್ಕೆ ಸೇರಿದ ಕುರುವಂಕನಾಡು ಹೋಬಳಿಗೆ ಸೇರಿದ ಮುತ್ತಿಗೆರೆಗ್ರಾಮವನ್ನೂ ಅದಕ್ಕೆ ಸೇರಿದ ೧೦ ಉಪಗ್ರಾಮಗಳನ್ನೂ ತಮಗೆ ಉದಾರ ವಾಗಿ ವಿಜಯನಗರದ ಶ್ರೀ. **ವೆಂಕಟಪತಿರಾಜರು** ಕೊಟ್ಟಿದ್ದನ್ನು, ಮುತ್ತಿಗೆರೆ ಗ್ರಾಮಕ್ಕೆ ನರಸಿಂಹಪುರವೆಂದು ನಾಮಕರಣ ಮಾಡಿ ಅದಕ್ಕೆ ಸೇರಿದ ೧೦ ಗ್ರಾಮ ಗಳನ್ನು, ೫೦ ವೃತ್ತಿಗಳಾಗಿ ವಿಭಾಗಿಸಿ ೪೯ ವೃತ್ತಿಗಳನ್ನು ಮೇಲುಕೋಟೆಯ ೨೮ ಶ್ರೋತ್ರಿಯ ಶ್ರೀವೈಷ್ಣವ ಬ್ರಾಹ್ಮಣರುಗಳಿಗೂ ಕೊಟ್ಟು ಒಂದು ವೃತ್ತಿಯನ್ನು ಶ್ರೀಚೆಲ್ವಪ್ಪಿಳ್ಳೆದೇವರ ಗರುಡವಾಹನಕ್ಕಾಗಿಯೂ ದಾನವಾಗಿ ಕೊಟ್ಟರು. ಶಾ. ೧೫೩೭

ಪ್ರತಿದಿನದ ಪದ್ಧತಿಯಂತೆ ದೇವಸ್ಥಾನದಲ್ಲಿ ಶ್ರೀನಾರಾಯಣಸ್ವಾಮಿಗೆ ಮಹಾಮಂಗಲಾರತಿ ನಡೆಯುತ್ತಿದ್ದಾಗ ಅತ್ಯದ್ಭುತವಾದ ತೇಜಸ್ಸೊಂದು ದೇವರ ಪಾದದಲ್ಲಿ ಒಂದು ದಿನ ಐಕ್ಯವಾದುದನ್ನು ಗೋಷ್ಠೀಜನಗಳು ಕಂಡು ವಿಚಾರವೇನೆಂದು ವಿಚಾರಿಸುವಲ್ಲಿ ರಾಜಒಡೆಯರವರು ಪರಮಪದಿಸಿರೆಂದು ತಿಳಿದು ಅವರು ಮಹಾಭಕ್ತರಾದ್ದರಿಂದ ಜ್ಞಾಪಕಾರ್ಥವಾಗಿ ಅವರ ಭಕ್ತವಿಗ್ರಹವನ್ನು ನಾರಾಯಣಸ್ವಾಮಿಯ ರಂಗಮಂಟಪದ ಕಂಬದಲ್ಲಿ ಉಂಟುಮಾಡಿ ಮಹಾ ಮಂಗಳಾರತಿ ಸಮಯದಲ್ಲಿ ಮರ್ಯಾದೆಯು ಏರ್ಪಟ್ಟು ಅದ್ಯಾವಧಿ ನಡೆದು ಬರುತ್ತಿದೆ.

## ಶ್ರೀ ನಾರಾಯಣ ರಾಮಾನುಜಜೀಯರು

ಯದ್ವದ್ರಿರಾಮಾನುಜಯೋಗಿವರ್ಯ । ಕಟಾಕ್ಷಲಬ್ಧಾಗಮಮೌಳಿಯುಗ್ಮಂ
ನಮಾಮಿನಾರಾಯಣಯೋಗಿವರ್ಯಂ । ದುರ್ವಾದಿಹಂಸಾಂಬುದಸನ್ನಿಭಂತಂ ॥

ಸಂಪತ್ಕುಮಾರ ರಾಮಾನುಜಜೀಯರು ತಮ್ಮ ಉತ್ತರಾಧಿಕಾರಿಯನ್ನು ಏರ್ಪಡಿಸದೆ ಪರಮಪದಿಸಿದುದರಿಂದ ಸನ್ಯಾಸಿಪರಂಪರಾ ಭಂಗವುಂಟಾಗುವುದನ್ನು ಧಾರ್ಮಿಕರಾದಶ್ರೀವೈಷ್ಣವ ಮಹನೀಯರು ಆಲೋಚಿಸಿ ಶಾಸ್ತ್ರ, ಸಂಪ್ರದಾಯವನ್ನನು ಸರಿಸಿ ನಾಲ್ಕುಜನಗಳ ವರಣದಿಂದ ಈ ಮಹಾತ್ಮರಿಗೆ ಸನ್ಯಾಸವನ್ನು ಕೊಡಿಸಿ ಬಿಡಸನ್ಯಾಸಿಯೆಂದು ಹೆಸರಿಟ್ಟು ಆ ನಾಲ್ಕರಲ್ಲಿ ಮುಖಂಡನಾದವನನ್ನನುಸರಿಸಿ ಮಠದಲ್ಲಿದ್ದ ಗುರುಪರಂಪರಾದಿ ಗ್ರಂಥಗಳನ್ನೂ, ಹಿಂದಿನ ಸನ್ಯಾಸಿಯ ಕೆಲವು ಉಪಕರಣಗಳನ್ನೂ ಬಿಡಸನ್ಯಾಸಿಯ ಉಪಯೋಗಕ್ಕೆಂದು ಸಂಪಾದಿಸಿಕೊಟ್ಟು ದಿನಕ್ರಮೇಣ ಪೂಜಾರ್ಹವಾದ ಮುಖ್ಯವಿಗ್ರಹವೊಂದನ್ನು ಸಹ ಉಪಾಯದಿಂದ ಪಡೆದು ಬಿಡಸನ್ಯಾಸಿಗೆ ಕೊಟ್ಟು ದೇವಸ್ಥಾನದ ಉತ್ತರಕಡೆಯಲ್ಲಿ ಜೀಯರಗುಡಿ ಯೆಂಬ ಕಟ್ಟಡದಲ್ಲಿ ವಾಸಕ್ಕೆ ಏರ್ಪಾಡನ್ನು ಮಾಡಿಕೊಟ್ಟರು. ಹೀಗೆ ಕೆಲವುಕಾಲ ಶ್ರೀಯತಿರಾಜಮಠಾಧಿಪತಿಗಳು ಬಿಡಸನ್ಯಾಸಿಯಾಗಿ ಶ್ರೀನಾರಾಯಣಸ್ವಾಮಿಯ ಸೇವೆಯನ್ನು ಮಾಡುತ್ತಾ ತಮ್ಮ ಅವಸಾನಕಾಲದಲ್ಲಿ ತಮ್ಮ ಶಿಷ್ಯರಲ್ಲೊಬ್ಬರಿಗೆ ಸನ್ಯಾಸಾಶ್ರಮವನ್ನು ಕೊಟ್ಟು ಪರಮಪದಿಸಿದರು. ಇವರು ಲೋಕಕ್ಷೇಮವಾಗಿ ....ಚಾತುರ್ಮಾಸವ್ರತಗಳನ್ನು ಕೈಕೊಂಡಿದ್ದರು.

## ಶ್ರೀ ಸಂಪತ್ಕುಮಾರ ರಾಮಾನುಜ ಜೀಯರು

ಶ್ರೀನಾರಾಯಣಯೋಗಿವರ್ಯಕರುಣಾಲಬ್ಧಾಗಮಾಂತ್ಯದ್ವಯಂ
ಮಾಯಾವಾದಿಮತಪ್ರಭೂತತಿಮಿರಪ್ರೋಚ್ಚಾಟನೇ ಭಾಸ್ಕರಂ ।
ಶ್ರೀಯದ್ವದ್ರಿಯತೀಂದ್ರಮಾನವಕೃಪಾಪ್ರಾಪ್ತಪ್ರಬೋಧೋಜ್ವಲಂ
ಸಂಪತ್ಪುತ್ರಮುನಿಪ್ರವೀಣಮನಘಂಸೇವೇಯತೀನಾಂವರಂ ॥

ಈ ಮಹಾತ್ಮರು ಆಶ್ರಮವನ್ನು ಪಡೆದು ನಾರಾಯಣಸ್ವಾಮಿಯವರ ಕೈಂಕರ್ಯಸೇವೆಯನ್ನು ನಡೆಸುತ್ತಿರುವ ಕಾಲದಲ್ಲಿ ಸ್ಥಾನದವರ ಪರಂಪರೆಯಲ್ಲಿ ಹೊಸ ಹೊಸಬರಾದವರು ಬರುತ್ತಿದ್ದರು. ಈ ಮಹಾತ್ಮರು ಪಂಡಿತರಾಗಿ ಚತುರ

ರಾದುದರಿಂದ ಶ್ರೀಯತಿರಾಜಮಠದ ಕಲ್ಲುಕಟ್ಟಡದಲ್ಲಿ ಪಶುಗಳನ್ನು ಕಟ್ಟುತ್ತಿದ್ದವನನ್ನು ಅನುಸರಿಸಿ ಅವನಿಗೆ ತಾನು ಪ್ರೀತಿಪಾತ್ರನಾಗಿ ವಿದ್ಯಾರ್ಥಿಗಳಿಗೆ ವೇದವೇದಾಂತಗಳನ್ನು ಹೇಳಿಕೊಡುವುದಕ್ಕೆ ಗೋಶಾಲೆಯಾದ ಶ್ರೀಮಠವನ್ನು ಪ್ರಾರ್ಥಿಸಿ ತೆಗೆದುಕೊಂಡು ಶಾಸ್ತ್ರಪ್ರವಚನವನ್ನು ಮಾಡುತ ತನ್ನ ಭಾವವನ್ನು ಗೂಢವಾಗಿ ಕಾಪಾಡಿಕೊಂಡು ತನ್ನ ಉತ್ತರಾಧಿಕಾರಿಗೆ ಆಶ್ರಮವನ್ನು ಕೊಟ್ಟು ಅಂತರಂಗವಾಗಿ ಮಠದ ಚರಿತ್ರವನ್ನು ತಿಳಿಸಿ ಸರಿಯಾದಕಾಲದಲ್ಲಿ ಪ್ರಕಾಶಪಡಿಸುವಂತೆ ಹೇಳಿದಮೇಲೆ ಆ ಕಟ್ಟಡದಲ್ಲಿ ಸನ್ಯಾಸಿಪರಂಪರೆಯು ಪುನಃ ಆರಂಭವಾಗಿ ಭಿಕ್ಷಾವೃತ್ತಿಯಿಂದ ಆಹಾರವನ್ನು ಮಾಡಿಕೊಂಡು ಧರ್ಮಾಚರಣೆಯು ನಡೆಯುತ ಸಾಗಿತು. ಈ ಜೀಯರು ಲೋಕಕ್ಷೇಮಾರ್ಥವಾಗಿ....ಚಾತುರ್ಮಾಸ ವ್ರತಗಳನ್ನು ಅನುಷ್ಠಿಸಿದವರಾದರು.

---

ಶಕ ೧೫೫೫ ನೇ ಶ್ರೀಮುಖ ಸಂ|| ದಲ್ಲಿ (ಕ್ರಿ. ಶ. 1633) ರಾಜಒಡೆಯರವರ ಮೊಮ್ಮಕ್ಕಳು ಚಾಮರಾಜಒಡೆಯರವರ ಧರ್ಮಪತ್ನಿ ಮುದ್ದಾಜಮ್ಮಣ್ಣಿಯವರು ತಮ್ಮ ಕೈಂಕರ್ಯವಾಗಿರಬೇಕೆಂದು ಶಿಥಿಲವಾದ ಕಲ್ಯಾಣಿ ಪುಷ್ಕರಣಿಗೆ ಕಾಶಿಯಕೆಲಸ ಸೋಪಾನವನ್ನು ಕಟ್ಟಿಸಿ ಸುತ್ತಲೂ ಮಂಟಪವನ್ನು ಕಟ್ಟಿಸಿದರು.

---

ಕಂಠೀರವನರಸರಾಜ ಒಡೆಯರವರು ಕ್ರಿ. ಶ. 1646 ರಲ್ಲಿ ತಿರುನಾರಾಯಣಪುರಕ್ಕೆ ಬಡಗಲಲ್ಲಿರುವ ಸುಕತೊರೆಯೇ ಮೊದಲಾದ ೭ ಗ್ರಾಮಗಳಿಗೆ ಸೇರಿದ ಭೂಮಿನಿವೇಶನಗಳನ್ನೂ ಅಗ್ರಹಾರಾದಿಗಳನ್ನೂ ಕಟ್ಟಿಸಿ ಶ್ರೀವೈಷ್ಣವರುಗಳಿಗೆ ದಾನವಾಗಿಕೊಟ್ಟು ಧರ್ಮಶಾಸನವನ್ನು ಬರೆದರು.

ಶಕ ೧೬೦೧ ನೇ ಕಾಳಯುಕ್ತಿ ಸಂ|| ೧೧ ರಲ್ಲು (ಕ್ರಿ. ಶ. 1678) ಚಿಕ್ಕದೇವಮಹಾರಾಜರು ರಾಜ್ಯಭಾರ ಮಾಡುತ್ತಿರುವಲ್ಲಿ ಕೌಶಿಕಗೋತ್ರದ ಶ್ರೀರಂಗಪಟ್ಟಣದ ಅಳಹಿಯಶಿಂಗರಯ್ಯಂಗಾರ್ಯರು ಮಹಾರಾಜರಿಗೆ ಭಾರತಕಾಲಕ್ಷೇಪವನ್ನು ಹೇಳಿ ಯುದಿಷ್ಠಿರಾಭಿಷೇಕ ಶ್ರವಣಕಾಲದಲ್ಲಿ ಮಹಾರಾಜರು ಅವರಿಗೆ ಸಮರ್ಪಿಸಿದ ನರಸೀಪುರದ ಹೋಬಳಿ ಮಂದಗೆರೆಗೆ ಸೇರಿದ ನಾಟನಹಳ್ಳಿ, ಬೀರುಬಳ್ಳಿ ಗ್ರಾಮಗಳಲ್ಲಿ ನಾಟನಹಳ್ಳಿಯನ್ನು ತಾವೇ ಇಟ್ಟುಕೊಂಡು ಬೀರುಹಳ್ಳಿಗ್ರಾಮವನ್ನು ತಾವು ಏರ್ಪಡಿಸಿ ನಡೆಸಿಕೊಂಡು ಬರುತ್ತಿದ್ದ ಶ್ರೀರಾಮಾನುಜಾಚಾರ್ಯರ ತಿರುನಕ್ಷತ್ರದ ಹತ್ತುದಿವಸದ ವಾಹನ, ರಥೋತ್ಸವ, ಮಂಟಪಸೇವೆ, ಚರಪು, ಕಾಣಿಕೆ ಮುಂತಾದ ಸೇವೆಗಳಿಗಾಗಿ ಶ್ರೀತಿರುನಾರಾಯಣದೇವರ ಶ್ರೀಭಂಡಾರಕ್ಕೆ ಸಮರ್ಪಿಸಿ ಧರ್ಮಶಾಸನ

ವನ್ನು ಬರೆದರು. ಈಗಲೂ ಅವರ ವಂಶೀಯರಿಗೆ ಅಗ್ರತೀರ್ಥ ಮರ್ಯಾದೆಯು ನಡೆದುಬರುತ್ತಿದೆ. (ಶ್ರೀ.ಪ, ಶಾಸನ ೯೪. ಕೃಷ್ಣರಾಜಪೇಟೆ ೪೫.)

ಶ್ರೀ ಕಂಠೀರವಮಹಾರಾಜರು (1704—1714) ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿ ಬಿಂದುಮಾಧವನ ಗುಡಿಯನ್ನು ಕಟ್ಟಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿದರು.

ಶಕ ೧೬೩೬ ನೇ ವಿಜಯ ಸಂ॥ ಮಾರ್ಗಶಿರ ಶು. ಪ್ರಥಮಾ ಶನಿವಾರದಲ್ಲು (ಕ್ರಿ.ಶ. 1713) ಶ್ರೀನಾರಾಯಣದೇವರ ನಿಯಮನದಿಂದ ಚನ್ನಪ್ಪ ಶ್ರೇಷ್ಠಿಯವರ ಮಕ್ಕಳು ಅಳಗಿಯ ಮಣವಾಳದಾಸರಾದ ಕೇತಿಯಪ್ಪ ಶ್ರೇಷ್ಠಿಯವರು ರಾಮಾನುಜಕೂಟಕ್ಕೆ (ಶ್ರೀಯತಿರಾಜಮಠಕ್ಕೆ) ಕೆಲವು ಗ್ರಾಮ, ಭೂಮಿಗಳನ್ನು ಬಿಟ್ಟು ಧರ್ಮಶಾಸನವನ್ನು ಬರೆದರು. (ಶ್ರೀ. ಪ. ಶಾಸನ ೯೯)

ದೊಡ್ಡಕೃಷ್ಣರಾಜಒಡೆಯರು (ಕ್ರಿ.ಶ. 1714....1732) ತೊಂಡನೂರಿನಲ್ಲಿ ಸ್ವನಾಮಾಂಕಿತವಾಗಿ ದೇವಸ್ಥಾನವನ್ನು ಕಟ್ಟಿಸಿ ಗೋಪಾಲ ಕೃಷ್ಣಸ್ವಾಮಿಯವರ ಪ್ರತಿಷ್ಠೆಯನ್ನು ಮಾಡಿಸಿ ತಮ್ಮ ಇಬ್ಬರು ಪತ್ನಿಯರಾದ ದೇವಾಜಮ್ಮಣ್ಣಿ, ಚಲುವಾಜಮ್ಮಣ್ಣಿಯವರ ಹೆಸರಿನಿಂದ ಎರಡು ಅಗ್ರಹಾರಾದಿಗಳನ್ನು ಮಾಡಿಸಿ ೪೮ ವೃತ್ತಿಗಳೊಡನೆ ಬ್ರಾಹ್ಮಣರಿಗೆ ಗೃಹೋಪಕರಣಸಹಿತವಾಗಿ ದಾನಮಾಡಿ ದೇವಸ್ಥಾನಕ್ಕೆ ತಸದೀಕನ್ನು ಏರ್ಪಡಿಸಿದರು. ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿಯೂ, ತಮ್ಮ ಮಾತೂಶ್ರೀ ಚಲುವಾಜಮ್ಮಣ್ಣಿಯವರ ನಾಮಾಂಕಿತವಾಗಿಯೂ ಕಲ್ಯಾಣಿಯ ಬಳಿಯಲ್ಲಿ ಕೆಲವು ಮಂಟಪಗಳನ್ನು, ಆಳ್ವಾರ್ ಗುಡಿಯನ್ನೂ ಕಟ್ಟಿಸಿದರು.

## ಶ್ರೀ ನಾರಾಯಣ ರಾಮಾನುಜಜೀಯರು

ಸಂಪತ್ಪುತ್ರಮುನೇಶ್ಶಿಷ್ಯಂ ನಾರಾಯಣಮುನೀಶ್ವರಂ
ದುರ್ವಾದಿತೂಲವಾತೂಲಂ ಸೇವೇ ಯದ್ವದ್ರಿವಾಸಿನಂ ॥

ಈ ಮಹಾಪುರುಷರು ಆಶ್ರಮ ಸ್ವೀಕಾರಮಾಡಿ ಶ್ರೀಯತಿರಾಜಮಠದಲ್ಲಿ ಪೀಠಸ್ಥರಾಗಿದ್ದರು. ಇವರಿಗೆ ನಾರಾಯಣಪಟ್ಟವು. ದೇವಸ್ಥಾನದಲ್ಲಿ ಮರ್ಯಾದೆಯನ್ನು ಹೊಂದಿ ಶ್ರೀತಿರುನಾರಾಯಣ ಚಲ್ವಪ್ಪಿಳ್ಳೆಯವರ ಕೈಂಕರ್ಯವನ್ನೂ ಉಭಯವೇದಾಂತಾದಿ ಕಾಲಕ್ಷೇಪಾದಿಗಳನ್ನೂ ನಡೆಸಿಕೊಂಡು ಬರುವವರಾದರು.

## ಶ್ರೀ ಸಂಪತ್ಕುಮಾರ ರಾಮಾನುಜಜೀಯರು

ನಾರಾಯಣಾಖ್ಯ ಮುನಿವೀಕ್ಷಣಜಾತಬೋಧಂ
ಸಂಸಾರವಾರಿಧಿ ಸಮುತ್ತರಣೈಕನಾವಂ ।
ಯದ್ವದ್ರಿನಾಥಕೃಪಯಾ ಪ್ರತಿವಾದಿಸಿಂಹಂ
ಸಂಪತ್ಕುಮಾರಮುನಿವರ್ಯಮಹಂ ಪ್ರಪದ್ಯೇ ॥

ಈ ಮಹಾಪುರುಷರು ಆಶ್ರಮವನ್ನು ಸ್ವೀಕರಿಸಿ ಶ್ರೀಯತಿರಾಜಮಠದಲ್ಲಿ ಪೀಠಸ್ಥರಾಗಿದ್ದರು. ಇವರಿಗೆ ಸಂಪತ್ಕುಮಾರಪಟ್ಟವು. ಶ್ರೀತಿರುನಾರಾಯಣ ಚಲ್ವಪ್ಪಿಳ್ಳೆಯವರ ಕೈಂಕರ್ಯಗಳನ್ನೂ, ಉಭಯವೇದಾಂತಾದಿ ಕಾಲಕ್ಷೇಪಾದಿಗಳನ್ನೂ ನಡೆಸಿಕೊಂಡು ಬರುವವರಾದರು.

---

## ಶ್ರೀ ಕುಣಿಗಲ್ ಬಹುಕುಟುಂಬಿಸ್ವಾಮಿ

| ಆಶ್ರಮಸ್ವೀಕಾರಕಾಲಃ | ಪರಮಪದಕಾಲಃ |
|---|---|
| ........ | ೧೭೪೪ ಚಿತ್ರಭಾನು ಸಂ॥ (1822) |

ಶ್ರೀಸಂಪತ್ಸುತಸಂಯಮೀಂದ್ರ ಚರಣದ್ವಂದ್ವಾಶ್ರಯಂ ಸದ್ಗುಣಂ
ಶ್ರೀಮನ್ತಂ ಗುರುಸಾರ್ವಭೌಮಮನಘಂ ವೇದಾನ್ತಯುಗ್ಮಾರ್ಥದಂ ।
ಶ್ರೀಮದ್ಯಾದವ ಶೈಲನಾಥಯತಿರಾಟ್ ಕೈಂಕರ್ಯನಿಷ್ಠಂ ಸದಾ
ಶ್ರೀನಾರಾಯಣ ಸಂಯಮೀಂದ್ರ ಮತುಲೋದಾರಸ್ವಭಾವಂಭಜೇ ॥

ಈ ಮಹಾಪುರುಷರು ತುರ್ಯಾಶ್ರಮವನ್ನು ಸ್ವೀಕರಿಸಿ ಪೀಠಸ್ಥರಾಗಿದ್ದರು. ದೇವಸ್ಥಾನದಲ್ಲಿ ಮರ್ಯಾದೆಯನ್ನು ಹೊಂದಿ ತಿರುನಾರಾಯಣ ಚಲ್ವಪ್ಪಿಳ್ಳೆಯವರ ಅಂಗರಂಗವೈಭವಗಳನ್ನು ನಡೆಸಿಕೊಂಡು ಬಂದು ಶಕ ೧೭೪೪ ನೇ ಚಿತ್ರಭಾನು (ಕ್ರಿ.ಶ. 1822) ಸಂವತ್ಸರದಲ್ಲಿ ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಇವರಿಗೆ ನಾರಾಯಣಪಟ್ಟವು. ಇವರ ವಂಶೀಯರು ವೇದವಿದ್ವಾಂಸರುಗಳಾಗಿ ಈಗಲೂ ತಿರುನಾರಾಯಣಪುರದಲ್ಲಿರುವರು.

# ಶ್ರೀ ತೊಂ. ಪ್ರ. ಭ. ಶಿಂಗರಯ್ಯಂಗಾರ್ಯಸ್ವಾಮಿ

ಶೇಷಾರ್ಯವೇಂಕಟಯತೀಂದ್ರ ಪದಾಬ್ಜಹಂಸಂ
ಶ್ರೀಶೈಲ ಶೇಷವರದಾರ್ಯದಯಾತ್ತಬೋಧಂ ।
ಶ್ರೀವಾದಿಭೀಕರ ಯದುಕ್ಷಿತಿಭೃದ್ಯತೀಂದ್ರ
ಸಂಪತ್ಕುಮಾರ ಮುನಿವರ್ಯಮಹಂ ಪ್ರಪದ್ಯೇ ॥

ಕನ್ಯಾಯಾಂ ಸ್ವಾತಿಸಂಜಾತಂ ವಾದಿಭೀಕೃತ್ಕುಲೋದ್ಭವಂ
ಸುಶೀಲಂ ಸದ್ಗುರುಂ ವಂದೇ ಸಂಪತ್ಪುತ್ರಮುನಿಂ ಸದಾ ॥

ಈ ಮಹಾತ್ಮರು ಕನ್ಯಾಮಾಸ ಸ್ವಾತೀ ನಕ್ಷತ್ರದಲ್ಲಿ ಶ್ರೀವತ್ಸಗೋತ್ರೋತ್ಪನ್ನರಾಗಿ ಅವತರಿಸಿದರು. ಇವರು ಶಕ ೧೭೪೪ ನೇ ಚಿತ್ರಭಾನು ಸಂ॥ ದಲ್ಲಿ (ಕ್ರಿ. ಶ. 1822) ಶ್ರೀಯತಿರಾಜಮಠದಲ್ಲಿ ಪೀಠಸ್ಥರಾಗಿದ್ದರು. ಇವರಿಗೆ ಸಂಪತ್ಕುಮಾರ ಪಟ್ಟವು. ಇವರ ಕಾಲದಲ್ಲಿ ಶ್ರೀಮಠದ ಆರ್ಥಿಕಪರಿಸ್ಥಿತಿಯು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದುದಾಗಿ ತಿಳಿದು ಬರುವುದು. ಶ್ರೀಜೀಯರುಸ್ವಾಮಿಗಳು ಶ್ರೀಭಾಷ್ಯ, ಭಗವದ್ವಿಷಯವೇ ಮೊದಲಾಗಿ ಕಾಲಕ್ಷೇಪಾದಿಗಳನ್ನು ನಡೆಸಿ ಬರುವಾಗ ಮಹಾವಿದ್ವಾಂಸರುಗಳಾಗಿಯೂ, ಆಚಾರ್ಯನಿಷ್ಠರಾಗಿಯೂ, ನಿತ್ಯವಾಸದವರಾಗಿಯೂ, ದಯಮಾಡಿಸಿದ್ದ ಕುಮಾರ ಅಚ್ಚಿಂಗಯ್ಯಂಗಾರ್ಯರೂ, ಕಂದಾಡೈ ದೊಡ್ಡಯ್ಯಾಚಾರ್ಯರೂ, ಕೊಮಾರ ಶಿಂಗಲಾಚಾರ್ಯರೂ, ಮಹಾಭಾಷ್ಯಂ ನಾಟಿಂಪಳ್ಳಿ ಶಿಂಗಲಾಚಾರ್ಯರೂ, ಸ್ಥಾನೀಕ ಕೋಯಿಲ್‌ನಂಬಿ ಪೆರಿಯಪ್ಪನವರೂ, ವೇದಾಂತ ನರಸಿಂಹಾಚಾರ್ಯರೂ, ಕಂಚಿ ತಿರುವೆಂಕಟಾಚಾರ್ಯರೂ, ಅಮ್ಮತೂರು ಶ್ರೀನಿವಾಸಯ್ಯಂಗಾರ್ಯರೂ, ರಾಮಾನುಜಮುನಿ, ತಿರುಮಲಾಚಾರ್ಯರೂ, ಮಾದ್ಯಾರ್ ಕೇತನಹಳ್ಳಿ ವೆಂಕಟಾಚಾರ್ಯರೂ ತೊಂಡನೂರು ಸ್ಥಾನೀಕಂ ಶ್ರೀನಿವಾಸಯ್ಯಂಗಾರ್ಯರೂ, ಕೊಡೆ ಶಿಂಗಲಾಚಾರ್ಯರೂ ಕಂದಾಡೈ ಗೋವಿಂದಾಚಾರ್ಯರೂ, ಅನಂದಾಂಪ್ಪಿಳ್ಳೆ ತಿರುಮಲಾಚಾರ್ಯರೂ, ಇವರೇ ಮೊದಲಾದ ಮಹನೀಯರುಗಳು ಕಾಲಕ್ಷೇಪದಲ್ಲಿ ಅನ್ವಯಿಸಿದ್ದರು.

ಶ್ರೀಮಠದ ಆರ್ಥಿಕ ಪರಿಸ್ಥಿತಿಯು ಕಷ್ಟವಾಗಿದ್ದ ಕಾಲದಲ್ಲಿ ಕಲಿಪ್ರೇರಣೆಯಿಂದ (1830—33) ಜೋ. ಕುಪ್ಪಯ್ಯನೆಂಬುವನು ನಾಲ್ಕಾರು ದುಷ್ಟಜನಗಳನ್ನು ಸೇರಿಸಿಕೊಂಡು ಶ್ರೀಯತಿರಾಜಜೀಯರನ್ನು ಆ ಸ್ಥಳದಿಂದ ಬಿಟ್ಟು ಹೋಗಬೇಕೆಂದೂ, ಇಲ್ಲದಿದ್ದರೆ ಘಾತಕಾದಿ ದುಷ್ಕೃತ್ಯಗಳನ್ನು ಮಾಡುವುದಾಗಿಯೂ

ಹೇಳಿದುದಲ್ಲದೆ ಆ ಪ್ರಯತ್ನದಲ್ಲಿ ಇದ್ದನೆಂದೂ ತಿಳಿದುಬರುತ್ತದೆ. ಇವರ ಕಾಲದಲ್ಲಿ ಸ್ವಯೂಥ ಸಂಪ್ರದಾಯಭೇದ ಕೂಟದವರಿಂದ ಅನೇಕವಾಗಿ ಹಿಂಸೆಗಳು ಏರ್ಪಟ್ಟವು. ಶ್ರೀಜೀಯರು ಸ್ವಾಮಿಗಳು ಅಶಕ್ತರಾಗಿ ಪರಮಪದಿಸುವ ಸಮಯ ವನ್ನು ನೋಡಿ ಸಂಪ್ರದಾಯಭೇದ ಕೂಟದವರು ಶ್ರೀಯತಿರಾಜಮಠವನ್ನು ಹೇಗಾದರೂಮಾಡಿ ಆಕ್ರಮಿಸಬೇಕೆಂಬ ದುರುದ್ದೇಶ ಅಥವ ಸ್ವಲಾಭಾಪೇಕ್ಷೆ ಯಿಂದ ತಮ್ಮಲ್ಲಿ ಒಬ್ಬರಿಗೆ ಸನ್ಯಾಸವನ್ನುಕೊಟ್ಟು ಶ್ರೀಜೀಯರುಸ್ವಾಮಿಗಳು ಪರಮ ಪದಿಸಿದ ತಕ್ಷಣ ಬಲಾತ್ಕಾರವಾಗಿಯಾದರೂ ಶ್ರೀಮಠದಲ್ಲಿ ತಮ್ಮ ಸನ್ಯಾಸಿಯನ್ನು ಏರ್ಪಡಿಸಲು ಸರ್ವಪ್ರಯತ್ನವನ್ನೂ ಮಾಡಿದ್ದರು. ಆದರೆ ದೈವಸಂಕಲ್ಪದಿಂದ ಅವರುಗಳ ಪ್ರಯತ್ನವು ವಿಫಲವಾಗಿಬಿಟ್ಟಿತು.

ಶ್ರೀಜೀಯರ್ ಸ್ವಾಮಿಗಳವರು ದೇವಸ್ಥಾನದ ಮರ್ಯಾದೆ ಮತ್ತು ಶ್ರೀನಾರಾ ಯಣಸ್ವಾಮಿಯವರ ಕೈಂಕರ್ಯವನ್ನು ನಡೆಸಿ ತಮ್ಮ ಅವಸಾನಕಾಲದಲ್ಲಿ ಅನಂದಾಳ್ವಾರ್ರೆಂಬುವರಿಗೆ ವಿಕಾರಿ ಸಂ || ಮಾರ್ಗಶಿರ ಶು. ಚತುರ್ದಶಿಯಲ್ಲಿ ಅಶ್ರಮವನ್ನುಕೊಟ್ಟು ಶಕ ೧೭೬೨ ವಿಕಾರಿ ಸಂ|| ಮಾರ್ಗಶಿರ ಶು. ಪೌರ್ಣಮಿದಿನ ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ೧೮ ಚಾತುರ್ಮಾಸವ್ರತಗಳನ್ನು ಅನುಷ್ಠಿಸಿಬಂದರು. ಇವರ ವಂಶದವರು ಮೈಸೂರು ರಾಜ್ಯಾಂಗದಲ್ಲಿ ಉನ್ನತಾಧಿಕಾರಿಗಳಾಗಿರುತ್ತಾರೆ.

## ಶ್ರೀ ತಿಟ್ಟಿಮೇಲ್ ಅನಂದಾಳ್ವಾರ್‌ಸ್ವಾಮಿ

ಸಂಪತ್ಸುತಸ್ಯ ಯಮಿನಃ ಪದಪಂಕಜಾಳಿಂ
ಸಂಪತ್ಕುಮಾರ ಮುನಿವರ್ಯಕೃಪಾತ್ತಬೋಧಂ |
ತಲ್ಲಬ್ಧವೇದಯುಗಳಂ ಯದುಭೂಧರ ಶ್ರೀ
ನಾರಾಯಣಂ ಮುನಿವರಂ ಸತತಂ ಭಜೇಹಂ ||

ಈ ಮಹಾಪುರುಷರು ಕುಂಭಮಾಸ ಚಿತ್ತಾ ನಕ್ಷತ್ರದಲ್ಲಿ ಜನಿಸಿದರು. ಇವರು ಆಶ್ರಮ ವಹಿಸುವಕಾಲದಲ್ಲಿ ಶ್ರೀಮಠದವಿಷಯದಲ್ಲಿ ಸಂಪ್ರದಾಯಭೇದದವರ ಕಲಹ ದಿಂದಲೂ, ಚೋ. ಕುಪ್ಪಯ್ಯನ ದುಷ್ಕೃತ್ಯ ಮೋಸದಿಂದಲೂ, ಕಾಲವನ್ನನುಸರಿಸಿದ ಕಲಿ ಪ್ರವೇಶದಿಂದ ಶ್ರೀಮಠದಲ್ಲಿ ಆರ್ಥಿಕ ಮತ್ತು ಅಧಿಕಾರ ಕಡಮೆಯಾಗಿ ಮಠಾಧಿ ಪತಿಗಳು ಧರ್ಮಾಚರಣೆಯನ್ನು ನಡೆಸುವುದೂ, ಕಷ್ಟವಾದ ಕಾಲವಾಗಿದ್ದಿತು. ಶ್ರೀಮಠವನ್ನೂ, ಸಂಪ್ರದಾಯವನ್ನೂ ಕಾಪಾಡುವ ಉದ್ದೇಶದಿಂದ ಆಚಾರ್ಯರ

ನಿಯಮನದಂತೆ ಶಕ ೧೭೬೨ ವಿಕಾರಿ ಸಂ ॥ ಮಾರ್ಗಶಿರ ಶು. ಚತುರ್ದಶಿಯಲ್ಲಿ 19· 12. 1839. ಆಶ್ರಮವನ್ನು ಸ್ವೀಕರಿಸಿ ಮಠಾಧಿಪತಿಯಾದರು. ಇವರಿಗೆ ನಾರಾಯಣಪಟ್ಟವು. ಇವರು ತಮ್ಮ ಅಧಿಕಾರದಲ್ಲಿ ಪ್ರತಿವಾದಿ ಭಯಂಕರಂ ತೊಂಡನೂರು ಅಪ್ಪಲಾಚಾರ್ಯರನ್ನು ಶ್ರೀಮಠದ ಕಾರ್ಯದರ್ಶಿಯಾಗಿ ಮಾಡಿ ಸಕಲವಿಧ ಧರ್ಮಾಚರಣೆಯನ್ನೂ ನಡೆಸಿಬಂದರು. ಇವರು ತಮ್ಮ ಆಚಾರ್ಯರ ವೈಷ್ಣವಯಾಗವನ್ನು (೪೦೦೦ ದಿವ್ಯಪ್ರಬಂಧಸಠನ) ಸಂಭ್ರಮವಾಗಿ ನಡೆಸಿಬಂದು ಶಿಷ್ಯರಿಗೆ ಮಂತ್ರೋಪದೇಶವನ್ನು ಮಾಡಿ ಶ್ರೀತಿರುನಾರಾಯಣ ಚಲ್ವಪ್ಪಿಳ್ಳೆಯವರ ಅಂಗರಂಗವೈಭವಗಳನ್ನು ನಡೆಸಿ ಶಕ ೧೭೭೨ ಸೌಮ್ಯ ಸಂ ॥ ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ೧೦ ಚಾತುರ್ಮಾಸವ್ರತಗಳನ್ನು ನಡೆಸಿಬಂದರು.

## ಛಾಂದೋಗ್ಯಂ ಕುಪ್ಪನಯ್ಯಂಗಾರ್ಯಸ್ವಾಮಿ

ಶ್ರೀ ವೇಂಕಟೇಶ ಕರುಣಾಪರಿಣಾಮಪಾತ್ರಂ
ಶ್ರೀವಾಚ್ಛಕಾರಿ ಪದಪಂಕಜ ರಾಜಹಂಸಂ ।
ಶ್ರೀ ಯಾದವಾದ್ರಿ ಯತಿರಾಜದಯೈಕ ಪಾತ್ರಂ
ಸಂಪತ್ಕುಮಾರ ಮುನಿವರ್ಯಮಹಂ ಪ್ರಪದ್ಯೇ ॥

ಈ ಮಹಾಪುರುಷರು ಕರ್ಕಾಟಕ ಮಾಸ ಕೃತ್ತಿಕಾ ನಕ್ಷತ್ರದಲ್ಲಿ ಜನಿಸಿದರು. ಇವರು ತಮ್ಮ ಆಚಾರ್ಯಾಜ್ಞಾನುಸಾರ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀಯತಿರಾಜಮಠದಲ್ಲಿ ಪೀಠಸ್ಥರಾಗಿದ್ದರು. ಇವರಿಗೆ ಸಂಪತ್ಕುಮಾರಪಟ್ಟವು. ಇವರು ತಮ್ಮ ವೃದ್ಧಾಪ್ಯಕಾರಣದಿಂದಲೂ, ಉತ್ತರದೇಶದ ಶಿಷ್ಯರುಗಳ ಸಂರಕ್ಷಣಾರ್ಥವಾಗಿಯೂ, ವಿದ್ವಾಂಸರಾದ ನಾಟೇರಿ ವರದಾಚಾರ್ಯರೆಂಬುವರಿಗೆ ಶಕ ೧೭೭೬ ನೇ ಪ್ರಮಾದೀಚ ಸಂ ॥ ಮಾಘಮಾಸದಲ್ಲಿ (ವಿಕ್ರಮ ಸಂ ॥ ೧೯೧೧) ಆಶ್ರಮವನ್ನು ಕೊಟ್ಟು ಅವರಿಗೆ ಸಕಲ ಅಧಿಕಾರವನ್ನೂ ಅನುಗ್ರಹಿಸಿದರು. ಉತ್ತರಾಧಿಕಾರಿಯಾದ ನಾರಾಯಣ ರಾಮಾನುಜಜೀಯರು ಉತ್ತರದೇಶದಲ್ಲಿ ಸಂಚರಿಸುತ್ತಿದ್ದಾಗ ಈ ಜೀಯರು ತಿರುನಾರಾಯಣಪುರದಲ್ಲಿ ಶಕ ೧೭೮೧ ನೇ ಕಾಲಯುಕ್ತಿ ಸಂ ॥ ಅಧಿಕ ಜ್ಯೇಷ್ಠ ಶು. ೧೨ ರಲ್ಲು (ಸಂವತ್ ೧೯೧೫. ಕ್ರಿ.ಶ. 24. 5. 1858) ಪರಮಪದಿಸಿದರು. ಶ್ರೀಜೀಯರುಸ್ವಾಮಿ ಕಾಲದಲ್ಲೂ, ಪರಮಪದಿಸಿದಮೇಲೂ ಶ್ರೀಮಠದ ತಿರುವಾರಾಧನೆ, ಶ್ರೀಭಾಷ್ಯಾದಿ ಪಾಠಪ್ರವಚನ, ಕಾಲಕ್ಷೇಪಾದಿಗಳಿಗೂ ಶ್ರೀಮಠದ ಕಾರ್ಯನಿರ್ವಹಣಕ್ಕೂ ತೊಂಡನೂರು ಅಪ್ಪಲಾಚಾರ್ಯರೂ, ಉತ್ತರಾಧಿಕಾರಿಗಳಾದ ನಾರಾಯಣಜೀಯರೂ, ಇವರ ಪೂರ್ವಾಶ್ರಮದ ತಮ್ಮಂದಿರಾದ ರಾಮಾನುಜಾಚಾರ್ಯರೂ ಶ್ರೀಮಠದ ವಿಶಿಷ್ಟ ಧರ್ಮಾಚರಣೆಗಳನ್ನೂ ನಡೆಸಿಬಂದರು.

# ಶ್ರೀ ನಾಟೇರಿ ವರದಾಚಾರ್ಯಸ್ವಾಮಿ

ಶ್ರೀವೇಂಕಟೇಶಸ್ಯದಯೈಕಪಾತ್ರಂ ಶ್ರೀಮಚ್ಛಠಾರಾತಿಪದಾಬ್ಜಭೃಂಗಂ
ಶ್ರೀಮದ್ಯತೀಂದ್ರಪ್ರವಣಂ ಪ್ರಪದ್ಯೇ ಯದ್ವಾದ್ರಿನಾರಾಯಣಯೋಗಿವರ್ಯಂ ||

ಈ ಮಹಾಪುರುಷರು ಕುಂಭಮಾಸ ರೇವತೀ ನಕ್ಷತ್ರದಲ್ಲಿ ಜನಿಸಿದರು. ಅವರು ಕಾಂಚೀಮಂಡಲದ ಸಮೀಪದಲ್ಲಿರುವ ನಾಟೇರಿಗ್ರಾಮಕ್ಕೆ ಸೇರಿದವರು. ಕಂದಾಡೈ ವಂಶದವರು. ಇವರು ಮಹಾವಿದ್ವಾಂಸರಾಗಿದ್ದು ತಮ್ಮ ತಮ್ಮಂದಿರಾದ ರಾಮಾನುಜಾಚಾರ್ಯರೊಂದಿಗೆ ಈ ಕರ್ನಾಟ ದೇಶಕ್ಕೆ ದಯಮಾಡಿಸಿ ತಿರುನಾರಾಯಣಪುರದಲ್ಲಿ ನಿತ್ಯವಾಸಮಾಡಲು ಬಂದರು. ಆಗ ಯತಿರಾಜಮಠದಲ್ಲಿ ಆಚಾರ್ಯರಾಗಿದ್ದ ಸಂಪತ್ಕುಮಾರಜೀಯರಿಗೆ ವೃದ್ಧಾಪ್ಯ ಕಾರಣದಿಂದಲೂ, ಶಿಷ್ಯರ ಸಂರಕ್ಷಣಾರ್ಥವಾಗಿಯೂ ಇವರು ಶಕ ೧೭೭೬ ನೇ ಪ್ರಮಾದೀಚ ಸಂ || ಮಾಘಮಾಸದಲ್ಲಿ (ಕ್ರಿ.ಶ. 1854 ಸಂವತ್ ೧೯೧೧) ಆಶ್ರಮವನ್ನು ಸ್ವೀಕರಿಸಿ ಸಂಪತ್ಕುಮಾರಜೀಯರ ಉತ್ತರಾಧಿಕಾರಿಯಾಗಿ ಮಠಾಧಿಪತ್ಯವನ್ನು ವಹಿಸಿದರು. ಇವರಿಗೆ ೨೭ ನೇ ನಾರಾಯಣ ಪಟ್ಟವು. ಇವರು ಆಶ್ರಮಕ್ಕೆ ಬರುವಾಗ ಶ್ರೀಮಠದ ಆರ್ಥಿಕಸ್ಥಿತಿಯು ಸರಿಯಾಗಿರದೆ ಶ್ರೀಮಠಕ್ಕೆ ಬಹಳ ಸಾಲವಾಗಿದ್ದಿತು. ಈ ಸ್ಥಿತಿಗತಿಗಳನ್ನು ನೋಡಿ ಪ್ರ. ಭ. ತೊಂಡನೂರು ಅಪ್ಪಲಾಚಾರ್ಯರನ್ನು ಬರಮಾಡಿ ಅವರ ಸಹಾಯದಿಂದ ಶ್ರೀಮಠದ ವ್ಯವಹಾರಗಳನ್ನು ಒಂದುವಿಧವಾಗಿ ತೀರ್ಮಾನಿಸಿ ವ್ಯವಸ್ಥೆಪಡಿಸಿದರು. ಈ ಕಾಲದಲ್ಲಿ ಕೃಷ್ಣಕುಮಾರ ವೇಂಕಟಾಚಾರ್ಯರೂ, ಶಿಂಗಲಾಚಾರ್ಯರೂ ಶ್ರೀಮಠದ ರಿಕ್ತದೆಶೆಯನ್ನು ಕಾಪಾಡಿ ಬಂದರು. ಶ್ರೀಜೀಯರು ಸ್ವಾಮಿಗಳು ವಿಕ್ರಮ ಸಂ || ೧೯೧೩ ಶಕ ೧೭೭೮ ನೇ ನಳ ಸಂವತ್ಸರದಲ್ಲಿ (ಕ್ರಿ. ಶ. 1856) ಉತ್ತರದೇಶಕ್ಕೆ ದಯಮಾಡಿಸಿ ಮತಪ್ರಚಾರವನ್ನು ಮಾಡಿ ಅನೇಕ ಶಿಷ್ಯರುಗಳನ್ನು ಸಂಪಾದಿಸಿ ಆನೆ, ಕುದುರೆ, ಪಲ್ಲಕ್ಕಿಯೇ ಮೊದಲಾದ ರಾಜಾಡಂಬರಗಳಿಂದ ಪರಿವೃತರಾಗಿ ಹಿಮಾಲಯ, ಬದರಿಕಾಶ್ರಮಗಳನ್ನು ಸೇವಿಸಿ ಸಂಚಾರದಲ್ಲಿ ಅಲ್ಲಲ್ಲಿರುವ ರಾಜಾಸ್ಥಾನಗಳಾದ ಬರೋಡ, ಬಿಕನೀರ್, ಜಯಪುರ, ದರ್ಭಂಗ ಇವೇ ಮೊದಲಾದ ರಾಜರುಗಳಿಂದ ಮರ್ಯಾದೆಯನ್ನುಹೊಂದಿ ಸಂ || ೧೯೧೬. ಶಕ ೧೭೮೧ ನೇ ಕಾಳಯುಕ್ತಿ ಸಂ || ದಲ್ಲಿ ಸಾಮ್ರಾಟ್ ರಘುರಾಜಸಿಂಹ ಜುದೇವ್ ರೀವಾ ಮಹಾರಾಜನಿಂದ ಪ್ರಾರ್ಥಿಸಲ್ಪಟ್ಟು ಆಹ್ವಾನಿತರಾಗಿ ದಯಮಾಡಿಸಿದರು.

ಈ ಸಮಯದಲ್ಲಿ ತಿರುನಾರಾಯಣಪುರದಲ್ಲಿ ಆಚಾರ್ಯರಾದ (ಛಾಂದೋಗ್ಯಂ ಕುಪ್ಪನಯ್ಯಂಗಾರ್‌ಸ್ವಾಮಿ) ಪರಮಪದಿಸಲು ಶ್ರೀಮಠದ ಧರ್ಮಾಚರಣೆಗಳನ್ನು

ನಡೆಸಿ ಬರುವಂತೆ ತಮ್ಮ ಪೂರ್ವಾಶ್ರಮದ ತಮ್ಮಂದಿರಾದ ರಾಮಾನುಜಾಚಾರ್ಯ ರಿಗೆ ಅಜಮೀರನಗರದಿಂದ 16.—7.—1858 ರಲ್ಲಿ ಕವಿಾಷನರ ಮೊಹರಿನಿಸಿ ಅಧಿಕಾರ ಪತ್ರವನ್ನು ಅನುಗ್ರಹಿಸಿದರು. ಶ್ರೀ ಜೀಯರುಸ್ವಾಮಿಗಳ ಸನ್ನಿಧಿಯಲ್ಲಿ ರೀವಾ ಮಹಾರಾಜರು ಅತ್ಯಂತಭಕ್ತಿ, ವಿಶ್ವಾಸ ಮರ್ಯಾದೆಗಳಿಂದ ಕೂಡಿದ್ದರು.

ರೀವಾ ಮಹಾರಾಜ ರಘುರಾಜಸಿಂಹನಿಗೆ ಸಂತಾನವಿಲ್ಲದ್ದನ್ನು ಕಂಡು ಮಹಾರಾಜನಿಗೆ ವೆಂಕಟೇಶಮನ್ತ್ರವನ್ನು ಉಪದೇಶಿಸಿದರು. ಮನ್ತ್ರಪ್ರಭಾವದಿಂದಲೂ, ರಾಜಕುಮಾರನಿಗೆ ಜೀಯರುಸ್ವಾಮಿಗಳ ಅನುಮತಿಯಂತೆ 'ವೆಂಕಟರಮಣಸಿಂಹ' ಎಂದು ನಾಮಕರಣವನ್ನು ಮಾಡಿದರು. ಮಹಾರಾಜನೂ ಅಧಿಕ ಸಂತೋಷ ದಿಂದ ಶ್ರೀಜೀಯರುಸ್ವಾಮಿಗಳಿಗೆ ಅನುಕೂಲವಾಗಿ ಗೋವಿಂದಘಡದಲ್ಲಿ ಸಂವತ್ 1919 ರಲ್ಲಿ ಮಠವನ್ನು ಕಟ್ಟಿಸಿ ಅದಕ್ಕೆ ವಿಶೇಷವಾಗಿ ಗ್ರಾಮ ಭೂಮಿಗಳನ್ನು ಕೊಟ್ಟು ಮಾಸಾಶನವನ್ನು ಕಲ್ಪಿಸಿದನು. ಶ್ರೀ ಜೀಯರುಸ್ವಾಮಿಗಳು ಗೋವಿಂದ ಘಡ ಮಠವನ್ನು ಶಾಖಾಮಠವಾಗಿ ೧೭೮೪ ನೇ ದುರ್ಮತಿ ಸಂ|| ಆಷಾಢಶುಕ್ಲ ಚತುರ್ದಶಿ ಗುರುವಾರ (ಕ್ರಿ. ಶ. 1861) ಸ್ಥಾಪಿಸಿ ಆಮಠದಲ್ಲಿ ಚಿರಕಾಲ ಬಿಜಯಮಾಡಿಸಿದ್ದರು.

ಮೂಲಸ್ಥಾನವಾದ ತಿರುನಾರಾಯಣಪುರದಲ್ಲಿ ಶ್ರೀ ಜೀಯರು ಸ್ವಾಮಿಗಳು ಪರಮಪದಿಸಿದಮೇಲೂ ಉತ್ತರಾಧಿಕಾರಿಯಾಗಿ ವರದಾಚಾರ್ಯರೂ ಒಂಭತ್ತು ವರ್ಷಗಳ ಕಾಲ ದಯಮಾಡಿಸಲಿಲ್ಲವಾಗಿ ಮೂಲಸ್ಥಾನವಾದ ಶ್ರೀಮಠದಲ್ಲಿ ಧರ್ಮಾ ಚರಣೆ ನಡೆಸಲು ತಮ್ಮ ಉತ್ತಾರಾಧಿಕಾರಿಯಾಗಿ ಶ್ರೀ. ಉ. ಕೃಷ್ಣಯ್ಯ ವೆಂಕಟಾಚಾರ್ಯ (ಮುದಿಗುಂಭುಸ್ವಾಮಿ) ಎಂಬುವರಿಗೆ ಆಶ್ರಮವನ್ನು ಕ್ರಿ. ಶ. 1867 ರಲ್ಲಿ ಕೊಟ್ಟು ಅನುಗ್ರಹಿಸಿದರು. ಈ ಜೀಯರೂ, ಇವರ ಉತ್ತರಾಧಿ ಕಾರಿಯಾದ ಪೆರಿಯಕುಮಾರ ಶಿಂಗರಾಚಾರ್ಯರೂ, ಅವರ ಉತ್ತರಾಧಿಕಾರಿಯಾದ ನಾಟಂಪಳ್ಳಿ ಅಳಶಿಂಗರಾಚಾರ್ಯರೂ ಪರಮಪದಿಸಿದಮೇಲೆ ಅವರ ಉತ್ತರಾಧಿಕಾರಿ ಯಾದ ನಾಟಂಪಳ್ಳಿ ತಿರುನಾರಾಯಣಪ್ಪೆರುಮಾಳರು ಪಿಠಸ್ಥರಾಗಿರಲು ವಿಚಾರವು ತಿಳಿದು ಉತ್ತರದೇಶದಲ್ಲಿದ್ದ ದೊಡ್ಡ ಜೀಯರು ಇವರನ್ನು, ನೋಡಬೇಕೆಂದು ಕರೆಸಿದರು. ನಾಟಂಪಳ್ಳಿ ತಿರುನಾರಾಯಣ ಜೀಯರು ಗೋವಿಂದಘಡ ಮಠಕ್ಕೆ ದಯಾಮಾಡಿಸುವ ಕಾಲದಲ್ಲಿ ಕಾರ್ಯವಶಾತ್ ದೊಡ್ಡಜೀಯರು ಕಾನ್‌ಪುರನಗರ ದಲ್ಲಿ ಸಂಚರಿಸುತ್ತಿದ್ದರು. ತಿರುನಾರಾಯಣಜೀಯರಿಗೆ ಶರೀರಾಲಸ್ಯವಾಗಿ ಹಿಂತಿರುಗಿದುದರಕಾರಣ ಉಭಯ ಜೀಯರಿಗೂ ಸಮಾಗಮವಾಗಲಿಲ್ಲ.

ನಾಟಂಪಳ್ಳಿ ತಿರುನಾರಾಯಣಜೀಯರು ಮಾರ್ಗಮಧ್ಯೆ ನಾಗಪುರದಲ್ಲಿ

ಕ್ರಿ. ಶ. 1887 ಪರಮಪದಿಸಿದರು. ಈ ಕಾಲದಲ್ಲಿ ಜೀಯರುಸನ್ನಿಧಿ ತಿರುಮಲಾಚಾರ್ಯರೆಂಬುವರು ಗೋವಿಂದಘಡಕ್ಕೆ ದಯಮಾಡಿಸಿ ಸನ್ಯಾಸವನ್ನು ಹೊಂದಿ ಸ್ವಸ್ಥಾನದಲ್ಲಿ ಧರ್ಮಾಚರಣೆಗಾಗಿ ದಯಮಾಡಿಸಿದರು.

ಈ ರೀತಿಯಲ್ಲಿ ಶ್ರೀ. ಉ. ವರದಾಚಾರ್ಯಜೀಯರು ಅನೇಕ ಪ್ರಕಾರವಾಗಿ ಮತಪ್ರಚಾರದಿಂದ ದರ್ಶನಸ್ಥಾಪಕರಾಗಿಯೂ, ಭಗವತ್ಕೈಂಕರ್ಯನಿರ್ವಾಹಕರಾಗಿಯೂ ಇದ್ದು ಲೋಕಕ್ಷೇಮಾರ್ಥವಾಗಿ ೩೭ ಚಾತುರ್ಮಾಸ ವ್ರತಗಳನ್ನು ಅನುಷ್ಠಿಸಿ ಶಕ ೧೮೧೨ ವಿಕೃತಿ ಸಂ|| ಸಿಂಹಕೃಷ್ಣ ತೃತೀಯಾ 1. 9. 1890 ದಿನ ಗೋವಿಂದಘಡದಲ್ಲಿ ಪರಮಪದಿಸಿದರು.

ಈ ಕಾಲದಲ್ಲೂ ಮತ್ತು ಮೂಲಸ್ಥಾನಕ್ಕೆ ದಯಮಾಡಿಸಿದ ಜೀಯರ್‍ಸ್ವಾಮಿಗಳು ಉತ್ತರದೇಶಯಾತ್ರೆ ಮಾಡಿಬಂದರೂ ಶ್ರೀ ದೊಡ್ಡಜೀಯರುಸ್ವಾಮಿಗಳ ಆರಾಧನದಲ್ಲಿದ್ದ ಸಾಕ್ಷಾತ್ ರಾಮಾನುಜಾಚಾರ್ಯರು ತಾವು ಸ್ವಂತವಾಗಿ ಆರಾಧಿಸುತ್ತಿದ್ದ ಶ್ರೀ ಲಕ್ಷ್ಮೀನೃಸಿಂಹ ಮೂರ್ತಿಯನ್ನೂ ರಾಮಾನುಜಾಚಾರ್ಯರ ಚರಣಪಾದುಕೆಯನ್ನು ಕೆಲವು ದ್ರಾವಿಡಾಕ್ಷರದ ತಾಲಪತ್ರಗ್ರಂಥಗಳನ್ನೂ ಅಲ್ಲದೆ ಶ್ರೀಮಠಕ್ಕೆ ಸೇರಿದ ರಜತಪಾತ್ರಗಳನ್ನೂ ತರಲಿಲ್ಲವಾಗಿ ಅದ್ಯಾವಧಿ ಆ ಮಠದಲ್ಲೇ ನಿಂತುಹೋಯಿತು.

ದೊಡ್ಡ ಜೀಯರು ಪರಮಪದಿಸಿದ ಕಾಲದಲ್ಲಿ ಮೂಲಸ್ಥಾನದ ಜೀಯರು ಮೇಲೆ ತಿಳಿಸಿದ ಶಾಖಾಮಠದ ಆಡಳಿತ ವಿಚಾರದಲ್ಲಿ ಪ್ರವೇಶಿಸಲಿಲ್ಲವಾದ್ದರಿಂದ ದೊಡ್ಡ ಜೀಯರ ಅತ್ಯಂತ ಅಂತರಂಗ ಶಿಷ್ಯನಾದ ಗೃಹಸ್ಥ ಸಂಪತ್ಕುಮಾರನೆಂಬುವರು ಶಾಖಾಮಠದ ಧರ್ಮಾಚರಣೆಗಳನ್ನು ಯಥೋಚಿತವಾಗಿ ನಡೆಸಿ ಬಂದು ದೈವವಶಾತ್ ೧೦ ತಿಂಗಳಿನಲ್ಲಿಯೇ ಪರಮಪದಿಸಿದರು. ಅನಂತರ ಇನ್ನೊಬ್ಬ ಶಿಷ್ಯರಾದ ಭಾಗವತದಾಸರೆಂಬುವರು ಶ್ರೀಮಠದ ಧರ್ಮಾಚರಣೆಯನ್ನು ನಡೆಸಿ ಬಂದರು. ಈ ಕಾಲದಲ್ಲೂ ಶಾಖಾಮಠದ ಆಧಿಪತ್ಯ ವಿಷಯದಲ್ಲಿ ಮೂಲ ಮಠದವರು ಪ್ರವೇಶಿಸಲಿಲ್ಲವಾಗಿ ಜಗ್ಗೀಶ್, ಅನಿರುದ್ಧ, ಕೇಶವಪ್ರಪನ್ನರೇ ಮೊದಲಾದ ಶಿಷ್ಯರುಗಳು ಶಾಖಾಮಠದ ಅಧಿಕಾರ ತಮತಮಗೆ ಆಗಬೇಕೆಂದು ಪರಸ್ಪರ ಕಲಹವನ್ನಾರಂಭಿಸಿದರು. ಇವರಲ್ಲಿ ಅನಿರುದ್ಧ ಎಂಬುವರು ಸನ್ಯಾಸಿಯಾಗಿ ಬಂದ ಕಾರಣದಿಂದ ರಾಜಾಜ್ಞಾನುಸಾರವಾಗಿ ಗೋವಿಂದಘಡಮಠದಲ್ಲಿ ಆಚಾರ್ಯ ಪದವಿಯನ್ನು ಸ್ವೀಕರಿಸಿ ಧರ್ಮಾಚರಣೆಯನ್ನು ನಡೆಸಿಬಂದರು. ಇವರು ಈಗ 25 ವರ್ಷಗಳ ಕೆಳಗೆ ಪ್ರಯಾಗದಲ್ಲಿ ಪರಮಪದಿಸಿದರು.

ಶ್ರೀಮಠದ ಸಂಪ್ರದಾಯ ಪ್ರಕಾರವಾಗಿ ಶಾಖಾಮಠದ ಸನ್ಯಾಸಿಯಾಗ ಬೇಕಾದರೆ ತಿರುನಾರಯಣಪುರದಲ್ಲಿ ಮೂಲಸ್ಥಾನದಿಂದ ಆಶ್ರಮಸ್ವೀಕಾರ ವಾಗಬೇಕಾದ್ದರಿಂದಲೂ, ಇನ್ನೂ ಕೆಲವು ರಾಜಕಾರಣಗಳಿಂದಲೂ, ಗೋವಿಂದ ಘಡ ಶಾಖಾಮಠದಲ್ಲಿ ಸನ್ಯಾಸಿಯಾಗಿ ಯಾರೂ ಏರ್ಪಟ್ಟಿರುವುದಿಲ್ಲ.

---

## ಶ್ರೀ ಕೃಷ್ಣಯ್ಯ ವೆಂಕಟಾಚಾರ್ಯಸ್ವಾಮಿ
(ಮುದಿಗುಂಭಂಸ್ವಾಮಿ)

ಶ್ರೀಮದ್ವೇಂಕಟಲಕ್ಷ್ಮಣಾರ್ಯಯಮಿನಃ ಕಾರುಣ್ಯಪಾಥೋನಿಧೇಃ
ಸಂಪ್ರಾಪ್ತೋಭಯವೇದಮೌಳಿಹೃದಯಂ ವಾತ್ಸಲ್ಯವಾರಾನ್ನಿಧಿಂ
ಶ್ರೀಯದ್ವದ್ರಿಯತೀಂದ್ರಲಬ್ಧಯತಿರಾಟ್ಸಂಪತ್ಸುತಾಖ್ಯಂ ಮುನಿಂ
ಶ್ರೀನಾರಾಯಣ ಪಾದಪಂಕಜಯುಗಧ್ಯಾನೈಕನಿಷ್ಠಂ ಭಜೇ ॥

ಭವಾಬ್ದೇ ಮಿಥುನೇ ಮಾಸಿ ಭರಣ್ಯಾಮಾಪ್ತಜನ್ಮನಾಂ
ಸೇವೇ ಯದ್ವದ್ರಿಯತಿರಾಟ್ಸಂಪತ್ಸುತಮುನಿಂ ಸದಾ ॥

ಈ ಮಹಾತ್ಮರು ಶಕ ೧೭೩೭ ನೇ ಭಾವ ಸಂ॥ ಮಿಥುನಮಾಸ ಭರಣೀ ನಕ್ಷತ್ರದಲ್ಲಿ ಜನಿಸಿದರು. ಪರಮಾಚಾರ್ಯರಾದ ಛಾಂದೋಗ್ಯಂ ಕುಪ್ಪನಯ್ಯಂ ಗಾರ್ಯರು ಪರಮಪದಿಸಿದನಂತರ ಉತ್ತರದೇಶಯಾತ್ರೆಯಲ್ಲಿದ್ದ ವರದಾಚಾರ್ಯ ಜೀಯರು ಸ್ವಸ್ಥಾನಕ್ಕೆ ಬರಲಿಲ್ಲವಾಗಿ ಆ ಒಂಭತ್ತು ವರ್ಷಗಳ ಕಾಲ ಪ್ರತಿವಾದಿ ಭಯಂಕರಂ ಅಪ್ಪಲಾಚಾರ್ಯರೂ, ರಾಮಾನುಜಾಚಾರ್ಯರೂ ಶ್ರೀಮಠದ ಕಾರ್ಯನಿರ್ವಾಹವನ್ನು ನಡೆಸಿಬಂದರು.

ಶ್ರೀಮಠದಲ್ಲಿ ಧರ್ಮಾಚರಣೆ ನಡೆಸುವುದಕ್ಕಾಗಿ ವರದಾಚಾರ್ಯಜೀಯರು ಶ್ರೀಮುದಿಗುಂಭಂ ವೆಂಕಟಾಚಾರ್ಯರಿಗೆ ಆಶ್ರಮವನ್ನು ಶಕ ೧೭೯೦ ನೇ ಪ್ರಭವ ಸಂ॥ ಚೈತ್ರಮಾಸದಲ್ಲಿ ಆಶ್ರಮವನ್ನು ಕೊಟ್ಟು ಅನುಗ್ರಹಿಸಿದರು. ಇವರು ೨೮ ನೇ ಸಂಪತ್ಕುಮಾರ ಪೀಠಸ್ಥರು.

ಶ್ರೀ ತಿರುನಾರಯಣ ಚೆಲ್ವಪ್ಪಿಳ್ಳೆಯವರ ಸರ್ವವಿಧ ಕೈಂಕರ್ಯಗಳನ್ನೂ ನಡೆಸಿಕೊಂಡು ಬಂದು ಶಿಷ್ಯರುಗಳಿಗೆ ಚಕ್ರಾಂಕನ ಮಂತ್ರೋಪದೇಶಗಳನ್ನೂ ಉಭಯವೇದಾಂತ ಕಾಲಕ್ಷೇಪ ತದೀಯಾರಾಧನೆಗಳನ್ನೂ ನಡೆಸಿಕೊಂಡು ಬಂದು ತಮ್ಮ ಅವಸಾನಕಾಲದಲ್ಲಿ ಪೆರಿಯಕುಮಾರ ಶಿಂಗಲಾಚಾರ್ಯರಿಗೆ ಆಶ್ರಮವನ್ನು

ಕೊಟ್ಟು ಶಕ ೧೭೯೭ ನೇ ಭಾವ ಸಂ|| ಆಷಾಢ ಶುದ್ಧ ತೃತೀಯದಿನದಲ್ಲಿ (17—6—1874) ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ೭ ಚಾತುರ್ಮಾಸ ವ್ರತಗಳನ್ನು ನೆಡೆಸಿಬಂದರು.

---

## ಶ್ರೀ ಪೆರಿಯಕುಮಾರ ಶಿಂಗಲಾಚಾರ್ಯಸ್ವಾಮಿ

ಶ್ರೀಮತ್ಕೌಶಿಕವಂಶಮೌಕ್ತಿಕಮಣಿಂ ಶ್ರೀಶೈಲವರ್ಯಾತ್ಮಜಂ
ಶ್ರೀಮತ್ಸೌಮ್ಯನೃಸಿಂಹದೇಶಿಕಪದಾಸಕ್ತಾನ್ತರಂಗಂಶುಚಿಂ
ತಸ್ಮಾದ್‌ಜ್ಞಾನದಯಾನಿಧೇರವಗತತ್ರಯ್ಯನ್ತ ಯುಗ್ಮಾರ್ಥದಂ
ವಂದೇಹಂಯದುಭೂಧರೇಂದ್ರಯತಿರಾಣ್ನಾರಾಯಣಾಖ್ಯಂ ಮುನಿಂ ||

ಈ ಮಹಾಪುರುಷರು ಮಿಥುನ ಮಾಸ ಪೂರ್ವಾಭಾದ್ರ ನಕ್ಷತ್ರದಲ್ಲಿ ಕೌಶಿಕ ಗೋತ್ರೋತ್ಪನ್ನರಾಗಿ ಜನಿಸಿದರು. ಕ್ರಿ. ಶ. 17—6—1874 ರಲ್ಲಿ ಆಶ್ರಮವನ್ನು ವಹಿಸಿ ಶ್ರೀಯತಿರಾಜಮಠದಲ್ಲಿ ಪೀಠಾಧಿಪತಿಗಳಾದರು. ಇವರು ೨೯ ನೇ ನಾರಾಯಣ ಪೀಠಸ್ಥರು. ಶಿಷ್ಯರುಗಳನ್ನು ಪರಿಪಾಲನೆ ಮಾಡಿಕೊಂಡು ಬಂದು ೧೭೯೯ ನೇ ಧಾತು ಸಂ|| ಆಷಾಢ ಶುದ್ಧ ದ್ವಿತೀಯಾ 23. 6. 1876 ದಿನದಲ್ಲಿ ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ಎರಡು ಚಾತುರ್ಮಾಸ ವ್ರತಗಳನ್ನು ನಡೆಸಿ ಬಂದರು.

## ಶ್ರೀ ನಾಟಂಪಳ್ಳಿ ಅಳಹಿಯಶಿಂಗರಾಚಾರ್ಯಸ್ವಾಮಿ

ಶೇಷಾರ್ಯಾನ್ವಯ ದುಗ್ಧವಾರಿಧಿಕಲಾನಾಥಾದನಂತಾರ್ಯತಃ
ಸಂಪ್ರಾಪ್ತೋಭಯವೇದಮೌಳಿಮನಘಂ ಶ್ರೀಭಾಷ್ಯಸಾರಾರ್ಥದಂ
ಶಾಂತ್ಯಾದ್ಯಾತ್ಮಗುಣಾಕರಂಯತಿಪತೇಃ ಪಾದಾಂಬುಜೈಕಾಶ್ರಯಂ
ವನ್ದೇಹಂ ಯದುಭೂಧರೇಂದ್ರಯತಿರಾಟ್ಸಂಪತ್ಕುಮಾರಂ ಮುನಿಂ ||

ಮಾಸಿ ಕರ್ಕಟಕೇ ಪೂರ್ವ ಪ್ರೌಷ್ಠಪದ್ಯಾಂ ಸಮುದ್ಭವಂ
ಯದ್ವದ್ರಿಯತಿರಾಜಾಖ್ಯಂ ಸಂಪತ್ಸುತಮುನಿಂ ಭಜೇ ||

ಕೌಶಿಕಗೋತ್ರದ ಮಹಾಭಾಷ್ಯಂ ಶಿಂಗಲಾಚಾರ್ಯರಿಗೆ ಐದು ಜನ ಕುಮಾರರು. ೧ ಹಿರಿಯವರು ಶ್ರೀರಂಗರಾಜರು. ಇವರು ವೇದ ವೇದಾನ್ತ ದಿವ್ಯಪ್ರಬಂಧ ಪಂಡಿತರು. ಶ್ರೀಮನ್ನಾರಾಯಣ ಕೈಂಕರ್ಯಪರರು.

೨ ನೆಯವರು ಅನಂದಾಳ್ವಾರ್ರು ಮಹಾವಿದ್ವಾಂಸರಾಗಿ ವೇದಾಂತ ವಾದಾವಳೀ ಇತ್ಯಾದಿ ಅನೇಕ ಗ್ರಂಥಗಳನ್ನು ಬರೆದಿರುವರು. ೩ ನೆಯವರು ವೆಂಕಟಾಚಾರ್ಯರು, ಮೈಸೂರು ರಾಜಾಸ್ಥಾನದಲ್ಲಿ ವಿದ್ವಾಂಸರಾಗಿದ್ದರು. ಯೋಗಾಭ್ಯಾಸಿಯಾದುದರಿಂದ ಧ್ಯಾನಕಾಲದಲ್ಲಿ ಪರಮಪದಿಸಿದರು.

೪ ನೆಯವರೇ ಅಳಗಿಯ ಶಿಂಗರಾಚಾರ್ಯರು. ಇವರು ಕರ್ಕಾಟಕಮಾಸ ಪೂರ್ವಾಭಾದ್ರ ನಕ್ಷತ್ರದಲ್ಲಿ ಜನಿಸಿದರು. ತರ್ಕ ವೇದಾಂತಾದಿ ಗ್ರಂಥಗಳನ್ನು ಅಧಿಕರಿಸಿ ತುರೀಯಾಶ್ರಮವನ್ನು ಸ್ವೀಕರಿಸಿ ಶ್ರೀಯತಿರಾಜಮಠದಲ್ಲಿ ೩೧ ನೆಯ ಸಂಪತ್ಕುಮಾರ ಪೀಠಸ್ಥರಾದರು.

ಇವರು ತಮ್ಮ ಯಾತ್ರಾಕಾಲವಾದ ಕ್ರಿ. ಶ. 1880 ರಲ್ಲಿ ಮದರಾಸು ನಗರಕ್ಕೆ ದಯಮಾಡಿಸಿ ತಿರುವಲ್ಲಿಕ್ಕೇಣಿ ಪಾರ್ಥಸಾರಥಿದೇವರನ್ನು ಮಂಗಲಾ ಶಾಸನವಾಡಿ ಅಲ್ಲಿ ಕೆಲವುಕಾಲವಿದ್ದರು. ಇಲ್ಲಿ ವಿಶೇಷವಾಗಿ ದ್ರವ್ಯಾರ್ಜನೆಯುಂಟಾಗಲು ಆ ದ್ರವ್ಯವನ್ನು ನಂಬಿಕೆಗೆ ಅರ್ಹರಾದ ಶ್ರೀಮದಿತ್ಯಾದಿಗಳಾದ ಮನ್ನಿ ಶಿಂಗಾಲಾಚಾರ್ಯರು, ಯಂ. ಏ. ಶಿಂಗಲಾಚಾರ್ಯರು, ಎಂಬುವರಲ್ಲಿ ನ್ಯಾಸ ವಾಗಿಟ್ಟರು. ಅನಂತರ ತಿರುನಾರಾಯಣಪುರಕ್ಕೆ ದಯಮಾಡಿಸಿ ಕ್ರಿ, ಶ. 1882 ರಲ್ಲಿ ಜೊತೆಯಲ್ಲಿ ವಿದ್ವಾನ್ ವೆಂಕಟಾಚಾರ್ಯರನ್ನು ಕರೆದುಕೊಂಡು ಶಿವಮೊಗ್ಗ ಪ್ರಾಂತವನ್ನು ಸಂಚರಿಸಿ ಶಿಷ್ಯರುಗಳಿಗೆ ಪಂಚಸಂಸ್ಕಾರ ಮನ್ತ್ರೋಪದೇಶಗಳನ್ನು ಮಾಡಿಬಂದರು. ಶಿಷ್ಯರುಗಳು ಸಮರ್ಪಿಸಿದ ಎರಡುಸಹಸ್ರ ರೂಪಾಯಿಗಳನ್ನು ಆಪ್ತರಾಗಿದ್ದ ಡೆಪ್ಯುಟಿ ಕಮಿಷನರಾದ ವೆಂಕಟವರದಯ್ಯಂಗಾರ್ಯರಲ್ಲಿ ನ್ಯಾಸವಾಗಿಟ್ಟರು.

ಅನಂತರ ಉತ್ತರದೇಶಯಾತ್ರೆಗಾಗಿ ಹೊರಟು ಆಂಧ್ರದೇಶದಲ್ಲಿ ಸಂಚರಿಸುವಾಗ್ಯೆ ಬೊಬ್ಬಿಲಿ, ವಿಜಯನಗರ ಸಂಸ್ಥಾನ ಮಹಾರಾಜರುಗಳು ಇವರನ್ನು ತಮ್ಮ ಆಸ್ಥಾನಕ್ಕೆ ಬರಮಾಡಿಕೊಂಡು ವಿಶೇಷವಾಗಿ ಸತ್ಕರಿಸಿದರು. ಇವರು ವೇದ ವೇದಾಂತ ನಿಷ್ಣಾತರಾಗಿದ್ದು ಅನೇಕ ಗ್ರಂಥಗಳನ್ನು ಪರಿಶೋಧಿಸಿ ಪ್ರಕಾಶಪಡಿಸಿದರು.

ಯಾತ್ರಾಮಧ್ಯದಲ್ಲಿ ಶರೀರಾಲಸ್ಯದಕಾರಣ ಜೊತೆಯಲ್ಲಿದ್ದ ತಮ್ಮಂದಿರಾದ ನಾಟಂಪಳ್ಳಿ ತಿರುನಾರಾಯಣಪ್ಪೆರುಮಾಳ್‌ರವರಿಗೆ ಸನ್ಯಾಸಾಶ್ರಮವನ್ನು ಕೊಟ್ಟು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ ಶಕ ೧೮೦೫ ನೇ ಪಾರ್ಥಿವ ಪಾಲ್ಗುಣ ಕೃಷ್ಣಪಂಚಮಿ 24. 3. 1883 ದಿನ ಶ್ರೀ ಕೂರ್ಮಕ್ಷೇತ್ರದಲ್ಲಿ ಪರಮಪದಿಸಿದರು. ಇವರಕಾಲದಲ್ಲಿ ಶಿಂಗಲಾಚಾರ್ಯರೆಂಬುವರು ಶ್ರೀಮಠದ ಕಾರ್ಯದರ್ಶಿಗಳಾಗಿದ್ದರು. ಇವರು ಲೋಕಕ್ಷೇಮಾರ್ಥವಾಗಿ ೧೦ ಚಾತುರ್ಮಾಸ ವ್ರತ ದೀಕ್ಷಿತರಾಗಿದ್ದರು,

# ಶ್ರೀ ನಾಟಿಂಪಳ್ಳಿ ತಿರುನಾರಾಯಣಪೆರುಮಾಳ್ ಸ್ವಾಮಿ

ಶ್ರೀಮದ್ಯಾದವ ಶೈಲಶೃಂಗಯತಿರಾಟ್ಸಂಪತ್ಕುಮಾರಾದ್ಯತೇಃ
ಸಂಪ್ರಾಪ್ತೋಭಯವೇದಮೌಳಿಮನಘಂ ಶಾಂತಿಕ್ಷಮಾಭೂಷಣಂ
ಶ್ರೀಭಾಷ್ಯದ್ರಮಿಡಾಗಮಾದಿನಿರತಂ ಶ್ರೀವೈಷ್ಣವಾರಾಧಕಂ
ವಂದೇಹಂಯದುಭೂಧರೇಂದ್ರಯತಿರಾಣ್ನಾರಾಯಣಾಖ್ಯಂಮುನಿಂ ||

ಬಾಲಧನ್ವಿಕುಲೋದ್ಭೂತಂ ಮಿಥುನೇಮಾಸಿ ರೌದ್ರಭೇ
ಯದ್ವದ್ರಿಯತಿರಾಜ ಶ್ರೀನಾರಾಯಣಮುನಿಂ ಭಜೇ ||

ಈ ಮಹಾತ್ಮರು ಶಕ ೧೭೨೩ ನೇ ರೌದ್ರಿ ಸಂ|| ಮಿಥುನಮಾಸ ಆರ್ದ್ರಾ ನಕ್ಷತ್ರದಲ್ಲಿ (22. 6. 1800) ಜನಿಸಿದರು. ಇವರ ಪೂರ್ವ ಗುರುಗಳು ಉತ್ತರ ದೇಶಯಾತ್ರೆಯಲ್ಲಿದ್ದಾಗ ಅವರ ಜೊತೆಯಲ್ಲಿದ್ದರು. ಮೇಲುಕೋಟೆಯಲ್ಲಿ ಪ್ರಸಿದ್ಧ ವಿದ್ವಾಂಸರಾದ ಮಹಾಭಾಷ್ಯಂ ಶಿಂಗಲಾಚಾರ್ಯರವರಿಗೆ ಐದುಜನ ಮಕ್ಕಳು. ಅವರಲ್ಲಿ ೪ ನೆಯವರು ೫ ನೆಯವರಾದ ಇವರೂ ಶ್ರೀಯತಿರಾಜಮಠದಲ್ಲಿ ಪೀಠಾಧಿಪತಿಗಳು. ಈ ಜೀಯರು ವೇದಾಧ್ಯಯನದಲ್ಲಿ ನಿಸ್ಸೀಮರು. ಪೂರ್ವಗುರುಗಳು ಯಾತ್ರಾಮಧ್ಯೆ ಶ್ರೀಕೂರ್ಮಕ್ಷೇತ್ರದಲ್ಲಿ ಪರಮಪದಿಸಲು ಅವರ ನಿಯಮನದಂತೆ ಶಕ ೧೮೦೮ ನೇ ಪಾರ್ಥಿವ ಫಾಲ್ಗುಣ ಕೃಷ್ಣ ಪಂಚಮಿಯದಿನ 24. 3. 1886 ಸನ್ಯಾಸಾಶ್ರಮವನ್ನು ಸ್ವೀಕರಿಸಿ ಯತಿರಾಜಮಠದಲ್ಲಿ ಗುರುಗಳಾದರು. ಇವರಿಗೆ ೩೧ ನೇ ನಾರಾಯಣಪಟ್ಟವು.

ಆ ಕಾಲದಲ್ಲಿ ಉತ್ತರದೇಶದಲ್ಲಿ ಚಿರಕಾಲದಿಂದಿದ್ದ ಗುರುಗಳಾದ ವರದಾಚಾರ್ಯಜೀಯರು ಇವರನ್ನು ರೀವಾ ರಾಜಧಾನಿಗೆ ಬರುವಂತೆ ಶ್ರೀಮುಖವನ್ನು ಕಳುಹಿಸಿದರು. ಅವರ ನಿಯಮನದಂತೆ ರೀವಾ ರಾಜಧಾನಿಯನ್ನು ಸೇರಿ ಮಹಾರಾಜನನ್ನು ಆಶೀರ್ವದಿಸಿ ಸತ್ಕರಿಸಲ್ಪಟ್ಟರು. ಆಗ್ಯೆ ದೊಡ್ಡಜೀಯರಾದ ವರದಾಚಾರ್ಯಜೀಯರು ಕಾನ್ಪುರಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದುದರಿಂದ ಉಭಯತ್ರರಿಗೂ ಸಮಾಗಮವಾಗಲಿಲ್ಲ. ಇವರಿಗೆ ಶರೀರದಲ್ಲಿ ಆಲಸ್ಯವಾಗಲು ಹಿಂದಕ್ಕೆ ದಯಮಾಡಿಸಿದರು. ಇವರು ಮಾರ್ಗಮಧ್ಯೆ ನಾಗಪುರದಲ್ಲಿ ಶಕ ೧೮೧೧ ನೇ ಸರ್ವಜಿತು ಶ್ರಾವಣ ಅಮಾವಾಸ್ಯೆ ದಿನ 3. 8. 1887 ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ಎರಡು ಚಾತುರ್ಮಾಸವ್ರತಗಳನ್ನು ನೆಡೆಸಿದರು.

# ಶ್ರೀ ಜೀಯರ್ ಸನ್ನಿಧಿ ತಿರುಮಲಾಚಾರ್ಯಸ್ವಾಮಿ

ಶೇಷಾರ್ಯಾನ್ವಯ ಬಾಲಧನ್ವಿಕುಲಜ ಶ್ರೀನಿವಾಸಕೃಷ್ಣಾರ್ಯಯೋಃ
ಪ್ರೇಮ್ಣಾಪ್ತೋಭಯವೇದಮೌಳಿಮನಘಂ ಶಾನ್ತ್ಯಾದಿವಾರಾಂನಿಧಿಂ
ಶ್ರೀನಾರಾಯಣಯೋಗಿವರ್ಯಚರಣ ದ್ವಂದ್ವೈಕ ನಿಷ್ಠಂಭಜೇ
ಶ್ರೀಮದ್ಯಾದವ ಶೈಲಶೃಂಗಯತಿರಾಟ್ಸಂಪತ್ಕುಮಾರಂ ಮುನಿಂ ||

ಶೇಷ ವಂಶ್ಯಾಚ್ಛ್ರೀನಿವಾಸಾದ್ವರಸನ್ನಿಧಿ ವೇದದಾತ್
ಸ್ವಾತಿಜಂ ಕರ್ಕಟೇವನ್ದೇ ಮನ್ತ್ರ ವೇದಾರ್ಥದಂ ಮುನಿಂ ||

ಈ ಮಹಾಪುರುಷರು ಕರ್ಕಾಟಕ ಮಾಸ ಸ್ವಾತೀನಕ್ಷತ್ರದಲ್ಲಿ ಜನಿಸಿದರು-ಇವರು ಮಹಾ ಸಾತ್ವಿಕರೂ, ಶಾಂತ ಚಿತ್ತರೂ, ಸಾಧುಗಳೂ ಆಗಿದ್ದರು. ವೇದವೇದಾಂತ ಮನ್ತ್ರ ನಿಷ್ಣಾತರು. ಇವರು ಶಕ ೧೮೧೦ ನೇ ಆಶ್ವಯುಜ ಮಾಸದಲ್ಲಿ ಸನ್ಯಾಸಾಶ್ರಮವನ್ನು ಉತ್ತರದೇಶದ ರೀವಾ, ಸಂಸ್ಥಾನಕ್ಕೆ ಸೇರಿದ ಗೋವಿಂದಘಡದಲ್ಲಿ ಸ್ವೀಕರಿಸಿ ( -10-1887) ಶ್ರೀ ಯತಿರಾಜಮಠದಲ್ಲಿ ೨೩ ನೇ ಸಂಪತ್ಕುಮಾರ ಪೀಠಸ್ಥರಾದರು.

ಮದರಾಸ್ ತಿರುವಲ್ಲಿಕ್ಕೇಣಿ ಶ್ರೀ ಸರಸ್ವತಿ ಭಂಡಾರದಲ್ಲಿಅನೇಕವಾಗಿ ವೇದಾನ್ತ ಧರ್ಮಶಾಸ್ತ್ರ, ಕಾವ್ಯನಾಟಕ ಸಂಪ್ರದಾಯ ಗ್ರಂಥಗಳನ್ನು ಶೋಧಿಸಿ ಪ್ರಕಾಶಪಡಿಸಿದ ಶ್ರೀ ಯೋಗಿ ಪಾರ್ಥಸಾರಥಿ ಅಯ್ಯಂಗಾರ್ಯರು ಇವರಿಗೆ ಅಳಿಯಂದಿರಾಗಬೇಕು. ಶ್ರೀಜೀಯರು ಸ್ವಾಮಿಗಳು ಸಹ ಅನೇಕವಾಗಿ ಮೇಲೆ ತಿಳಿಸಿದ ಗ್ರಂಥಗಳನ್ನು ಶೋಧಿಸಿ ಪ್ರಕಾಶಪಡಿಸಿರುವರು. ಆ ಕಾಲದಲ್ಲಿ ಪ್ರಸಿದ್ಧರಾಗಿ ಕಾಲೇಜ್ ಪ್ರೊಫೆಸರ್ ಆಗಿದ್ದ ಗಸ್ಟಾಲ್ಆಪರ್ಟ್ ಮತ್ತು ಜರ್ಮನಿ ವಿದ್ವಾಂಸರಾದ ಪಾಲ್ ಡ್ಯೂಸನ್ ಎಂಬುವರು ಆಗಿಂದಾಗ್ಯೆ ಶ್ರೀ ಸ್ವಾಮಿಗಳ ಸನ್ನಿಧಿಗೆ ಬಂದು ವಿಚಾರ ವಿಷಯಗಳನ್ನು ತರ್ಕಿಸಿ ಶ್ರೀ ಜೀಯರುಸ್ವಾಮಿಗಳು ತಿಳಿಸಿದಂತೆ ಅನುಮೋದಿಸಿ ಬರುತ್ತಿದ್ದರು.

ಇವರ ಮೊಮ್ಮಕ್ಕಳಾದ ಯಂ. ಜೆ ನರಸಿಂಹಾಚಾರ್ಯರೂ ಅವರ ಮಕ್ಕಳು ತಿರುಮಲಾಚಾರ್ಯರೂ ಮೈಸೂರು ಮತ್ತು ಇಂಡಿಯಾ ಸರಕಾರ ರಾಜ್ಯಾಂಗದಲ್ಲಿ ಉನ್ನತಾಧಿಕಾರಿಗಳಾಗಿರುತ್ತಾರೆ.

ಆಶ್ರಮವಾದನಂತರ ರೀವಾ ಮಹಾರಾಜರಿಂದ ಸತ್ಕರಿಸಲ್ಪಟ್ಟು ಅಲ್ಲಿ ಕೆಲವು ಕಾಲವಿದ್ದು ಅಲ್ಲಿಂದ ಹೊರಟು ಉತ್ತರದೇಶ ಯಾತ್ರೆಯನ್ನು ಮಾಡಿ



ಶ್ರೀ ಜಿ[illegible] ಸನ್ನಿಧಿ ತಿರುಮಲಾಚಾರ್ಯ ಜಿ[illegible]

[illegible] ಸ್ವೀಕಾರ ಶಕಾಬ್ದ : ೧೮೧೦

—10—1887

ಹಿಮಾಲಯ ಬದರಿಕಾಶ್ರಮವೇ ಮೊದಲಾದ ದಿವ್ಯದೇಶಯಾತ್ರೆಗಳನ್ನು ಮಾಡಿ ಶಿಷ್ಯವರ್ಗವನ್ನು ಅಭಿವೃದ್ಧಿಮಾಡಿ ಹೈದರಾಬಾದಿಗೆ ದಯಮಾಡಿಸಿ ಇಲ್ಲಿನ ಮಹಾರಾಜ ನಿಂದ ಸತ್ಕರಿಸಲ್ಪಟ್ಟರು. ಇಲ್ಲಿ ವೇದವೇದಾಂತ ಶಾಸ್ತ್ರಗಳನ್ನು ಬೋಧಿಸುತ್ತ ಕೆಲವು ಕಾಲವಿದ್ದರು. ಶ್ರೀ ಜೀಯರುಸ್ವಾಮಿ ಸನ್ನಿಧಿಯಲ್ಲಿದ್ದ ಒಬ್ಬ ಪ್ರಚ್ಛನ್ನ ಬೌದ್ಧರು ಆಸ್ತಿಕ ದುರಾಶೆಯಿಂದ ಶ್ರೀ ಮಠಕ್ಕೆಕೆಲವು ನಷ್ಟಗಳನ್ನುಂಟುಮಾಡಿದರು. ಇದನ್ನು ತಿಳಿದ ಶ್ರೀ ಜೀಯರು ಶಾಂತಚಿತ್ತರಾಗಿದ್ದರು.

ಅನಂತರ ಶ್ರೀ ಜೀಯರು ಶ್ರೀ ಮಠಾರ್ಯರಾದ ಐಶಾನಿ ಶ್ರೀನಿವಾಸಯ್ಯಂಗಾರು ಒಕ್ಕರಣೆ ಸಂಪತ್ಕುಮಾರಾಚಾರ್ಯರೇ ಮೊದಲಾದ ಪರಿವಾರದೊಂದಿಗೆ ಬೆಂಗಳೂರಿಗೆ ದಯಮಾಡಿಸಿ ರಾಜಮರ್ಯಾದೆಯೊಂದಿಗೆ ತಿರುನಾರಯಣಪುರಕ್ಕೆ ದಯಮಾಡಿಸಿದರು. ಕೆಲವು ಕಾಲದ ಮೇಲೆ ಪುನಃ ಉತ್ತರದೇಶ ಯಾತ್ರೆ ಹೊರಟು ಹಿಮಾಲಯ ಟೆಹ್ರಿ ಸಂಸ್ಥಾನ ಮಹಾರಾಜರವರಿಂದ ಆಹ್ವಾನಿತರಾಗಿ ಅಲ್ಲಿ ಚಾತುರ್ಮಾಸ ವ್ರತವನ್ನು ನಡೆಸಿದರು. ಈ ಕಾಲದಲ್ಲಿ ವಿದ್ವಾನ್ ಆಸೂರಿ ಅನಂದಾಳ್ವಾರ್ರು ಬರೋಡಾ. ರೀವ ರಾಜಸ್ಥಾನಗಳಲ್ಲಿ ಬಹುಮಾನಿತರಾಗಿರುವುದನ್ನು ತಿಳಿದು ಜೀಯರು ಅವರನ್ನು ತಮ್ಮಲ್ಲಿಗೆ ಬರಮಾಡಿಕೊಂಡರು. ಅನಂತರ ಬದರಿಕಾಶ್ರಮಕ್ಕೆ ದಯಮಾಡಿಸಿ ದೇವರನ್ನು ಮಂಗಳಾಶಾಸನಮಾಡಿ ಅಲ್ಲಿಂದ ರೀವಾರಾಜಧಾನಿಗೆ ದಯಮಾಡಿಸಿದರು. ಇವರ ಕಾಲದಲ್ಲಿ ಶ್ರೀ ಮಠಕ್ಕಾಗಿ ಸಂಪಾದಿಸಿದ ಮೂಲಧನವನ್ನು ಮದರಾಸ್ ನಗರದಲ್ಲಿದ್ದ ಆಪ್ತರಾದ ಶ್ರೀಮಂತರು ಎಂ. ಎ. ತಿರುನಾರಾಯಣಾಚಾರ್, ಎಂ. ಎ. ರಂಗಾಚಾರ್, ಚಿಂತಾಮಣಿ ಶ್ರೀನಿವಾಸಯ್ಯಂಗಾರ್ ಇವರ ಮೂಲಕ ಆರ್‌ಬತ್‌ನಾಟ್ ಧನಾಗಾರದಲ್ಲಿ ನ್ಯಾಸವಾಗಿಟ್ಟರು.

ಅಮೇರಿಕಾ ದೇಶದಲ್ಲಿ ಕ್ರಿ. ಶ: 1893 ರಲ್ಲಿ ನಡೆದ ಅಖಿಲ ಪ್ರಪಂಚ ಮತ ವಿಚಾರದ ಸಭೆಗೆ ಈ ಜೀಯರೂ ಸದಸ್ಯರಾಗಿದ್ದರು. ಇವರು ತಮ್ಮ ಅವಸಾನ ಕಾಲದಲ್ಲಿ ಮದರಾಸ್ ತಿರುವೆಳ್ಳಿಕ್ಕೇಣಿಯಲ್ಲಿದ್ದ ಕುಮಾರ ಶಿಂಗಲಾಚಾರ್ಯರಿಗೆ ರೀವಾಸಂಸ್ಥಾನಕ್ಕೆ ಬರಬೇಕೆಂದೂ ತಮ್ಮ ಉತ್ತರಾಧಿಕಾರಿಯಾಗಿ ಆಶ್ರಮವನ್ನು ಸ್ವೀಕರಿಸಬೇಕೆಂದೂ ಶ್ರೀಮುಖವನ್ನು ಬರೆದು ಶಕ ೧೮೨೩ ನೇ ಪ್ಲವ ಸಂ|| ಆಶ್ವಯುಜ ಕೃಷ್ಣ ದ್ವಿತೀಯಾ ಸೋಮವಾರ (28—10—1901) ರೀವಾ ರಾಜಧಾನಿ ಗೋವಿಂದಘಡದಲ್ಲಿ ಪರಮಪದಿಸಿದರು. ಇವರು ಲೋಕಸಂರಕ್ಷಣಾರ್ಥವಾಗಿ ೧೪ ಚಾತುರ್ಮಾಸ ವ್ರತಗಳನ್ನು ಅನುಷ್ಠಿಸಿಬಂದರು.

# ಶ್ರೀ ಚಿನ್ನಕುಮಾರ ಶಿಂಗಲಾಚಾರ್ಯಸ್ವಾಮಿ

(ಚಿನ್ನಕುಮಾರಜೀಯರು)


ಶ್ರೀಯದ್ವದ್ರಿ ಯತೀಂದ್ರಪೂರ್ಣ ಕರುಣಾಪಾತ್ರಂ ತದೀಯೇಮಠೇ
ಸಂಪ್ರಾಪ್ತಾಶ್ರಮಮಾಶ್ರಿತೈಕಶರಣಂ ಸಂಪತ್ಕುಮಾರೇಕ್ಷಣಾತ್
ಶ್ರೀರಾಮಾನುಜ ಸಂಯಮೀಂದ್ರಶಠಜಿಚ್ಛ್ರೀಸೂಕ್ತಿಸಾರಾರ್ಥದಂ
ಶ್ರೀಮನ್ತಂಯತಿರಾಜಸಂಯಮಿವರಂ ನಾರಾಯಣಂ ಸಂಶ್ರಯೇ ॥

ವೃಷಭೇ ಮಾಸ್ಯನೂರಾಧಾಜಾತಂ ನಾರಾಯಣಾಭಿದಂ
ಬಾಲಧನ್ವಿಕುಲಾಬ್ಧೀಂದುಂ ಯತಿರಾಜಗುರುಂ ಭಜೇ ॥

ಈ ಮಹಾತ್ಮರು ವೃಷಭಮಾಸ ಅನೂರಾಧಾ ನಕ್ಷತ್ರದಲ್ಲಿ ಮೇಲುಗೋಟೆಯಲ್ಲಿ (11. 5. 1829) ಜನಿಸಿದರು. ಇವರು ಕೌಶಿಕಗೋತ್ರಕ್ಕೆ ಸ್ವೀಕೃತರು ವೇದಾಧ್ಯಯನ ಧರ್ಮಶಾಸ್ತ್ರಗ್ರಂಥಗಳನ್ನು ಮೇಲುಗೋಟೆಯಲ್ಲಿ ವಿದ್ಯಾಭ್ಯಾಸಮಾಡಿ ಅನಂತರ ಮದರಾಸಿಗೆ ದಯಮಾಡಿಸಿ ತಿರುವಲ್ಲಿಕ್ಕೇಣಿ ಶ್ರೀಪಾರ್ಥಸಾರಥಿ ದೇವಸ್ಥಾನದಲ್ಲಿ ಅಧ್ಯಾಪಕ ಮತ್ತು ವೇದಪಾರಾಯಣ ಮಾಡುತ್ತಿದ್ದರು. ಶ್ರೀಮಂತರುಗಳಾದ ಬ್ಯಾಂಕ್ ಶಿಂಗಲಾಚಾರ್ ಪುರುಚೇರಿ ಪಾರ್ಥಸಾರಥಿ ಅಯಂಗಾರ್ಯರೇ ಮೊದಲಾದವರು ಇವರಲ್ಲಿ ಭಕ್ತಿ, ಪ್ರೀತಿ ವಿಶ್ವಾಸವುಳ್ಳವರಾಗಿದ್ದರು. ಈ ಜೀಯರು ಶ್ರೀನೃಸಿಂಹದೇವರ ಉಪಾಸಕರು. ಇವರಲ್ಲಿ ಅನೇಕರು ಮನ್ತ್ರೋಪದೇಶವನ್ನು ಹೊಂದಿ ಶ್ರೇಯೋವಂತರಾದರು.

ತಿರುವಲ್ಲಿಕ್ಕೇಣಿಯಲ್ಲಿರುವ ಸಮಯದಲ್ಲಿ ರೀವಾ ರಾಜ್ಯದಲ್ಲಿದ್ದ ಶ್ರೀಯತಿರಾಜ ಸಂಪತ್ಕುಮಾರಸ್ವಾಮಿಗಳವರಿಗೆ (ಜೀಯರ್ ಸನ್ನಿಧಿ) ಶರೀರಾಲಸ್ಯವಾದ್ದರಿಂದ ಇವರಮೇಲೆ ಕೃಪೆಹುಟ್ಟಿ ಇವರಿಗೆ ಆಶ್ರಮಕೊಡಲು ಉತ್ತರದೇಶಕ್ಕೆ ಬರುವಂತೆ ಶ್ರೀಮುಖವನ್ನು ಬರೆದಿದ್ದರು. ಆಚಾರ್ಯರ ಆಜ್ಞೆಯಂತೆ ಗೋವಿಂದಘಡಕ್ಕೆ ದಯಮಾಡಿಸಿ ಶಕ ೧೮೨೪ ನೇ ಪ್ಲವ ಸಂ ॥ ಪುಷ್ಯ ಪೌರ್ಣಮಿ ದಿನ (23, 1. 1902.) ಆಶ್ರಮವನ್ನು ವಹಿಸಿ ಶ್ರೀಯತಿರಾಜಮಠದಲ್ಲಿ ಪೀಠಸ್ಥರಾದರು.

ರೀವ ಮಹಾರಾಜರ ಆಶ್ರಯದಲ್ಲಿ ಕೆಲವುಕಾಲವಿದ್ದು ಅಲ್ಲಿಂದ ಕಾನ್‌ಪುರ, ಲಕ್ನೋ ನಗರಗಳಿಗೆ ದಯಮಾಡಿಸಿ ಶಿಷ್ಯರುಗಳನ್ನು ಅಭಿವೃದ್ಧಿಮಾಡಿ ಅಯೋಧ್ಯೆಗೆ ಬಂದರು. ಮದರಾಸ್ ತಿರವಲ್ಲಿಕ್ಕೇಣಿ ಯೋಗಿಪಾರ್ಥಸಾರಥಿ ಅಯ್ಯಂಗಾರ್ಯರ ಪ್ರಾರ್ಥನಾನುಸಾರವಾಗಿ ರಾಮನಾಥಪುರದ ಮಹಾರಾಜರಾದ ಶ್ರೀರಾಮದಾಸ ವಿಜಯರಘುನಾಥ ಯಂ, ಭಾಸ್ಕರಸೇತೂಪತಿಯವರು ಶ್ರೀಸೀತಾರಾಮ, ಲಕ್ಷ್ಮಣ,



ಶ್ರೀ ಚಿನ್ನ ಕುಮಾರ ಶಿಂಗಲಾಚಾರ್ಯ ಜೀಯರ್

ಆಶ್ರಮ ಸ್ವೀಕಾರ ಶಕಾಬ್ದ : ೧೮೨೪

23—1—1902

ಭರತ ಶತ್ರುಘ್ನ ದೇವರ ವಿಗ್ರಹಗಳನ್ನು ಶ್ರೀಯತಿರಾಜಜೀಯರಿಗೆ ಸಮರ್ಪಿಸಿ ತಮ್ಮ ರಾಜ್ಯಾಧಿಕಾರವಾದ ೧೩ ನೇ ವರ್ಷವಾದ ಶುಭಕೃತು ಸಂ|| ಚೈತ್ರಶುದ್ಧ (ಕೃಷ್ಣ) ಪಂಚಮಿ ದಿನದಲ್ಲಿ ಶಾಸನವನ್ನು ಬರೆದು ನಿವೇದನಾದಿಗಳಿಗೆ ಮಾಸಾಶನ ವನ್ನು ಕಲ್ಪಿಸಿದರು.

ಶ್ರೀಜೀಯರುಸ್ವಾಮಿಗಳು ದೇವರವಿಗ್ರಹಗಳನ್ನು ಬಿಜಯಮಾಡಿಸಿಕೊಂಡು ಬಂದು ದರ್ಭಶಯನ ಶ್ರೀರಾಮನೆಂದು ನಾಮಕರಣಮಾಡಿ ಅಯೋಧ್ಯೆಯಲ್ಲಿ ಸರಯೂನದೀ ತೀರದಲ್ಲಿ ಪ್ರತಿಷ್ಠಿಸಿದರು. ಶ್ರೀಮದಿತ್ಯಾದಿ ಯೋಗಿಪಾರ್ಥಸಾರಥಿ ಅಯ್ಯಂಗಾರ್ಯರು ತಮ್ಮ ಸರ್ವಸ್ವವನ್ನೂ ಸತ್ಸಂಪ್ರದಾಯವಾದ ವೇದವೇದಾಂತಾದಿ ಧರ್ಮಶಾಸ್ತ್ರ ಗ್ರಂಥಗಳನ್ನು ಶೋಧಿಸಿ ಮುದ್ರಿಸುವುದಕ್ಕಾಗಿಯೂ ಅಲ್ಲದೆ ಅಯೋಧ್ಯೆಯಲ್ಲಿ ಪ್ರತಿಷ್ಠಿಸಿದ ದೇವರ ಕೈಂಕರ್ಯಗಳಿಗಾಗಿಯೂ ವಿನಿಯೋಗಿಸಿದರು.

ಅಯೋಧ್ಯೆಯಲ್ಲಿ ಕೆಲವು ಕಾಲವಿದ್ದು ಅನಂತರ ಗೋವಿಂದಘಡಕ್ಕೆ ದಯಮಾಡಿಸಿದರು. ಇಲ್ಲಿ ದೇಹಾಲಸ್ಯವಾಗಲು ತಮ್ಮ ಪೂರ್ವಾಶ್ರಮದ ಕುಮಾರರಾದ ಅಳಸಿಂಗಾಚಾರ್ಯರನ್ನು ತಮ್ಮ ಉತ್ತರಾಧಿಕಾರಿಯಾಗಿ ಏರ್ಪಡಿಸಲು ಕೆಲವು ರಾಜಕಾರಣಗಳಿಂದ ಅವರಿಗೆ ಸನ್ಯಾಸಾಶ್ರಮವು ಕೊಡಲ್ಪಡಲಿಲ್ಲ. ಶ್ರೀ ಜೀಯರು ಆರೋಗ್ಯವಾದ ಮೇಲೆ ಮಹಾರಾಜರಿಂದ ಮರ್ಯಾದೆಯನ್ನು ಹೊಂದಿ ಸ್ವದೇಶ ಗಮನರಾಗಿ ಹೈದರಾಬಾದಿಗೆ ದಯಮಾಡಿಸಿದರು. ಇಲ್ಲಿ ರಾಜಮರ್ಯಾದೆಯಿಂದಲೂ ಶಿಷ್ಯಕೋಟಿಯಿಂದಲೂ ಆರಾಧಿಸಲ್ಪಟ್ಟರು. ಅನಂತರ ಬೆಂಗಳೂರಿಗೆ ದಯಮಾಡಿಸಿ ಶ್ರೀಮದಿತ್ಯಾದಿ ವೆಂಕಟರಂಗಯ್ಯಂಗಾರ್ ಮುಂತಾದ ಶ್ರೀ ವೈಷ್ಣವರು ಶಿಷ್ಯರುಗಳ ಪ್ರಾರ್ಥನಾನುಸಾರವಾಗಿ ಅವರಿಂದ ಪ್ರತಿಷ್ಠಿಸಲ್ಪಟ್ಟ ವೇಣುಗೋಪಾಲಸ್ವಾಮಿ ದೇವರನ್ನು (ಕ್ರಿ. ಶ. 1903) ಮಂಗಳಾಶಾಸನಮಾಡಿ ದಿವ್ಯದೇಶ ಸಂಬಂಧವನ್ನುಂಟುಮಾಡಿ ಅಗ್ರತೀರ್ಥ ಮರ್ಯಾದೆ ಸ್ವೀಕರಿಸಿದರು.

ಶಿಷ್ಯರುಗಳ ಪ್ರಾರ್ಥನಾನುಸಾರವಾಗಿ ಪುನಃ ಉತ್ತರದೇಶ ಸಂಚಾರವನ್ನು ಮಾಡಿ ಆಂಧ್ರದೇಶಕ್ಕೆ ದಯಮಾಡಿಸಿ ನೂಜವೀಡು, ಗದ್ವಾಲ್, ವನಪರ್ತಿ ಮೊದಲಾದ ಸಂಸ್ಥಾನಗಳಿಗೆ ದಯಮಾಡಿಸಿ ಅಲ್ಲಲ್ಲಿಯ ರಾಜಮಹಾರಾಜರುಗಳಿಂದಲೂ ಭಕ್ತಾದಿ ಶಿಷ್ಯರುಗಳಿಂದಲೂ ಸತ್ಕೃತರಾಗಿ ಗುಂಟೂರು ನಗರಕ್ಕೆ ದಯಮಾಡಿಸಿದರು. ಅಲ್ಲಿಂದ ಪ್ರಯಾಣವಾಗಿ ಬರುವಮಾರ್ಗದಲ್ಲಿ ಆಪ್ತರೆಂದಿದ್ದ ಕೈಂಕರ್ಯ ಪರರುಗಳು ಶ್ರೀ ಜೀಯರುಸ್ವಾಮಿಗಳ ಕೈಯಲ್ಲಿದ್ದ ಅಲ್ಪ ಸ್ವಲ್ಪ ದ್ರವ್ಯದ ಆಶೆಯಿಂದ ನಾನಾವಿಧ ತೊಂದರೆಗಳನ್ನು ಕೊಟ್ಟು ಕಣ್ಮರೆಯಾದರು. ಈ ಸಮಯದಲ್ಲಿ ಬಾಪಟ್ಲ ಎನ್ನುವ ಊರಿನ ರಾಮಾನುಜಾಚಾರ್ಯರೆಂಬುವರು ಈ ವಿಷಯಗಳನ್ನೆಲ್ಲಾ ತಿಳಿದು ಶ್ರೀ ಜೀಯರು ಸ್ವಾಮಿಗಳಿಗೆ ಸಹಾಯ ಸಂಪತ್ತು



ಶ್ರೀ ಕೊಮಾರಜೀಯರು— ಅಯೋಧ್ಯೆಯಲ್ಲಿ ಶ್ರೀರಾಮದೇವರ ಪ್ರತಿಷ್ಠೆ

ಗಳನ್ನು ಕಳುಹಿಸಿ ನೆಲ್ಲೂರು ಪಟ್ಟಣದ ವೇಣುಗೋಪಾಲಸ್ವಾಮಿ ದೇವಸ್ಥಾನ ಧರ್ಮಕರ್ತರಾದ ಬೋದಿರೆಡ್ಡಿ ರಂಗಾರೆಡ್ಡಿ ಮುಂತಾದವರಿಗೆ ಶ್ರೀಮುಖವನ್ನು ಬರೆದು ಕಳುಹಿಸಿದರು. ನೆಲ್ಲೂರು ನಗರದ ಮೂಲಪೇಟೆ ಶ್ರೀ ವೇಣುಗೋಪಾಲ ದೇವರು ಪ್ರತಿಷ್ಠಿತರಾಗಿದ್ದಾಗ್ಯೂ ದಿವ್ಯದೇಶ ಸಂಬಂಧವಿಲ್ಲದ್ದರಿಂದ ಧರ್ಮಕರ್ತರು ಗಳು ಮಠಾಧಿಪತಿಗಳಾರಾದರೂ ದಯಮಾಡಿಸುವರೆ ? ಎಂದು ಕಾದಿದ್ದರು. ದೈವ ಸಂಕಲ್ಪದಿಂದ ಶ್ರೀ ಯತಿರಾಜಜೀಯರು ದಯಮಾಡಿಸಿದ್ದನ್ನು ಕೇಳಿ ಸಂತೋಷ ಯುಕ್ತರಾಗಿ ಶ್ರೀ ಜೀಯರ್‌ಸ್ವಾಮಿಗಳಿಗೆ ಸಹಾಯವನ್ನು ಕಳುಹಿಸಿ ಕರೆಸಿ ಕೊಂಡರು. ಇದನ್ನು ತಿಳಿದು ಕಣ್ಮರೆಯಾಗಿದ್ದ ಕೈಂಕರ್ಯಪರರು ಬಂದು ಕ್ಷಮಾಪಣೆಯನ್ನು ಬೇಡಿ ಕೈಂಕರ್ಯದಲ್ಲಿ ಅನ್ವಯಿಸಿದರು.

ಪೂರ್ವ ಜೀಯರುಗಳೂ, ಶಿಷ್ಯರೂ, ಅಭಿಮಾನಿಗಳೂ ಈ ಜೀಯರೂ, ಸಂಪಾದಿಸಿದ ದ್ರವ್ಯವನ್ನು ಆಪ್ತರ ಮೂಲಕವಾಗಿ ಮದರಾಸ್ ಆರ್‌ಬತ್‌ನಾಟ್ ಕಂಪೆನಿ ಧನಾಗಾರದಲ್ಲಿ ಇಟ್ಟಿದ್ದರು. ಈ ದ್ರವ್ಯವು ಶ್ರೀ ಜೀಯರು ಸ್ವಾಮಿ ಗಳಿಗಲ್ಲದೆ ಇತರರಿಗೆ ದೊರುಕುವುದಿಲ್ಲವೆಂದು ತಿಳಿದು ಒಬ್ಬರು ಆಸ್ತಿಕ ದುರಾಶೆಯಿಂದ ಜೀಯರಿಗೆ ಆಪ್ತರೆಂದೂ, ಬಂಧುಗಳೆಂದೂ ಹೇಳಿಕೊಂಡು ಶ್ರೀ ಜೀಯರಿಗೆ ಉಪ ಚಾರಮಾಡುತ್ತಾ ಇದ್ದು ದುರ್ಬೋಧನೆಮಾಡಿ ಸಮಯವನ್ನು ಸಾಧಿಸಿ ಮದರಾಸಿ ನಲ್ಲಿದ್ದ ದ್ರವ್ಯವನ್ನು ಅಪಹರಿಸಬೇಕೆಂದು ಬಹುವಾಗಿ ಪ್ರಯತ್ನಪಟ್ಟರು. ಈ ಕೃತ್ರಿಮ ಸಂಧಾನಗಳು ವಿದ್ವಾನ್ ಆಸೂರಿ ಆನಂದಾಳ್ವಾರ್ರಿಗೆ ತಿಳಿದು ಚಿತ್ರ ದುರ್ಗದಲ್ಲಿದ್ದ ವಿದ್ಯಾಶಾಖೆಯ ಅಧಿಕಾರಿಯಾಗಿದ್ದ ಮ. ಕೃ. ತಿರುಮಲಾಚಾರ್ಯ ರನ್ನು ಕರೆದುಕೊಂಡು ನೆಲ್ಲೂರಿಗೆ ಬಂದು ಶ್ರೀ ಜೀಯರನ್ನು ಸಂದರ್ಶಿಸಿ ಅವರಿಗೆ ವಾಸ್ತವಾಂಶವನ್ನು ತಿಳಿಸಿ ಶ್ರೀ ಜೀಯರನ್ನು ಮದರಾಸ್ ಪ್ರಾಂತಕ್ಕೆ ಹೋಗ ಕೂಡದೆಂದೂ ಅಲ್ಲಿಂದಲೇ ಹಿಂತಿರುಗಿ ಬರಬೇಕೆಂತಲೂ ಏರ್ಪಡಿಸಿ ಬಂದರು. ಕೃತ್ರಿಮಸಂಧಾನದವರು ಭಗ್ನಹೃದಯರಾಗಿ ಹಿಂತಿರುಗಿದರು.

ನೆಲ್ಲೂರು ಮೂಲಪೇಟೆ ದೇವಸ್ಥಾನದಲ್ಲಿ ಶಕ ೧೮೨೮ ನೇ ವಿಶ್ವಾವಸು ಸಂ|| ಕಾರ್ತೀಕ ಶುಕ್ಲ ತ್ರಯೋದಶಿ ಗುರುವಾರ (13—9—1905) ಶ್ರೀ ವೇಣುಗೋ ಪಾಲ ದೇವರನ್ನು ಸಂದರ್ಶಿಸಿ ಅಗ್ರತೀರ್ಥಮರ್ಯಾದೆಯನ್ನು ಸ್ವೀಕರಿಸಿ ದಿವ್ಯದೇಶ ಸಂಬಂಧವನ್ನುಂಟುಮಾಡಿದರು.

ಅಲ್ಲಿಂದ ಹೊರಟು ಬೆಂಗಳೂರಿಗೆ ಮಿಲಿಟರಿ ಮರ್ಯಾದೆಯಿಂದ ದಯಮಾಡಿಸಿ ಇಲ್ಲಿ ಕೆಲವು ಕಾಲವಿದ್ದು ಕಾಲಕ್ಷೇಪ ಡೋಲೋತ್ಸವಾದಿಗಳನ್ನು ನಡೆಸಿ ಅಲ್ಲಿಂದ ತಿರುನಾರಾಯಣಪುರಕ್ಕೆ 31—3—1906 ನೇ ದಿನ ದಯಮಾಡಿಸಿದರು. ಇಲ್ಲಿ

ಉಭಯವೇದಂತಾದಿ ಕಾಲಕ್ಷೇಪವನ್ನು ನಡೆಸಿಬರುತ್ತಿರುವ ಕಾಲದಲ್ಲಿ ಆರ್ಬತ್ ನಾಟ್ ಧನಾಗಾರವು ನಷ್ಟವಾಗಿ ಶ್ರೀ ಮಠಕ್ಕೆ ಶೋಚನೀಯ ದೆಶೆಯು ಏರ್ಪಟ್ಟಿತು.

ಶ್ರೀ ಜೀಯರುಸ್ವಾಮಿಗಳು ಅವಸಾನಕಾಲದಲ್ಲಿ ತಮ್ಮ ಉತ್ತರಾಧಿಕಾರಿಯಾಗಿ ದಾಮೋದರಂ ಅಳಶಿಂಗಾಚಾರ್ಯರೆಂಬುವರಿಗೆ ಅಧಿಕಾರವನ್ನು ಕೊಟ್ಟು ಶಕ ೧೮೩೦ ನೇ ಪ್ಲವಂಗ ಸಂ॥ ಕಾರ್ತೀಕ ಕೃಷ್ಣ ಪಂಚಮಿ ಮಂಗಳವಾರ (26—11—1907) ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಇವರು ಲೋಕಕ್ಷೇಮಾರ್ಥವಾಗಿ ೬ ಚಾತುರ್ಮಾಸ ವ್ರತನಿಷ್ಠರಾಗಿದ್ದರು.

---

## ಶ್ರೀ ದಾಮೋದರಂ ಅಳಶಿಂಗರಾಚಾರ್ಯಸ್ವಾಮಿ

(ರಾಮಾನುಜಪುರಂ ಅನಂದಾಂಪ್ಪಿಳ್ಳೈ ಕುಟ್ಟಿತಂಬಿ)

ಯದ್ವದ್ರಿನಾಥಪದಪಂಕಜ ಕಿಂಕರಾಗ್ರ್ಯಂ
ಶ್ರೀ ಶ್ರೀನಿವಾಸಕರುಣಾ ಪರಿಲಬ್ಧಬೋಧಂ
ನಾರಾಯಣಾಖ್ಯಮುನಿವರ್ಯ ಕಟಾಕ್ಷಪಾತ್ರಂ
ಸಂಪತ್ಕುಮಾರ ಯತಿರಾಜ ಗುರುಂ ಭಜೇಹಮ್ ॥
ಮೇಷೇ ಶತಭಿಷಗ್ಜಾತಂ ಪರಾಭವಶರದ್ವರೇ
ಯದ್ವದ್ರಿಯತಿರಾಜ ಶ್ರೀ ಸಂಪತ್ಸುತ್ರ ಮುನಿಂ ಭಜೇ ॥

ಈ ಮಹಾತ್ಮರು ಶಕ ೧೭೬೯ ನೇ ಪರಾಭವ ಸಂ॥ ಮೇಷ ಮಾಸ ಶತಭಿಷಾ ನಕ್ಷತ್ರದಲ್ಲಿ ಭಾರದ್ವಾಜ ಗೋತ್ರೋತ್ಪನ್ನರಾಗಿ ಜನಿಸಿದರು. ಇವರು ವಿದ್ವಾಂಸರಾದ ಅನಂದಾಳ್ವಾರ್ರ ವಂಶದವರು. ಮಹಾತ್ಮರಾದ ಯೋಗಿ ಪಾರ್ಥಸಾರಥಿ ಅಯ್ಯಂಗಾರ್ಯರವರು ಮುದ್ರಿಸಿ ಪ್ರಕಾಶಪಡಿಸಿದ ಸ್ಮೃತೀತಿಹಾಸಧರ್ಮಶಾಸ್ತ್ರ, ಕಾವ್ಯನಾಟಕಾದಿಗ್ರಂಥಗಳ ವಿಚಾರದಲ್ಲಿ ಇವರು ಗ್ರಂಥಶೋಧನೆ ಮತ್ತು ಮುದ್ರಿಸುವ ಕಾರ್ಯಗಳಲ್ಲಿ ಸಹಾಯಕರಾಗಿದ್ದರು.

ಇವರು ತಮ್ಮ ಪೂರ್ವ ಗುರುಗಳಾದ ಕುಮಾರಜೀಯರು ಸ್ವಾಮಿಗಳವರು ನೆಲ್ಲೂರು ಪಟ್ಟಣದಲ್ಲಿ ದಯಮಾಡಿಸಿದ್ದಾಗ ಅವರ ಆಜ್ಞಾನುಸಾರ ವಾಗ್ದಾನಮಾಡಿದಂತೆ ತುರೀಯಾಶ್ರಮವನ್ನು ತಮ್ಮ ೬೨ ನೇ ವಯಸ್ಸಿನಲ್ಲಿ ಶಕ ೧೮೩೧ ನೇ ಕೀಲಕ ಸಂ॥ ಆಶಾಢ ಶುಕ್ಲ ತ್ರಯೋದಶಿ ಭಾನುವಾರ (12—7—1908) ಆಶ್ರಮವನ್ನು ವಹಿಸಿ ಶ್ರೀ ಯತಿರಾಜ ಮಠದಲ್ಲಿ ಪೀಠಸ್ಥರಾದರು.



ಶ್ರೀ ದಾಮೋದರಂ ಅಳಶಿಂಗರಾಚಾರ್ಯ ಜೀಯರ್
ಆಶ್ರಮ ಸ್ವೀಕಾರ ಶಕಾಬ್ದ : ೧೮೩೦
12—7—1908

ಭಗವದ್ವಿಷಯ ಕಾಲಕ್ಷೇಪವು ನಡೆಯುತ್ತಿದ್ದಾಗ ೨ ನೇ ಶತಕದ ೭ ನೇ ತಿರುವಾಯ್ಮೊಳಿಯಲ್ಲಿ ೧೨ ನೇ ಪಾಶುರವ್ಯಾಖ್ಯಾನವು ನಡೆಯುತ್ತಿದ್ದ ಸಮಯದಲ್ಲಿ ಈ ಜೀಯರು ಜನಿಸಿದವರಾದ್ದರಿಂದ ಇವರಿಗೆ ದಾಮೋದರನೆಂದು ನಾಮಕರಣ ಮಾಡಿದರು. ಇವರ ವಂಶೀಯರಿಗೆ ಆ ಹೆಸರೇ ಪ್ರಸಿದ್ಧ ಮನೆತನದ ಹೆಸರಾಗಿ ಈಗಲೂ ಕರೆಯಲ್ಪಡುತ್ತಿರುವರು.

ಇವರಿಗೆ ೩೪ ನೇ ಸಂಪತ್ಕುಮಾರ ಪಟ್ಟವು. ಮದರಾಸ್ ಧನಾಗಾರದಲ್ಲಿ ನಷ್ಟವಾದ ದ್ರವ್ಯವನ್ನು ಸರಿಪಡಿಸಲು ಕೆಲವು ಪ್ರಯತ್ನಮಾಡಿದರು. ಇವರ ಕಾಲದಲ್ಲಿ ಶ್ರೀಮಠದಲ್ಲಿ ಪ್ರಬಂಧ ಪಾಠಶಾಲೆಯು ಆರಂಭವಾಗಿ ಕೆಲವುಕಾಲ ನಡೆಯಿತು. ಶ್ರೀ ಸ್ವಾಮಿಗಳವರು ಟಿಪ್ಪಣಿ ಅಳಶಿಂಗ್ರಾಚಾರ್ಯರ ಧರ್ಮ ಸಹಾಯದಿಂದ ಶ್ರೀ ಮಠದ ಗೋಡೆಗಳ ಮೇಲೆ ಅದ್ವಿತೀಯವಾದ ದಿವ್ಯದೇಶ ವಿಗ್ರಹ ಚಿತ್ರಗಳನ್ನು ಮನರಂಜಿತ ವರ್ಣದಿಂದ ಚಿತ್ರಿಸುವಂತೆ ಏರ್ಪಡಿಸಿದರು. ಇವರು ಕೇವಲ ಐದು ಚಾತುರ್ಮಾಸ ವ್ರತಗಳನ್ನು ನಡೆಸಿ ಶಕ ೧೮೩೬ ನೇ ಪ್ರಮಾದೀಚ ಸಂ॥ ಜ್ಯೇಷ್ಠ ಶುದ್ಧ ದಶಮಿ 13—6—1913 ರಲ್ಲಿ ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಇವರ ಇಬ್ಬರು ಮಕ್ಕಳು ಮೈಸೂರು ರಾಜ್ಯಾಂಗಸರಕಾರದಲ್ಲಿ ಉನ್ನತಾಧಿಕಾರಿಗಳಾಗಿದ್ದರು. ಮೊಮ್ಮಕ್ಕಳೂ ಸಹ ರಾಜ್ಯಾಂಗದಲ್ಲಿ ಉನ್ನತಾಧಿಕಾರಿಗಳಾಗಿರುವರು.

# ಶ್ರೀ ಕೋಪೆ ವೆಂಕಟಾಚಾರ್ಯಸ್ವಾಮಿ

ಶ್ರೀ ಶೈಲ ಲಕ್ಷ್ಮಣಮುನಿಃ ಕಲಿತಾತ್ಮಬೋಧಂ
ಸಂಪತ್ಕುಮಾರಯಮಿನಃ ಕರುಣೈಕಪಾತ್ರಮ್
ಶ್ರೀ ಯಾದವಾದ್ರಿ ಯತಿರಾಜಪದಾಬ್ಜ ಭೃಂಗಂ
ನಾರಾಯಣಾರ್ಯಯಮಿನಂ ಶರಣಂ ಪ್ರಪದ್ಯೇ ॥

ಮಿಥುನೇ ಭಾಸ್ಕರೇ ಸ್ವಾತಿನಕ್ಷತ್ರೇ ವಿಹಿತೋದಯಮ್
ಯದ್ವಾದ್ರಿ ಯತಿರಾಜ ಶ್ರೀ ನಾರಾಯಣಮುನಿಂ ಭಜೇ ॥

ಈ ಮಹಾಪುರುಷರು ಮಿಥುನಮಾಸ ಸ್ವಾತಿ ನಕ್ಷತ್ರದಲ್ಲಿ ಜನಿಸಿದರು. ಇವರು ತುರೀಯಾಶ್ರಮವನ್ನು ವಹಿಸಿ ಶಕ ೧೮೩೬ ನೇ ಪ್ರಮಾದೀಚ ಸಂ॥ ಆಷಾಢ ಶುದ್ಧ ನವಮಿ ಶನಿವಾರ (12—7—1913) ರಲ್ಲೂ ಶ್ರೀ ಯತಿರಾಜ ಮಠಾಧಿಪತಿಗಳಾದರು. ಇವರಿಗೆ ೩೫ ನೇ ನಾರಾಯಣಪಟ್ಟವು. ಇವರು ಇದೇ ಯತಿರಾಜ ಮಠದಲ್ಲಿ ಆಶ್ರಮವಹಿಸಿದ್ದ ಶ್ರೀ. ಉ. ವರದಾಚಾರ್ಯ ಜೀಯರ ಪೂರ್ವಾಶ್ರಮದ ತಮ್ಮಂದಿರಾದ ರಾಮಾನುಜಾಚಾರ್ಯರಲ್ಲಿ ವೈದ್ಯಶಾಸ್ತ್ರವನ್ನು ಓದಿದರು. ಶ್ರೀಮಾನ್ ಮ. ಕೃ. ತಿರುಮಲಾಚಾರ್ಯರ ಸಹಾಯದಿಂದ 1915 ನೇ ಜುಲೈ 31 ರಲ್ಲಿ ಶ್ರೀಮಠದಲ್ಲಿ ಉಭಯವೇದಾಂತ ಪಾಠಶಾಲೆಯನ್ನು ಸ್ಥಾಪಿಸಿ ಸಕಲವಿಧ ಏರ್ಪಾಡನ್ನು ನಡೆಸಿದರು. ಪಾಠಶಾಲೆಗೆ ಸೇರಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನೂ ಮತ್ತೆ ಕೆಲವರಿಗೆ ಆಹಾರಾದಿ ಸೌಕರ್ಯವನ್ನೂ ಇನ್ನೂ ಕೆಲವರಿಗೆ ದೇವಸ್ಥಾನದಲ್ಲಿ ಕೊಡುವಂತೆ ಶ್ರೀಮಠದಲ್ಲೂ ನಿತ್ಯಪಡಿ ಅಕ್ಕಿಯನ್ನು ಕೊಡುವಂತೆ ಏರ್ಪಡಿಸಿದರು. ಕೆಲವುಕಾಲ ಸುಖವಾಗಿ ನಡೆಯುತ್ತಾ ಬಂದಿತು. ಕಲಿಮಹಿಮೆಯಿಂದ ಕೆಲವರು ಅಂಥಃಪ್ರಚ್ಛನ್ನಬೌದ್ಧರು ಶ್ರೀ ಸ್ವಾಮಿಗಳವರಿಗೆ ನಂಬಿಕೆ ದ್ರೋಹಮಾಡಿ ತೊಂದರೆಪಡಿಸಿದ್ದರಿಂದ ಆರಂಭಿಸಿದ ಕಾರ್ಯವು ನಿಂತುಹೋಯಿತು.

7—4—1914 ರಲ್ಲಿ ದಿವಾನ್ ವಿಶ್ವೇಶ್ವರಯ್ಯನವರು ಶ್ರೀಮಠಕ್ಕೆ ಬಂದು ಶ್ರೀಗಳವರನ್ನು ಸಂದರ್ಶಿಸಿ ಆಶೀರ್ವಾದ ಪಡೆದು ತೆರಳಿದರು. ಶ್ರೀ ಸ್ವಾಮಿಗಳವರಿಗೆ ಮ. ಕೃ. ತಿರುಮಲಾಚಾರ್ಯರು ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಇವರ ಸಹಾಯದಿಂದ ಶ್ರೀಮಠದಲ್ಲಿ ನಿತ್ಯತದೀಯಾರಾಧನ ಉಭಯವೇದಾಂತ ಕಾಲಕ್ಷೇಪಾದಿಗಳನ್ನು ನಡೆಸಿಕೊಂಡು ಬಂದರು.



ಶ್ರೀ ಕೋಟೆ ವೆಂಕಟಾಚಾರ್ಯ ಜೀಯರ್

ಆಶ್ರಮ ಸ್ವೀಕಾರ ಶಕಾಬ್ದ: ೧೮೩೫

12—7—1913

15—7—1915 ದಿನ ಸಾಯಂಕಾಲ ಮೇಲುಕೋಟೆಗೆ ಶ್ರೀಮನ್ ಮಹಾರಾಜರು ಕುಟುಂಬ ಪರಿವಾರಸಮೇತರಾಗಿ ದಯಮಾಡಿಸಿದರು. ಮಾರನೆಯ ದಿನ ಶ್ರೀ ಯತಿರಾಜಮಠಕ್ಕೆ ದಯಮಾಡಿಸಿ ಶ್ರೀ ಸ್ವಾಮಿಗಳವರನ್ನು ಸಂದರ್ಶಿಸಿ ಶ್ರೀ ಸ್ವಾಮಿಗಳವರಿಗೆ ಜೋಡಿಶಾಲ್ವೆಯನ್ನೂ, ಕಿಂಚಿತ್ಕಾರವನ್ನೂ ಸಮರ್ಪಿಸಿ ತೀರ್ಥಪ್ರಸಾದವನ್ನು ತೆಗೆದುಕೊಂಡು ಆಶೀರ್ವದಿಸಲ್ಪಟ್ಟರು.

ಅದಕ್ಕೆ ಮಾರನೆಯ ದಿನ ಡೆಪ್ಯುಟೀ ಕಮಿಾಷನರು ಶ್ರೀ. ಸುಬ್ರಹ್ಮಣ್ಯ ಅಯ್ಯರ್, ಮುಜರ್‍ಯೈ ಸೂಪರೆಂಟರು ಆರಾವಮುದಯ್ಯಂಗಾರ್ಯರು ಮುಂತಾದ ವರು ಶ್ರೀಗಳವರ ಸನ್ನಿಧಾನಕ್ಕೆ ಬಂದು ಸೇವಿಸಿ ಫಲ ಮಂತ್ರಾಕ್ಷತೆ ಆಶೀರ್ವಾದ ಗಳನ್ನು ಹೊಂದಿದರು.

ಶ್ರೀ ಜೀಯರುಸ್ವಾಮಿಗಳ ಪೂರ್ವಾಶ್ರಮದ ಸಂಬಂಧವರಾದ ಐಶಾಮಿ ಶ್ರೀನಿವಾಸಯ್ಯಂಗಾರ್ಯರು, ಅವರ ಮಕ್ಕಳು ಶಿಂಗಲಾಚಾರ್‍ರು, ತಿರುನಾರಾಯಣಯ್ಯಂಗಾರ್‍ರು, ಕೃಷ್ಣಯ್ಯಂಗಾರ್‍ರು ಇವರುಗಳು ಶ್ರೀಮಠದ ವಿಚಾರದಲ್ಲಿ ಅನೇಕ ಕೈಂಕರ್ಯಗಳನ್ನು ನಡೆಸಿರುವುದು ಅತ್ಯಂತ ಪ್ರಶಂಸನೀಯವೂ, ಚಿರಸ್ಮರಣೀಯವೂ ಆಗಿರುವುದು. ಮೇಲ್ಕಂಡ ಐಶಾಮಿ ಶ್ರೀನಿವಾಸಯ್ಯಂಗಾರ್ಯರು ಮೇಲುಕೋಟೆಯ ಅಷ್ಟತೀರ್ಥಗಳ ದಾರಿಗಳನ್ನು ಕಲ್ಲು ಚಪ್ಪಡಿಗಳಿಂದ ತಾವೇ ಸ್ವಂತವಾಗಿ ಹಾಸಿ, ಶ್ರೀಮಠದ ಕಟ್ಟಡ ಜೀರ್ಣೋದ್ಧಾರಮಾಡಿರುವುದನ್ನು ನೋಡಿದರೆ ಅವರೊಬ್ಬ ದೈವಾಂಶ ಶಿಲ್ಪಿಯೆಂದು (ಇಂಜನೀಯರು) ಹೇಳಬಹುದು.

ಇವರ ಕಾಲದಲ್ಲಿ ಹಿಂದಿನ ಕುಟ್ಟಿತಂಬಿ ಜೀಯರು ಸ್ವಾಮಿಗಳ ಪೂರ್ವಾಶ್ರಮದ ಕುಮಾರರಾದ ಇಂಜಿನೀಯರು ಆರ್. ಎ. ಶ್ರೀನಿವಾಸಯ್ಯಂಗಾರ್ಯರ ಮೂಲಕ ಶ್ರೀಮಠದ ಮೂಲಧನಕ್ಕೆ ೨೦೦೦ ರೂಪಾಯಿಗಳು ಸೇರಿಸಲ್ಪಟ್ಟಿತು.

ಕಾಲವಶಾತ್ ಶ್ರೀ ಸ್ವಾಮಿಗಳವರು ಶಕ ೧೮೩೯ ನೇ ಪಿಂಗಳ ಸಂ॥ ಆಷಾಢ ಪ್ರತಿಪತ್ ದಿನ (5—7—1917) ಮೇಲುಕೋಟೆಯಲ್ಲಿ ಪರಮಪದಿಸಿದರು. ೧೦ ದಿನಗಳೂ ಬೃಂದಾವನಪೂಜೆಯು ಸಮಸ್ತ ಬಿರುದಾವಳಿಗಳಿಂದ ನಡೆಸಲ್ಪಟ್ಟಿತು. ಇವರು ಲೋಕಕ್ಷೇಮಾರ್ಥವಾಗಿ ೪ ಚಾತುರ್ಮಾಸ ವ್ರತಗಳನ್ನು ಕೈಕೊಂಡಿದ್ದರು.

———

ಶ್ರೀಮತೇ ರಾಮಾನುಜಾಯ ನಮಃ

# ಶ್ರೀ ಆಸೂರಿ ಅನಂದಾಳ್ವಾರ್ ಸ್ವಾಮಿ

ವಿದ್ವಜ್ಜನಗಳಿಂದ ಸಮಲಂಕೃತವಾದ ಹಾರೀತಗೋತ್ರದಲ್ಲಿ ಅವತರಿಸಿ ವಿದ್ಯಾ ವಿಶಾರದರಾದ ಕೇಶವಸೋಮಯಾಜಿಯೆಂಬುವರು ತಮ್ಮ ಧರ್ಮಪತ್ನಿ ಕಾಂತಿಮತಿ ಯೊಂದಿಗೆ ಶ್ರೀ ಪೆರಂಬೂದೂರಿನಲ್ಲಿ ನಿತ್ಯವಾಸರಸಿಕರಾಗಿದ್ದು ದೈವಪ್ರೇರಣೆಯಿಂದ ತಿರುವಲ್ಲಿಕ್ಕೇಣಿ ಕೈರವಣೀ ತೀರದಲ್ಲಿ ಮಾಧವಮಾಸದಲ್ಲಿ ಶಾಸ್ತ್ರಾನುಸಾರವಾಗಿ ಯಜ್ಞವನ್ನು ನಡೆಸಿ ಬಂದರು.

ಸರ್ವೇಶ್ವರನಿಂದ ಪ್ರೇರಿತರಾಗಿ ಆದಿಶೇಷನು ಮನಸ್ಯ ಸಜಾತೀಯರಾಗಿ ಅವ ತರಿಸಿ ಲೋಕಕ್ಷೇಮವನ್ನುಂಟುಮಾಡಲು ಕೇಶವಸೋಮಯಾಜಿಗಳ ಧರ್ಮ ಪತ್ನಿಯ ಗರ್ಭದಲ್ಲಿ ಅನುಪ್ರವೇಶಿಸಿ ಋತೂನಾಂಕುಸುಮಾಕರಃ ಎನ್ನುವ ವಸಂತಋತುವಿನಲ್ಲಿ ಚೈತ್ರ ಶ್ರೀ ಮಾನಯಂಮಾಸಃ ಎನ್ನುವ ಚೈತ್ರಮಾಸದಲ್ಲಿ ಶುಕ್ಲಪಕ್ಷದಲ್ಲಿ ಪಂಚಮಿ ಆರಿದ್ರಾ ನಕ್ಷತ್ರ ಕರ್ಕಾಟಾಭಿಜಿತ್ತಿನಲ್ಲಿ, "ತತೋಽಖಿಲ ಜಗತ್ಪದ್ಮ ಬೋಧಾಯಾಚ್ಯುತ ಭಾನುನಾ । ದೇವಕೀಪೂರ್ವಸಂಧ್ಯಾಯಾಮಾವಿರ್ಭೂತಂ ಮಹಾತ್ಮನಾ । ಎನ್ನುವಂತೆ ಅವತರಿಸಿದರು. ಇದಕ್ಕೆ ಪ್ರಮಾಣ ಶ್ಲೋಕವು,

ಪಶ್ಚಾಚ್ಛ್ರೀಭೂತಪುರ್ಯಾಂ ಕ್ರತುವಿಭವವಶಾತ್ ಕೇಶವಾಚಾರ್ಯ
ಪತ್ನ್ಯಾಮಂತರ್ವತ್ನ್ಯಾಮನಂತಸ್ಸದಿಭಗವತಾ ಪ್ರೇರಿತೋನುಪ್ರವಿಶ್ಯ ॥
ಚೈತ್ರೇ ಮಾಸೇಥಿಪಂಚಮ್ಯಾಧಿಧವಳದಲೇ ಧೂರ್ಜಟೀಸ್ತಾರಕಾಯಾಮಾವಿರ್ಭೂ
ತೋಧಿವಾಚಸ್ಪತಿ ದಿವಸಮಿಮಂ ಲೋಕಮುದ್ಧರ್ತುಮುರ್ವ್ಯಾಂ ॥

ಕಲ್ಯಬ್ದೇದಿವ್ಯಕುಂಭೇ ಬುಧಜನವಿದಿತೇ ವತ್ಸರೇ ಪಿಂಗಳಾಖ್ಯೇ
ಚೈತ್ರೇಮಾಸೇ ಗತೇಷು ದ್ವಿಯುತದಶದಿನೇಷ್ವೇಧಮಾನೇ ಹಿಮಾಂಶೌ ।
ಪಂಚಮ್ಯಾದ್ರಾ ಸಮೇತೇ ಸುರಗುರುದಿವಸೇ ಕರ್ಕಟಾಖ್ಯೇಚ ಲಗ್ನೇ
ಶೇಷಃ ಶ್ರೀ ಭೂತಪುರ್ಯಾಂ ಸಮಜನಿಭಗವಾ ಕೇಶವಾಚಾರ್ಯ ಸೂನುಃ ॥
ದಿವ್ಯ ಶ್ರೀ ತುಳಸೀವನಾಧಿವಸನ ಶ್ರೀ ಕೈರವಿಣ್ಯಾಪ್ಲವ
ಶ್ರೀ ಮದ್ರಾಘವ ಪಾರ್ಥಸಾರಥಿಮುಖ ಶ್ರೀಶಾರ್ಙನಾಥಾದ್ಧರೇಃ
ಕ್ಶೇಷೋಮಾಧವಯಜ್ವನೋ ಗುಣನಿಧೇಃ ಶ್ರೀ ಕಾನ್ತಿಮತ್ಯಾಮಸಾವಾ
ದ್ರಾಜನಿಭೂತನಾಮ್ನಿನಗರೇ ರಾಮಾನುಜಾರ್ಯಾತ್ಮನಾ ॥

ಎಂದು ಪ್ರಸಿದ್ಧವು-

ಈ ರೀತಿಯಲ್ಲಿ ಅವತರಿಸಿದ ಕುಮಾರರಿಗೆ ಮದಂಶೋಯೋ ಮಹಾವೀರ್ಯ ಶೇಷಾಖ್ಯೋಧರಣೀಧರಃ । ಜಗತಾಮುಪಕಾರಾಯ ತವವಂಶೇಭವಿಷ್ಯತಿ ಎನ್ನುವ ಪುರಾಣವಚನಾನುಸಾರವಾಗಿ, ಶ್ರೀ ರಾಮಾನುಜರೆಂದು ನಾಮಕರಣ ಮಾಡಿದರು. ಅನಂತರ ಅನ್ನಪ್ರಾಶನ ಚಾಳಾಕ್ಷರಾರಂಭೋಪನಯನೋಪಾಕರ್ಮಾದಿ ವ್ರತಸಮಾವರ್ತನಗಳನ್ನೂ ಉಕ್ತಕಾಲಗಳಲ್ಲಿ ನಡೆಸಿ ಕೂರವೆಂಬನಗರದಲ್ಲಿ ಕನ್ನಾಡ್ಯೈನಾರ್ಯರವರ ಕುಮಾರ್ತಿ ಪೆರಿಯಪಿರಾಟ್ಟಿ ಎನ್ನುವ ಕನ್ಯೆಯನ್ನು ತಂದು ವಿವಾಹಮಾಡಿದರು. ಕೆಲವುಕಾಲದ ಮೇಲೆ ಕೇಶವಸೋಮಯಾಜಿಗಳು ಪರಮ ಪದಿಸಿದ ಮೇಲೆ ರಾಮಾನುಜರು ಅವರಿಗೆ ಉತ್ತರ ಕ್ರಿಯೆಗಳನ್ನೆಲ್ಲಾ ನಡೆಸಿ ಕಾಂಚೀಪುರದಲ್ಲಿ ವಿದ್ವಾಂಸರಾದ ಯಾದವಪ್ರಕಾಶನೆಂಬ ಸನ್ಯಾಸಿಯ ಬಳಿಯಲ್ಲಿ ಶಾಸ್ತ್ರಾಭ್ಯಾಸವನ್ನು ನಡೆಸಿ ಬಂದರು.

ಅನಂತರ ಯಾದವಪ್ರಕಾಶನೊಂದಿಗೆ ಗಂಗಾಯಾತ್ರೆಯನ್ನು ಮಾಡಿ ಕಾಂಚೀ ಪುರಕ್ಕೆ ಬಂದು ವರದರಾಜಸ್ವಾಮಿಯವರಿಗೆ ತೀರ್ಥಕೈಂಕರ್ಯವನ್ನು ನಡೆಸಿಬಂದರು. ದರ್ಶನಸ್ಥಾಪಕರಾಗಿದ್ದ ಆಳವಂದಾರ್ರ ಆಶೀರ್ವಾದದಿಂದ ಅವರ ಅಭಿಪ್ರಾಯವನ್ನು ನಡೆಸಿಕೊಂಡುಬರಲು ನಿರ್ಧರಿಸಿದರು. ಇದಕ್ಕೆ ಪ್ರಮಾಣವು.

ತತ್ಕಾಲೇ ಜಾತಕರ್ಮಣ್ಯವಧಿಕಸುಮಹಾನಂದಧುಃ ಕೇಶವಾರ್ಯೋ
ನಿರ್ವರ್ತ್ಯದ್ವಾದಶೇಹ್ನಿ ಸ್ವಸೃತನಯಜನೇ ಲಾಲನಾಯೋಪಯಾತಂ
ಸ್ಯಾಲಂ ಶ್ರೀ ಶೈಲಪೂರ್ಣಂ ಗುರುತಿಲಕಮನುಜ್ಞಾಪ್ಯ ಸೂನುಂ ತಮೇವಂ
ಜ್ಞಾತ್ವಾ ಶೇಷಾವತಾರಂ ವಚನವಿಭವತೋ ಲಕ್ಷ್ಮಣಾಖ್ಯಂಚಕಾರ ॥
ತೇಜಃ ಪುಂಜೇನ ಪೌರಾಣಿಕ ವರವಚಸಾಲಕ್ಷ್ಮಣಾಭಿಖ್ಯಮೇನಂ
ಕೃತ್ವಾ ಚಕ್ರಾದಿ ಚಿಹ್ನಾಂಕಿತ ಭುಜಯುಗಲಂ ಪುಷ್ಟತಸ್ಸೋರ್ಧ್ವಪುಂಡ್ರೈಃ
ಶ್ರೀಮಚ್ಛ್ರೀ ಶೈಲಪೂರ್ಣಾನುಮತಿಬಲಮವಷ್ಟಭ್ಯ ಸವ್ಯೇತರಸ್ಮಿ
ನ್ನಸ್ಯ ಶ್ರೋತ್ರೇ ರಹಸ್ಯತ್ರಿತಯಮುಪದಿಶತ್ ಕೇಶವಾರ್ಯಸ್ತುತೋಷ ॥
ಅಸ್ಯಾನ್ನಪ್ರಾಶಚೌಳಾಕ್ಷರಗಣನಸಮಾರಂಭ ಸಾವಿತ್ರ್ಯ ಸೂಕ್ತಿ
ಸ್ವಾಧ್ಯಾಯಾರಂಭ ವೇದವ್ರತನಿಯಮ ಸಮಾವರ್ತನಾದೀನಿಕಾಲೇ।
ಕೃತ್ವಾಕೂರಸ್ಥನಾರಾಯಣ ಗುರುತನಯಾಂ ಕನ್ಯಕಾಮಸ್ಯಪತ್ನೀಂ
ಸಂತೋಷಾತ್ ಸಂಘಟಯ್ಯಾಮನುತ ಕೃತಾನಿಜಾಶೇಷಕಾರ್ಯಂ ಸ್ವಮೇಷಃ ॥

ಪಶ್ಚಾತ್ ಶ್ರೀಕೇಶವಾರ್ಯೇ ಕತಿಪಯದಿವಸಾನಂತರಂ ವಿಷ್ಣುಧಾಮ
ಪ್ರಾಪ್ತೇ ಶ್ರೀ ಲಕ್ಷ್ಮಣಾರ್ಯೋಽಖಿಲಮಪಿ ಚರಮಂ ವರ್ತಯಿತ್ವಾಸ್ಯಕೃತ್ಯಂ।
ಪಶ್ಚಾತ್ ಸಂವತ್ಸರಾಂತಂ ನಿಯಮಮಪಿ ಸಮಾಸ್ಥಾಯ್ಯ ಕೈಂಕರ್ಯಬುದ್ಧ್ಯಾ
ಗೃಹ್ಣನ್ ಶಾಸ್ತ್ರಾಣಿ ಕಾಂಚ್ಯಾಂ ಸಮವಸದನಘೋ ಯಾದವಾದ್ವಿದ್ವದಗ್ರ್ಯಾತ್ ॥

ಒಂದು ದಿನ ವರದರಾಜದೇವರ ನಿಯಮವನ್ನನುಸರಿಸಿ ಪೆರಿಯನಂಬಿ ಸನ್ನಿಧಿಯಲ್ಲಿ ಆಶ್ರಯಿಸಬೇಕೆಂದು ಶ್ರೀರಂಗಮಾರ್ಗವಾಗಿ ಬರುತ್ತಿರಲು ಪೆರಿಯನಂಬಿಗಳು ಆಳವಂದಾರ್ರ ನಿಯಮನದಿಂದ ಇವರನ್ನು ಕಟಾಕ್ಷಿಸಬೇಕೆಂದು ಕಾಂಚೀಮಾರ್ಗವಾಗಿ ಬಂದು ಉಭಯತ್ರರೂ ಮಧುರಾಂತಕ ಅಗ್ರಹಾರದ ಏರಿಕಾತ್ತರಾಮದೇವರ ಸನ್ನಿಧಿಯಲ್ಲಿ ಸೇರಿದರು. ರಾಮಾನುಜರು ಅವರನ್ನು ಸೇವಿಸಿ ಈಕ್ಷಣದಲ್ಲಿಯೇ ತಮ್ಮ ಶಿಷ್ಯನನ್ನಾಗಿಮಾಡಿಕೊಳ್ಳಬೇಕೆಂದು ವಿಜ್ಞಾಪಿಸಲು ಪೆರಿಯನಂಬಿಗಳು ಅವರ ಇಷ್ಟದಂತೆ ತಾಪಾದಿ ಪಂಚಸಂಸ್ಕಾರಗಳನ್ನೂ ಮಂತ್ರೋಪದೇಶವನ್ನೂ ಅನುಗ್ರಹಿಸಿ ಅಲ್ಲಿಂದ ಹೊರಟು ಕಾಂಚೀಪುರಕ್ಕೆ ಬಂದು ಶ್ರೀ ರಾಮಾನುಜರ ತಿರುಮಾಳಿಗೆಯ ದಕ್ಷಿಣಭಾಗದಲ್ಲಿ ತಮ್ಮ ಧರ್ಮಪತ್ನಿಯೊಂದಿಗೆ ವಾಸಮಾಡುತ್ತಿದ್ದು ಶ್ರೀ ರಾಮಾನುಜರಿಗೆ ಸಂಪ್ರದಾಯಸಿದ್ಧಗಳಾದ ವಿಶೇಷಾರ್ಥಗಳನ್ನು ಉಪದೇಶಿಸಿ ಬರುತ್ತಿರುವ ಕಾಲದಲ್ಲಿ ಶ್ರೀ ರಾಮಾನುಜರ ಪತ್ನಿಯು ಗರ್ಭವನ್ನು ಧರಿಸಿ ಪುಂಸವನಾದಿ ಕ್ರಿಯೆಗಳು ನಡೆದು ಹತ್ತು ತಿಂಗಳಾದ ಮೇಲೆ ಮಿಥುನ (ಆನಿಮಾಸಂ) ಮಾಸ ವಿಶಾಖಾನಕ್ಷತ್ರದಲ್ಲಿ ಅವಳಿಮಕ್ಕಳಾಗಿ ಪ್ರಸವಿಸಿದರು. ಈ ಮಕ್ಕಳನ್ನು "ಊರ್ಮಿಳೆಯಮ್ಮರು" ಎಂದೂ ಹೇಳುವರು. ಶ್ರೀ ರಾಮಾನುಜರು ಇವರಿಗೆ ವರದರಾಜರ ನಿಯಮನದಂತೆ "ಎಮ್ಮಾರ್, ಪೆಮ್ಮಾರ್" ಎಂದು ನಾಮಕರಣ ಮಾಡಿದರು:— ಇದಕ್ಕೆ ಪ್ರಮಾಣವು.

ಮಧ್ಯೇಕಾವೇರಿ ಪಶ್ಯನ್ ಹರಿಪದಮಯತೋ ಯಾಮುನಾರ್ಯಸ್ಯದೇಹಂ
ದಿವ್ಯಂ ದಗ್ಧಾಂತರಂಗೋ ವ್ಯಸನದಹನತಃ ಸ್ವಾಮಿಸೇವಾಂ ಜಹಾನಃ |
ಕಾಂಚೀಮಾಗತ್ಯ ಚಿಂತಾವಿನಿಹತಹೃದಯೋ ದೇವರಾಜಸ್ಯ ಸೂಕ್ತ್ಯಾ
ಪೂರ್ಣಾಚಾರ್ಯಾಂಘ್ರಿಯುಗ್ಮಾಶ್ರಯಣಮಭಿಸಮುದ್ದಿಶ್ಯ ರಂಗಂ ಪ್ರತಿಷ್ಠನ್
ಮಧ್ಯೇಮಾರ್ಗಂ ನಿಜಾನುಗ್ರಹಣಧಿಷಣಯಾ ಪ್ರಾಪ್ತಪೂರ್ಣಾರ್ಯಪಾದಾಂ
ಭೋಜದ್ವಂದ್ವಂ ಶ್ರಿತಸ್ತತ್ಸಹಿತ ಉಪಗತೋ ಗೇಹಮುಪ್ರಾಪ್ತರಂಗಃ |
ಸಂಸ್ಥಾಪ್ಯೈನಂ ಸ್ವಗೇಹೇ ಶ್ರುತಿಶಿಖರ ರಹಸ್ಯಾರ್ಥಮಸ್ಮಾತ್ಸು ಗೃಹ್ಣನ್
ಪತ್ನ್ಯಾ ವಾಧೂಲನಾರಾಯಣ ಗುರುಸುತಯೋವಾಸ ಸಾಕಂ ಸುಖೇನ ||
ವಾಧೂಲ ವಂಶಜನಿತಾಂ ವಿದಿತೋರ್ಮಿಳಾಖ್ಯಾಂ ಪತ್ನೀಮವಾಪ್ಯ
ಸಹಿಲಕ್ಷ್ಮಣ ದೇಶಿಕೇಂದ್ರಃ | ಕಾಂಚೀಪುರೇ ಕರಿಗಿರೀಶ ಪದಾಬ್ಜ ಸೇವಾಂ
ಕುರ್ವನ್ನುವಾಸ ಸುಖಮೇವ ಕೊತೂಹಲಾಢ್ಯಃ ||

ಸಹೋರ್ಮಿಳೇಲಕ್ಷ್ಮಣದೇಶಿಕೇ ತತೋ ಗೃಹಸ್ಥಧರ್ಮಾನನುತಿಷ್ಠತಿ ಸ್ವಯಂ |
ವರೇಣ್ಯರೂಪೌ ವರದಾಹ್ವಯಾ ವುಭೌ ಸುತಾವಭೂತಾಂ ಸುಭಗೌ ಯಶೋಭಿಃ ||

ಸಂಸಿದ್ಧಾನಾಂ ಶಕನೃಪಭುವಾಂ ಹಾಯನಾನಾಮುಪಾಯೇ
ಮಾರಾಖ್ಯಾಯಾಂ ಶರದಿ ಮಿಥುನಂ ವಾಸರೇಶೇ ಪ್ರಯಾತೇ |

ಶುಭ್ರೇಪಕ್ಷೇ ಸುರಗುರುದಿನೇ ಕಾಮತಿಥ್ಯಾ ಸಮೇತೇ
ಜಾತಂ ರಾಮಾನುಜ ತನುಜಯೋರ್ ದ್ವಂದ್ವಮೈಂದ್ರಾಗ್ನತಾರೇ ||
ಶ್ರೀ ಮಲ್ಲಕ್ಷ್ಮಣನಾಮ್ನಿ ದೇಶಿಕವರೇ ಪೂರ್ಣಾರ್ಯಪಾದಾಂಬುಜ
ದ್ವಂದ್ವೈಕಾರ್ಚನತತ್ಪರೇಣ ಮನಸಾ ಕಾಂಚೀಮಲಂಕುರ್ವತಿ
ಪತ್ನೀ ತಸ್ಯಗುಣೋನ್ನತಾ ಭುವಿ ಮಹಾಲಕ್ಷ್ಮೀರಸೂತಾತ್ಮಜ
ದ್ವಂದ್ವಂ ತದ್ವರದಾಹ್ವಯಂ ಸಮತನೋತ್ಸದ್ವಾದಶೀವಾಸರೇ ||
ಎಂದು ಪೂರ್ವೀಕರು ನಿಬಂಧಿಸಿರುವರು.

ಈ ರೀತಿಯಲ್ಲಿ ಶ್ರೀ ರಾಮಾನುಜರು ಪೆರಿಯನಂಬಿಗಳ ಸನ್ನಿಧಿಯಲ್ಲಿ ಕಾಲಕ್ಷೇಪವನ್ನುಮಾಡುತ್ತಿದ್ದು ಅವರ ನಿಯಮನದಿಂದ ತಾವೇ ತಮ್ಮ ಮಕ್ಕಳಿಗೆ ಪಂಚಸಂಸ್ಕಾರಾದಿ ಮಂತ್ರೋಪದೇಶಗಳನ್ನು ನಡೆಸಿದರು. ಈ ರೀತಿಯಲ್ಲಿರುವ ಕಾಲದಲ್ಲಿ ಪೆರಿಯನಂಬಿಯವರ ಹೆಂಡತಿಗೂ ರಾಮಾನುಜರ ಹೆಂಡತಿಗೂ ವಿವಾದವುಂಟಾಗಲು ಪೆರಿಯನಂಬಿಗಳು ರಾಮಾನುಜರಿಗೆ ತಿಳಿಯದಂತೆ ತಮ್ಮ ಪತ್ನಿ ಯೊಂದಿಗೆ ಶ್ರೀರಂಗಕ್ಕೆ ಬಂದುಬಿಟ್ಟರು. ಮಾರನೆಯ ದಿನ ಈ ವರ್ತಮಾನವನ್ನೆಲ್ಲಾ ಶ್ರೀ ರಾಮಾನುಜರು ಕೇಳಿ ಈ ತಪ್ಪುಗಳಲ್ಲದೆ ಹಿಂದೆ ಇನ್ನೂ ಅನೇಕ ಭಾಗವತಾ ಪಚಾರಗಳೆಂದು ಹೇಳಿ ಲೋಕಕ್ಷೇಮಾರ್ಥವಾಗಿ ಪತ್ನಿಯನ್ನು ತಾಯಿಯ ಮನೆಗೆ ಹೋಗೆಂದು ಕಳುಹಿಸಿಕೊಟ್ಟು ವರದರಾಜದೇವರನ್ನು ಆಚಾರ್ಯರನ್ನಾಗಿ ಧ್ಯಾನಿಸಿ ಯಥಾಶಾಸ್ತ್ರವಾಗಿ ಸನ್ಯಾಸವನ್ನು ಸ್ವೀಕರಿಸಿದರು. ಇದಕ್ಕೆ ಪ್ರಮಾಣಶ್ಲೋಕವು

ತಾಪಂ ಪುಂಡ್ರವಿಧಿಂ ಸಮಂತ್ರಮನಯೋಸ್ಸವ್ಯಾಗ್ನಿಧಾಯೋಭಯೋಃ
ಭಾರ್ಯಾಯಾ ಅಸಕೃದ್ವಿರೋಧಕಲನಾತ್ಸಂಜಾತ ವೈರಾಗ್ಯತಃ |
ತಾಂಪುತ್ರದ್ವಿತಯೇನ ಸಾಕಮಚಿರಾತ್ತ್ಯಕ್ತ್ವೈವ ಸಹಸ್ತೀಶ್ವರಂ
ಸಂಪ್ರಾಪ್ಯಾತ್ಮಗುರುಂ ಯಥಾವದತನೋತ್ಸಂನ್ಯಾಸಮನ್ಯಾದೃಶಃ ||

ಈ ರೀತಿಯಲ್ಲಿ ಆಶ್ರಮವನ್ನುವಹಿಸಿ ವರದರಾಜರ ಕೈಂಕರ್ಯವನ್ನು ನಡೆ ಸುತ್ತಿರಲು ಇವರ ವೈಭವವನ್ನು ಕೇಳಿ ಕೂರತ್ತಾಳ್ವಾರ್ ಮತ್ತು ಮೊದಲಿ ಯಾಂಡಾರವರೂ ಸಹ ಬಂದು ರಾಮಾನುಜರನ್ನಾಶ್ರಯಿಸಿ ವೇದಾಂತ ವಿಚಾರದಲ್ಲಿ ಸಹಾಯಕರಾಗಿದ್ದರು.

ಈ ಕಾಲದಲ್ಲಿ ಶ್ರೀರಂಗನಾಥರು ತಿರುವರಂಗಪ್ಪೆರುಮಾಳರೆಯರ ಮೂಲಕ ಹೇಳಿ ಕಳುಹಿಸಿದ ಆಜ್ಞೆಯನ್ನು ಶಿರಸಾವಹಿಸಿ ವರದರಾಜರ ಅಪ್ಪಣೆಯನ್ನೂ ಪಡೆದು ಶ್ರೀರಂಕ್ಕೆ ಬಂದು ಶ್ರೀರಂಗನಾಥ ಕೈಂಕರ್ಯವನ್ನೂ, ದರ್ಶನಸ್ಥಾಪನವನ್ನೂ ನಡೆಸಿ ಕೊಂಡು ಬರುತ್ತಿದ್ದರು. ಈ ಕಾಲದಲ್ಲಿ ಶ್ರೀ ರಾಮಾನುಜರ ಪೂರ್ವಾಶ್ರಮದ

ಕುಮಾರರುಗಳಾದ ಎಮ್ಬಾರ್, ಪೆಮ್ಬಾರ್ರುಗಳು ಪ್ರಬುದ್ಧರಾಗಿ ಶಾಸ್ತ್ರಗಳನ್ನು ಓದಿದವರಾಗಿ ನಾವೂ ಸಹ ರಾಮಾನುಜರನ್ನಾಶ್ರಯಿಸಬೇಕೆಂದು ನಿಶ್ಚಯಿಸಿ ಶ್ರೀರಂಗಕ್ಕೆ ಬಂದು ತಮ್ಮ ಅಭಿಪ್ರಾಯವನ್ನು ಅಂತರಂಗರೊಂದಿಗೆ ಹೇಳಿ ಕಳುಹಿಸಲು ರಾಮಾನುಜರು ಅವರ ದರ್ಶನಾದಿಗಳು ನಮಗೆ ನಿಷಿದ್ಧವೆಂದು ಉಪೇಕ್ಷಿಸಲು ಇದನ್ನು ಕೇಳಿ ಜ್ಯೇಷ್ಠರಾದ ಎಮ್ಬಾರ್ರವರು ಬಹಳವಾಗಿ ಶೋಕಿಸಿ ಕೆಲವು ದಿನಗಳಲ್ಲೇ ಪರಮಪದಿಸಿದರು. ರಾಮಾನುಜರು ಇದನ್ನು ಕೇಳಿ ಪೆಮ್ಬಾರ್ರವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅವರ ಆಶೆಯೆಲ್ಲಾ ತೀರುವಂತೆ ಆಶೀರ್ವದಿಸಿ ಯಥಾವಿಧಿ ತಾಪಾದಿ ಪಂಚಸಂಸ್ಕಾರವನ್ನೂ ಶಾರೀರಿಕಮೀಮಾಂಸಶಾಸ್ತ್ರಗಳನ್ನೂ ದ್ರಾವಿಡಪ್ರಬಂಧಗಳನ್ನೂ ಹಿತೋಪದೇಶವನ್ನೂ ಮಾಡಿ ಕೂರತ್ತಾಳ್ವಾರ್ರವರನ್ನು ಕರೆದು ನೀವು ಇವರಿಗೆ ಎಲ್ಲಾ ಶಾಸ್ತ್ರಗಳನ್ನೂ ಉಪದೇಶಿಸಿ ಎಂದು ಹೇಳಿ ಸತ್ಯವ್ರತಾದಿ ದಿವ್ಯಕ್ಷೇತ್ರಗಳಲ್ಲಿ ಅರುಳಪ್ಪಾಡು ಮರ್‍ಯಾದೆ, ತೀರ್ಥ, ಶಠಕೋಪನೇ ಮೊದಲಾಗಿ ಸಕಲ ಮರಿಶೆಗಳನ್ನೆಲ್ಲಾ ಇವರಿಗೆ ಅನುಗ್ರಹಿಸಿದರು.

ಇದಕ್ಕೆ ಪ್ರಮಾಣಶ್ಲೋಕವು:—

ಶ್ರೀರಂಗೇ ವಸತಸ್ತತೋ ಯತಿಪತೇ ರಭ್ಯಾಸಮಾಸಾದ್ಯ ತೌ
ತತ್ಸಂದರ್ಶನಕಾಂಕ್ಷಿಣಾವಭವತಾಂ ತೇನೋಪರುದ್ಧಾಶಯೌ |
ತತ್ರೈಕಸ್ತದಲಾಭಜೇನ ಗತವಾನ್ ಶೋಕೇನ ದೇಹವ್ಯಯಂ
ತದ್ದ್ವಿತೀಯವಮಾವಲೋಕನ ಸುಧಾಸಂಪ್ಲಾವಿತೋ ಭೂತ್ಸರಃ ||

ಆಹೂಯೈನಮಥೋ ಕದಾಚಿದನಘೈರಾಲೋಕ್ಯನೇತ್ರಾಂಚಲೈ
ರಸ್ಮೈ ಮಂತ್ರವರಾಂಸ್ತದರ್ಥ ವಿವೃತಿಂ ಶಾರೀರಕಾದೀನಪಿ |
ಯೋಗೀಂದ್ರಶ್ಶಠವೈರಿಮುಖ್ಯಮುಹತ ಸ್ತಾಂಸ್ತಾನ್ ಪ್ರಬಂಧಾನ್ಸ್ವಯಂ
ವ್ಯಾಹೃತ್ಯಾಭಿಮತೇತರಾರ್ಥಕಥನೇ ಕೂರೇಶಮಾಜ್ಞಪ್ತವಾನ್ ||

ಮಾಯಾತೋಯಮಹೀಧ್ರಭೂತಪುರಪುಣ್ಯಾವರ್ತಸತ್ಯ ವ್ರತ
ಕ್ಷೇತ್ರೇ ಶ್ರೀಸಖ ಸನ್ನಿಧೌ ಪ್ರಥಮತ ಸ್ತೀರ್ಥಂ ಪ್ರಸಾದಂ ತಥಾ !
ಶ್ರೀಶೇಷಾ ಪಟಭಾಷ್ಯ ಕೈಶಿಕಕಥಾ ವಿಜ್ಞಾಪನಾದಿ ಸ್ವಯಂ
ಕೂರೇಶಸ್ಯಮುಖಾದ್ಯತೀಂದ್ರ ಚರಣೈಃ ಯಸ್ಮೈ ಪ್ರಸಾದೀಕೃತಂ ||

ಶ್ರೀ ವತ್ಸಾಂಕ ಕೃಪಾವಶಾದ್ವಿದಿತವಾನ್ ವೇದಾಂತಯುಗ್ಮಾಶ್ರಯಂ
ಹಾರೀತಾನ್ವಯ ಹಾರನಾಯಕಮಣಿ ಸ್ತತ್ತ್ವಾರ್ಥ ಚಿನ್ತಾಮಣಿಃ |
ನಪ್ತಾ ಕೇಶವಯಜ್ವನೋ ನರಹರೇರಾರಾಧನೇತತ್ಪರಃ
ಸೋಽಯಂ ಶ್ರೀ ವರದಾಹ್ವಯೋ ಗುರುವರೋಜೀಯಾತ್ಸಹಸ್ರಂ ಸಮಾಃ ||

ಶ್ರೀಭಾಷ್ಯಕಾರಕೃಪಯಾ ವರದಸ್ಯ ಕಾಂಚೀ
ವಾಸಸ್ಥಲಾನಿ ಭುವಿ ಭೂತಪುರೋದಕಾದ್ರೀ |
ಶ್ರೀಭೂಮಿಸಾರಪುರ ಕಿಂಗೃಹಪುಷ್ಪಮಲ್ಲೀ
ಲಕ್ಷ್ಮೀನಿವಾಸಪುರಕೈರವಣೀಸರಾಂಸಿ ||

ಶ್ರೀಮತೇವರದಾರ್ಯಾಯ ಶ್ರೇಯಸಾಮೇಕರಾಶಯೇ |
ಶಿರಸಾ ಮನಸಾ ವಾಚಾ ಸ್ಯಾದಿಯಂ ಮೇ ನಮಸ್ಕ್ರಿಯಾ ||

ಎಂದುಪ್ರಸಿದ್ಧವು. ಇವರ ಧ್ಯಾನಶ್ಲೋಕವು

ಸುಭಗಗುಣಮಾಶ್ರಿತಾನಾಂ ಶುಭದಂ ಕಮನೀಯಭಾನುಧಾಮಾನಂ |
ವರದಗುರುಮಾಶ್ರಯೇಹಂ ವರಣೀಯಗುಣಂ ಯತೀನ್ದ್ರಪದನಮ್ರಂ ||

ಶ್ರೀಮಚ್ಛಠಾರಿಯತಿಶೇಖರದಿವ್ಯಸೂಕ್ತಿ
ಕರ್ಪೂರಕಾಂಚನ ಕರಂಡಕಮಾನಸಂತಂ |
ಹಾರೀತವಂಶಸರನಾಯಕರತ್ನಭೂತಂ
ರಾಮಾನುಜಾರ್ಯತನಯಂ ವರದಾರ್ಯಮೀಡೆ ಎಂದು ಎರಡು ಶ್ಲೋಕವು

ಈ ಆಸೂರಿ ಪ್ಪೆರುಮಾಳೆನ್ನುವ ವರದಾಚಾರ್ಯರಿಗೆ ಮಾಶಿಲಾವಪ್ಪನೆನ್ನುವ ಸುಕುಮಾರಾಚಾಯರು ಕುಮಾರರು. ಇವರು ಶ್ರೀರಾಮಾನುಜರ ಕೃಪೆಗೆ ಪಾತ್ರರಾಗಿ ಆವರ ನಿಯಮನದಂತೆ ಪೆಮ್ಮಾರ್ (ಆಸೂರಿಪ್ಪೆರುಮಾಳ್) ತಿರುವಡಿಗಳನ್ನು ಆಶ್ರಯಿಸಿದರು.

ಸೂನುರ್ವರಪ್ರದಗುರೋಸ್ಸುಕುಮಾರನಾಮಾ
ಸೌಂದರ್ಯಪೂರ್ಣಸುಕುಮಾರತನುರ್ಯತೀಂದೋಃ |
ಸಂಪ್ರಾಪ್ತಸನ್ಮತಿಯಶಾ ಗುರುಸಿಂಹಪೀಠ
ಸಾಮ್ರಾಜ್ಯಮಾಪ ನರಸಿಂಹಪದಾರ್ಚನಂ ಚ |

ಈ ಮಾಶಿಲಾವಪ್ಪರ್ ರಾಮಾನುಜಶರ್ಮಾ. ಇವರ ಧ್ಯಾನಶ್ಲೋಕವು—

ಹಾರೀತವರದಾಚಾರ್ಯಸೂನುಂ ಸದ್ಗುಣವಾರಿಧಿಂ |
ರಾಮಾನುಜಕೃಪಾಪಾತ್ರಂ ಸುಕುಮಾರಗುರುಂ ಭಜೇ ||
ವರದಕುಮಾರಮುದಾರಂ ವಂದೇ ಸುಕುಮಾರದೇಶಿಕಂ ಭಕ್ತ್ಯಾ |
ವರಗುಣಮಣಿಗಣಸಿಂಧುಂ ವಾರಿತಮದನಾದಿಸರ್ವದೋಷಗಣಂ ||

ಇವರಕುಮಾರರು ತ್ರಿವಿಕ್ರಮಪ್ಪರ್. ಇವರು ಶ್ರೀರಾಮಾನುಜರ ಕೃಪೆಗೆ ಪಾತ್ರರಾಗಿ ಕಾಂಚೀ, ಶ್ರೀಪೆರಂಬೂದೂರು, ತಿರುವೆವ್ವಳೂರು, ತಿರುನಿನ್ರವೂರು

ತಿರುವೊಳಿಶ್ಶೈ, ಪೂವಿರಂದನುಲ್ಲಿಕ್ಕೈ, ತಿರುವಲ್ಲಿಕ್ಕೇಣಿ, ತಿರುಣೀರ್‌ಮಲೈ. ಈ ಎಂಟು ಸ್ಥಳಗಳಲ್ಲೂ ಭಗವತ್ಸನ್ನಿಧಿಯಲ್ಲಿ ಪ್ರಥಮತೀರ್ಥಾದಿ ಮರ್ಯಾದೆಗಳನ್ನು ಅನುಭವಿಸಿ ಕೊಂಡು ಬಂದರು. ಇದಕ್ಕೆ ಪ್ರಮಾಣ ಶ್ಲೋಕವು—

ತಸ್ಯ ತ್ರಿವಿಕ್ರಮಗುರೋಸ್ತನಯೋಯತೀಂದ್ರ
ದತ್ತಾವನೋಷ್ಟಪುರಪಾಲನಜಾಗರೂಕಃ ।
ವಿದ್ಯಾನವದ್ವಿತಯಯುತೋ ವಿಜಿತಾಷ್ಟದಿಕ್ಕಃ
ಸತ್ಕೀರ್ತಿರಾಸ ನರಸಿಂಹಪದಾಬ್ಜಭಕ್ತಃ । ಎಂದುಪ್ರಸಿದ್ಧವು

ಸುಕುಮಾರಗುರುಶ್ರೇಷ್ಠಸುತಂ ಹಾರೀತವಂಶಜಂ
ತ್ರಿವಿಕ್ರಮಗುರುಂ ವಂದೇ ತ್ರಿಲೋಕಖ್ಯಾತವೈಭವಂ ॥
ಹಾರೀತವಂಶ ಸುಕುಮಾರಗುರೋಸ್ತನೂಜಂ
ವಾತ್ಸಲ್ಯಶಾಂತಿಕರುಣಾದಿವಿಭೂಷಣಾಢ್ಯಂ

ರಾಮಾನುಜಾರ್ಯವಚನಾಮೃತ ವಾರ್ಧಿಚಂದ್ರಂ
ಶ್ರೀಮತ್ತ್ರಿವಿಕ್ರಮಗುರುಂ ಶಿರಸಾ ನಮಾಮಿ ॥ ಎಂದು ಎರಡುಶ್ಲೋಕವು
ತ್ರಿವಿಕ್ರಮಾಚಾರ್ಯರ ಕುಮಾರರು ಪ್ರಣತಾರ್ಥಿಹರಾಚಾರ್ಯರು. ಇತ್ಯಾದಿ

ಈ ರೀತಿಯಲ್ಲಿ ಶ್ರೀರಾಮಾನುಜಾಚಾರ್ಯರ ಪುತ್ರ, ಪೌತ್ರ, ಪ್ರಪೌತ್ರ ವಂಶ ಪಾರಂಪರ್ಯವಾಗಿ ಅವತರಿಸಿಬಂದ ತಿರುಮಲಾಚಾರ್ಯರೆಂಬುವರು "ಕುಟೆಂಕೃತ್ವಾ ತಸ್ಮಿನ್ಯದುಗಿರಿತಟೇ ನಿತ್ಯವಸತಿಃ" ಎಂಬ ರಾಮಾನುಜರ ನಿಯಮನದಂತೆ ತಿರು ನಾರಾಯಣಪುರಕ್ಕೆ ಬಂದು ದೇವರ ಕೈಂಕರ್ಯಗಳನ್ನು ನಡೆಸಿ ರಾಮಾನುಜ ಅಗ್ರಹಾರವೆಂಬ ಸ್ಥಳದಲ್ಲಿ ವಿಜಯನಗರ, ಮೈಸೂರು ರಾಜರುಗಳ ಅಭಿಮಾನದಿಂದ ಕಾಲಕ್ಷೇಪಾದಿಗಳನ್ನು ನಡೆಸಿಬಂದರು. ಈ ತಿರುಮಲಾಚಾರ್ಯರಿಗೆ ಇಬ್ಬರು ಕುಮಾ ರರು 1. ಎಂಬೆರುಮಾನಾರ್ರು 2.ವರದಾಚಾರ್ಯರು. ಇವರಲ್ಲಿ ಎಂಬೆರುಮಾ ನಾರ್ರ ಸಂತತಿಯವರಲ್ಲಿ ಪ್ರಥಮಭಾಗದಲ್ಲಿ ಬಂದವರು ಒಂಬಾ ಶಿಂಗರಯ್ಯಂಗಾ ರ್ಯರೇ ಮೊದಲಾದವರು. 2 ನೇ ಭಾಗದಲ್ಲಿ ಬಂದವರು ಮದರಾಸ್ ಯಂ. ಓ. ಪಾರ್ಥಸಾರಥಿಅಯ್ಯಂಗಾರ್ಯರೂ ಅವರ ಭ್ರಾತೃವರ್ಗದವರೂ ಸಹ

ಈ ತಿರುಮಲಾಚಾರ್ಯರ 2 ನೇ ಮಕ್ಕಳಾದ ವರದಾಚಾರ್ಯರಿಗೆ ಇಬ್ಬರು ಕುಮಾರರು. 1. ಎಂಬೆರುಮಾನಾರು 2. ಶೆಲ್ವಪ್ಪಿಳ್ಳೈರಾಯರು. ಇವರುಗಳಲ್ಲಿ ಎಂಬೆರುಮಾನಾರ್ರಿಗೆ ಸಂತತಿಯಿಲ್ಲ. ಶಲ್ವಪ್ಪಿಳ್ಳೈರಾಯರಿಗೆ ಇಬ್ಬರು ಕುಮಾರರು 1. ಶ್ರೀನಿವಾಸಯಂಗಾರ್ಯರೂ 2. ಶ್ರೀರಂಗರಾಜರು. ಇವರಲ್ಲಿ ಶ್ರೀನಿವಾಸ

ಯಂಗಾರ್ರವಂಶದಲ್ಲಿ ಬಂದವರು ಈಗ ಮೈಸೂರಲ್ಲಿರುವ ಆಸೂರಿ ತಿರುನಾರಣಯ್ಯಂಗಾರ್ ಚಿಕ್ಕತಂಬಿಯರು. ಶ್ರೀರಂಗರಾಜರ ವಂಶದಲ್ಲಿ ಬಂದವರು ೧ ನೇ ಭಾಗದವರು ಅಗ್ರಹಾರಂ ವೆಂಕಟಾಚಾರ್ಯರೂ, ಶಿಂಗಲಾಚಾರ್ಯರೂ ಪೂಚಾಂಡಿ ವೆಂಕಟಾಚಾರ್ಯರು ಈ ಪೂಚಾಂಡಿ ವೆಂಕಟಾಚಾರ್ಯರಿಗೆ ಪುರುಷಸಂತತಿಯಿಲ್ಲ ೨ ನೇ ಭಾಗದವರು ವಿದ್ವಾನ್ ಆಸೂರಿ ಅನಂದಾಳ್ವಾರ್ರು ಅವರ ಭ್ರಾತೃವರ್ಗದವರೂ, 3 ನೇ ವರ್ಗದವರು ಮೇಲುಕೋಟೆಯಲ್ಲಿರುವ ಪೆರಿಯಣ್ಣಾಜಿ ಕೂಟದವರು.

ಈ ರೀತಿಯಲ್ಲಿ ಶ್ರೀ ರಾಮಾನುಜರ ವಂಶದಲ್ಲಿ ಅವತರಿಸಿ ಬಂದ ಕೂಟಸ್ಥರು ತಿರುಮಲಾಚಾರ್ಯ ವಂಶಪರಂಪರಾಗತವಾಗಿ ಬಂದ ಆಸೂರಿ ಅನಂದಾಳ್ವಾರ್ರೆಂಬುವರಿಗೆ ಆಸೂರಿ ನರಸಿಂಹಾಚಾರ್ಯರೆಂಬ ಸ್ವೀಕೃತ ಪುತ್ರರು. ಇವರು ಅಧಿಕ ಶಾಂತರಾಗಿ ಗೋ, ಧನ, ಧಾನ್ಯ ಸಮೃದ್ಧಿಯುಳ್ಳವರು. ಇವರಿಗೆ ಮೂರುಜನಕುಮಾರರು. ಇಬ್ಬರು ಕುಮಾರ್ತಿಯರು 1. ವಿದ್ವಾನ್ ಆಸೂರಿ ಅನಂದಾಳ್ವಾರ್ರು, ಕೃಷ್ಣಯ್ಯಂಗಾರ್ಯರು, ತಿರುನಾರಣಯ್ಯಂಗಾರ್ಯರು. ಇವರುಗಳಲ್ಲಿ ೨ ನೆಯವರು ವೈದಿಕದಲ್ಲೂ ೩ ನೆ ಯವರು ಲೌಕಿಕದಲ್ಲೂ ಸುಪ್ರಸಿದ್ಧರಾಗಿದ್ದು ಕಾಲಾನುಸಾರವಾಗಿ ಪರಮಪದವನ್ನು ಹೊಂದಿದರು. ೨ ನೆ ಯವರು ಕೃಷ್ಣಯ್ಯಂಗಾರ್ಯರು ಕೆಲವು ಸಂಪ್ರದಾಯ ಗ್ರಂಥಗಳನ್ನು ಬರೆದಿರುವರು.

ಜ್ಯೇಷ್ಠರಾದ ಅನಂದಾಳ್ವಾರ್ರು ಶಕವರ್ಷ ೧೭೮೧ ನೇ ಕಾಲಯುಕ್ತಿ ಸಂ॥ ಕುಂಭ ಮಾಸ ಕೃಷ್ಣ ಅನೂರಾಧಾ ನಕ್ಷತ್ರದಲ್ಲಿ (24—2—1859) "ಮಮ ತೇಜೋಂಶಸಂಭವಮ್" ಎನ್ನುವಂತೆ ಅವತರಿಸಿದರು. ಇವರಿಗೆ ಅನಂದಾಳ್ವಾರರೆಂದು ನಾಮಕರಣಮಾಡಿ ಅನಂತರ ಅನ್ನಪ್ರಾಶನ ಚೌಳಾಕ್ಷರಾರಂಭೋಪನಯನೋಪಾಕರ್ಮಾದಿಗಳನ್ನು ಯಥಾವತ್ತಾಗಿ ನಡೆಸಿದರು. ಇವರ ಬ್ರಹ್ಮೋಪದೇಶದಲ್ಲಿ ಬ್ರಾಹ್ಮಣರಿಗೆ ದಕ್ಷಿಣೆಗೆ ವರಹ ನಾಣ್ಯವನ್ನೇ ಉಪಯೋಗಿಸಿದರು. ಅನಂತರ ಇವರಿಗೆ ವಿವಾಹಮಾಡಿದರು.

ಶ್ರೀ ಉ. ಆನಂದಾಳ್ವಾರ್ರು ತಮ್ಮ ಬಾಲ್ಯವನ್ನೆಲ್ಲಾ ವ್ಯರ್ಥವಾಗಿ ಕಾಲ ಕಳೆದರು. ಬುದ್ಧಿ ಅಪರಿಮಿತವಾದದು. ಹಿರಿಯ ವಂಶದಲ್ಲಿ ಹುಟ್ಟಿದ ಇವರಿಗೆ ಸರಿಯಾದ ವಿದ್ಯೆಯನ್ನು ಕಲಿಸಬೇಕೆಂದು ಜಟಾವಲ್ಲಭ ತಿರುಮಲಯ್ಯಂಗಾರೆಂಬುವರು ಮಂಡಯದ ಅಗ್ರಹಾರದ ಪಾಠಶಾಲೆಗೆ ಸೇರಿಸಿದರು. ಆದರೂ ಅನಂದಾಳ್ವಾರ್ರು ವಿದ್ಯೆಯನ್ನು ಓದದೆ ಹದಿನಾರು ವರ್ಷಗಳನ್ನು ಕಳೆದರು.

ಒಂದು ದಿನ ಪರೀಕ್ಷೆಯಲ್ಲಿ ಸಹಪಾಠಿಗಳಿಗೆಲ್ಲಾ ಬಹುಮಾನವು ಬಂದು ಇವರಿಗೆ ಬರದಿರಲು ಇವರ ಮನಸ್ಸು ಬಹಳವಾಗಿ ನೊಂದು ವಿದ್ಯೆಯನ್ನು ಚೆನ್ನಾಗಿ

ತಿರುಮೊಳಿಶೈ, ಪೂವಿರಂದಮಲ್ಲಿಕ್ಕೈ, ತಿರುವಲ್ಲಿಕ್ಕೇಣಿ, ತಿರುಣೀರ್‌ಮಲ್ಯೈ. ಈ ಎಂಟು ಸ್ಥಳಗಳಲ್ಲೂ ಭಗವತ್ಸನ್ನಿಧಿಯಲ್ಲಿ ಪ್ರಥಮತೀರ್ಥಾದಿ ಮರ್ಯಾದೆಗಳನ್ನು ಅನುಭವಿಸಿಕೊಂಡು ಬಂದರು. ಇದಕ್ಕೆ ಪ್ರಮಾಣ ಶ್ಲೋಕವು—

ತಸ್ಯ ತ್ರಿವಿಕ್ರಮಗುರೋಸ್ತನಯೋಯತೀಂದ್ರ
ದತ್ತಾವನೋಽಷ್ಟಪುರಪಾಲನಜಾಗರೂಕಃ ।
ವಿದ್ಯಾನವದ್ವಿತಯತೋ ವಿಜಿತಾಷ್ಟದಿಕ್ಕಃ
ಸತ್ಕೀರ್ತಿರಾಸ ನರಸಿಂಹಪದಾಬ್ಜಭಕ್ತಃ । ಎಂದುಪ್ರಸಿದ್ಧವು

ಸುಕುಮಾರಗುರುಶ್ರೇಷ್ಠಸುತಂ ಹಾರೀತವಂಶಜಂ
ತ್ರಿವಿಕ್ರಮಗುರುಂ ವಂದೇ ತ್ರಿಲೋಕಖ್ಯಾತವೈಭವಂ ॥
ಹಾರೀತವಂಶ ಸುಕುಮಾರಗುರೋಸ್ತನೂಜಂ
ವಾತ್ಸಲ್ಯಶಾಂತಿಕರುಣಾದಿವಿಭೂಷಣಾಢ್ಯಂ

ರಾಮಾನುಜಾರ್ಯವಚನಾಮೃತ ವಾರ್ಧಿಚಂದ್ರಂ
ಶ್ರೀಮತ್ತ್ರಿವಿಕ್ರಮಗುರುಂ ಶಿರಸಾ ನಮಾಮಿ ॥ ಎಂದು ಎರಡುಶ್ಲೋಕವು
ತ್ರಿವಿಕ್ರಮಾಚಾರ್ಯರ ಕುಮಾರರು ಪ್ರಣತಾರ್ಥಿಹರಾಚಾರ್ಯರು. ಇತ್ಯಾದಿ

ಈ ರೀತಿಯಲ್ಲಿ ಶ್ರೀರಾಮಾನುಜಾಚಾರ್ಯರ ಪುತ್ರ, ಪೌತ್ರ, ಪ್ರಪೌತ್ರ ವಂಶ ಪಾರಂಪರ್ಯವಾಗಿ ಅವತರಿಸಿಬಂದ ತಿರುಮಲಾಚಾರ್ಯರೆಂಬುವರು "ಕುಟೀಂಕೃತ್ವಾ ತಸ್ಮಿನ್ಯದುಗಿರಿತಟೇ ನಿತ್ಯವಸತಿಃ" ಎಂಬ ರಾಮಾನುಜರ ನಿಯಮನದಂತೆ ತಿರುನಾರಾಯಣಪುರಕ್ಕೆ ಬಂದು ದೇವರ ಕೈಂಕರ್ಯಗಳನ್ನು ನಡೆಸಿ ರಾಮಾನುಜ ಅಗ್ರಹಾರವೆಂಬ ಸ್ಥಳದಲ್ಲಿ ವಿಜಯನಗರ, ಮೈಸೂರು ರಾಜರುಗಳ ಅಭಿಮಾನದಿಂದ ಕಾಲಕ್ಷೇಪಾದಿಗಳನ್ನು ನಡೆಸಿಬಂದರು. ಈ ತಿರುಮಲಾಚಾರ್ಯರಿಗೆ ಇಬ್ಬರು ಕುಮಾರರು 1· ಎಂಬೆರುಮಾನಾರು 2.ವರದಾಚಾರ್ಯರು. ಇವರಲ್ಲಿ ಎಂಬೆರುಮಾನಾರ್ರ ಸಂತತಿಯವರಲ್ಲಿ ಪ್ರಥಮಭಾಗದಲ್ಲಿ ಬಂದವರು ಒಂಬಾ ಶಿಂಗರಯ್ಯಂಗಾರ್ಯರೇ ಮೊದಲಾದವರು. 2 ನೇ ಭಾಗದಲ್ಲಿ ಬಂದವರು ಮದರಾಸ್ ಯಂ. ಓ. ಪಾರ್ಥಸಾರಥಿಅಯ್ಯಂಗಾರ್ಯರೂ ಅವರ ಭ್ರಾತೃವರ್ಗದವರೂ ಸಹ

ಈ ತಿರುಮಲಾಚಾರ್ಯರ 2 ನೇ ಮಕ್ಕಳಾದ ವರದಾಚಾರ್ಯರಿಗೆ ಇಬ್ಬರು ಕುಮಾರರು. 1. ಎಂಬೆರುಮಾನಾರು 2. ಶೆಲ್ವಪ್ಪಿಳ್ಳೈರಾಯರು. ಇವರುಗಳಲ್ಲಿ ಎಂಬೆರುಮಾನಾರ್ರಿಗೆ ಸಂತತಿಯಿಲ್ಲ. ಶಲ್ವಪ್ಪಿಳ್ಳೈರಾಯರಿಗೆ ಇಬ್ಬರು ಕುಮಾರರು 1. ಶ್ರೀನಿವಾಸಯ್ಯಂಗಾರ್ಯರೂ 2· ಶ್ರೀರಂಗರಾಜರು. ಇವರಲ್ಲಿ ಶ್ರೀನಿವಾಸ

ಯಂಗಾರ್ರವಂಶದಲ್ಲಿ ಬಂದವರು ಈಗ ಮೈಸೂರಲ್ಲಿರುವ ಆಸೂರಿ ತಿರುನಾರಣಯ್ಯಂಗಾರ್ ಚೊಕ್ಕತಂಬಿಯರು. ಶ್ರೀರಂಗರಾಜರ ವಂಶದಲ್ಲಿ ಬಂದವರು ೧ ನೇ ಭಾಗದವರು ಅಗ್ರಹಾರಂ ವೆಂಕಟಾಚಾರ್ಯರೂ, ಶಿಂಗಲಾಚಾರ್ಯರೂ ಪೂಚಾಂಡಿ ವೆಂಕಟಾಚಾರ್ಯರು ಈ ಪೂಚಾಂಡಿ ವೆಂಕಟಾಚಾರ್ಯರಿಗೆ ಪುರುಷಸಂತತಿಯಿಲ್ಲ ೨ ನೇ ಭಾಗದವರು ವಿದ್ವಾನ್ ಆಸೂರಿ ಅನಂದಾಳ್ವಾರ್ರು ಅವರ ಭ್ರಾತೃವರ್ಗದವರೂ, 3 ನೇ ವರ್ಗದವರು ಮೇಲುಕೋಟೆಯಲ್ಲಿರುವ ಪೆರಿಯಣ್ಣಾಜಿ ಕೂಟದವರು.

ಈ ರೀತಿಯಲ್ಲಿ ಶ್ರೀ ರಾಮಾನುಜರ ವಂಶದಲ್ಲಿ ಅವತರಿಸಿ ಬಂದ ಕೂಟಸ್ಥರು ತಿರುಮಲಾಚಾರ್ಯ ವಂಶಪರಂಪರಾಗತವಾಗಿ ಬಂದ ಆಸೂರಿ ಅನಂದಾಳ್ವಾರ್ರೆಂಬುವರಿಗೆ ಆಸೂರಿ ನರಸಿಂಹಾಚಾರ್ಯರೆಂಬ ಸ್ವೀಕೃತ ಪುತ್ರರು. ಇವರು ಅಧಿಕ ಶಾಂತರಾಗಿ ಗೋ, ಧನ, ಧಾನ್ಯ ಸಮೃದ್ಧಿಯುಳ್ಳವರು. ಇವರಿಗೆ ಮೂರುಜನಕುಮಾರರು. ಇಬ್ಬರು ಕುಮಾರ್ತಿಯರು 1. ವಿದ್ವಾನ್ ಆಸೂರಿ ಅನಂದಾಳ್ವಾರ್ರು, ಕೃಷ್ಣಯ್ಯಂಗಾರ್ಯರು, ತಿರುನಾರಣಯ್ಯಂಗಾರ್ಯರು. ಇವರುಗಳಲ್ಲಿ ೨ ನೆಯವರು ವೈದಿಕದಲ್ಲೂ ೩ ನೆ ಯವರು ಲೌಕಿಕದಲ್ಲೂ ಸುಪ್ರಸಿದ್ಧರಾಗಿದ್ದು ಕಾಲಾನುಸಾರವಾಗಿ ಪರಮಪದವನ್ನು ಹೊಂದಿದರು. ೨ ನೆ ಯವರು ಕೃಷ್ಣಯ್ಯಂಗಾರ್ಯರು ಕೆಲವು ಸಂಪ್ರದಾಯ ಗ್ರಂಥಗಳನ್ನು ಬರೆದಿರುವರು.

ಜ್ಯೇಷ್ಠರಾದ ಅನಂದಾಳ್ವಾರ್ರು ಶಕವರ್ಷ ೧೭೮೧ ನೇ ಕಾಲಯುಕ್ತಿ ಸಂ॥ ಕುಂಭ ಮಾಸ ಕೃಷ್ಣ ಅನೂರಾಧಾ ನಕ್ಷತ್ರದಲ್ಲಿ (24—2—1859) "ಮಮ ತೇಜೋಂಶಸಂಭವಮ್" ಎನ್ನುವಂತೆ ಅವತರಿಸಿದರು. ಇವರಿಗೆ ಅನಂದಾಳ್ವಾರರೆಂದು ನಾಮಕರಣಮಾಡಿ ಅನಂತರ ಅನ್ನಪ್ರಾಶನ ಚೌಳಾಕ್ಷರಾರಂಭೋಪನಯನೋಪಾಕರ್ಮಾದಿಗಳನ್ನು ಯಥಾವತ್ತಾಗಿ ನಡೆಸಿದರು. ಇವರ ಬ್ರಹ್ಮೋಪದೇಶದಲ್ಲಿ ಬ್ರಾಹ್ಮಣರಿಗೆ ದಕ್ಷಿಣೆಗೆ ವರಹ ನಾಣ್ಯವನ್ನೇ ಉಪಯೋಗಿಸಿದರು. ಅನಂತರ ಇವರಿಗೆ ವಿವಾಹಮಾಡಿದರು.

ಶ್ರೀ ಉ. ಅನಂದಾಳ್ವಾರ್ರು ತಮ್ಮ ಬಾಲ್ಯವನ್ನೆಲ್ಲಾ ವ್ಯರ್ಥವಾಗಿ ಕಾಲ ಕಳೆದರು. ಬುದ್ಧಿ ಅಪರಿಮಿತವಾದದು. ಹಿರಿಯ ವಂಶದಲ್ಲಿ ಹುಟ್ಟಿದ ಇವರಿಗೆ ಸರಿಯಾದ ವಿದ್ಯೆಯನ್ನು ಕಲಿಸಬೇಕೆಂದು ಜಟಾವಲ್ಲಭ ತಿರುಮಲಯ್ಯಂಗಾರೆಂಬುವರು ಮಂಡಯದ ಅಗ್ರಹಾರದ ಪಾಠಶಾಲೆಗೆ ಸೇರಿಸಿದರು. ಆದರೂ ಅನಂದಾಳ್ವಾರ್ರು ವಿದ್ಯೆಯನ್ನು ಓದದೆ ಹದಿನಾರು ವರ್ಷಗಳನ್ನು ಕಳೆದರು.

ಒಂದು ದಿನ ಪರೀಕ್ಷೆಯಲ್ಲಿ ಸಹಪಾಠಿಗಳಿಗೆಲ್ಲಾ ಬಹುಮಾನವು ಬಂದು ಇವರಿಗೆ ಬರದಿರಲು ಇವರ ಮನಸ್ಸು ಬಹಳವಾಗಿ ನೊಂದು ವಿದ್ಯೆಯನ್ನು ಚೆನ್ನಾಗಿ

ಕಲಿಯಬೇಕೆಂದು ಸಂಕಲ್ಪಿಸಿದರು. ಭಗವದನುಗ್ರಹದಿಂದಲೂ ಉಪಾಧ್ಯಾಯರುಗಳ ಅದ್ಭುತಶಕ್ತಿ ವಿಶೇಷದಿಂದಲೂ ಇವರ ಸ್ಥಿರಪ್ರತಿಜ್ಞೆಯಿಂದಲೂ ಕಾವ್ಯ ನಾಟಕ ವ್ಯಾಕರಣ ವೇದಾಂತ ಶಾಸ್ತ್ರಗಳನ್ನು ಚೆನ್ನಾಗಿ ಅಧಿಕರಿಸಿ ಇತರ ವಿದ್ಯಾರ್ಥಿಗಳಿಗೆಲ್ಲಾ ಪ್ರಥಮರಾಗಿ ಬಂದರು. ಪ್ರೌಢಭಾಗವನ್ನು ವಿದ್ವಾನ್ ಜಗ್ಗು ಶಿಂಗರಯ್ಯಂಗಾರ್ಯಸ್ವಾಮಿಗಳವರಲ್ಲಿ ಓದಿ ಉತ್ತೀರ್ಣರಾದರು. ಅನಂತರ ದಕ್ಷಿಣದೇಶ ಯಾತ್ರೆ ಹೊರಟು ಅನಂತಶಯನ ಮಹಾರಾಜರನ್ನು ಆಶೀರ್ವದಿಸಿ ಅನಂತಶಯನ ದೇವರನ್ನು ದರ್ಶನಮಾಡಿ ಅಲ್ಲಿಂದ ಸೇತುಯಾತ್ರೆ ಹೋಗಬೇಕೆಂದಿರುವಾಗ ದೈವವಾಣಿಯಿಂದ ಇವರ ತಂದೆಯವರು ಪರಮಪದಿಸಿದುದನ್ನು ( ಕ್ರಿ. ಶ. 1883) ತಿಳಿದು ಸ್ವಗ್ರಾಮಕ್ಕೆ ಹಿಂತಿರುಗಿದರು.

ಆನಂದಾಳ್ವಾರ್ರು ತಮ್ಮ ವಿದ್ಯಾಭ್ಯಾಸವನ್ನು ಮಂಡಯದ ಅಗ್ರಹಾರದಲ್ಲೂ ಅನಂತರ ತಿರುನಾರಾಯಣಪುರಕ್ಕೆ ಬಂದು ಅಲ್ಲಿ ಪ್ರಸಿದ್ಧರಾದ ಯತಿರಾಜಮಠಾಧಿಪತಿಗಳಾಗಿದ್ದ ನಾಟಂಪಳ್ಳಿ ಅಳಶಿಂಗ್ರಾಚಾರ್ಯಸ್ವಾಮಿಗಳಲ್ಲೂ ಅನಂತರ ಪಂಡಿತರತ್ನಂ ಕುಪ್ಪಣ್ಣಯ್ಯಂಗಾರ್ಯಸ್ವಾಮಿಗಳವರ ಸನ್ನಿಧಿಯಲ್ಲೂ ವೇದಾಂತ ಶಾಸ್ತ್ರಗಳನ್ನು ಅಧಿಕರಿಸಿದರು. ಇವರು ಅತಿಶಯ ಮೇಧಾಶಕ್ತಿಯುಳ್ಳವರಾದ್ದರಿಂದ ಮೈಸೂರಿನ ಸರಸ್ವತೀ ಪ್ರಾಸಾದಿಕ ಮಹಾಪಾಠಶಾಲೆಯಲ್ಲಿ ವಿದ್ವತ್ಪರೀಕ್ಷೆಯನ್ನು ಕೊಟ್ಟು ಪರೀಕ್ಷೆಗೆ ಕುಳಿತ ೩೨ ವಿದ್ಯಾರ್ಥಿಗಳಲ್ಲಿ ಪ್ರಥಮರಾಗಿ ಉತ್ತೀರ್ಣರಾದರು.

ಅನಂತರ ಈ ಭರತಖಂಡವನ್ನು ಸಂಚರಿಸಿ ಹಿಮಾಲಯದಲ್ಲಿ ಕೆಲವು ಕಾಲವಿದ್ದು ಬದರೀನಾರಾಯಣರನ್ನು ಸೇವಿಸಿ ಉತ್ತರದೇಶದ ಬರೋಡ, ಬಿಕಾನಿರ್; ಟಿಹರಿ ಘರ್ವಾಲ್ ರೀವಾ ಮುಂತಾದ ಸ್ಥಳಗಳಲ್ಲಿಯೂ ದಕ್ಷಿಣದೇಶದ ಅನಂತಶಯನ, ತಂಜಾವೂರು ರಾಜಸ್ಥಾನಗಳಲ್ಲಿಯೂ ತಮ್ಮ ವಿದ್ವತ್ಪ್ರಕಾಶನವನ್ನುಮಾಡಿ ಕೇರಳದೇಶದ ಕಾಲಡಿಕ್ಷೇತ್ರದಲ್ಲಿ ನಡೆದ ಶ್ರೀ ಶಂಕರಾಚಾರ್ಯ ಮೂರ್ತಿ ಪ್ರತಿಷ್ಠಾಮಹೋತ್ಸವದಲ್ಲಿ ಭಾಗಿಯಾಗಿ ಅಲ್ಲಿ ಸೇರಿದ ವಿದ್ವನ್ಮಂಡಲದಲ್ಲಿ ಇವರ ಕವಿತಾವೈದುಷ್ಯವು ಶ್ಲಾಘಿಸಲ್ಪಟ್ಟು ಶ್ರೀ ಶೃಂಗೇರಿ ನೃಸಿಂಹಭಾರತಿ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು.

ಶ್ರೀ .ಉ. ಅನಂದಾಳ್ವಾರು ಮೈಸೂರು ಸದ್ವಿದ್ಯಾ ಪಾಠಶಾಲೆಯಲ್ಲಿ ಕೆಲವು ಕಾಲ ಸಂಸ್ಕೃತ ಉಪಾಧ್ಯಾಯರಾಗಿದ್ದರು, ಆ ಕಾಲದಲ್ಲಿ ಸಂಸ್ಕೃತ, ಕರ್ಣಾಟ ಭಾಷೆಗಳಲ್ಲಿನ ಕಾವ್ಯ, ನಾಟಕ, ಶಾಸ್ತ್ರಗ್ರಂಥಗಳನ್ನು ಮುದ್ರಿಸಿ ಪ್ರಕಾಶಪಡಿಸಬೇಕೆಂದು ವಿದ್ವಾಂಸರಾದ ಪೆರೀಸ್ವಾಮಿ ತಿರುಮಲಾಚಾರ್ಯರ ಸಹಾಯದಿಂದ ಕಾವ್ಯಮಂಜರೀ ಇತ್ಯಾದಿ ೨೮ ಗ್ರಂಥಗಳನ್ನು ಸಂಪಾದಿಸಿದರು. ಆದರೆ ಇದಕ್ಕೆ

ಸೇರಿದ ಇತರ ಕಾರ್ಯನಿರ್ವಾಹಕರು ಸ್ವಲಾಭ ದ್ರವ್ಯಾಪೇಕ್ಷೆಯಿಂದ ಕೆಲವು ಅನ್ಯಾಯಗಳ ಮಾಡಿದ್ದನ್ನು ಕಂಡು ಅನಂದಾಳ್ವಾರು ಆ ವಿಷಯದಲ್ಲಿ ಉದಾಸೀನವನ್ನು ಅವಲಂಬಿಸಿದರು.

ಇವರ ನಿಸ್ವಾರ್ಥಪರತೆಯನ್ನೂ ವೈದುಷ್ಯವನ್ನೂ ಕಂಡು ಮೈಸೂರು ನಾಗರಿಕಸಭಾ ಅಧಿಕಾರಿಯೂ, ಮರಮಲ್ಲಪ್ಪ ಹೈಸ್ಕೂಲ್ ಅಧ್ಯಕ್ಷರೂ ಆದ ಯಂ. ವೆಂಕಟಕೃಷ್ಣಯ್ಯ ಎಂಬುವರು ಇವರನ್ನು ಕರೆದು ತಮ್ಮ ಸ್ಕೂಲಿನಲ್ಲಿ ಸಂಸ್ಕೃತಪಂಡಿತರನ್ನಾಗಿ ಏರ್ಪಡಿಸಿದರು. ಈ ಕಾಲದಲ್ಲಿ ಅನಂದಾಳ್ವಾರು ಕೆಲವು ವೃತ್ತಪತ್ರಿಕೆಗಳಿಗೆ ಸಹಾಯಸಂಪಾದಕರಾಗಿದ್ದು ಅದರಲ್ಲಿ ಅನೇಕ ಲೇಖನಗಳನ್ನು ಬರೆದುಬಂದರು. ಈ ಕಾಲದಲ್ಲಿಯೇ ಅಧಿಕಾರವರ್ಗದಲ್ಲಿ ಗರ್ವಿತರಾದವರುಗಳನ್ನು ಭಂಗಿಸಲು ಅದಕ್ಕನುಗುಣವಾಗಿ "ಸಮ್ರಾಜ್ಞೀಶತಕ" ಎಂಬುದಾಗಿ ನೂರು ಶ್ಲೋಕಗಳನ್ನು ಬರೆದುಬಂದರು. ಮೈಸೂರು ಸರಕಾರದ ಶಾಸನಇಲಾಖೆಯಲ್ಲಿ ಕೆಲವುಕಾಲ ಪಂಡಿತರಾಗಿದ್ದರು. ಉದ್ಯೋಗ ವಿಷಯದಲ್ಲಿ ಸಹಾಯ ಮಾಡಿದ ರಾ. ಅ. ನರಸಿಂಹಾಚಾರ್ಯರನ್ನು ಯಾವಾಗಲೂಸ್ಮರಿಸುತ್ತಿದ್ದರು.

ಈ ಕಾಲದಲ್ಲಿ ಉತ್ತರದೇಶದ ರೀವ ಮಹಾರಾಜರಾದ ವೆಂಕಟರಮಣಸಿಂಹರು ಅಖಿಲಭಾರತ ಚಾತುರ್ವರ್ಣ ಸಂಪ್ರದಾಯಸಭೆಯನ್ನು ಪ್ರಯಾಗಕ್ಷೇತ್ರದಲ್ಲಿ ಸೇರಿಸಲು ಅನಂದಾಳ್ವಾರು ಮಹಾರಾಜನಿಂದ ಆಹ್ವಾನಿತರಾಗಿ ಶ್ರೀಯತಿರಾಜಮಠ ಪ್ರತಿನಿಧಿಯಾಗಿಯೂ ಮೇಲಿನ ಸಭೆಗೆ ದಯಮಾಡಿಸಿ ಸಭೆಯಲ್ಲಿ ಮಹೋಪನ್ಯಾಸವನ್ನು ಮಾಡಿ ವಿದ್ವತ್ಸಭಿಕರಿಂದ ಶ್ಲಾಘಿಸಲ್ಪಟ್ಟರು.

ಪಂಡಿತ ಮದನಮೋಹನಮಾಲವೀಯಾ ಎಂಬುವರಿಗೂ ಇವರಿಗೂ ಸನಾತನ ಧರ್ಮ ವಿಷಯದಲ್ಲಿ ರಾಜಕೀಯವಾಗಿ ವಿಷಯಗಳು ವಾದನಡೆದು ಅನಂದಾಳ್ವಾರು ಜಯಿಸಿಬಂದರು. ಇದನ್ನುನೋಡಿ ಲೋಕಮಾನ್ಯ ಬಾಲಗಂಗಾಧರತಿಲಕರವರು ಸಂತೋಷವನ್ನುಹೊಂದಿ ಅನಂದಾಳ್ವಾರನ್ನು ಪೂನಾನಗರಕ್ಕೆ ತಮ್ಮಮನೆಗೆ ಕರೆದುಕೊಂಡು ಹೋಗಿ ಬಹುಮಾನಿಸಿ ಆದರಿಸಿದರು. ತಿಲಕರಜೊತೆಯಲ್ಲಿ ಸನಾತನಧರ್ಮದ ಮತ್ತು ರಾಜಕೀಯ ವಿಷಯಗಳನ್ನು ಚರ್ಚಿಸಿಬಂದರು.

ಅನಂತರ ದಕ್ಷಿಣದೇಶದ ಅನಂತಶಯನಕ್ಕೆ ದಯಮಾಡಿಸಿದಾಗ ಇವರಿಗೆ ಅನಂತಶಯನ ಮಹಾರಾಜರು ತುಲಾಭಾರ ಬಹುಮಾನವನ್ನು ಕೊಡಲು ಇವರು ದ್ರವ್ಯವನ್ನು ತೆಗೆದುಕೊಳ್ಳದೆ ಮಹಾರಾಜರನ್ನು ನೋಡಿ ತಿರುವಾಂಕೋಡು ರಾಜ್ಯಕ್ಕೆ ಸೇರಿದ "ತಿರುಕ್ಕಾಕ್ಕರೈ" ಎನ್ನುವ ದಿವ್ಯಸ್ಥಳವು ಖಿಲವಾಗಿರುವುದನ್ನು ತಿಳಿಸಿ ಅದನ್ನು ಉದ್ಧರಿಸಿದರೆ ತನಗೆ ವಿಶೇಷ ಸನ್ಮಾನವೆಂದು ತಿಳಿಸಲು ಮಹಾರಾಜರು

ಅದನ್ನು ಕೇಳಿ ತಲೆತಗ್ಗಿಸಿ ಆ ದಿವ್ಯದೇಶವು ತನ್ನ ರಾಜ್ಯದಲ್ಲಿದ್ದೂ ತನಗೆ ತಿಳಿಯ ದಿದ್ದುದಕ್ಕಾಗಿ ಪರಿತಪಿಸಿ ತಕ್ಷಣ ಐವತ್ತುಸಹಸ್ರರೂಪಾಯಿಗಳನ್ನು ಖರ್ಚುಮಾಡಿ ಅನಂದಾಳ್ವಾರು ಹೇಳಿದಂತೆ ತನ್ನ ರಾಜ್ಯದಲ್ಲಿದ್ದ ಎಲ್ಲಾ ದೇವಸ್ಥಾನಗಳ ಮರಾ ಮತ್ತೂ ತಿರುಕ್ಕಾಕ್ಕರೈ ದಿವ್ಯದೇಶ ಜೀರ್ಣೋದ್ಧಾರವಾಗುವಂತೆ ವೀದಿ, ದೇವಸ್ಥಾನ ಗೋಪುರ, ಪ್ರಾಕಾರ, ರಕ್ಷಣೆ ಪ್ರತಿಷ್ಠೆ ತಸದೀಕು ಜಲವಸತಿ ಇತ್ಯಾದಿಗಳನ್ನು ನಡೆಸಲು ಆಜ್ಞೆಮಾಡಿದನು. ಈ ದಿವ್ಯದೇಶದಲ್ಲಿ ವಾಮನಮೂರ್ತಿ ಪ್ರತಿಷ್ಠಿತ ವಾಗಿರುವುದು. ನಮ್ಮಾಳ್ವಾರ್ರವರು (ತಿ. ವಾ. ೯—೬—೧) ಹಾಡಿರುವರು.

ಅನಂದಾಳ್ವಾರ್ರು ಮಹಾವಿದ್ವಾಂಸರಾದ್ದರಿಂದ ಮೈಸೂರು, ಬರೋಡ, ಕಾಶ್ಮೀರ, ಈ ರಾಜಾಸ್ಥಾನಗಳಿಂದ ಮುದ್ರಿಸಿ ಪ್ರಕಾಶಪಡಿಸಿದ ಪ್ರಾಚೀನ ಶಾಸ್ತ್ರ ಗ್ರಂಥಗಳನ್ನು ಸಮರ್ಪಿಸಿ ಬಂದರು. ಅನಂದಾಳ್ವಾರ್ರು ಸಹ ತಮ್ಮಲ್ಲಿದ್ದ ಗ್ರಂಥ ಗಳನ್ನು ಆಯಾ ರಾಜಾಸ್ಥಾನಕ್ಕೆ ಕಳುಹಿಸಿಕೊಟ್ಟರು. ಮಹಾವಿದ್ವಾನ್ ಗಣಪತಿ ಶಾಸ್ತ್ರಿ, ಸಾಂಬವಶಿವಶಾಸ್ತ್ರಿಗಳು ಅನಂದಾಳ್ವಾರ್ರಲ್ಲಿ ಅತ್ಯಂತ ಭಕ್ತಿ ಪ್ರೀತಿಗಳನ್ನಿಟ್ಟಿದ್ದರು.

ಒಂದು ಕಾಲದಲ್ಲಿ ವಿದೇಶದಲ್ಲಿ ನಡೆದ ಮಹಾಘೋರಯುದ್ಧ ಕಾರಣವಿಂದ ದೇಶವೆಲ್ಲಾ ಆವರಿಸಿದ್ದ ವ್ಯಾಧಿಕಾಲದಲ್ಲಿ ಇವರ ವೈದ್ಯ ಸಹಾಯವು ಅತಿಶಯ ಲೋಕೋಪಕಾರವಾಗಿದ್ದಿತು. ವೈದ್ಯವಲ್ಲಭ ಶಿಂಗರಯ್ಯಂಗಾರ್ರ ಮೂಲಕ ಔಷಧಿ ಗಳನ್ನುಮಾಡಿ ಜನಸಾಮಾನ್ಯವನ್ನೆಲ್ಲಾ ಕಾಪಾಡಿಬಂದರು.

ಅನಂದಾಳ್ವಾರ್ರು ಮೈಸೂರಿನಲ್ಲೂ, ಮದರಾಸ್ ತಿರುವಲ್ಲಿಕ್ಕೇಣಿಯಲ್ಲೂ ಕೆಲವುಕಾಲ ಭಾರತ ಕಾಲಕ್ಷೇಪವನ್ನು ಹೇಳಿಬಂದರು. ವೇದೇತಿಹಾಸ ಧರ್ಮ ಶಾಸ್ತ್ರಗಳಿಗೆ ಲೋಪದೋಷಗಳು ಬಾರದಂತೆ ಅರ್ವಾಚೀನವಾದಗಳಿಗೆ ಶಾಸ್ತ್ರ ಗಳನ್ನು ವಿವರಿಸಿ ಸಮನ್ವಯಮಾಡಿ ಅವರನ್ನು ಸಮಾಧಾನದಿಂದ ಸಂತೋಷ ಪಡಿಸುವುದರಲ್ಲಿ ಅಸಮಾನರಾಗಿದ್ದರು.

ಅನಂದಾಳ್ವಾರ್ರು ಕೆಲವುಕಾಲ ಬೊಂಬಾಯಿ, ಪೂನಾ, ಕಲ್ಕತ್ತಾ ನಗರಗಳಲ್ಲಿ ಮುದ್ರಿಸಿ ಬರುತ್ತಿದ್ದ ಸಂಸ್ಕೃತಭಾರತಿ, ವಿಶ್ವಭಾರತಿ ಎನ್ನುವ ಪತ್ರಿಕೆಗಳಿಗೆ ವಿಷಯಗಳನ್ನು ಬರೆದು ಬರುತ್ತಿದ್ದರು. ಆ ಲೇಖನಗಳನ್ನೂ, ಶೈಲಿಗಳನ್ನೂ ನೋಡಿದರೆ ಇವರ ಪಾಂಡಿತ್ಯವೂ, ಭಾಷಾಶೈಲಿ ಶಕ್ತಿಯೂ ಅದ್ವಿತೀಯವಾದು ದೆಂದು ತಿಳಿದುಬರುವುದು. ಸಂಸ್ಕೃತ ಭಾರತಿಯಲ್ಲಿ ಪ್ರಕಾಶಪಡಿಸಿದ "ದೈವೀ ವಾಕ್ ಬ್ರಾಹ್ಮಣಶ್ಚ" ಎನ್ನುವ ವಿಷಯವೊಂದನ್ನು ಮನನಮಾಡಿದರೆ ಅನಂದಾ ಳ್ವಾರ್ರ ವಿದ್ವತ್ತೂ ಸನಾತನಧರ್ಮ ಪರಿಪಾಲನಾ ವಿಷಯದಲ್ಲಿ ಅವರ ಕುತೂ

ಹಲವೂ ಭವಿಷ್ಯದಲ್ಲಿ ಧರ್ಮವಿಷಯವಾಗಿ ನಡೆಯುವ ಕಾರ್ಯಕ್ರಮಗಳನ್ನೂ ಆಗಲೇ ತಿಳಿಯಪಡಿಸಿದ್ದರು. ಇವರು ಸನಾತನಧರ್ಮ ವಿಷಯದಲ್ಲಿ ಉಗ್ರಗಾಮಿಯಾಗಿದ್ದರು.

ಒಂದುಕಾಲದಲ್ಲಿ ಬೆಂಗಳೂರಿನ ಕೆಲವು ಶ್ರೀವೈಷ್ಣವರು ಅಪೇಕ್ಷಿಸಿದಂತೆ ಕಾರ್ತಿಕಮಾಸದಲ್ಲಿ ನಡೆಯಬೇಕಾದ "ಧಾತ್ರೀಹವನ" ಎನ್ನುವ ವನಭೋಜನವನ್ನು ಏರ್ಪಡಿಸಿ ನಂದನವನವನ್ನು ಕಲ್ಪಿಸಿ ಸಮುದಾಯವನ್ನು ಐಕಮತ್ಯದಿಂದಕೂಡಿಸಿ ಬಂದರು. ಈ ಧಾತ್ರೀಹವನವು ಅದ್ಯಾಪಿ ನಡೆದುಬರುತ್ತಿದೆ.

ಶ್ರೀಮಾನ್ ಯೋಗಿ ಪಾರ್ಥಸಾರಥಿ ಅಯ್ಯಂಗಾರ್ಯರ ಧರ್ಮಶಾಸನದಲ್ಲಿ ತಿಳಿಸಿದಂತೆ ಪಾಂಚರಾತ್ರ ಆಗಮವಾದ ಪಾದ್ಮಸಂಹಿತಾ ಗ್ರಂಥವನ್ನು ಶೋಧಿಸಿ ಪ್ರಕಾಶಪಡಿಸಿದರು. ಕೆಲವುಕಾಲ ಶ್ರೀವೈಷ್ಣವ ಗ್ರಂಥ ಮುದ್ರಾಪಕ ಸಭೆಯ ಅಧ್ಯಕ್ಷಪದವಿಯನ್ನೂ ವಹಿಸಿದ್ದರು.

ತಿರುನಾರಾಯಣಪುರದಲ್ಲಿ ಶ್ರೀ ಭಾಷ್ಯಕಾರರ ತಿರುನಕ್ಷತ್ರ ದಿವಸ ಈಗ ನಡೆದು ಬರುತ್ತಿರುವ ಉಭಯವೇದಾಂತ ಸಭೆಯನ್ನು ಮುದಿಗುಂಭಂ ತಿರುಮಲಾಚಾರ್ಯರೊಂದಿಗೆ ಕಲೆತು ಆರಂಭಿಸಿ ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ನಡೆಸಿಬಂದರು. ಆ ಸಭೆಯ ಪುರೋಭಿವೃದ್ಧಿಯನ್ನು ನಡೆಸಿ ಬರುವಂತೆ ಆರ್. ನರಸಿಂಹಾಚಾರ್ಯರ ವಶಕ್ಕೆ ಕೊಟ್ಟರು. ಸಭೆಗಾಗಿ ಮೊದಲುವರ್ಷ ಚಂದಾದ್ರವ್ಯವನ್ನು ಶೇಖರಿಸಲು ಶ್ರೀ ಭಾಷ್ಯಕಾರರು ಅವತರಿಸಿದ ಧೀರ್ಲಬ್ದಾರ್ಕ್ಷ ಎನ್ನುವ ಲೆಕ್ಕದಪ್ರಕಾರ ರ್ಕ್ಷ ರೂಪಾಯಿಗಳು ಶೇಖರಿಸಲ್ಪಟ್ಟವು. ಸಮುದಾಯದ ಮೇಲ್ಮೆಗಾಗಿ "ಅಭಿಜನವಿದ್ಯಾ ಸಂವರ್ಧಿನೀ ಸಮುದಾಯಮ್" ಎನ್ನುವ ಸಂಘವನ್ನು ಸ್ಥಾಪಿಸಿ (23—6—1889) ಸಮುದಾಯದಲ್ಲಿ ಒಳ್ಳೆಯದು ಕೆಟ್ಟದು ಎಂಬುದನ್ನು ವಿಂಗಡಿಸಿ ಸಂಭಾವನಾ ದ್ರವ್ಯವನ್ನು ತೆಗೆದು ಕೆಲವುಕಾಲ ನಡೆಸಿ ಬಂದರು.

ಒಂದುಕಾಲದಲ್ಲಿ ಸಮುದಾಯದಲ್ಲಿ ಬಡವರಿಗೂ, ಇತರರಿಗೂ ಸಹಾಯವಾಗ ಬೇಕೆಂದೂ, ಒಂದು ನಿರ್ದೇಶಸ್ಥಳದಲ್ಲಿರಬೇಕೆಂದೂ ವಿದ್ಯಾರ್ಥಿ ಗುರುಕುಲವಾಸಕ್ಕೆ ಬೆಂಗಳೂರಿನಲ್ಲಿ ಸ್ಥಳವನ್ನು ಸಂಪಾದಿಸಿ ಶ್ರೀಮಾನ್ ಆನಂದಾಂಪಿಳ್ಳೆ ಶ್ರೀನಿವಾಸಾಚಾರ್ಯರ ಸಹಾಯದಿಂದ ಸರಕಾರದಲ್ಲಿ ಅನುಮೋದನೆಪಡೆದು ಮೈಸೂರು ರಾಜಧಾನಿಯಲ್ಲಿ "ಯದುಗಿರಿಅಗ್ರಹಾರ" ಎಂಬ ಸ್ಥಳವನ್ನುಕಟ್ಟಲು ಚಂದಾದ್ರವ್ಯವನ್ನು ಶೇಖರಿಸಿ ಕಾರ್ಯಕ್ರಮಗಳನ್ನು ನಡೆಸಿಬಂದರು.

ಅನಂದಾಳ್ವಾರ್ರು ತಾವು ಸೇರಿದ ಮಂಡಯಂ ಸಮುದಾಯ ಮತ್ತು ರಾಮಾನುಜ ಅಗ್ರಹಾರದವರ ಮೇಲ್ಮೆಯಾದ ವಾಸಸ್ಥಳ ವಿದ್ಯಾಶಕ್ತಿ, ಅನುಷ್ಠಾನ ವಿಶೇಷ, ರಾಜಮಾನ್ಯತೆ ಮೊದಲಾದ ವಂಶಪರಂಪರೆಗಳನ್ನು ಶಕವರ್ಷ ಲೆಕ್ಕದಿಂದ ನಿರೂಪಿಸಿ ಅವರವರ ಪಿತೃಪಿತಾಮಹಾದಿ ಪೂರ್ವೀಕರ ಚರಿತ್ರ ಗೌರವ ವಿಶೇಷಗಳೆಲ್ಲಾ ಮತ್ತು ಸಮುದಾಯ ಜನಗಣಿತಾದಿ ಲೆಕ್ಕಗಳನ್ನೂ ಆರಂಭಿಸಿ ಸಮುದಾಯದ ಗೌರವ ಇತಿಹಾಸವನ್ನು ಬರೆದು ಬಂದರು.

ಒಂದುಕಾಲದಲ್ಲಿ ದಕ್ಷಿಣದೇಶಯಾತ್ರೆಮಾಡಿ ತಿರುವಯ್ಯಾರ್ ಸಭೆಗೆ ದಯ್ಯ ಮಾಡಿಸಿಬರುವಕಾಲದಲ್ಲಿ ಕಾರಣಾಂತರದಿಂದ ಏಳು ದಿನಗಳು ಅನ್ನಾಹಾರಗಳಿಲ್ಲದೆ ಇರವಾಗ ದೈವಸಂಕಲ್ಪಿತವಾದ ಶ್ರೀವೈಷ್ಣವರೊಬ್ಬರು ಇವರಿಗೆ ಭಗವತ್ಪ್ರಸಾದವನ್ನು ಕೊಟ್ಟು ತಕ್ಷಣವೇ ಅದೃಶ್ಯರಾದರು. ಈರೀತಿ ಅನಂದಾಳ್ವಾರ್ರವರಿಗೆ ಅನೇಕಾವೃತ್ತಿ ಭಗವತ್ಸಾಕ್ಷಾತ್ಕಾರಗಳು ಕಂಡುಬಂದಿವೆ. ಅನಂತರ ಶ್ರೀವಿಲ್ಲಿಪುತ್ತೂರು ಆಂಡಾಳ್‌ರನ್ನು ಸೇವಿಸಿಬಂದರು.

ತಿರುನಾರಾಯಣ ಪುರದಲ್ಲಿ ತಿರುನಾರಾಯಣ ಜೆಲ್ವಪಿಳ್ಳೆಯವರ ಮತ್ತು ಆಚಾರ್ಯಸ್ಥಾನದಲ್ಲೂ ಕೈಂಕರ್ಯಾದಿಗಳನ್ನು ನಡೆಸಿಬರುವ ಕಾಲದಲ್ಲಿ ಕೆಲವು ಭಿನ್ನ ಸಮುದಾಯದ ಪ್ರಚ್ಛನ್ನಬೌದ್ಧರು ಪ್ರಪನ್ನ ಜನ ಕೂಟಸಂಪ್ರದಾಯ ಶಾಸ್ತ್ರಗಳಿಗೂ ಆಚಾರ್ಯಸ್ಥಾನವಾದ ಯತಿರಾಜಜೀಯರ ಗೌರವಾದಿಗಳಿಗೂ ಕುಂದುಕವನ್ನುಂಟುಮಾಡಿದರು. ಇದನ್ನು ನೋಡಿ ದುಃಖಿಸಿ ಅತ್ಯಂತ ಶ್ರಮವನ್ನು ವಹಿಸಿ ತನುಮನ ಧನಗಳನ್ನು ಸಮರ್ಪಿಸಿ ದಿವ್ಯದೇಶಗಳಲ್ಲಿ ಆಚಾರ್ಯ ಸ್ಥಾನ ಗೌರವಾದಿಗಳನ್ನೂ ಸಂಪ್ರದಾಯಗಳನ್ನೂ ಕಾಪಾಡಿ ಬಂದರು.

ಈ ಮಂಡಯಂ ಸಮುದಾಯಕ್ಕೆ ಸೇರಿದ ಧರ್ಮಶಾಯಾಲಿದ ಪೆರಿಯನಾತ ಶಿಂಗಲಾಚಾರ್ಯರೆಂಬುವರು ಒಬ್ಬರನ್ನು ಸ್ವೀಕೃತ ಪುತ್ರರನ್ನಾಗಿಮಾಡಿಕೊಂಡರು. ಈ ಶಿಂಗಲಾಚಾರ್ಯರಿಗೆ ಲಕ್ಷಕ್ಕೆ ಮೇಲ್ಪಟ್ಟು ದ್ರವ್ಯವಿದ್ದುದನ್ನು ಅವರ ಜ್ಞಾತಿಯಾದವರೊಬ್ಬರು ಸ್ವಲಾಭಾಪೇಕ್ಷೆಯಿಂದ ಈ ಸ್ವೀಕಾರವು ಸರಿಯಾದುದಲ್ಲವೆಂದೂ ಗೊತ್ರಗಳೇ ಬೇರೆಯೆಂದೂ ವಾದಮಾಡಿ ಕಾಗದ ಪತ್ರ ಶಾಸನಗಳನ್ನು ಕೃತ್ರಿಮದಿಂದ ನಡೆಸಿ ಬರಲು ಅನಂದಾಳ್ವಾರ್ರು ಅದರ ವಿಷಯಗಳನ್ನೆಲ್ಲಾ ತಿಳಿದು ಆ ವಂಶದವರ ವಂಶ ಪರಂಪರೆಯನ್ನೆಲ್ಲಾ ಸಂಪಾದಿಸಿ ಗೋತ್ರಗಳನ್ನು ಸ್ಪಷ್ಟವಾಗಿ ವಿವರಿಸಿ ಜ್ಞಾತಿಗಳು ನಡಿಸಿದುದೆಲ್ಲಾ ಕೃತ್ರಿಮವೆಂದು ತಿಳಿಸಲು ಈ ಬಲಗಳನ್ನು ಹೊಂದಿ ಶ್ರೀಮಾನ್ ಎಂ. ಓ. ಪಾರ್ಥಸಾರಥಿ ಅಯ್ಯಂಗಾರ್ಯರು ಆ ಸ್ವೀಕಾರವು ಸರಿಯಾದುದೆಂದು ನ್ಯಾಯಾಸ್ಥಾನದಲ್ಲಿ ವಾದಿಸಿ ವಿವಾದವನ್ನು ಜಯಿಸಿ ಆ ದ್ರವ್ಯಗಳೆಲ್ಲಾ ಸ್ವೀಕಾರಪುತ್ರನಿಗೇ ಸೇರುವಂತೆಮಾಡಿದರು.

ಒಂದು ಕಾಲದಲ್ಲಿ ಕಾವೇರೀತೀರದಲ್ಲಿ ಶ್ರೀರಂಗಪಟ್ಟಣದಲ್ಲಿ ಬಿಜಯಮಾಡಿಸಿರುವ ರಂಗನಾಥರನ್ನು ಸೇವಿಸಲು ಬಂದ ಶ್ರೀ ಶೃಂಗೇರಿ ಸನ್ಯಾಸಿಗಳು ಬಲಾತ್ಕಾರದಿಂದ ಪೂಜೆಮಾಡಿದರೆಂದೂ ಅದಕ್ಕಾಗಿ ಸಂಪ್ರೋಕ್ಷಣಾದಿಗಳನ್ನು ಮಾಡಬೇಕೆಂದೂ ಸಭೆ ಸೇರಿಸಿ ಚರ್ಚೆಮಾಡಿ ವಿದ್ವಾನ್ ಕಚ್ಛಬುಜಂ ಶ್ರೀನಿವಾಸಾಚಾರ್ಯರೊಂದಿಗೆ ಕಲೆತು "ಭಗವಚ್ಛಾಸ್ತ್ರಭಾಸ್ಕರ" ಎಂಬ ಗ್ರಂಥವನ್ನು ಬರೆದು ಮೈಸೂರುನಗರವನ್ನು ಅಲ್ಲೋಲ ಕಲ್ಲೋಲಮಾಡಿಬಿಟ್ಟರು. ಹೀಗೆ ಉದ್ರೇಕಪೂರಿತರಾಗಿದ್ದರೂ ಆ ಮಾತಸ್ಥರೆಲ್ಲಾ ಇವರಲ್ಲಿ ಬಹಳವಾಗಿ ಪ್ರೀತಿಯಿಟ್ಟಿದ್ದರು.

ಅನಂದಾಳ್ವಾರು ಮಹಾವಿದ್ವಾಂಸರಾದ್ದರಿಂದ ಇವರ ನಡೆನುಡಿಗಳಿಂದಲೂ, ಶ್ರೀಭಾಷ್ಯಕಾರರ ವಂಶದವರಾದ್ದರಿಂದಲೂ ಇವರಿಗೆ ಆಶ್ರಮವನ್ನು ಕೊಟ್ಟು ಆಚಾರ್ಯರನ್ನಾಗಿ ಮಾಡಿಕೊಳ್ಳಬೇಕೆಂದು ೪—೫ ಜೀಯರುಗಳ ಕಾಲದಿಂದಲೂ ಪ್ರಯತ್ನಿಸುತ್ತಿದ್ದರು. ಅನಂದಾಳ್ವಾರು ಸನ್ಯಾಸದಲ್ಲಿ ಇಷ್ಟವಿಲ್ಲದವರಾಗಿ ಇತರರಿಗೆ ಆ ಸನ್ಯಾಸವನ್ನು ಕೊಡಿಸಿ ತಾವು ತಪ್ಪಿಸಿಕೊಳ್ಳುತ್ತಿದ್ದರು. ಹೀಗಿದ್ದರೂ "ಅವಶ್ಯಮನುಭೋಕ್ತವ್ಯಂ" ಎಂಬಂತೆ ಕಾಲದೇಶವರ್ತಮಾನಗಳು ಕಾರಣವಾಗಿ ಶ್ರೀಯತಿರಾಜಮಠದ ಆರ್ಥಿಕಪರಿಸ್ಥಿತಿಯೂ ಸರಿಯಾಗಿಲ್ಲದೆ ಇದ್ದು ಶಿಷ್ಯರೂ ಅಭಿಮಾನಿಗಳೂ ಸೇರಿ ಶಕ್ತರೂ, ಮಹಾವಿದ್ವಾಂಸರೂ ಆದ ಅನಂದಾಳ್ವಾರು ಆಚಾರ್ಯಪದವಿಯನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸಿದರು.

ಅನಂದಾಳ್ವಾರು ಆಶ್ರಮವನ್ನು ಸ್ವೀಕರಿಸುವ ಮೊದಲು ಆಚಾರ್ಯಸ್ಥಾನಕ್ಕೆ ೨೦೦೦ ರೂಪಾಯಿಗಳನ್ನು ಕೈಂಕರ್ಯಧರ್ಮವಾಗಿ ಸಮರ್ಪಿಸಿ ಶಕ ೧೮೪೩ ನೇ ರೌದ್ರಿ ಸಂ॥ ಮಾಘಶುದ್ಧ ತೃತೀಯಾ, ಶುಕ್ರವಾರ (11. 2. 1921) ಪರಮಹಂಸಾಶ್ರಮವನ್ನು ಸ್ವೀಕರಿಸಿದರು. ಇವರು ಶ್ರೀ ಭಾಷ್ಯಕಾರರಿಂದ ೩೬ ನೇ ಸಂಪತ್ಕುಮಾರಪೀಠಸ್ಥರು.

ಆಶ್ರಮವನ್ನು ವಹಿಸಿದದಿನ ಅನೇಕ ವೈದಿಕರೂ, ಲೌಕಿಕರೂ, ಮಠಾಧಿಪತಿಗಳೂ, ರೇವ ಮಹಾರಾಜರೂ ಖಿಲ್ಲತ್ತು ಮರ್ಯಾದೆಗಳನ್ನು ಸಮರ್ಪಿಸಿದರು. ರೇವ ಗೋವಿಂದಘಡ ಶಾಖಾಮಠದ ಸನ್ಯಾಸಿಗಳೂ ಈ ಸಂಭ್ರಮದಲ್ಲಿ ಅನ್ವಯಿಸಿದ್ದರು. ಲೌಕಿಕರುಗಳಾಗಿಯೂ, ವೈದಿಕರಾಗಿಯೂ ಇದ್ದ ಸಮುದಾಯ ಮುಖಂಡರಾದ ಆಸೂರಿ ಪಾರ್ಥಸಾರಥಿ ಅಯ್ಯಂಗಾರ್ಯರೂ, ಯಂ. ಟಿ. ನಾರಣಯ್ಯಂಗಾರ್ಯರು, ಆರ್. ನರಸಿಂಹಾಚಾರ್ಯರು ಇವರುಗಳು ಶ್ರೀಮಠದ ಎಲ್ಲಾ ಕಾರ್ಯಕ್ರಮ ಗೌರವಗಳನ್ನೂ ನಡೆಸಿಬಂದರು.



ಶ್ರೀಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಮುನಿಃ
ಆಶ್ರಮ ಸ್ವೀಕಾರ ಶಕಾಬ್ದಃ ೧೮೪೪,
11. 2. 1921.

## ಶ್ರೀ ಆಸೂರಿಜೀಯರ ಧ್ಯಾನಶ್ಲೋಕವು.

ಶ್ರೀರಾಮಾನುಜಯೋಗಿನಾ ಭಗವತಾ ಪ್ರೋಕ್ತೇಭಿಜಾತಂ ಕುಲೇ
ಯದ್ವದ್ರಾ ತದುಪಕ್ರಮೇ ಯತಿಮಠೇ ಸಂಪ್ರಾಪ್ತ ಮೋಕ್ಷಾಶ್ರಮಮ್
ಪ್ರಾಪ್ತಾಭಿಖ್ಯಮನಂತಸಂಯಮಿವರಂ ಸಂಪತ್ಸುತಾಖ್ಯೇ ಪದೇ
ಶ್ರೀಮತ್ಪ್ರಾನ್ನೃಸಿಂಹಯೋಗಿ ಕರುಣಾಲಬ್ಧಾತ್ಮಬೋಧಂ ಭಜೇ ||
ಕಾಲಯುಕ್ತಿ ಶರತ್ಕುಂಭ ನ್ಯೈತ್ರತಾರಾಸಮುದ್ಭವಂ
ಯದ್ವದ್ರಿಯತಿರಾಜಶ್ರೀ ಸಂಪತ್ಸುತಮುನಿಂಭಜೇ ||

ಆಚಾರ್ಯರಿಗಾಗಿ ಕಾದಿದ್ದ ಶಿಷ್ಯರುಗಳನೇಕರು ತಪ್ತಚಕ್ರಾಂಕನ ಮಂತ್ರೋಪ ದೇಶಗಳನ್ನು ಹೊಂದಿ ಕೃತಾರ್ಥರಾದರು. ಆಸೂರಿ ಜೀಯರು ಶಿಷ್ಯರುಗಳಿಗೆ ಜ್ಞಾನೋಪದೇಶವನ್ನು ಮಾಡುತ್ತಾ ತದೀಯಾರಾಧನೋಭಯ ವೇದಾಂತ ಕಾಲಕ್ಷೇಪಾದಿಗಳಿಂದ ತಿರುನಾರಾಯಣ ಚೆಲ್ವಪ್ಪಿಳ್ಳೈಯವರನ್ನು ಮಂಗಲಾಶಾಸನ ದಿಂದ ಕೈಂಕರ್ಯವನ್ನು ನಡೆಸುತ್ತಾ ಬಂದರು.

ಶ್ರೀಮಠಕ್ಕೆ ಸೇರಿದ ಅನೇಕ ಜನ ಶಿಷ್ಯರುಗಳು ಜೀವನೋಪಾಯಗಳಿ ಗಾಗಿ ಭರತಖಂಡದ ಅನೇಕ ಸ್ಥಳಗಳಲ್ಲಿ ನೆಲೆಸಿರುವುದರಿಂದಲೂ ಶ್ರೀಮಠದ ಉತ್ತರದೇಶಯಾತ್ರೆ ಬಹುದಿನಗಳಿಂದ ಇಲ್ಲವಾದ್ದರಿಂದ ಶಿಷ್ಯರುಗಳ ಅಭಿಮಾನಿ ಗಳ ಪ್ರಾರ್ಥನಾನುಸಾರವಾಗಿ ವರ್ಣಾಶ್ರಮ ಧರ್ಮವನ್ನು ಬೋಧಿಸಿ ಸಿದ್ಧಾಂತ ಸ್ಥಾಪನಮಾಡುವುದಕ್ಕಾಗಿ ಶ್ರೀ ಜೀಯರುಸ್ವಾಮಿಗಳು ಶ್ರೀ ತಿರುನಾರಾಯಣ ಉಡೈಯರವರ ನಿಯಮನವನ್ನುಕೊಂಡು ಛತ್ರಿ ಚಾಮರ ಪಲ್ಲಕ್ಕಿ ಮುಂತಾದ ಅನೇಕವಿಧ ಪರಿವಾರ ಮರ್ಯಾದೆಯೊಂದಿಗೆ ಉತ್ತರದೇಶಯಾತ್ರೆ ಹೊರಟರು.

ಮಾರ್ಗಮಧ್ಯದ ಚನ್ನಪಟ್ಟಣದಲ್ಲಿ ಅಲ್ಲಿನ ಮಹನೀಯರುಗಳ ಪ್ರಾರ್ಥನೆ ಯಂತೆ ಅವರು ಕಟ್ಟಿಸಿದ ಶ್ರೀಭಾಷ್ಯಕಾರರ ಸನ್ನಿಧಿಗೆ ಅಷ್ಟಿವಾರ ಕ್ರಮವನ್ನು ನಡೆಸಿ ಮಳೂರು ಅಗ್ರಹಾರದಲ್ಲಿ ಜನಾರ್ಧನ ದೇವರನ್ನು ಮಂಗಲಾಶಾಸನಮಾಡಿ ಬೆಂಗಳೂರಿಗೆ ದಯಮಾಡಿಸಿದರು. ಇಲ್ಲಿ ಕೆಲವುಕಾಲವಿದ್ದು ಶಿಷ್ಯರ ಆತಿಥ್ಯವನ್ನು ಕೈಕೊಂಡು ಅವರಿಗೆ ಹಿತೋಪದೇಶನ್ನುಮಾಡಿ ಮುಂದೆ ಚಿಕ್ಕಬಳ್ಳಾಪುರ, ಕೋಲಾರ ಮುಳುಬಾಗಲು ಮಾರ್ಗವಾಗಿ ಚಿತ್ತೂರು ಪಟ್ಟಣಕ್ಕೆ ದಯಮಾಡಿಸಿದರು. ಇಲ್ಲಿ ಅನೇಕ ಸಭೆಗಳಲ್ಲಿ ಉಪನ್ಯಾಸಮಾಡಿದರು. ಅಲ್ಲಲ್ಲಿಯವರನ್ನು ಅನುಗ್ರಹಿಸಿ ಮುಂದೆ ಘಟಿಕಾಚಲಮಾರ್ಗವಾಗಿ ಮದರಾಸ್ ತಿರುವಲ್ಲಿಕ್ಕೇಣಿಗೆ 25—3—23 ರಲ್ಲಿ ಬಹು ವೈಭವದಿಂದ ಪ್ರವೇಶಮಾಡಿದರು. ಇಲ್ಲಿಯ ಶಿಷ್ಯವರ್ಗದವರೂ ಅಭಿಮಾನಿ ಗಳೂ ಶ್ರೀ ಜೀಯರುಸ್ವಾಮಿಗಳನ್ನು ಬಹುವಾಗಿ ಆದರಿಸಿದರು. ಅವರವರ ಪ್ರಾರ್ಥ ನಾನುಸಾರವಾಗಿ ಅನೇಕ ವಿಷಯಗಳಲ್ಲಿ ಹೃದಯಂಗಮವಾಗುವಂತೆ ಧರ್ಮೋಪದೇಶ

ಉಪನ್ಯಾಸಗಳನ್ನುಮಾಡಿ ಸಂತೋಷಪಡಿಸಿದರು. ಇಲ್ಲಿಯು ಮಹನೀಯರಾದ ಆಸೂರಿ ಪಾರ್ಥಸಾರಥಿ ಅಯ್ಯಂಗಾರ್, ಅಕ್ಕಿಪ್ಪ್ಪೆ ನರಸಿಂಹಾಚಾರ್ಯರೂ ಇನ್ನೂ ನಮ್ಮ ಸಮುದಾಯ ಮುಖಂಡರುಗಳೂ ಇತರರೂ ಮಾಡಿದ ಕೈಂಕರ್ಯಗಳು ಅನ್ಯಾದೃಶವಾದುದಾಗಿದ್ದಿತು. ಶ್ರೀ ಜೀಯರುಸ್ವಾಮಿಗಳು ದೇವಸ್ಥಾನದ ಮರ್ಯಾದೆಗಳನ್ನು ಹೊಂದಿ ಪಾರ್ಥಸಾರಥಿ ದೇವರನ್ನು ಮಂಗಲಾಶಾಸನ ಮಾಡಿ ಇಲ್ಲಿಂದ ಶ್ರೀ ಪೆರಂಬೂದೂರು ಕಾಂಚಿ, ಮೊದಲಾದ ದಿವ್ಯದೇಶಗಳಿಗೆ ದಯಮಾಡಿಸಿ ಅಲ್ಲಲ್ಲಿನ ಆಳ್ವಾರ್ ಆಚಾರ್ಯ ಎಂಬೆರುಮಾನಾರ್ರುಗಳನ್ನು ಸೇವಿಸಿ ಮಂಗಲಾಶಾಸನಮಾಡಿ ಮುಂದೆ ತಿರುಪತಿಗೆ ದಯಮಾಡಿಸಿದರು. ದೇವಸ್ಥಾನದ ಮರ್ಯಾದೆಯನ್ನು ಹೊಂದಿ ಶ್ರೀನಿವಾಸದೇವರನ್ನು ಮಂಗಲಾಶಾಸನಮಾಡಿ ಗೋವಿಂದರಾಜದೇವರ ಪ್ರೋಕ್ಷಣಾದಿ ಪ್ರತಿಷ್ಠೆಯಲ್ಲಿ ಅನ್ವಯಿಸಿ ಮುಂದೆ ಆಂಧ್ರ ದೇಶಕ್ಕೆ ದಯಮಾಡಿಸಿದರು. ಈ ಸಮಯದಲ್ಲಿ ದೇಶಮುಖಂಡರಾದ ಚಿತ್ತರಂಜನ್ ದಾಸ್‍ರವರೊಂದಿಗೆ ಸನಾತನ ರಾಜಕೀಯ ವಿಷಯಗಳನ್ನು ಚರ್ಚಿಸಿಬಂದರು.

ಮಾರ್ಗಮಧ್ಯದಲ್ಲಿ ನೆಲ್ಲೂರು ಪಟ್ಟಣಕ್ಕೆ 4—5—24 ರಲ್ಲಿ ಮೂಲಪೇಟೆಯಲ್ಲಿರುವ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ಶ್ರೀ ಯತಿರಾಜ ಜೀಯರಿಗೆ ನಡೆದು ಬರುವ ಅಗ್ರತೀರ್ಥ ಮರ್ಯಾದೆಯನ್ನು ಹೊಂದಿ ತತ್ಸಂಬಂಧವಾಗಿ ಶಿಲಾಶಾಸನವನ್ನು ಪ್ರತಿಷ್ಠಿಸಿದರು.

ಅನಂತರ ಮುಂದೆ ಗುಂಟೂರು, ವಿಜಯವಾಡ, ಮಚಲೀಪಟ್ಟಣ ರಾಜಮಹೇಂದ್ರವರಂ ಇತ್ಯಾದಿ ಪಟ್ಟಣಗಳಲ್ಲಿ ಅಲ್ಲಲ್ಲಿಯವರ ಪ್ರಾರ್ಥನಾನುಸಾರವಾಗಿ ವೈಷ್ಣವದೀಕ್ಷೆ ಚಕ್ರಾಂಕಿತ ಮಂತ್ರೋಪದೇಶಗಳನ್ನು ಉಪನ್ಯಾಸಾದಿಗಳನ್ನೂ ಮಾಡಿ ಉಕ್ತಕಾಲಗಳಲ್ಲಿ ಚಾತುರ್ಮಾಸ ದೀಕ್ಷೆಯನ್ನು ನಡೆಸಿ ಕೃಷ್ಣ, ಗೋದಾವರಿ ಮಹಾನದಿ ಮುಂತಾದ ಪುಣ್ಯ ನದಿಗಳಲ್ಲಿ ಸ್ನಾನಮಾಡಿ ಮುಂದೆ ನೂಜವೀಡು ಪಿಠಾಪುರ, ತುಣಿ, ವಿಜಯನಗರಂ ಮೊದಲಾದ ರಾಜಸ್ಥಾನಗಳ ರಾಜ ಮಹಾರಾಜರುಗಳಿಂದ ಸನ್ಮಾನಿತರಾಗಿ ಅಲ್ಲಲ್ಲಿಯವರ ಪ್ರೀತಿಗೆ ಪಾತ್ರರಾಗಿ ಅಲ್ಲಿಂದ ಶ್ರೀ ಕೂರ್ಮಕ್ಷೇತ್ರಕ್ಕೆ ಬಂದು ಶ್ರೀ ಕೂರ್ಮದೇವರನ್ನು ಮಂಗಲಾಶಾಸನಮಾಡಿ ಇಲ್ಲಿ ಖಿಲವಾದ ಪೂರ್ವಜೀಯರ (ನಾಟಂಪಳ್ಳಿ ಅಳಶಿಂಗರಾಚಾರ್ಯಸ್ವಾಮಿ) ಬೃಂದಾವನವನ್ನು ಜೀರ್ಣೋದ್ಧಾರಮಾಡಿ ಅಲ್ಲಿಂದ ಸಿಂಹಾಚಲದೇವರನ್ನು ಸೇವಿಸಿ ಮುಂದೆ ಬರಹಂಪುರಕ್ಕೆ ದಯಮಾಡಿಸಿದರು. ಇಲ್ಲಿಯು ಶ್ರೀವೈಷ್ಣವರ ಮರ್ಯಾದೆಯನ್ನು ಅಂಗೀಕರಿಸಿ ಶಾಸ್ತ್ರಸಂಪ್ರದಾಯದಲ್ಲಿ ವ್ಯತ್ಯಾಸವಾದ ನಡವಳಿಕೆಯನ್ನು ತಿದ್ದಿ ಮುಂದೆ ಜಗನ್ನಾಥಕ್ಷೇತ್ರಕ್ಕೆ 4—6—26 ರಲ್ಲಿ ಬಿಜಯ ಮಾಡಿಸಿದರು. ಇಲ್ಲಿಯು ಮಹಂತುಗಳಿಂದ ಸನ್ಮಾನಿತರಾಗಿ ಉತ್ತರಪಾರ್ಶ್ವ

ರಾಜಗೋಪಾಲ್ ಮುಂತಾದ ಮಹಂತುಗಳ ಪ್ರಾರ್ಥನಾನುಸಾರ ಚಾತುರ್ಮಾಸ ಸಂಕಲ್ಪವನ್ನು ನಡೆಸಿ ಶ್ರೀ ಜಗನ್ನಾಥ ದೇವರನ್ನು ಸೇವಿಸಿ ಕಲ್ಕತ್ತಾ ನಗರಕ್ಕೆ 21—10—26 ರಲ್ಲಿ ದಯಮಾಡಿಸಿದರು.

ಶ್ರೀಜೀಯರುಸ್ವಾಮಿಗಳು ತಮ್ಮ ಆಂಧ್ರದೇಶದ ಯಾತ್ರೆಯಲ್ಲಿ ಶಿಷ್ಯಾದಿಗಳೂ ಅಭಿಮಾನಿಗಳೂ ಸಹ ಶ್ರೀಮಠದಲ್ಲಿ ಶಾಶ್ವತವಾಗಿ ಕೈಂಕರ್ಯವನ್ನು ನಡೆಸಲು ಸಮರ್ಪಿಸಿದ ಐದಾರು ಸಹಸ್ರರೂಪಾಯಿಗಳನ್ನು ಶ್ರೀಮಠದ ನ್ಯಾಸರಕ್ಷಕರವಶಕ್ಕೆ ಕಳುಹಿಸಿದರು. ಶ್ರೀವರ್ಮಗಳಾದ ರಾಜಾಬಾಬು ನಾರಾಯಣದಾಸ್ ಮಂಗನೀರಾಮಸೇಟ್ ಮೊದಲಾದ ಶ್ರೇಷ್ಠಜನಗಳಿಂದ ಆಹ್ವಾನಿತರಾಗಿ ಕಲ್ಕತ್ತಾ ನಗರಕ್ಕೆ ದಯಮಾಡಿಸಿ ಅಲ್ಲಿನವರನ್ನು ಸಂತೋಷಪಡಿಸಿ ಅನೇಕ ವಿಷಯಗಳಮೇಲೆ ಉಪನ್ಯಾಸಾದಿಗಳನ್ನುಮಾಡಿ ಸತ್ಕರಿಸಲ್ಪಟ್ಟು ಮುಂದೆ ಬರದ್ವಾನ್ ಮಾರ್ಗವಾಗಿ ಗಯಾಕ್ಷೇತ್ರಕ್ಕೆ ದಯಮಾಡಿಸಿದರು. ಈ ಯಾತ್ರಾಮಧ್ಯದಲ್ಲಿ ಮಾರ್ಗಮಧ್ಯದಲ್ಲಿ ಅನೇಕ ಕಷ್ಟನಷ್ಟಗಳೂ ನಂಬಿಕೆ ದ್ರೋಹಗಳೂ ನಡೆದು ಬಂದುದನ್ನು ನೋಡಿ ಧೈರ್ಯದಿಂದ ಅವುಗಳನ್ನೆಲ್ಲಾ ಎದುರಿಸಿ ಬಂದರು. ಮುಂದೆ ಪಾಟ್ನಾನಗರ, ಜಮರೋಡು, ಆರಾಜಿಲ್ಲಾ ಮಾರ್ಗವಾಗಿ ಕಾಶೀಕ್ಷೇತ್ರಕ್ಕೆ ಸೇರಿದರು. ಇಲ್ಲಿಯ ವಿದ್ವಾಂಸರೊಂದಿಗೆ ಸಂಭಾಷಿಸಿ ಗೌರವಿತರಾಗಿ ಮುಂದೆ ಅಯೋಧ್ಯೆಗೆ ದಯಮಾಡಿಸಿದರು. ಇಲ್ಲಿ ಯೋಗಿ ಪಾರ್ಥಸಾರಥಿ ಅಯ್ಯಂಗಾರ್ಯರು ಪ್ರತಿಷ್ಠಿಸಿರುವ ಶ್ರೀರಾಮದೇವರನ್ನು ಮಂಗಲಾಶಾಸನಮಾಡಿ ಇಲ್ಲಿಯ ಶ್ರೀವೈಷ್ಣವರಿಂದಲೂ ನೇಪಾಳಿದೇಶದ ರಾಣಿಯವರಿಂದಲೂ ಸನ್ಮಾನಿತರಾದರು. ಶ್ರೀವರ್ಮ ವೈ. ಜಿ. ಶ್ರೀನಿವಾಸರವರು ಶ್ರೀ ಜೀಯರುಸ್ವಾಮಿಗಳನ್ನು ಬಹುವಾಗಿ ಆದರಿಸಿದರು. ಅಲ್ಲಿಂದ ಲಕ್ನೋಮಾರ್ಗವಾಗಿ ಕಾನ್ಪುರಕ್ಕೆ ಬಂದು ಶಿಷ್ಯರುಗಳಿಂದಲೂ ಇತರರುಗಳಿಂದಲೂ ಸನ್ಮಾನಿತರಾಗಿ ಉಪನ್ಯಾಸಗಳನ್ನು ಕೊಟ್ಟುಬಂದರು. ಪ್ರಯಾಗದ ಬರಾಂವ್ ರಾಜರಾದ ಶ್ರೀವರ್ಮ ಕೋಸಲೇಶ್ವರ ಪ್ರಸಾದ್‌ರವರೂ ಅವರ ಅನುಯಾಯಿಗಳೂ ಶ್ರೀ ಜೀಯರ್ ಸ್ವಾಮಿಗಳನ್ನು ಆಶ್ರಯಿಸಿ ಚಕ್ರಾಂಕನ ಮಂತ್ರೋಪದೇಶಗಳನ್ನು ಹೊಂದಿದರು.

ತದುಪರಿ ಶಿಷ್ಯರೊಂದಿಗೆ ಬ್ರಹ್ಮಶಿಲಾ ಮುಂತಾದ ಗಂಗಾತೀರ ಪ್ರದೇಶವನ್ನು ಸೇವಿಸಿಕೊಂಡು ಮುಂದೆ ತ್ರಿವೇಣಿಸಂಗಮವಾದ ಪ್ರಯಾಗಕ್ಷೇತ್ರವನ್ನು 12—3—1928. ರಲ್ಲಿ ಸೇರಿದರು. ಇಲ್ಲಿ ಎರಡು ತಿಂಗಳಕಾಲವಿದ್ದು ಮುಂದೆ ರೀವ ರಾಜ್ಯಕ್ಕೆ ದಯಮಾಡಿಸಿ ಅಲ್ಲಿರಾಜಗುರುಗಳಾದ ಬದರಿಪ್ರಸನ್ನರಾಮಾನುಜದಾಸರ ಸ್ಥಾನದಲ್ಲಿ ದಯಮಾಡಿಸಿ ಅವರಪ್ರಾರ್ಥನೆಯಂತೆ ಚಾತುರ್ಮಾಸದೀಕ್ಷೆಯನ್ನು ಅನುಷ್ಠಿಸಿ ರೀವ ಮಹಾರಾಜರಾದ ಗುಲಾಬ್‌ಸಿಂಹಜುದೇವ್ ರವರನ್ನು ಕಂಡು

ಆಶೀರ್ವದಿಸಿ ಮೂಲಮಠಕ್ಕೂ ರಾಜಾಸ್ಥಾನಕ್ಕೂ ಉಂಟಾದ ಸಂಬಂಧವನ್ನೂ ತಿಳಿಸಿ ಮಹಾರಾಜರಿಂದ ಸನ್ಮಾನಿತರಾದರು.

ಈ ಕಾಲದಲ್ಲಿ ರಾಜ್ಯದಲ್ಲಿ ಧರ್ಮಬಾಹಿರರಾದ ಕೆಲವರು ಹಿಂದೂಸ್ಮೃತೀತಿಹಾಸ ಧರ್ಮಶಾಸ್ತ್ರಗಳಿಗೆ ವಿರೋಧವಾಗಿ ವರ್ಣಾಶ್ರಮ ಪದ್ಧತಿಯನ್ನೂ ಪರಲೋಕಶ್ರದ್ಧೆಯನ್ನೂ ಅಳಿಸಲು ಪ್ರಯತ್ನಗಳನ್ನು ನಡೆಸಿ ಆ ಕಾರ್ಯಗಳು ಫಲಿಸದೆ ರಾಜ್ಯಾಂಗದಲ್ಲಿ ಬಲಾತ್ಕಾರವಾಗಿ ಶಾಸನವನ್ನು ಏರ್ಪಡಿಸಲು ಆರಂಭಿಸಿದರು. ಧರ್ಮಗಳಿಗೂ, ಶಾಸ್ತ್ರಸಂಪ್ರದಾಯಗಳಿಗೂ ಸನಾತನಧರ್ಮಕ್ಕೂ ವರ್ಣಾಶ್ರಮ ವ್ಯವಹಾರಗಳಿಗೂ ಲೋಪಬರುವುದನ್ನು ನೋಡಿ ಅಖಿಲಭಾರತ ಪ್ರಜೆಗಳು ವರ್ಣಾಶ್ರಮ ಸಭೆಯನ್ನು ಕಾಶೀನಗರದಲ್ಲಿ ಸೇರಿಸಿ ಅದರಲ್ಲಿ ಧರ್ಮಾಚಾರ್ಯ ಸ್ಥಾನವನ್ನು ಅವಲಂಬಿಸಲು ಶ್ರೀ ಜೀಯರ್ ಸ್ವಾಮಿಗಳನ್ನು ಪ್ರಾರ್ಥಿಸಿದರು. ಶ್ರೀಜೀಯರು ದೇವಶಿಖಾಮಣಿ ರಾಮಾನುಜಯ್ಯಂಗಾರ್ರು ರಾ. ಅ. ಅಯ್ಯನಯ್ಯಂಗಾರ್ರು ಮೊದಲಾದ ಮಹಾವಿದ್ವಾಂಸರೊಂದಿಗೆ ದಯಮಾಡಿಸಿ ಧರ್ಮಾಚಾರ್ಯ ಪದವಿಯನ್ನಲಂಕರಿಸಿ ಅನೇಕ ಸಹಸ್ರಮಂದಿ ವಿದ್ವನ್ಮಂಡಲದಲ್ಲಿ ಸನಾತನ ಹಿಂದೂ ವರ್ಣಾಶ್ರಮಧರ್ಮವನ್ನು ಸ್ಥಿರಪಡಿಸಿ ರಾಜ್ಯಾಂಗಕ್ಕೆ ಶಾಸ್ತ್ರಸಂಪ್ರದಾಯದ ಮೇಲೆ ಶಾಸನಮಾಡಲು ಅಧಿಕಾರವಿಲ್ಲವೆಂದು ಮಹೋಪನ್ಯಾಸಮಾಡಿ ಕಾರ್ಯಕ್ರಮವನ್ನು ನಡೆಸಿಬಂದರು.

ಶ್ರೀ ಜೀಯರುಸ್ವಾಮಿಗಳ ವಿದ್ವತ್ತೇಜೋವಿಶೇಷವನ್ನು ನೋಡಿ ಶ್ರೀಮಂತರಾದ ರಾಮಾವತಾರಶರ್ಮ, ಜಯಸ್ವಾಲ್, ಮಹಾ ಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿ ಇವರುಗಳ ಪ್ರಾರ್ಥನೆಯನ್ನಂಗೀಕರಿಸಿ ಪಾಟ್ನಾನಗರಕ್ಕೆ ದಯಮಾಡಿಸಿ ಸಂಸ್ಕೃತದಲ್ಲಿ ಮಹೋಪನ್ಯಾಸವನ್ನುಮಾಡಿ ಅಲ್ಲಿಂದ ಗಂಗಾನದಿ ಅಕ್ಕರೆಯಲ್ಲಿರುವ ಛಪ್ರಾಜಿಲ್ಲಾ (ಇಲ್ಲಿ ಶ್ರೀಮಠಕ್ಕೆ ಸೇರಿದ ದೇವಸ್ಥಾನವೊಂದಿರುವುದು) ಮುಂತಾದ ಕೆಲವು ಪ್ರದೇಶಗಳನ್ನು ನೋಡಿಕೊಂಡು ಜಬ್ಬಲ್‌ಪುರ ಮಾರ್ಗವಾಗಿ ಇಟಾರ್ಸಿ ಎಂಬ ಪ್ರದೇಶಕ್ಕೆ ಸ್ವಲ್ಪದೂರದಲ್ಲಿರುವ ಪಿಪರಿಯಾ ಎನ್ನುವ ಊರಿನ ರಾಮಲಾಲ್ ಸೇಟಿನ ಆಹ್ವಾನದಿಂದ ದಯಮಾಡಿಸಿ ಅವನ ಆತಿಥ್ಯವನ್ನು ಸ್ವೀಕರಿಸಿ ಅನುಗ್ರಹಿಸಿದರು. ಅಲ್ಲಿಂದ ಚಿಂದ್ವಾರಮಾರ್ಗವಾಗಿ ನಾಗಪುರಕ್ಕೆ ದಯಮಾಡಿಸಿದರು. (ಇಲ್ಲಿ ನಾಂಜಂಪಳ್ಳಿ ತಿರುನಾರಾಯಣಪ್ಪೆರುಮಾಳರ ಬೃಂದಾವನವಿದೆ.) ಇಲ್ಲಿ ನಾಗನದಿ ದಡದ ಸಿತಾಮಡಿಎಂಬ ಸ್ಥಳದಲ್ಲಿ ಕೆಲವು ಕಾಲವಿದ್ದು ಅಲ್ಲಿಂದ ಹೊರಟು ಹೈದರಾಬಾದು ಪಟ್ಟಣಕ್ಕೆಬಂದು ಶ್ರೀಸೀತಾರಾಮ ಸನ್ನಿಧಿಯಲ್ಲಿ ಚಾತುರ್ಮಾಸವ್ರತವನ್ನು ನಡೆಸಿ ಮಹಾರಾಜರಿಂದಲೂ, ಇತರು ರಾಮಲಾಲ್‌ಸೇಟ್ ಮುಂತಾದ ಮಹಾಜನಗಳಿಂದಲೂ ಗೌರವಿಸಲ್ಪಟ್ಟು ಖಿಲ್ಲತ್ತು ಮರ್ಯಾದೆಗಳನ್ನು ಅಂಗೀಕರಿಸಿ ಸಿಕಂದರಾಬಾದು, ಶೋಲಾಪುರ ಮಾರ್ಗವಾಗಿ

ಪಂಡರೀನಾಥಕ್ಷೇತ್ರಕ್ಕೆ ದಯಮಾಡಿಸಿ ದೇವರನ್ನು ಮಂಗಲಾಶಾಸನಮಾಡಿ ಅಲ್ಲಿಂದ ಪೂನಾನಗರಕ್ಕೆ ದಯಮಾಡಿಸಿದರು. ಇಲ್ಲಿ ಭಾರತವನ್ನು ಅಚ್ಚಿಡುವ ಓರಿಯಂಟಲ್ ರೀ ಸರ್ಚ್ ಸಭೆಯವರಿಗೆ ವಿಷಯಗಳನ್ನು ತಿಳಿಸಿ ತಮ್ಮಲ್ಲಿದ್ದ ಪ್ರಾಚೀನ ಓಲೆ ಪುಸ್ತಕಗಳನ್ನು ಕೊಟ್ಟು ಅಲ್ಲಿಂದ ಬಳ್ಳಾರಿಮಾರ್ಗವಾಗಿ ವಿಜಯನಗರ ಮುಂತಾದ ಪ್ರಾಚೀನಪಟ್ಟಣಗಳನ್ನು ನೋಡಿಕೊಂಡು ಬೆಂಗಳೂರಿಗೆ ಶಕ ೧೮೫೨ ನೇ ಶುಕ್ಲ ಸಂ || ದಲ್ಲಿ ದಯಮಾಡಿಸಿದರು.

ಇಲ್ಲಿ ಶಿಷ್ಯರೂ, ಅಭಿಮಾನಿಗಳೂ ಸೇರಿ ಮಾಡಿದ ಆತಿಥ್ಯವನ್ನು ಸ್ವೀಕರಿಸಿ ಸ್ವಸ್ಥಾನವಾದ ತಿರುನಾರಾಯಣಪುರಕ್ಕೆ ದಯಮಾಡಿಸಿರುವಕಾಲದಲ್ಲಿ ಅಖಿಲ ಭಾರತ ವರ್ಣಾಶ್ರಮಸಭೆಯು ಮಧ್ಯಪ್ರಾಂತ್ಯದಲ್ಲಿ ಸೇರಲು ಅಲ್ಲಿಗೆ ಪರಿವಾರ ದೊಂದಿಗೆ ದಯಮಾಡಿಸಿ ಧರ್ಮಾಚಾರ್ಯಸ್ಥಾನವನ್ನು ಅಂಗೀಕರಿಸಿ ಮಹಾ ಸಭೆಯ ಕಾರ್ಯಕ್ರಮಗಳನ್ನು ನಡೆಸಿ ಅಲ್ಲಿಂದ ನಾಸಿಕ, ಪಂಚವಟಿ ಕ್ಷೇತ್ರಗಳನ್ನು ಸೇವಿಸಿಕೊಂಡುಬಂದರು.

ಅನಂತರ ಮಲೆಯಾಳದೇಶಕ್ಕೆ ದಯಮಾಡಿಸಿ ಜಾಮೊರಿನ್' ಕೋಟ್ಟೆಕಲ್ ಚರಕಲ್ ರಾಜರುಗಳನ್ನು ನೋಡಿ ಅವರ ಸಹಾಯದಿಂದ ಅನೇಕ ಅಪೂರ್ವ ಗ್ರಂಥಗಳನ್ನು ತೆಗೆದುಕೊಂಡುಬಂದು ಮುದ್ರಿಸಿ ಪ್ರಕಾಶಪಡಿಸಿದರು. ಈ ಸಮಯ ದಲ್ಲಿ ಪುನಃ ವರ್ಣಾಶ್ರಮಸಭೆಯು ಕಲ್ಕತ್ತನಗರದಲ್ಲಿ ಸೇರಲು ಅಲ್ಲಿಗೆ ದಯಮಾಡಿಸಿ ಕಾರ್ಯಕ್ರಮದಲ್ಲಿ ಅನ್ವಯಿಸಿ ಅಲ್ಲಿಂದಹೊರಟು ಕೆಲವುಶಿಷ್ಯರುಗಳ ಸ್ವವಿವಾದಗಳನ್ನು ಪರಿಹರಿಸಿಬಂದರು.

ಹೀಗಿರುವಸಮಯದಲ್ಲಿ ಶ್ರೀಸ್ವಾಮಿಗಳು ತಾವು ಉತ್ತರದೇಶಯಾತ್ರೆ ಮಾಡುವ ಕಾಲದಲ್ಲಿ ಶ್ರೀಮಠದಲ್ಲಿ ನಡೆಯಬೇಕಾದ ಧರ್ಮಕಾರ್ಯಗಳನ್ನು ನಡೆಸಲು ಆ ನಂಬಿಕೆಗೆಅರ್ಹರಾದವರುಗಳೆಂದು ಯೋಚಿಸಿ ಕೆಲವು ಮಹನೀಯರುಗಳನ್ನು ಏರ್ಪಡಿಸಿ ಅವರಿಗೆ ಅಧಿಕಾರವನ್ನೂ ತಾವು ಯಾತ್ರೆಯಲ್ಲಿ ಸಂಪಾದಿಸಿದ ೫—೬ ಸಹಸ್ರ ರೂಪಾಯಿಗಳನ್ನೂ ಅವರವಶಕ್ಕೆ ಕಳುಹಿಸಿದ್ದರು. ಶ್ರೀಜೀಯರು ಉತ್ತರದೇಶ ಯಾತ್ರೆ ಮುಗಿಸಿಕೊಂಡು ಸ್ವಸ್ಥಾನಕ್ಕೆ ದಯಮಾಡಿಸಿದಮೇಲೆ ಧರ್ಮಕರ್ತ ಮಹನೀಯರುಗಳನ್ನು ಮಠ ಸಂಬಂಧವಾಗಿ ವಿಷಯಗಳನ್ನು ವಿಚಾರಿಸಲು ಕಲಿ ಮಹಾತ್ಮೆಯಿಂದ ಆ ಮಹನೀಯರುಗಳಿಗೂ ಶ್ರೀಜೀಯರುಸ್ವಾಮಿಗಳಿಗೂ ಶ್ರೀಮಠದ ಅಧಿಕಾರ ಮತ್ತು ಆರ್ಥಿಕವಿಷಯವಾಗಿ ವಿವಾದವುಂಟಾಗಿ ಶ್ರೀಜೀಯರಿಗೆ ಶರೀರಧಾರಣೆಭಿಕ್ಷೆಗೂ ತೊಂದರೆಯುಂಟಾಗಲು ಶ್ರೀಸ್ವಾಮಿಗಳು ರಾಜ್ಯಾಂಗದ ನ್ಯಾಯಸ್ಥಾನದಲ್ಲಿ ತಿಳಿಸಲು ಧರ್ಮಸ್ಥಾನಾಧಿಕಾರಿಗಳು ಆ ಮಹನೀಯರುಗಳ ಮೇಲೆ ವ್ಯವಹರಿಸಿ ತಮ್ಮವಶಕ್ಕೆ ಎಲ್ಲಾದ್ರವ್ಯಗಳನ್ನೂ ಅಧಿಕಾರವನ್ನೂ ತೆಗೆದು

ಕೊಂಡು ಶ್ರೀಸ್ವಾಮಿಗಳಿಗೆ ಅನುಕೂಲಪಡಿಸಿಕೊಟ್ಟರು. ಮೇಲೆ ತಿಳಿಸಿದ ಮಹಾಪುರುಷರ ಕಾರ್ಯವಿವರವು—

ತೇ ಪ್ಯೆ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಂವಿರೋಧೇನೆಯೇ
ಸಾಮಾನ್ಯಾಸ್ತು ಪರಾರ್ಥಮುದ್ಯಮಭೃತಃ ಸ್ವಾರ್ಥಾವಿರೋಧೇನೆಯೇ
ತೇ ಮೀ ಮಾನುಷರಾಕ್ಷಸಾಃ ಪರಹಿತಂ ಸ್ವಾರ್ಥಾಯ ನಿಘ್ನಂತಿಯೇ
ಯೇ ನಿಘ್ನಂತಿ ನಿರರ್ಥಕಂಪರಹಿತಂ ತೇ ಕೇ ನಜಾನೀಮಹೇ ||

ಈರೀತಿಯಲ್ಲಿದ್ದಿತು. ಆದರೂ ಶ್ರೀಸ್ವಾಮಿಗಳು ಮೇಲಿನ ಮನೋಕ್ಲೇಶಗಳೂ, ಶರೀರಕ್ಲೇಶಗಳೂ ಎಷ್ಟಿದ್ದರೂ ಶಾಂತರಾಗಿ ಸಹಿಸಿಕೊಂಡು ತಮ್ಮ ಗ್ರಂಥಾವಲೋಕನ ಪ್ರಕಾಶನದಲ್ಲೂ, ಧರ್ಮಸಂಸ್ಥಾಪನದಲ್ಲೂ, ಸಿದ್ಧಾಂತಸ್ಥಾಪನದಲ್ಲೂ ನಿರತರಾಗಿದ್ದರು. “ಭಯಕೃದ್ಭಯನಾಶನಃ” “ದ್ವೈನಂಮಾನುಷರೂಪೇಣ” ಎಂಬಂತೆ ಅತ್ಯಂತ ಅಂತರಂಗ ಶಿಷ್ಯರು ಶ್ರೀಮಾನ್‌ಗಳಾದ ಇಂಜನೀಯರು ನಾಯಕ ಅನಂದಾಳ್ವಾರ್ರು ಮದರಾಸಿನ ನಾಯಕರಂಗಸ್ವಾಮಿಗಳೂ, ಆಂಧ್ರದೇಶದ ನರಸಿಂಹರಾವು, ಸುಬ್ಬಾರಾವು ಮತ್ತು ಇವರ ಭ್ರಾತೃವರ್ಗದವರೂ ಶ್ರೀಸ್ವಾಮಿಗಳಿಗೆ ಯಾವಕೊರತೆಯೂ ಇಲ್ಲದಂತೆ ಆದರಿಸಿಬಂದರು.

ಈ ಮಧ್ಯದಲ್ಲಿ ನೆಲ್ಲೂರುಪಟ್ಟಣದಲ್ಲಿ ಶ್ರೀವೇಣುಗೋಪಾಲಸ್ವಾಮಿ ದೇವರ ಪ್ರತಿಷ್ಠಾ ಷಷ್ಟ್ಯಬ್ಧಿಪೂರ್ತಿಯಲ್ಲಿ ವಿದ್ವಾಂಸರೊಂದಿಗೆ ದಯಮಾಡಿಸಿ ಉತ್ಸವ ವಿಶೇಷಗಳನ್ನು ನಡೆಸಿಬಂದರು. ಈ ಕಾಲದಲ್ಲಿ ಮದರಾಸ್ ತಿರುವಲ್ಲಿಕ್ಕೇಣಿಯಲ್ಲೂ ಬೆಂಗಳೂರುನಗರದಲ್ಲೂ ಶಾಖಾಮಠಗಳು ಏರ್ಪಟ್ಟವು. ಇದಾದಮೇಲೆ ಮೈಸೂರು ಚನ್ನಪಟ್ಟಣದಲ್ಲಿ ಮಹಾಜನಗಳು ಏರ್ಪಡಿಸಿದ ಶ್ರೀಭಾಷ್ಯಕಾರರಾದಿ ಚಕ್ರವರ್ತಿ ತಿರುಮಾರ್ಗ ಪ್ರತಿಷ್ಠೆಯನ್ನು ನಡೆಸಿ ಅಗ್ರತೀರ್ಥಮರ್ಯಾದೆಯನ್ನು ಸ್ವೀಕರಿಸಿಬಂದರು.

ಕ್ರಿಸ್ತಾಬ್ದ 1937 ನೇ ಡಿಸೆಂಬರು ತಿಂಗಳಿನಲ್ಲಿ ಮದರಾಸ್ ರಾಜಧಾನಿಯಲ್ಲಿ ನಡೆದ ಅಖಿಲಭಾರತ ಸನಾತನವಿದ್ವತ್ಸಭೆಯ ಅಧ್ಯಕ್ಷಪೀಠವನ್ನು ವಹಿಸಿ ಸನಾತನ ಹಿಂದೂಧರ್ಮಕ್ಕೆ ಉಂಟಾದ ಘಾತಕರೂಪವಾದ ಬಲಾತ್ಕಾರಶಾಸನವನ್ನು ಖಂಡಿಸಿ ಅದನ್ನು ತಡೆಯಲು ಅನೇಕವಿಧ ಪ್ರಚಾರಕಾರ್ಯಗಳನ್ನು ನಡೆಸಲು ಏರ್ಪಡಿಸಿ ಸನಾತನ ವೈದಿಕಹಿಂದೂಧರ್ಮವನ್ನು ಕಾಪಾಡಲು ಶ್ರದ್ಧೆವಹಿಸಿದ ಕೊಚ್ಚಿಮಹಾರಾಜರ ೭೭ ನೆಯ ವರ್ಷವರ್ಧಂತ್ಯುತ್ಸವ ಸಮಯದಲ್ಲಿ ಆಹ್ವಾನಿತರಾಗಿ ಮಹಾರಾಜರಿಗೆ ಅಖಿಲಭಾರತವಿದ್ವತ್ಸಭೆಯ ತೀರ್ಮಾನದಂತೆ ಸನ್ಮಾನ ಪತ್ರಿಕೆಯನ್ನೂ **ಧಾರ್ಮಿಕಚಕ್ರವರ್ತಿ** ಎಂಬ ಬಿರುದಿನ **ಸುವರ್ಣಪದಕ**ವನ್ನೂ ಕೊಟ್ಟು ಆಶೀರ್ವದಿಸಿದರು.

ಕ್ರಿ.ಶ. 1939 ರಲ್ಲಿ ಕೃಷ್ಣಾನದಿತೀರದ ಸಂಪತ್ಕುಮಾರಪುರದಲ್ಲಿ ವಾಸಿಸುವ ಅತ್ಯಂತ ಅಂತರಂಗಶಿಷ್ಯ ನರಸಿಂಹರಾವಿನ ಪ್ರಾರ್ಥನೆಯನ್ನಂಗೀಕರಿಸಿ ಅಲ್ಲಿಗೆ ದಯಮಾಡಿಸಿ ಆ ಸ್ಥಳಕ್ಕೆ ಸಂಪತ್ಕುಮಾರಪುರವೆಂದು ಹೆಸರಿಟ್ಟು ಚಾತುರ್ಮಾಸ ವ್ರತವನ್ನು ನಡೆಸಿದರು. ಇಲ್ಲಿ ಶಿಷ್ಯರೂ, ಮತ್ತು ವೆಂಕಟಶಠಕೋಪಾಚಾರ್ಯರೂ ಶ್ರೀಮಠಕ್ಕೆ ಭೂ ದಾನವನ್ನುಮಾಡಿ ಸಮರ್ಪಿಸಿದರು. ಅಲ್ಲದೆ ಕ್ರಿ.ಶ. 1943 ರಲ್ಲಿ ಆಂಧ್ರದೇಶದ ಗುಡಿವಾಡ ಎಂಬ ಊರಿನಲ್ಲಿ ಶ್ರೀವರ್ಗಾಗಳಾದ ಗೊಟ್ಟಿಮುಕ್ಕಲ ಕೃಷ್ಣಮಾಚಾರ್ಯರು, ವಿದ್ವಾನ್ ರಾಮಾನುಜಾಚಾರ್ಯರು ಶಿಷ್ಯರುಗಳ ಪ್ರಾರ್ಥನೆಯನ್ನಂಗೀಕರಿಸಿ ನೂತನವಾಗಿಕಟ್ಟಿಸಿದ ದೇವಸ್ಥಾನದಲ್ಲಿ ಶ್ರೀನಿವಾಸ ದೇವರನ್ನು ಪ್ರತಿಷ್ಠಿಸಿ ಅಗ್ರತೀರ್ಥಮರ್ಯಾದೆಯನ್ನುಹೊಂದಿ ಬಂದರು.

ಶ್ರೀಜೀಯರುಸ್ವಾಮಿಗಳು ತಮ್ಮ ಜೀವನದ ಪ್ರತಿಕ್ಷಣವನ್ನೂ ಸಾರ್ಥಕಪಡಿಸಿರುವರು. ವೇದಾಂತ,ಧರ್ಮಶಾಸ್ತ್ರಆಗಮಾದಿ ಗ್ರಂಥಾವಲೋಕನ, ವರ್ಣಾಶ್ರಮ ಸಿದ್ಧಾಂತಪ್ರಚಾರ ಇವುಗಳಲ್ಲಿ ನಿರಂತರವಾಗಿ ಅನ್ವಯಿಸಿದ್ದರು.

ತಟಾಕಮಿವ ತಾಪಾರ್ತಾಸ್ತ್ವಮಿಂದ್ರಮಿವ ನಿರ್ಜರಾಃ
ಭಾವಾ ಇವ ರಸಂಭವ್ಯಾಃ ಪಾರ್ಥಿವಾಃ ಪರ್ಯುಪಾಸತ ||

ಎನ್ನುವಂತೆ ಜ್ಞಾನಿಯಾದವರು ಇವರನ್ನು ಜ್ಞಾನನಿಧಿ ಎಂದೂ, ಅಲಂಕಾರಿಗರು ಅಲಂಕಾರದಸ್ವರೂಪವೇ ಇವರೆಂದೂ, ಮೇಧಾವಿಗಳು ಅತಿಮೇಧಾವಿಯೆಂದೂ, ಉಗ್ರಸ್ವಭಾವದವರು ಇವರನ್ನು ಉಗ್ರಸ್ವಭಾವದವರೆಂದೂ, ಸಾಮಾನ್ಯಪುರುಷರು ಇವರೂ ತಮ್ಮಂತೆ ಸಾಮಾನ್ಯಪುರುಷರೆಂದೂ, ಅವರವರು ತಮತಮಗೆ ತೋರಿದಂತೆ ಪ್ರಶಂಸಿರುವರು.

ಶ್ರೀಜೀಯರುಸ್ವಾಮಿಗಳು ಇದುವರೆಗೆ ಶೋಧಿಸಿ ಮುದ್ರಿಸಿರುವಗ್ರಂಥಗಳು.

ವೇದಾಂತಭಾಗದಲ್ಲಿ— 1. ಸದ್ವಿದ್ಯಾವಿಜಯ 2. ವಿಜಯಮಂಗಲದೀಪಿಕಾ 3. ಅಷ್ಟಶ್ಲೋಕೀವ್ಯಾಖ್ಯಾ.

ಪಾಂಚರಾತ್ರ ಆಗಮಭಾಗದಲ್ಲಿ—

4. ಪಾದ್ಮಸಂಹಿತಾ ೨ ಭಾಗಗಳು. 5. ಪೌಷ್ಕರಸಂಹಿತಾ 6. ಕಶ್ಯಪಸಂಹಿತಾ.

ಕಾವ್ಯ ನಾಟಕ ಅಲಂಕಾರ, ಸ್ತೋತ್ರಭಾಗದಲ್ಲಿ:—

7. ಶೃಂಗಾರಪ್ರಕಾಶ ಭಾಗ ೨೨, ೨೩, ೨೪ 8. ಭಾವಪ್ರಕಾಶನ

9. ತಾಪಸವತ್ಸರಾಜ ನಾಟಕ 10. ಭಾಮಹ ಚರಿತ್ರೆ ( ಆಂಗ್ಲಭಾಷೆ ) 11. ಮೇಘಸಂದೇಶಕಾವ್ಯಪದಾವಲಿಃ, ಕಂಠಲೇಶ್ವರದಾತ್ಯ 12. ಸ್ವಪ್ನವಾಸವದತ್ತ 13. ಯಮಕರತ್ನಾಕರ 14. ಭಗವಚ್ಛಾಸ್ತ್ರಭಾಸ್ಕರ 15. ಯತಿಧರ್ಮಸಮುಚ್ಚಯ 16. ಧ್ವನ್ಯಾಲೋಕ 17. ವಿದ್ಯಾಕಂದಳಂ 18. ಉಪನಿಷತ್ ಸ್ತೋತ್ರಗಳು 19. ಸಮ್ರಾರ್ಜನೀಶತಕ.

ವೈಜಯಂತೀ 3. ದೀಪಕಲಿಕಾ 4. ಕಂಟಕೋದ್ಧಾರ 5. ಗುರುಭಾವಪ್ರಕಾಶಿಕಾ ಶ್ರುತಪ್ರಕಾಶಿಕಾವ್ಯಾಖ್ಯಾ 6. ಮಧ್ವಚಂದ್ರಿಕಾಖಂಡನಂ 7. ಚಂಪಕೇಶೀಯಂ 8. ತತ್ವಪ್ರಕಾಶಿಕಾ 9 ಅದ್ವೈತವಿದ್ಯಾವಿಜಯಂ 10. ಬ್ರಹ್ಮವಿದ್ಯಾವಿಜಯಂ 11. ಪರಿಕರವಿಜಯಂ 12 ವೇದಾಂತಕೌಸ್ತುಭಂ 13. ವಿಷ್ಣುಪುರಾಣಂ14 ನಾರದೀಯಶಿಲ್ಪಂ 15. ಅಲಂಕಾರಸರ್ವಸ್ವಂ (ವಿದ್ಯಾಚಕ್ರವರ್ತಿವ್ಯಾಖ್ಯಾನಂ) 16 ದ್ವಿಸಾರ್ವಮದುರ್ನಾಟಕಂ 17, ಉತ್ಸವಸಂಗ್ರಹ 18. ಪ್ರಾಯಶ್ಚಿತ್ತಸಂಗ್ರಹ 19. ವಿಶ್ವಾಮಿತ್ರಸಂಹಿತಾ 20. ಅನಿರುದ್ಧಸಂಹಿತಾ 21. ನಾರದಸಂಹಿತಾ 22. ವಿಷ್ವಕ್ಸೇನ 23. ಮಾರ್ಕಂಡೇಯ 24 ಭಾರ್ಗವ 25. ಸನಂದಸಂಹಿತಾ 26. ಶಾಂಡಿಲ್ಯ · 27. ವಿಷ್ಣುತಂತ್ರ 28. ಭಗವನ್ನಾಮಚಿಂತಾಮಣಿ 29. ಪ್ರಮಾಣಸಂಗ್ರಹ 30. ರಸಿಕರಸಾಯನ ಇತ್ಯಾದಿ ಗ್ರಂಥಗಳು.

ಇವರ ಪೂರ್ವಾಶ್ರಮದ ತಮ್ಮಂದೀರು ಆಸೂರಿ ಕೃಷ್ಣಯ್ಯಂಗಾರ್ಯರು ಬರೆದಿರುವ ಗ್ರಂಥಗಳು.— 1. ಸಂಪ್ರದಾಯಪ್ರಮಾಣ 2. ಗೀತಾರ್ಥಸಂಗ್ರಹ 3. ಸಪ್ತಶ್ಲೋಕೀ ( ಪತ್ತಿಸೇನಾದೀನಾಂ ಸಂಖ್ಯಾ ಕನ್ನಡಪದ್ಯ ಸಂಸ್ಕೃತ ವ್ಯಾಖ್ಯಾನ ) 4. ಊರ್ಧ್ವಪುಂಡ್ರವಿಧಿಃ—

ಈ ರೀತಿಯಲ್ಲಿ ವೇದಾಂತಶಾಸ್ತ್ರಗಳನ್ನು ಶೋಧಿಸಿ ಪ್ರಚಾರಮಾಡಿ ಶಿಷ್ಯರಿಗೆ ತಪ್ತಚಕ್ರಾಂಕನ ಮಂತ್ರೋಪದೇಶಗಳನ್ನೂ, ಉಭಯವೇದಾಂತಕಾಲಕ್ಷೇಪ ತದೀಯಾರಾಧನೆಗಳನ್ನೂ ನಡೆಸಿ ಶ್ರೀತಿರುನಾರಾಯಣ, ಚೆಲ್ವಪ್ಪಿಳ್ಳೆ, ಯದುಗಿರಿ ನಾಚ್ಚಿಯಾರ್, ಉಡೈಯರವರು ಇವರುಗಳನ್ನು ಮಂಗಲಾಶಾಸನಮಾಡುತ್ತ ಲೋಕಕ್ಷೇಮಾರ್ಥವಾಗಿ ೩೨ ಚಾತುರ್ಮಾಸವ್ರತದೀಕ್ಷಿತರಾಗಿದ್ದು ಶಕ ೧೮೬೫ ನೇ ಸ್ವಭಾನು ಸಂ॥ ವೈಶಾಖ ಶುದ್ಧ ತ್ರಯೋದಶೀ ದಿನ ತಿರುನಾರಾಯಣಪುರದಲ್ಲಿ ( 17, 5. 1943. ) ಪರಮಪದಿಸಿದರು.

ಅನಂತರ ಶಿಷ್ಯರೆಲ್ಲರೂಸೇರಿ ತಿರುನಾರಾಯಣಸನ್ನಿಧಿಯಿಂದ ಸಕಲವಾದ ಮರ್ಯಾದೆಗಳನ್ನೂ ತರಿಸಿ ಶ್ರೀಚೂರ್ಣಪರಿಪಾಲನವನ್ನು ನಡೆಸಿ ಸಮಸ್ತವಾದ್ಯ

ಬಿರುದಾವಳಿಗಳಿಂದ ಬ್ರಹ್ಮಮೇಧಸಂಸ್ಕಾರವನ್ನು ನಡೆಸಿ ಅವಭೃತವನ್ನು ಕೊಂಡಾಡಿದರು. ಹತ್ತುದಿನವೂ ಬೃಂದಾವನಪೂಜೆ ನಡೆದು ನಾರಾಯಣಬಲಿ ಮೊದಲಾದವುಗಳನ್ನು ನಡೆಸಿಬಂದರು. ಅನಂತರ ವೈಷ್ಣವಯಾಗವಾದ ನಾಲ್ಕು ಸಾವಿರ ದಿವ್ಯಪ್ರಬಂಧವನ್ನು ನಡೆಸಿ ಕೃತಾರ್ಥರಾದರು.

ಶ್ರೀಜೀಯರುಸ್ವಾಮಿಗಳು ಪರಮಪದಿಸಿದಮೇಲೂ ಅವರ ವಿದ್ವತ್ತೇಜಸ್ಸು ಸಿದ್ಧಾಂತಗ್ರಂಥರೂಪಗಳಾಗಿ ಪ್ರಕಾಶಿಸುತ್ತಿರುವುದು.

"ಆಚಾರ್ಯವಾನ್ಪುರುಷೋವೇದ" ಎಂಬುದಾಗಿ ಅತಿಶಯ ವಿದ್ವಾಂಸರಾಗಿ ಶ್ರೀಭಾಷ್ಯಕಾರರ ವಂಶಸ್ಥರಾಗಿಯೂ, ವರ್ಣಾಶ್ರಮ ಪರಿಪಾಲನ ಸಿದ್ಧಾಂತಸ್ಥಾಪನ ದಲ್ಲಿ ಬದ್ಧಕಂಕಣರಾಗಿಯೂ, "ಮಂತ್ರೇತದ್ದೇವತಾಯಾಂ ಚತಥಾ ಮಂತ್ರಪ್ರದೇ ಗುರೌ । ತ್ರಿಷುಭಕ್ತಿಸ್ಸದಾಕಾರ್ಯಾಸಾಹಿಪ್ರಥಮಸಾಧನಮ್ ॥ " ಎನ್ನುವಂತೆ ಶಿಷ್ಯರಾದ ನಮಗೆ ಆಚಾರ್ಯರಾಗಿಯೂ, ಅವರಿಂದ ಮಂತ್ರೋಪದೇಶಗಳನ್ನು ಹೊಂದಿದ ನಮ್ಮಭಾಗ್ಯವು ಅತಿಶಯವಾಗಿರುವುದು. ಶಿಷ್ಯತ್ವವನ್ನು ಅಂಗೀಕರಿಸಿ ಅವರ ತಿರುನಕ್ಷತ್ರವರ್ಧಂತ್ಯುತ್ಸವವನ್ನು ಈದಿನ ನಡೆಸಿಬರುವುದು ಅತ್ಯಂತ ಪ್ರಶಂಸನೀಯವೂ, ಸಂತೋಷಕರವೂ, ನಮ್ಮಪೂರ್ವಪುಣ್ಯಫಲವೂ ಆಗಿರುವುದು. ಆಚಾರ್ಯರ ಗುರುಪರಂಪರಾ ಇತಿಹಾಸಚರಿತ್ರೆಗಳನ್ನು ಈರೀತಿ ಬರವಣಿಗೆರೂಪದಲ್ಲಿ ಗ್ರಂಥವಾಗಿಬರೆದು ಆಚಾರ್ಯರಸನ್ನಿಧಿಯಲ್ಲಿ ನಮಗಿರುವ ಕೃತಜ್ಞತಾದಿ ಪ್ರೀತಿ ವಿಶ್ವಾಸಾದಿ ಗೌರವಗಳಿಂದಲೂ, ಭಕ್ತಿಯಿಂದಲೂ, ಶಿಷ್ಯತ್ವವನ್ನು ತೋರಿಸಿ ಈ ಗುರುಪರಂಪರಾಗ್ರಂಥವನ್ನು ಸ್ವಾಚಾರ್ಯರ ೯೭ ನೇ ತಿರುನಕ್ಷತ್ರ ಜ್ಞಾಪಕಾರ್ಥ ವಾಗಿ ಪ್ರಕಾಶಪಡಿಸಿ ಕೃತಾರ್ಥರಾಗುವೆವು.

ಏಧತಾಂ ಯತಿರಾಜಸ್ಯ ಸಾಮ್ರಾಜ್ಯಂ ಸರ್ವತೋಮುಖಂ ।
ಯತ್ರಸಂಪತ್ಕುಮಾರೋಪಿ ಯುವರಾಜಪದಾಸ್ಪದಮ್ ॥

# ಶ್ರೀ ಕೃ. ತಿರುವೆಂಕಟಾಚಾರ್ಯಸ್ವಾಮಿ

( ಕೃಷ್ಣಕುಮಾರ ಕೂತ್ತಾಡಿ ಜೀಯರು )

ಶ್ರೀಮತ್ಕೃಷ್ಣಕುಮಾರವಂಶಜಮಣಿಂ ವಾಧೂಲಗೋತ್ರೋದ್ಭವಂ
ನಾಮ್ನಾ ಶ್ರೀತಿರುವೇಂಕಟಾರ್ಯಮನಘಂ ಪ್ರಾಪ್ತಾಗಮಾಂತದ್ವಯಂ
ಯದ್ವದ್ಧೌ ಯತಿರಾಜಪೂಜಿತಮಠೇ ಸಂಪ್ರಾಪ್ತ ತುರ್ಯಾಶ್ರಮಂ
ಶ್ರೀನಾರಾಯಣ ಲಕ್ಷ್ಮಣಾರ್ಯಯಮಿನಂ ಸೇವೇ ಸದಾಸಾದರಂ ||

ಪಾರ್ಥಿವಾಬ್ದೇ ಧನುರ್ಮಾಸೇ ರೇವತ್ಯಾಂ ವಿಹಿತೋದಯಂ
ನಾರಾಯಣಪದಾಶ್ಲಿಷ್ಟ ರಾಮಾನುಜಮುನಿಂ ಭಜೇ ||

ಈ ಮಹಾಪುರುಷರು ಶಕ ೧೮೦೭ ನೇ ಪಾರ್ಥಿವ ಸಂ|| ಧನುರ್ಮಾಸ ರೇವತೀನಕ್ಷತ್ರದಲ್ಲಿ ವಾಧೂಲಗೋತ್ರದವರಾಗಿ ಜನಿಸಿದರು. ಇವರ ಪಿತೃ, ಪಿತಾಮಹಾದಿ ಪೂರ್ವೀಕರು ದೇವರಸನ್ನಿಧಿಯಲ್ಲಿ ನಿರಂತರವಾಗಿ ಚಾಮರ, ಬೀಸಣಿಗೆ ಮೊದಲಾದ ಶ್ವೇತ್ಯೋಪಚಾರಾದಿ ಕೈಂಕರ್ಯಗಳಲ್ಲಿ ನಿರತರಾದವರು. ಇವರ ತಂದೆಯವರೂ, ಇವರೂ ಕೈ ಕೆಲಸದ ಕೆಲವು ಕುಶಲಕಲೆಗಳಲ್ಲಿ ನೈಪುಣ್ಯವನ್ನು ಹೊಂದಿದ್ದರು. ಇವರು ವೇದಾಂತಶಾಸ್ತ್ರವನ್ನು ಅಧಿಕರಿಸಿ ಕೆಲವುದಿನ ಮೈಸೂರುರಾಜಧಾನಿಯ ಪಾಠಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯರಾಗಿದ್ದರು. ಈ ಕಾಲದಲ್ಲಿ ಸಂಸಾರ ವಿಚ್ಛಿನ್ನವಾದ್ದರಿಂದ ವಿರಕ್ತಿಯುಳ್ಳವರಾಗಿ ೨೫ ವರ್ಷಗಳ ಕಾಲ ಏಕಾಂಗಿಯಾಗಿ ತಿರುನಾರಾಯಣಪುರದಲ್ಲೂ, ಶ್ರೀರಂಗಕ್ಷೇತ್ರದಲ್ಲೂ ಕಾಲಕ್ಷೇಪಾದಿಗಳನ್ನು ನಡೆಸಿಕೊಂಡುಬಂದರು.

ಈ ಕಾಲದಲ್ಲಿ ಆಸೂರಿ ಜೀಯರು ತಿರುನಾರಾಯಣಪುರದಲ್ಲಿ ಪರಮಪದಿಸಲು ಶಿಷ್ಯರೆಲ್ಲರೂ ಸೇರಿ ಈ ಮಹಾಪುರುಷರನ್ನು ಪ್ರಾರ್ಥಿಸಲು ಇವರು ಅನುಮೋದಿಸಿ ಶಕ ೧೮೬೬ ನೇ ತಾರಣ ಸಂ|| (ಕ್ರಿ.ಶ. 1944) ರಲ್ಲಿ ಸನ್ಯಾಸವನ್ನು ಸ್ವೀಕರಿಸಿ ಶ್ರೀ ಯತಿರಾಜಮಠದಲ್ಲಿ ೩೭ ನೇ ಪೀಠಸ್ಥರಾದರು.

ಆಶ್ರಮ ಸ್ವೀಕಾರ ಕಾಲದಲ್ಲಿ ಶ್ರೀಮಂತರು ನಾಯಕ ಅನಂದಾಳ್ವಾರ್, ತಿನಂದಾಂಪಿಳ್ಳೈರಂಗಾಚಾರ್ಯರು, ಜಯರಾಮ ತಿರುಮಲಯ್ಯಂಗಾರ್ಯರು ಇವರುಗಳು ಶ್ರೀಮಠದ ಎಲ್ಲಾ ಕಾರ್ಯಗೌರವಗಳನ್ನೂ ನಡೆಸಿಬಂದರು. ಜೀಯರು ಶಿಷ್ಯರಿಗೆ ಪಂಚಸಂಸ್ಕಾರಮಂತ್ರೋಪದೇಶಗಳನ್ನು ಅನುಗ್ರಹಿಸಿಬಂದರು. ಈ ಜೀಯರು ಅಧಿಕ ಆಚಾರನಿಷ್ಠರು.



ಶ್ರೀ ಕೃಷ್ಣಕುಮಾರ ತಿರುವೆಂಕಟಾಚಾರ್ಯ ಜೀಯರ್

ಆಶ್ರಮ ಸ್ವೀಕಾರ ಶಕಾಬ್ದ : ೧೮೬೬

— —1944

ಬಿರುದಾವಳಿಗಳಿಂದ ಬ್ರಹ್ಮಮೇಧಸಂಸ್ಕಾರವನ್ನು ನಡೆಸಿ ಅವಭೃತವನ್ನು ಕೊಂಡಾಡಿದರು. ಹತ್ತುದಿನವೂ ಬೃಂದಾವನಪೂಜೆ ನಡೆದು ನಾರಾಯಣಬಲಿ ಮೊದಲಾದವುಗಳನ್ನು ನಡೆಸಿಬಂದರು. ಅನಂತರ ವೈಷ್ಣವಯಾಗವಾದ ನಾಲ್ಕು ಸಾವಿರ ದಿವ್ಯಪ್ರಬಂಧವನ್ನು ನಡೆಸಿ ಕೃತಾರ್ಥರಾದರು.

ಶ್ರೀಜೀಯರುಸ್ವಾಮಿಗಳು ಪರಮಪದಿಸಿದಮೇಲೂ ಅವರ ವಿದ್ವತ್ತೇಜಸ್ಸು ಸಿದ್ಧಾಂತಗ್ರಂಥರೂಪಗಳಾಗಿ ಪ್ರಕಾಶಿಸುತ್ತಿರುವುದು.

“ಆಚಾರ್ಯವಾನ್‌ಪುರುಷೋವೇದ” ಎಂಬುದಾಗಿ ಅತಿಶಯ ವಿದ್ವಾಂಸರಾಗಿ ಶ್ರೀಭಾಷ್ಯಕಾರರ ವಂಶಸ್ಥರಾಗಿಯೂ, ವರ್ಣಾಶ್ರಮ ಪರಿಪಾಲನ ಸಿದ್ಧಾಂತಸ್ಥಾಪನ ದಲ್ಲಿ ಬದ್ಧಕಂಕಣರಾಗಿಯೂ, ”ಮಂತ್ರೇತದ್ದೇವತಾಯಾಂ ಚತಥಾ ಮಂತ್ರಪ್ರದೇ ಗುರೌ । ತ್ರಿಷುಭಕ್ತಿಸ್ಸದಾಕಾರ್ಯಾಸಾಹಿಪ್ರಥಮಸಾಧನಮ್ ॥ ” ಎನ್ನುವಂತೆ ಶಿಷ್ಯರಾದ ನಮಗೆ ಆಚಾರ್ಯರಾಗಿಯೂ, ಅವರಿಂದ ಮಂತ್ರೋಪದೇಶಗಳನ್ನು ಹೊಂದಿದ ನಮ್ಮಭಾಗ್ಯವು ಅತಿಶಯವಾಗಿರುವುದು. ಶಿಷ್ಯತ್ವವನ್ನು ಅಂಗೀಕರಿಸಿ ಅವರ ತಿರುನಕ್ಷತ್ರವರ್ಧಂತ್ಯುತ್ಸವವನ್ನು ಈದಿನ ನಡೆಸಿಬರುವುದು ಅತ್ಯಂತ ಪ್ರಶಂಸನೀಯವೂ, ಸಂತೋಷಕರವೂ, ನಮ್ಮಪೂರ್ವಪುಣ್ಯಫಲವೂ ಆಗಿರುವುದು. ಆಚಾರ್ಯರ ಗುರುಪರಂಪರಾ ಇತಿಹಾಸಚರಿತ್ರೆಗಳನ್ನು ಈರೀತಿ ಬರವಣಿಗೆರೂಪದಲ್ಲಿ ಗ್ರಂಥವಾಗಿಬರೆದು ಆಚಾರ್ಯರಸನ್ನಿಧಿಯಲ್ಲಿ ನಮಗಿರುವ ಕೃತಜ್ಞತಾದಿ ಪ್ರೀತಿ ವಿಶ್ವಾಸಾದಿ ಗೌರವಗಳಿಂದಲೂ, ಭಕ್ತಿಯಿಂದಲೂ, ಶಿಷ್ಯತ್ವವನ್ನು ತೋರಿಸಿ ಈ ಗುರುಪರಂಪರಾಗ್ರಂಥವನ್ನು ಸ್ವಾಚಾರ್ಯರ ೯೭ ನೇ ತಿರುನಕ್ಷತ್ರ ಜ್ಞಾಪಕಾರ್ಥ ವಾಗಿ ಪ್ರಕಾಶಪಡಿಸಿ ಕೃತಾರ್ಥರಾಗುವೆವು.

ಏಧತಾಂ ಯತಿರಾಜಸ್ಯ ಸಾಮ್ರಾಜ್ಯಂ ಸರ್ವತೋಮುಖಂ ।
ಯತ್ರಸಂಪತ್ಕುಮಾರೋಪಿ ಯುವರಾಜಪದಾಸ್ಪದಮ್ ॥

# ಶ್ರೀ ಕೃ. ತಿರುವೆಂಕಟಾಚಾರ್ಯಸ್ವಾಮಿ

( ಕೃಷ್ಣಕುಮಾರ ಕೊತ್ತಾಡಿ ಜೀಯರು )

ಶ್ರೀಮತ್ಕೃಷ್ಣಕುಮಾರವಂಶಜಮಣಿಂ ವಾಧೂಲಗೋತ್ರೋದ್ಭವಂ
ನಾಮ್ನಾ ಶ್ರೀತಿರುವೇಂಕಟಾರ್ಯಮನಘಂ ಪ್ರಾಪ್ತಾಗಮಾಂತದ್ವಯಂ
ಯದ್ವದ್ರಾ ಯತಿರಾಜಪೂಜಿತಮಠೇ ಸಂಪ್ರಾಪ್ತ ತುರ್ಯಾಶ್ರಮಂ
ಶ್ರೀನಾರಾಯಣ ಲಕ್ಷ್ಮಣಾರ್ಯಯಮಿನಂ ಸೇವೇ ಸದಾಸಾದರಂ ||

ಪಾರ್ಥಿವಾಬ್ದೇ ಧನುರ್ಮಾಸೇ ರೇವತ್ಯಾಂ ವಿಹಿತೋದಯಂ
ನಾರಾಯಣಪದಾಶ್ಲಿಷ್ಟ ರಾಮಾನುಜಮುನಿಂ ಭಜೇ ||

ಈ ಮಹಾಪುರುಷರು ಶಕ ೧೮೦೭ ನೇ ಪಾರ್ಥಿವ ಸಂ || ಧನುರ್ಮಾಸ ರೇವತೀನಕ್ಷತ್ರದಲ್ಲಿ ವಾಧೂಲಗೋತ್ರದವರಾಗಿ ಜನಿಸಿದರು. ಇವರ ಪಿತೃ, ಪಿತಾಮಹಾದಿ ಪೂರ್ವಿಕರು ದೇವರಸನ್ನಿಧಿಯಲ್ಲಿ ನಿರಂತರವಾಗಿ ಚಾಮರ, ಬೀಸಣಿಗೆ ಮೊದಲಾದ ಶೈತ್ಯೋಪಚಾರಾದಿ ಕೈಂಕರ್ಯಗಳಲ್ಲಿ ನಿರತರಾದವರು. ಇವರ ತಂದೆಯವರೂ, ಇವರೂ ಕೈ ಕೆಲಸದ ಕೆಲವು ಕುಶಲಕಲೆಗಳಲ್ಲಿ ನೈಪುಣ್ಯ ವನ್ನು ಹೊಂದಿದ್ದರು. ಇವರು ವೇದಾಂತಶಾಸ್ತ್ರವನ್ನು ಅಧಿಕರಿಸಿ ಕೆಲವುದಿನ ಮೈಸೂರುರಾಜಧಾನಿಯ ಪಾಠಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯರಾಗಿದ್ದರು. ಈ ಕಾಲದಲ್ಲಿ ಸಂಸಾರ ವಿಚ್ಛಿನ್ನವಾದ್ದರಿಂದ ವಿರಕ್ತಿಯುಳ್ಳವರಾಗಿ ೨೫ ವರ್ಷಗಳ ಕಾಲ ಏಕಾಂಗಿಯಾಗಿ ತಿರುನಾರಾಯಣಪುರದಲ್ಲೂ, ಶ್ರೀರಂಗಕ್ಷೇತ್ರದಲ್ಲೂ ಕಾಲಕ್ಷೇಪಾದಿಗಳನ್ನು ನಡೆಸಿಕೊಂಡುಬಂದರು.

ಈ ಕಾಲದಲ್ಲಿ ಆಸೂರಿ ಜೀಯರು ತಿರುನಾರಾಯಣಪುರದಲ್ಲಿ ಪರಮಪದಿಸಲು ಶಿಷ್ಯರೆಲ್ಲರೂ ಸೇರಿ ಈ ಮಹಾಪುರುಷರನ್ನು ಪ್ರಾರ್ಥಿಸಲು ಇವರು ಅನುಮೋದಿಸಿ ಶಕ ೧೮೬೬ ನೇ ತಾರಣ ಸಂ|| (ಕ್ರಿ.ಶ. 1944) ರಲ್ಲಿ ಸನ್ಯಾಸವನ್ನು ಸ್ವೀಕರಿಸಿ ಶ್ರೀ ಯತಿರಾಜಮಠದಲ್ಲಿ ೩೭ ನೇ ಪೀಠಸ್ಥರಾದರು.

ಆಶ್ರಮ ಸ್ವೀಕಾರ ಕಾಲದಲ್ಲಿ ಶ್ರೀಮಂತರು ನಾಯಕ ಅನಂದಾಳ್ವಾರ್, ಅನಂದಾಂಪಿಳ್ಳೈರಂಗಾಚಾರ್ಯರು, ಜಯರಾಮ ತಿರುಮಲಯ್ಯಂಗಾರ್ಯರು ಇವರುಗಳು ಶ್ರೀಮಠದ ಎಲ್ಲಾ ಕಾರ್ಯಗೌರವಗಳನ್ನೂ ನಡೆಸಿಬಂದರು. ಜೀಯರು ಶಿಷ್ಯರಿಗೆ ಪಂಚಸಂಸ್ಕಾರಮಂತ್ರೋಪದೇಶಗಳನ್ನು ಅನುಗ್ರಹಿಸಿಬಂದರು. ಈ ಜೀಯರು ಅಧಿಕ ಆಚಾರನಿಷ್ಠರು.

ಶ್ರೀಮಠದ ಆರ್ಥಿಕಸ್ಥಿತಿಯು ಸರಿಯಾಗಿಲ್ಲದ್ದನ್ನು ಆಸೂರಿ ಜೀಯರು ಕಂಡು ಸುಖೋತ್ತರವಾಗಿ ಧರ್ಮಾಚರಣೆಗಳು ನಡೆಸಲು ಏರ್ಪಡಿಸಿದ ಮಾರ್ಗದಲ್ಲಿ ಈ ಜೀಯರು ಶ್ರಮಪಟ್ಟು ಶ್ರೀಮಂತರಾದ ನ್ಯಾಯಚಕ್ರವರ್ತಿ ಅನಂದಾಳ್ವಾರ್, ಜಯರಾಮ ತಿರುಮಲಯ್ಯಂಗಾರ್, ಎಂ. ಆರ್. ನರಸಿಂಹಯ್ಯಂಗಾರ್ ಇವರುಗಳ ಸಹಾಯದಿಂದ ಬೆಂಗಳೂರು ನಗರದಲ್ಲಿ ಶಾಖಾಮಠದ ಆವರಣದಲ್ಲಿ 50000 ರೂಪಾಯಿಗಳಿಗೆ ಮೇಲ್ಪಟ್ಟು ಕಟ್ಟಡಗಳನ್ನು ಕಟ್ಟಿಸಿ ಶ್ರೀಮಠದ ಸನ್ಯಾಸಿ ಧರ್ಮಾಚರಣೆಗೂ, ದರ್ಶನಸ್ಥಾಪನಕ್ಕೂ ನಿರಂತರವಾದ ವರಮಾನವನ್ನು ಏರ್ಪಡಿಸಿಬಂದರು.

ಸಮುದಾಯದ ಕೆಲವು ಧರ್ಮಶೀಲರು ಮಹಾತ್ಮರು ಸಮರ್ಪಿಸಿದ ದ್ರವ್ಯಗಳನ್ನು ತೆಗೆದು ರಾಜಧನಾಗಾರದಲ್ಲಿಟ್ಟು ಅವರುಗಳ ಅಭಿಪ್ರಾಯದಂತೆ ಧರ್ಮಕೈಂಕರ್ಯಾದಿಗಳನ್ನು ನಡೆಸಿಕೊಂಡುಬರಲು ಸಕಲ ಏರ್ಪಾಡುಗಳನ್ನು ನಡೆಸಿಬಂದರು.

ಇವರು ಶಿಷ್ಯಸಂರಕ್ಷಣೆಯನ್ನು ವಿಶಿಷ್ಟಾದ್ವೈತ ವೇದಾಂತಪ್ರಚಾರವನ್ನೂ ಶ್ರೀಮಠಕ್ಕೆ ಇನ್ನೂ ಅಧಿಕವಾಗಿ ದ್ರವ್ಯಾರ್ಜನೆಯಿಂದ ಧರ್ಮ ಕೈಂಕರ್ಯ ಗಳನ್ನೂ ನಡೆಸಲು ಕಾಲದೇಶ ವರ್ತಮಾನಗಳನ್ನು ನಿರೀಕ್ಷಿಸಿಕೊಂಡಿದ್ದು ತಿರುನಾರಾಯಣ ಚಿಲ್ಲಪ್ಪಿಳ್ಳೆಯವರ ಕೈಂಕರ್ಯಾದಿಗಳನ್ನೂ ಉಭಯವೇದಾಂತಾದಿ ಕಾಲಕ್ಷೇಪವನ್ನೂ ನಡಿಸಿಕೊಂಡುಬರುತ್ತಿರುವ ಕಾಲದಲ್ಲಿ ಶ್ರೀರಂಗಕ್ಷೇತ್ರದಲ್ಲಿ ಶ್ರೀರಂಗನಾರಾಯಣ ಜೀಯರು ಪರಮಪದಿಸಿದರು. ಅಲ್ಲಿದ್ದ ಶ್ರೀವೈಷ್ಣವರು ದೇವಸ್ಥಾನದ ಧರ್ಮಾಧಿಕಾರಿಗಳೂ ಸೇರಿ ಶ್ರೀರಂಗನಾರಾಯಣ ಜೀಯರ ಮಠವನ್ನು ಜೀರ್ಣೋದ್ಧಾರಮಾಡಬೇಕೆಂದ ಪ್ರಾರ್ಥನೆಯನ್ನಂಗೀಕರಿಸಿ ಈ ಜೀಯರು ಶ್ರೀರಂಗಕ್ಕೆ ದಯಮಾಡಿಸಿ ಶ್ರೀರಂಗನಾಥರಕೈಂಕರ್ಯದಲ್ಲಿ ಅನ್ವಯಿಸಿದರು.

ಇಲ್ಲಿದ್ದ ಶ್ರೀವೈಷ್ಣವರೂ, ಶಿಷ್ಯರುಗಳೂ ಸೇರಿ ಆಚಾರ್ಯರ ಆಜ್ಞೆಯಂತೆ ವಿದ್ವಾಂಸರಾದ ರಾ. ಅ. ಅಯ್ಯನಯ್ಯಂಗಾರ್ಯರನ್ನು ಪ್ರಾರ್ಥಿಸಿ ಆಚಾರ್ಯರನ್ನಾಗಿ ಏರ್ಪಡಿಸಿಕೊಂಡರು. ಶ್ರೀ ಕೃಷ್ಣಕುಮಾರಜೀಯರು ಲೋಕಕ್ಷೇಮಾರ್ಥವಾಗಿ ಶ್ರೀ ಯತಿರಾಜಮಠದಲ್ಲಿ ೧೦ ಚಾತುರ್ಮಾಸವ್ರತಗಳನ್ನು ಅನುಷ್ಠಿಸಿ ಬಂದವರಾದರು.

# ಶ್ರೀ ರಾ. ಅ. ಅಯ್ಯನಯ್ಯಂಗಾರ್ಯಸ್ವಾಮಿ

( ರಾಮಾನುಜಪುರಂ ಅನಂದಾಂಪ್ಪಿಳ್ಳೈಜೀಯರು )

ಶೇಷಾರ್ಯಾನ್ವಯ ಪುಷ್ಕರಾಂಬುರಮಣೇಃ ರಾಮಾನುಜಾರ್ಯಾದ್ಗುರೋಃ
ಸಂಪ್ರಾಪ್ತೋಭಯವೇದಮೌಳಿಹೃದಯಂ ಶ್ರೀ ಶ್ರೀನಿವಾಸಾಭಿದಂ ।
ಯದ್ವದ್ಧ್ಯಾಯತಿ ಸಾರ್ವಭೌಮನಿಲಯೇ ಸಂಪ್ರಾಪ್ತತುರ್ಯಾಶ್ರಮಂ
ವಂದೇಹಂ ಯದುಭೂಧರೇಂದ್ರ ಯತಿರಾಟ್ಸಂಸಂಪತ್ಕುಮಾರಂ ಮುನಿಂ ||

ಸರ್ವಜನ್ಮಿನ ಹಸ್ತರ್ಕ್ಷೇ ರಾಮಾನುಜ ಗುರೂದ್ಭವಂ
ವೇದ ವೇದಾಂತಸಾರಜ್ಞಂ ಸಂಪತ್ಕುಮಾರಮುನಿಂ ಭಜೇ ।

ಈ ಮಹಾಪುರುಷರು ಶಕ ೧೮೧೦ ನೇ ಸರ್ವಜಿತು ಸಂ|| ವಿಷಾನಮಾಸ ಹಸ್ತ ನಕ್ಷತ್ರದಲ್ಲಿ ಜನಿಸಿದರು. ಶ್ರೀ ರಾಮಾನುಜಾಚಾರ್ಯರ ಶಿಷ್ಯರಾಗಿ ಅವರಿಂದ ನೇರವಾಗಿ ಆಜ್ಞಾಪಿಸಲ್ಪಟ್ಟು ಶ್ರೀ ತಿರುಪತಿ ಶ್ರೀನಿವಾಸದೇವರ ಸರ್ವವಿಧ ಕೈಂಕರ್ಯ ಗಳನ್ನೂ ಮಾಡಿದ ಮಹಾವಿದ್ವಾಂಸರಾದ ಅನಂದಾಳ್ವಾರ್ರ ವಂಶದವರು. ಈ ಅನಂದಾಳ್ವಾರ್ರು ೭೪ ಜನ ಸಿಂಹಾಸನಾಧಿಪತಿಗಳಲ್ಲಿ ಒಬ್ಬರು. ಈ ವಂಶದಲ್ಲಿ ಜನಿಸಿದ ಇವರು ಬಾಲ್ಯದಿಂದ ವೇದಾಂತತತ್ವಗಳಲ್ಲಿಯೇ ಆಸಕ್ತರಾಗಿದ್ದು ವೇದಾಂತಶಾಸ್ತ್ರ, ನ್ಯಾಯಶಾಸ್ತ್ರಗಳನ್ನು ಮೈಸೂರು ಸಂಸ್ಕೃತಮಹಾಪಾಠಶಾಲೆ ಯಲ್ಲಿ ಅಧಿಕರಿಸಿಬಂದು ಅದೇ ಸಂಸ್ಕೃತ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ಶಿಷ್ಯರಗಳಿಗೆ ವೇದ ವೇದಾಂತ ಪಾಠಪ್ರವಚನವನ್ನು ಉಪದೇಶಿಸಿಬಿಟ್ಟರು.

ಕ್ರಿ. ಶ. 1928 ರಲ್ಲಿ ಕಾಶೀಕ್ಷೇತ್ರದಲ್ಲಿ ನಡೆದ ಅಖಿಲಭಾರತ ವರ್ಣಾಶ್ರಮ ಸಭೆಗೆ ಆಹ್ವಾನಿತರಾಗಿ ಆಸೂರಿ ಜೀಯರುಸ್ವಾಮಿಗಳ ಜೊತೆಯಲ್ಲಿ ಶ್ರೀಮಠ ಪ್ರತಿನಿಧಿ ವಿದ್ವಾಂಸರಾಗಿ ಇವರೂ ವಿದ್ವಾನ್ ದೇವಶಿಖಾಮಣಿ ರಾಮಾನುಜಯ್ಯಂಗಾ ರ್ಯರು ಕಾರ್ಯಕ್ರಮಗಳನ್ನು ನಡೆಸಿಬಂದರು. ಇವರು ಗೃಹಸ್ಥಾಶ್ರಮದಲ್ಲಿ ದ್ದರೂ ವಿರಕ್ತಿಯುಳ್ಳವರಾಗಿಯೇ ಇದ್ದರು. ಇವರು ಶಿಷ್ಯರುಗಳು ಪ್ರಾರ್ಥಿಸಿ ದುದನ್ನು ಅಂಗೀಕರಿಸಿ ಶಕ ೧೮೭೬ ಜಯ ಸಂ|| ಆಷಾಢ ಶುದ್ಧ ಪಂಚಮಿ 5. 7. 1954 ರಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀ ಯತಿರಾಜಮಠದಲ್ಲಿ ಪೀಠಸ್ಥರಾದರು. ಇವರಿಗೆ ೩೮ ನೇ ಸಂಪತ್ಕುಮಾರರೆಂಬ ಹೆಸರು.

ಕಾಲ, ದೇಶ, ವರ್ತಮಾನಗಳನ್ನನುಸರಿಸಿ ಸಮುದಾಯದಲ್ಲಿ ಶಿಥಿಲವಾದ ಶಿಷ್ಯಾಚಾರ್ಯಕ್ರಮವನ್ನು ಸರಿಪಡಿಸಲು ಶಿಷ್ಯರಿಗೆ ಐಹಿಕ, ಆಮುಷ್ಮಿಕ



ಶ್ರೀ ರಾ. ಅ. ಅಯ್ಯನಯ್ಯಂಗಾರ್ಯರ್ ಜೀಯರ್

ಆಶ್ರಮ ಸ್ವೀಕಾರ ಶಕಾಬ್ದ : ೧೮೭೬

5—7—1954

ವಿಷಯಗಳನ್ನು ಉಪದೇಶಿಸಲು ವಿಶಿಷ್ಟಾದ್ವೈತ ವೇದಾಂತ ಪ್ರಚಾರ ಗ್ರಂಥಮಾಲೆಯೆಂಬುದಾಗಿಯೂ ಉಪನಿಷತ್ ವ್ಯಾಖ್ಯಾನಂಗಳನ್ನೂ ಸಂಪ್ರದಾಯ ದೀಪಿಕೆ ಎಂಬ ಗ್ರಂಥವನ್ನೂ ಬರೆದು ಬರುತ್ತಿರುವರು.

ಇವರು ಶಿಷ್ಯಸಂರಕ್ಷಣಾರ್ಥವಾಗಿಯೂ ವಿಶಿಷ್ಟಾದ್ವೈತ ವೇದಾಂತ ಪ್ರಚಾರಾರ್ಥವಾಗಿಯೂ, ದೇಶಪರ್ಯಟನವನ್ನುಮಾಡಲು ಸಂಕಲ್ಪಿಸಿ ಕಾಲ ದೇಶ ವರ್ತಮಾನಗಳನ್ನು ನಿರೀಕ್ಷಿಸಿದವರಾಗಿ ಕಾರ್ಯಕ್ರಮವನ್ನು ನಡೆಸಿ ಬರುತ್ತಿರುವರು. ಶ್ರೀಮಠದ ಧರ್ಮಾಚರಣೆಯನ್ನು ಸುಖೋತ್ತರವಾಗಿ ನಡೆಸಲು ಏರ್ಪಡಿಸಿದ ಕಾರ್ಯಕ್ರಮದಲ್ಲಿ ಶ್ರೀಮಠಕ್ಕೆ 50000 ರೂಗಳು ಸಾಲವಾಗಿರುವುದನ್ನು ತೀರಿಸಲು ಬಹು ಪ್ರಯತ್ನದಿಂದ ಆಲೋಚಿಸುತ್ತಿರುವರು. ಇದಕ್ಕಾಗಿ ಕಾಲ ದೇಶಗಳ ನಿರೀಕ್ಷಿತರಾಗಿ ತಿರುನಾರಾಯಣ ಚೆಲ್ವಪ್ಪಿಳ್ಳೆಯವರ ಕೈಂಕರ್ಯವನ್ನು ನಡೆಸಿಕೊಂಡು ಶ್ರೀಮಠದಲ್ಲಿ ನಿತ್ಯತದೀಯಾರಾಧನ ಉಭಯವೇದಾಂತ ಕಾಲಕ್ಷೇಪಾದಿಗಳನ್ನು ನಡೆಸಿಕೊಂಡುಬರುತ್ತಿರುವರು.

# ಶ್ರೀ ಯದುಗಿರಿ ಯತಿರಾಜಮಠ ಸಿಂಹಾಸನಾಧಿಪತಿಗಳ ಆಶ್ರಮ (ಆಶ್ರಯಣ) ಪರಂಪರಾ

| ಕ್ರ | ನಾಮಧೇಯ. | ಜನನಕಾಲ. | ಆಶ್ರಮಸ್ವೀಕಾರಕಾಲ. | ಪರಮಪದಕಾಲ. | ಪಟ್ಟದಹೆಸರು. | ಪರಮಪದಸ್ಥಳ. | ಆಶ್ರಮ ವರ್ಷಗಳು |
|---|---|---|---|---|---|---|---|
| | ಶ್ರೀಮತ್ಪರಮಹಂಸೇತ್ಯಾದಿ | | | | | | |
| | ಶ್ರೀರಾಮಾನುಜಾಚಾರ್ಯರು | ಶಕ ೯೩೯ ಪಿಂಗಲ ಸಂ॥ ಮೇಷ ಆರ್ದ್ರಾ. 1017 | 1049 | ೧೦೫೯ ಪಿಂಗಲ ಸಂ॥ ಮಾಘ, ಶು, ದಶಮಿ. . . 1138. | — — | ಶ್ರೀರಂಗ | ೮೮ |
| | ಶ್ರೀದೇಶಾಯಿ ತಿರುನಾರಾಯಣಜೀಯರು | — — | ೧೦೨೬ ಸ್ವಭಾನು ಸಂ॥ 1104 | ೧೦೬೨ ರೌದ್ರಿ ಸಂ॥ ಚೈತ್ರ ಬ. ಷಷ್ಠೀ. 1140 | — — | ತಿರುನಾರಾಯಣಪುರಂ | ೩೬ |
| | ಶ್ರೀತಿರುನಾರಾಯಣಜೀಯರು | — — | ೧೦೬೨ ರೌದ್ರಿ ಸಂ॥ 1140 | ೧೧೦೮ ಪರಾಭವ ಸಂ॥ ಪುಷ್ಯ ಶು, ಪ್ರಥಮಾ. 1186. | — — | ,, | ೪೭ |
| | ಶ್ರೀಯತಿರಾಜಜೀಯರು | — — | ೧೧೦೮ ಪರಾಭವ ಸಂ॥ 1186 | ೧೧೪೩ ವೃಷ ಸಂ॥ 1221. — | — — | ,, | ೩೪ |
| | ಶ್ರೀಯದುಗಿರಿನಾರಾಯಣಜೀಯರು | — | ೧೧೪೩ ವೃಷ ಸಂ॥ 1221 | — | — | ,, | |
| | ಶ್ರೀರಾಮಾನುಜಜೀಯರು (1368) | — | — | — | — | ,, | |
| | ಶ್ರೀಯತಿರಾಜ ರಾಮಾನುಜಜೀಯರು (1457) | — | — | — | — | ,, | |
| | ಶ್ರೀವೇದಾನ್ತಿ ರಾಮಾನುಜಮುನಿಗಳು | — | 1519 | . . 1565. | | ತಿರುನಾರಾಯಣಪುರ | ೪೫ |
| | ಶ್ರೀಸಂಪತ್ಕುಮಾರ ರಾಮಾನುಜಜೀಯರು | — | 1565 | — | — | ,, | ೧೨ |
| | ಶ್ರೀನಾರಾಯಣ ರಾಮಾನುಜಜೀಯರು | — | — | — | — | ,, | |
| | ಶ್ರೀಸಂಪತ್ಕುಮಾರ ರಾಮಾನುಜಜೀಯರು | — | — | — | — | ,, | |
| | ಶ್ರೀನಾರಾಯಣ ರಾಮಾನುಜಜೀಯರು | — | — | — | — | ,, | |
| | ಶ್ರೀಸಂಪತ್ಕುಮಾರ ರಾಮಾನುಜಜೀಯರು | — | — | — | — | ,, | |
| | ಶ್ರೀಕುಣಿಗಲ್ ಬಹುಕುಟುಂಬಿಸ್ವಾಮಿ | — — | — — | ೧೭೪೪ ಚಿತ್ರಭಾನು ಸಂ॥ . . 1822. | ನಾರಾಯಣ | ,, | |
| | ಶೊಂ. ಪ್ರ. ಭ. ಶಿಂಗರಯ್ಯಂಗಾರ್ಯಸ್ವಾಮಿ | ಕನ್ಯಾ, ಸ್ವಾತಿ. .... | ೧೭೪೪ ಚಿತ್ರಭಾನು ಸಂ॥ 1822. | ೧೭೬೧ ವಿಕಾರಿ ಸಂ॥ ಮಾರ್ಗಶಿರ ಶು, ಪೌರ್ಣಿಮೆ. 20. 12. 1839. | ಸಂಪತ್ಕುಮಾರ | ,, | ೧೮ |
| | ತಿಟ್ಟೆ ಮೇಲ್ ಅನಂದಾಳ್ವಾರ್‌ಸ್ವಾಮಿ | ಕುಂಭ, ಚಿತ್ತಾ. .... | ೧೭೬೧ ವಿಕಾರಿ ಸಂ॥ ಮಾರ್ಗಶಿರ ಶು. [illegible] 19. 12. 1839. | ೧೭೭೧ ಸೌಮ್ಯ ಸಂ॥ 1849. | ನಾರಾಯಣ | ,, | ೧೦ |
| | ಛಾರದೋಗ್ಯಂ ಕುಪ್ಪನಯ್ಯಂಗಾರ್‌ಸ್ವಾಮಿ | ಕರ್ಕಾಟಕ, ಕೃತ್ತಿಕಾ. .... | .... .... .... .... | ೧೭೮೦ ಕಾಲಯುಕ್ತಿ ಸಂ॥ ಅಧಿಕ ಜ್ಯೇಷ್ಠ ಶು, ೧೨. 24. 5. 1858. | ಸಂಪತ್ಕುಮಾರ | ,, | |
| | ನಾಟೇರಿ ವರದಾಚಾರ್ಯಸ್ವಾಮಿ | ಕುಂಭ, ರೇವತಿ. .... | ೧೭೭೬ ಪ್ರಮಾದೀಚ ಸಂ॥ ಮಾಘ. 1854. | ೧೮೧೨ ವಿಕೃತಿ ಸಂ॥ ಸಿಂಹ ಬ. ತೃತೀಯಾ 1. 9. 1890. | ನಾರಾಯಣ | ಗೋವಿಂದಘಡ | ೩೭ |
| | ಪೈಯ್ಯಾರ್ ವೆಂಕಟಾಚಾರ್ಯಸ್ವಾಮಿ (ಮುದಿಗುಂಭಸ್ವಾಮಿ) | ೧೭೩೬ ಭಾವ ಸಂ॥ ಮಿಥುನ ಭರಣಿ. 1814. | ೧೭೮೯ ಪ್ರಭವ ಸಂ॥ ಚೈತ್ರ 1867. | ೧೭೯೬ ಭಾವ ಸಂ॥ ಆಷಾಢ ಶು. ತೃತೀಯಾ. 17. 6. 1874. | ಸಂಪತ್ಕುಮಾರ | ತಿರುನಾರಾಯಣಪುರಂ | ೭ |

| | | | | | | |
|---|---|---|---|---|---|---|
| 29. | [illegible]ಗ ಶಿಂಗಲಾಚಾರ್ಯಸ್ವಾಮಿ | ೧೭೨೭ ಕ್ರೋಧನ ಸಂ॥ ಆ[illegible], ಪೂರ್ವಾಭಾದ್ರಾ 18[illegible]5. | ೧೭೯೬ ಭಾವ ಸಂ॥ ಆಷಾಢ ಶು. ತೃತೀಯಾ 17. 6. 1874. | ೧೭೯೮ ಧಾತು ಸಂ॥ ಆಷಾಢ ಶು, ದ್ವಿತೀಯಾ 23. 6. 1876. | ನಾರಾಯಣ | ,, |
| 30. | ನಾಟೆಂಕಳ್ಳಿ ಆ[illegible]ಯಶಿಂಗರ್ ಸ್ವಾಮಿ | ಕರ್ಕಾಟಕ, ಪೂರ್ವಾಭಾ[illegible]. .... | .... .... | ೧೮೦೭ ಪಾರ್ಥಿವ ಸಂ॥ ಫಾಲ್ಗುಣ ಬ, ಪಂಚಮಿ 24. 3. 1886. | ಸಂಪತ್ಕುಮಾರ | ಶ್ರೀಕೂರ್ಮಂ |
| 31. | ನಾಟೆಂಕಳ್ಳಿ ತಿರುನಾರಾ[illegible]ಣಪ್ಪೆರುಮಾಳ್ | ೧೭೨೨ ರೌದ್ರಿ ಸಂ॥ ಮಿಥು[illegible], ಆದ್ರ್ರ, 22. 6. 1800 | ೧೮೦೭ ಪಾರ್ಥಿವ, ಫಾಲ್ಗುಣ ಕೃಷ್ಣ ಪಂಚಮಿ, 24. 3, 1886. | ೧೮೦೯ ಸರ್ವಜಿತು ಸಂ॥ ಶ್ರಾವಣ ಅಮಾವಾಸ್ಯಾ 3. 8. 1887. | ನಾರಾಯಣ | ನಾಗಪುರ |
| 32. | ಜೀಯರ್ ಸನ್ನಿಧಿ ತಿರುಮಲಾಚಾರ್ಯಸ್ವಾಮಿ | ಕರ್ಕಾಟಕ, ಸ್ವಾತಿ. .... | ೧೮೦೯ ಸರ್ವಜಿತು ಸಂ॥ ಆಶ್ವಯುಜ. . 10. 1887. | ೧೮೨೩ ಪ್ಲವ ಸಂ॥ ಆಶ್ವಯುಜ ಬ. ದ್ವಿತೀಯಾ 28. 10. 1901. | ಸಂಪತ್ಕುಮಾರ | ಗೋವಿಂದಘಡ |
| 33. | ಚಿನ್ನಕುಮಾರ ಶಿಂಗಲಾಚಾರ್ಯಸ್ವಾಮಿ | ೧೭೫೧ ವಿರೋಧಿ ಸಂ॥ವೃಷಭ, ಅನೂರಾಧಾ. 11. 5. 1829 | ೧೮೨೩ ಪ್ಲವ ಸಂ॥ ಪುಷ್ಯ ಪೌರ್ಣಿಮ. 23. 1. 1902. | ೧೮೨೯ ಪ್ಲವಂಗ ಸಂ॥ ಕಾರ್ತೀಕ ಬ, ಪಂಚಮಿ 26. 11. 1907. | ನಾರಾಯಣ | ತಿರುನಾರಾಯಣಪುರ |
| 34. | ಕುಟ್ಟಿಕಂಬಿ ಅಳಶಿಂಗರಾಚಾರ್ಯಸ್ವಾಮಿ | ೧೭೬೮ ಪರಾಭವ ಸಂ॥ ಮೇಷ, ಶತಭಿಷ. 24. 4. 1846 | ೧೮೩೦ ಕೀಲಕ ಸಂ॥ ಆಷಾಢ ಶುಕ್ಲ ತ್ರಯೋದಶೀ. 12. 7. 1908. | ೧೮೩೫ ಪ್ರಮಾದೀಚ ಸಂ॥ ಜ್ಯೇಷ್ಠ ಶು, ದಶಮಿ 13. 6. 1913. | ಸಂಪತ್ಕುಮಾರ | ,, |
| 35. | ಕೋಶಿ ವೆಂಕಟಾಚಾರ್ಯಸ್ವಾಮಿ | ಮಿಥುನ, ಸ್ವಾತಿ. .... | ೧೮೩೫ ಪ್ರಮಾದೀಚ ಸಂ॥ ಆಷಾಢ ಶುಕ್ಲ ನವಮಿ 12. 7. 1913. | ೧೮೩೯ ಪಿಂಗಳ ಸಂ॥ ಆಷಾಢ ಬ, ಪ್ರತಿಪತ್. 5. 7. 1917. | ನಾರಾಯಣ | ,, |
| 36. | ಅಸೂರಿ ಅನಂದಾಳ್ವಾರ್ ಸ್ವಾಮಿ | ೧೭೭೧ ಕಾಲಯುಕ್ತಿ ಸಂ॥ಕ[illegible]ಭ, ಅನೂರಾಧಾ. 24. 2. 18[illegible]9. | ೧೮೪೩ ರೌದ್ರಿ ಸಂ॥ ಮಾಘ, ಶು. ತೃತೀಯಾ 11, 2. 1921. | ೧೮೬೫ ಸ್ವಭಾನು ಸಂ॥ ವೈಶಾಖ, ಶು, ತ್ರಯೋದಶೀ, 17. 5. 1943. | ಸಂಪತ್ಕುಮಾರ | ,, |
| 37. | ಕೃಷ್ಣಕುಮಾರ ತಿರುವೆಂ[illegible]ಟಾಚಾರ್ಯಸ್ವಾಮಿ | ೧೮೦೭ ಪಾರ್ಥಿವ ಸಂ॥ ಧನಸ್ಸು, ರೇವತೀ. 16. 12. 1885 | ೧೮೬೬ ತಾರಣ ಸಂ॥ . . 1944. | .... .... | ನಾರಾಯಣ | |
| 38. | ರಾ.ಅ.ಅಯ್ಯನಯ್ಯಂಗಾರ್ಯಸ್ವಾಮಿ | ೧೮೦೯ ಸರ್ವಜಿತು ಸಂ॥ ಮೀನ, ಹಸ್ತ. 1888. | ೧೮೭೬ ಜಯ ಸಂ॥ ಆಷಾಢ, ಶು. ಪಂಚಮಿ 5, 7. 1954. | .... .... | ಸಂಪತ್ಕುಮಾರ | |

### ಶ್ರೀ ಮಠಕ್ಕೆ ಸೇರಿದ ಕೋವಿಲ್, ಮಠ, ಮನೆ, ಕಟ್ಟಡ, ಭೂಮಿ, ನಿವೇಶನ. ಇತ್ಯಾದಿ—

| | | |
|---|---|---|
| 1. | ಶ್ರೀ ನಾರಾಯಣಸ್ವಾಮಿ, ಚಲುವರಾಯಸ್ವಾಮಿ ಸನ್ನಿಧಿ | ತಿರುನಾರಾಯಣಪುರ ಮೇಲುಕೋಟೆ, ಮೈಸೂರು ರಾಜ್ಯ |
| 2. | ಶ್ರೀ ಯತಿರಾಜಮಠಂ (ಮೂಲಮಠ) | ,, ,, |
| 3. | ,, ಮತ್ತು ಕಟ್ಟಡಗಳು (ಶಾಖಾಮಠ) | ಸಂಪಿಗೆ ಬೀದಿ, ಮಲ್ಲೇಶ್ವರ ಬೆಂಗಳೂರು |
| 4. | ,, ,, ,, | 1—45 ಕೈರವಣಿ ಕೊಳ ಪೂರ್ವಭಾಗ ತಿರುವಲ್ಲಿಕ್ಕೇಣಿ ಮದರಾಸ್ |
| 5. | ,, ,, ,, | ದೇವಸ್ಥಾನ ಪಾರ್ಶ್ವ ಬೇಲೂರು ಹಾಸನ ಜಿಲ್ಲಾ |
| 6. | ಶ್ರೀ ವೇಣುಗೋಪಾಲಸ್ವಾಮಿ ಸನ್ನಿಧಿ (ದೇವಸ್ಥಾನ) | ಮೂಲಪೇಟೆ ನೆಲ್ಲೂರು ಟೌನ್ ನೆಲ್ಲೂರು ಜಿಲ್ಲಾ |
| 7. | ಶ್ರೀ ರಾಮಮಂದಿರ (ರಾಮಾನುಜಕೂಟ) | ಸಂಪತ್ಕುಮಾರಪುರಂ ಮಚಲೀಪಟ್ಟಣ ಕೃಷ್ಣಾ ಜಿಲ್ಲಾ |
| 8. | ರಾಮಾನುಜಕೂಟ ಮತ್ತು ಕಟ್ಟಡಗಳು | ಗೊಲವೇಪಲ್ಲಿ ಗುಡಿವಾಡ ಕೃಷ್ಣಾ ಜಿಲ್ಲಾ |
| 9. | ,, ,, | ಅಪ್ಪಿಕಟ್ಲ ಗ್ರಾಮ ಮುದನೇಪಲ್ಲಿ ಕೃಷ್ಣಾ ಜಿಲ್ಲಾ |
| 10. | ಠಾಕೂರ್‌ಜೀಕ ಮಂದಿರ್ ಠಾಕೂರ್‌ಬಾರಿ, ದೇವಸ್ಥಾನ | ಕರಪಿ ಗ್ರಾಮ ಗಯ ಜಿಲ್ಲಾ ಉತ್ತರದೇಶ |
| 11. | ರಾಮಾನುಜಕೂಟ ಮತ್ತು ಕಟ್ಟಡಗಳು | ದ್ವಾರಕಾ |
| 12. | ,, ,, .... | ಅಯೋಧ್ಯೆ ಉತ್ತರದೇಶ |
| 13. | ಶ್ರೀ ಯತಿರಾಜಮಠ ,, .... | ಗೋವಿಂದಘಟ ಶಿವ ರಾಜಧಾನಿ ಉತ್ತರದೇಶ |
| 14. | ಶ್ರೀ ರಾಮದೇವರ ಸನ್ನಿಧಿ ,, .... | ಮಾಂಜಿ ಗ್ರಾಮ ಛಪ್ರಾ ಜಿಲ್ಲಾ ಉತ್ತರದೇಶ |
| 15. | ನಿವೇಶನ ಭೂಮಿ .... | ವಾಣಿವಿಲಾಸಪುರಂ ಮೈಸೂರು |
| 16. | ನಿವೇಶನ ಭೂಮಿ .... | ಎಕ್ಸ್‌ಟೆನ್ಷನ್ ಮಂಡ್ಯಟೌನ್ ಮಂಡ್ಯ ಜಿಲ್ಲ |
| 17. | ಭೂಮಿ 3 ಎಕರೆ 0 [illegible] .... | ಸಂಪತ್ಕುಮಾರಪುರಂ ಮಚಲೀಪಟ್ಟಣಂ ಕೃಷ್ಣಜಿಲ್ಲಾ |
| 18. | ಅರ್ಧ ಎಕರೆ ಗದ್ದೆ .... | ,, ,, |

### ಶ್ರೀ ಮಠದ ಆರ್ಥಿಕ ಸ್ಥಿತಿ

| ವಿವರ ಜಮಾ | ರೂ. | ಮಾಸ | ವರ್ಷಕ್ಕೆ | ವಿವರ ಖರ್ಚು | ರೂ. |
|---|---|---|---|---|---|
| ಮೈಸೂರು ಸರ್ಕಾರದಲ್ಲಿ:— | | | | ಧರ್ಮ ದ್ರವ್ಯದಲ್ಲಿ:— | |
| ಧರ್ಮದಫಂಡು | | | | ಬಾಲಭೋಗ (ಶ್ರೋತ್ರೀಯವಿನಿಯೋಗ) | |
| ಶ್ರೀಮಠದ ದ್ರವ್ಯ | | | | ರಾಜಭೋಗ (ತದೀಯಾರಾಧನೆ) | |
| ಮುಜರಾಯಿ ಗ್ರಾಂಟು | | | | ಶ್ರೀ ಜೀಯರುಸ್ವಾಮಿಗಳ ತಿರುನಕ್ಷತ್ರ | |
| ಭೂಮಿ ವರಮಾನ | | | | ಶ್ರೀಮಠ ನಿತ್ಯಪಡಿ ತದೀಯಾರಾಧನೆ | |
| ಮೇಲುಕೋಟೆ ದೇವಸ್ಥಾನ | | | | ಭೂಮಿ, ಮತ್ತು ಮನೆ ಕಂದಾಯ | |
| ಮೈಸೂರು ಅರಮನೆ | | | | ಮರಾಮತ್ತು | |
| ಬಾಡಿಗೆ ಹಣ ಇತ್ಯಾದಿ | | | | ಇತರ ಧರ್ಮಗಳು | |
| ಇತರ ಧರ್ಮ ದ್ರವ್ಯಗಳು | | | | | |